ವಿಶ್ವವಾಣಿ
ವಿಶ್ವಾಸವೇ ವಿಶ್ವ

ಶುಭಾಶಯಗಳು

ನಮ್ಮೆಲ್ಲ ಓದುಗರು, ಜಾಹೀರಾತುದಾರರು, ಏಜೆಂಟರು ಹಾಗೂ ಹಿತೈಷಿಗಳಿಗೆ ಆಯುಧಪೂಜೆ ಹಾಗೂ ವಿಜಯದಶಮಿಯ ಹಾರ್ದಿಕ ಶುಭಾಶಯಗಳು.

ಬಿಡುವು

ಆಯುಧಪೂಜೆ ನಿಮಿತ್ತ ಅಕ್ಟೋಬರ್ 11 ಶುಕ್ರವಾರ ನಮ್ಮ ಕಾರ್ಯಾಲಯಕ್ಕೆ ಬಿಡುವು ಇರುವುದರಿಂದ ಶನಿವಾರದ ಸಂಚಿಕೆ ಪ್ರಕಟಗೊಳ್ಳುವುದಿಲ್ಲ. ವಾರಾಂತ್ಯಕ್ಕೆ ಪತ್ರಿಕೆ ಇಲ್ಲ ಎಂದು ಚಿಂತಿಸಬೇಡಿ, ಕ್ಷಣಕ್ಷಣದ ಸುದ್ದಿಗಳು, ವಿಡಿಯೊಗಳು **www.vishwavani.news** ಹಾಗೂ **vishwavanitv** ಯುಟ್ಯೂಬ್ ಚಾನೆಲ್ ಮೂಲಕ ಲಭ್ಯ.

ಮೈಸೂರು ದಸರಾ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ದುಷ್ಟ ಶಕ್ತಿ ಎದುರು ಸತ್ಯದ ಜಯ...

ಕರ್ನಾಟಕ ರಾಜ್ಯವನ್ನು ವಾಮಮಾರ್ಗ ಹಾಗೂ ಮೋಸದಿಂದ ಅಸ್ಥಿರಗೊಳಿಸಲು ಪ್ರಯತ್ನಿಸುತ್ತಿರುವ ದುಷ್ಟಶಕ್ತಿಗಳನ್ನು ತಾಯಿ ಶ್ರೀ ಚಾಮುಂಡೇಶ್ವರಿ ದೇವಿಯು ನಿಗ್ರಹಿಸಿ, ನಾಡಿನ ಜನತೆಗೆ ಸುಖ, ಶಾಂತಿ ಮತ್ತು ನೆಮ್ಮದಿ ಕರುಣಿಸಲಿ

ನವರಾತ್ರಿಯಲ್ಲಿ ಸಂಹರಿಸಬೇಕಾದ ವಿನಾಶಕಾರಿ ಶಕ್ತಿಗಳು

ಪ್ರತಿಪದ	ಕೋಮುಗಲಭೆ	ಶಾಂತಿ ಸೌಹಾರ್ದತೆಯಿಂದ ನಿಗ್ರಹ
ದ್ವಿತೀಯಾ	ಸಾಮಾಜಿಕ ಪಿಡುಗು	ವೈಜ್ಞಾನಿಕ ಅರಿವಿನಿಂದ ನಿವಾರಣೆ
ತೃತೀಯಾ	ಶಾಂತಿಭಂಗ	ಸಾಮರಸ್ಯ ಕದಡುವವರ ನಿರ್ಮೂಲನೆ
ಚತುರ್ಥಿ	ದುಷ್ಕೃತ್ಯ	ಕಠಿಣ ಶಿಕ್ಷೆ
ಪಂಚಮಿ	ವಿಧ್ವಂಸಕತೆ	ಧೈರ್ಯ ಮತ್ತು ಶೌರ್ಯದಿಂದ ದಮನ
ಷಷ್ಠಿ	ಅಶಾಂತಿ	ಕಾನೂನು ಸುವ್ಯವಸ್ಥೆಯಿಂದ ನಿವಾರಣೆ
ಸಪ್ತಮಿ	ಪ್ರಚೋದನೆ	ಪ್ರೇರೇಪಿಸುವವರ ನಿರ್ಮೂಲನೆ
ಅಷ್ಟಮಿ	ಸುಳ್ಳು ವದಂತಿ	ಮೂಲದಿಂದಲೇ ನಾಶ
ನವಮಿ	ಅಪಪ್ರಚಾರ	ಮಾಡುವವರ ಮೇಲೆ ಕ್ರಮ

ಇದೇ ನಾಡಹಬ್ಬ ದಸರಾದ ಆಶಯ

ಕರ್ನಾಟಕದ ಜನತೆಗೆ ಸಂತಸ, ಸಂಭ್ರಮದ
ವಿಜಯದಶಮಿಯ ಶುಭಾಶಯಗಳು

ಸತ್ಯಕ್ಕಾಗಿ ಸದಾ ಸಿದ್ಧ
ರಾಮ ಇರೋದು ಸತ್ಯಕ್ಕಾಗಿ

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿ

ತಾರತಮ್ಯ ನಿರ್ಮೂಲನೆಗೆ | ಶಕ್ತಿ
ಹಸಿವು ನಿರ್ಮೂಲನೆಗೆ | ಅನ್ನಭಾಗ್ಯ
ಬಡತನ ನಿರ್ಮೂಲನೆಗೆ | ಗೃಹಲಕ್ಷ್ಮಿ
ಅಂಧಕಾರ ನಿರ್ಮೂಲನೆಗೆ | ಗೃಹಜ್ಯೋತಿ
ನಿರುದ್ಯೋಗ ನಿರ್ಮೂಲನೆಗೆ | ಯುವನಿಧಿ

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

ಸಮಾಚಾರ ಸಣ್ಣದಲ್ಲ

ವಿದ್ಯುತ್ ತಂತಿ ತುಳಿದು 5 ವರ್ಷದಲ್ಲಿ 70 ಸಾವು

ಬೆಂಗಳೂರು: ಕಂಬದಿಂದ ತುಂಡರಿಸಿ ಪಾದಚಾರಿ ಮಾರ್ಗದಲ್ಲಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದು ತಾಯಿ ಮತ್ತು ಮಗು ಮೃತಪಟ್ಟ ಪ್ರಕರಣ ಸಾರ್ವಜನಿಕರಲ್ಲಿ

ಆತಂಕ ಮೂಡಿಸಿದ್ದು ಬೆಂಗಳೂರಿನ ವಿದ್ಯುತ್ ಮೂಲ ಸೌಕರ್ಯ ಕುರಿತು ಅನುಮಾನ ಹುಟ್ಟು ಹಾಕಿದೆ. 2018ರಿಂದ ಅಕ್ಟೋಬರ್ 2023 ರವರೆಗೆ ಇಲಾಖೆಯೇತರ 70 ಮಂದಿ ಸಾರ್ವಜನಿಕರು ಇಂತಹ ತಂತಿಗಳನ್ನು ತುಳಿದು ಸಾವನ್ನಪ್ಪಿದ್ದಾರೆ. ಈ ಸಾವುಗಳ ಜತೆಗೆ ಇದೇ ಅವಧಿಯಲ್ಲಿ ವಿದ್ಯುತ್ ತಂತಿಗಳನ್ನು ತುಳಿದರೂ ಪ್ರಾಣಾಪಾಯವಾಗದಿರುವ 11 ಪ್ರಕರಣಗಳೂ ದಾಖಲಾಗಿವೆ. ಈ ಮಾಹಿತಿಯನ್ನು ಬೆಂಗಳೂರು ವಿದ್ಯುತ್ ಸರಬರಾಜು ಮಂಡಳಿ ಬೆಸ್ಕಾಂ ಒದಗಿಸಿದೆ.

ಲ್ಯಾಪ್‌ಟಾಪ್ ಕಳ್ಳರ ಬಂಧನ

ಬೆಂಗಳೂರು: ನಗರದಲ್ಲಿ ಬರೀ ಲ್ಯಾಪ್‌ಟಾಪ್ ಹಾಗೂ ಮೊಬೈಲ್‌ಗಳನ್ನೇ ಕದ್ದು ಪರಾರಿಯಾಗುತ್ತಿದ್ದ ಖತರ್ನಾಕ್ ಗ್ಯಾಂಗ್ ಖಾಕಿ ಬಲೆಗೆ ಬಿದ್ದಿದೆ. ಸಾದನಾಯ್ಡು, ಚೇತನ್, ಪವನ್ ಮತ್ತು ಆದರ್ಶ್ ಬಂಧಿತ ಆರೋಪಿಗಳು. ಈ ನಾಲ್ವರು ಕಳ್ಳರಲ್ಲಿ ಸಾದನಾಯ್ಡು ತಮಿಳುನಾಡು ಮೂಲದ ಸೇಲಂ ನಿವಾಸಿ. ಈತ ತನ್ನ ಅಣ್ಣನ ಜತೆಗೂಡಿ ಆಗಾಗ ನಗರಕ್ಕೆ ಬಂದು, ಲ್ಯಾಪ್‌ಟಾಪ್‌ಗಳನ್ನು ಕಳ್ಳತನ ಮಾಡ್ತಿದ್ದ. ನಗರದ ಟೆಕ್ಕಿಗಳನ್ನೆ ಟಾರ್ಗೆಟ್ ಮಾಡಿದ್ದ ಸಾದನಾಯ್ಡು ಎಲೆಕ್ಟ್ರಾನಿಕ್ ಸಿಟಿ ಸುತ್ತಮುತ್ತ ಕಳ್ಳತನ ಮಾಡುತ್ತಿದ್ದ. ಟೆಕ್ಕಿಗಳು ಕಾರು ನಿಲ್ಲಿಸಿ ಹೋಗಿದರೆ ಕಾರಿನ ಗ್ಲಾಸ್ ಹೊಡೆದು ಲ್ಯಾಪ್‌ಟಾಪ್ ಎಗರಿಸಿ ಊರಿಗೆ ಪರಾರಿಯಾಗುತ್ತಿದ್ದರು. ನಗರದಲ್ಲಿ ಹಲವು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣಗಳು ದಾಖಲಾಗಿದ್ದು, ಕೊನೆಗೂ ಪೊಲೀಸರಿಗೆ ಸೆರೆಯಾಗಿದ್ದಾರೆ.

ಪಾಕ್ ದಂಪತಿಯಿಂದ ಧರ್ಮ ಪ್ರಚಾರ

ಬೆಂಗಳೂರು: ಕಳೆದ ಮೂರು ವರ್ಷಗಳಿಂದಲೂ ಬೆಂಗಳೂರಿನ ಪೀಣ್ಯದಲ್ಲಿ ನಿಗೂಢವಾಗಿ ನೆಲೆಸಿದ್ದ ಪಾಕ್ ದಂಪತಿಯನ್ನು ಬಂಧಿಸಿರುವ ಬೆಂಗಳೂರು ಪೊಲೀಸರು ತನಿಖೆಯಲ್ಲಿ ಹಲವು ಸ್ಫೋಟಕ ಮಾಹಿತಿಗಳನ್ನು ಬಯಲಿಗೆಳೆದಿದ್ದಾರೆ.

ಇದೇ ಅಕ್ಟೋಬರ್ 3ರಂದು ಜಿಗಣಿ ಪೊಲೀಸರ ಬಲೆಗೆ ಬಿದ್ದಿದ್ದ ಪಾಕ್ ದಂಪತಿಯ ಬಗ್ಗೆ ಇದೀಗ ಬೆಂಗಳೂರು ನಗರ ಪೊಲೀಸರು ತೀವ್ರ ತನಿಖೆ ನಡೆಸುತ್ತಿದ್ದಾರೆ. ದಂಪತಿಯ ಪೂರ್ವಪರ ಮಾಹಿತಿ ಕಲೆ ಹಾಕುತ್ತಿದ್ದಾರೆ. ಪೊಲೀಸರ ತನಿಖೆ ವೇಳೆ ಕೆಲವು ರೋಚಕ ವಿಚಾರಗಳು ಬೆಳಕಿಗೆ ಬಂದಿವೆ. ಕಳೆದ 3 ವರ್ಷಗಳಿಂದ ಪೀಣ್ಯದ ಆಂದ್ರಹಳ್ಳಿ ಮುಖ್ಯರಸ್ತೆ ಮನೆಯಲ್ಲಿ ವಾಸವಾಗಿದ್ದ ದಂಪತಿ ನಿಗೂಢವಾಗಿ ನೆಲೆಸಿದ್ದರು. ಮನೆಯಿಂದ ಹೊರಗೆ ಬಾರದೇ ಒಳಗಡೆಯೆ ಇರುತ್ತಿದ್ದರು. ಪಾಕಿಸ್ತಾನ ಮೂಲದ ಸೈಯದ್ ತಾರೀಕ್ ತನ್ನ ಪತ್ನಿ ಹಾಗೂ ಮಗಳೊಂದಿಗೆ ಹೆಸರು ಬದಲಿಸಿಕೊಂಡು ಇಲ್ಲಿ ನೆಲೆಸಿದ್ದ. ಪೊಲೀಸರ ತನಿಖೆ ವೇಳೆ ರಹಸ್ಯವಾಗಿ ನೆಲೆಯೂರಿದ್ದು ಬೆಳಕಿಗೆ ಬಂದಿದೆ.

2014ರಲ್ಲಿ ಭಾರತಕ್ಕೆ ಎಂಟ್ರಿಯಾಗಿದ್ದ ಈ ದಂಪತಿ, 2019 ರಲ್ಲಿ ಬೆಂಗಳೂರಿಗೆ ಬಂದಿದ್ದರು. ಹೆಸರು ಬದಲಿಸಿಕೊಂಡು, ನಕಲಿ ಆಧಾರ್ ಕಾರ್ಡ್ ಸಹ ಮಾಡಿಸಿಕೊಂಡಿದ್ದರು. ಅಂದಿನಿಂದ ಮನೆಯಲ್ಲಿ ಧರ್ಮ ಪ್ರಚಾರ ಮತ್ತು ಧಾರ್ಮಿಕ ಪ್ರಚೋದಕರಾಗಿ ಕೆಲಸ ಮಾಡುತ್ತಿದ್ದರು. ಯೂಟ್ಯೂಬ್‌ನಲ್ಲಿ ಪ್ರಚಾರ ಕಾರ್ಯ ನಡೆಸುತ್ತಾ ಇದ್ದರು. ಖರ್ಚು ವೆಚ್ಚಕ್ಕೆ ಸಂಸ್ಥೆಯೊಂದರಿಂದ ಹಣಕಾಸು ನೆರವು ಬರುತ್ತಿತ್ತು ಎಂಬೆಲ್ಲಾ ಮಾಹಿತಿ ಪೊಲೀಸರ ತನಿಖೆಯಲ್ಲಿ ಬೆಳಕಿಗೆ ಬಂದಿದೆ.

ಬೆಂಗಳೂರಿನ 57ನೇ ಸಿಸಿಎಚ್ ಕೋರ್ಟ್‌ನಲ್ಲಿ ನಡೆದ ಅರ್ಜಿ ವಿಚಾರಣೆ | ದರ್ಶನ್‌ಗೆ ಮತ್ತೆ ನಿರಾಸೆ

ಸೋಮವಾರ ನಟ ದರ್ಶನ್ ಜಾಮೀನು ಭವಿಷ್ಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಆರೋಪಿ ದರ್ಶನ್ ಆ್ಯಂಡ್ ಗ್ಯಾಂಗ್ ಜಾಮೀನು ಭವಿಷ್ಯ ಸೋಮವಾರ ನಿರ್ಧಾರವಾಗಲಿದೆ.

ಅಪರಾಧ ಸುದ್ದಿಗಳು

ದರ್ಶನ್ ಸಲ್ಲಿಸಿದ್ದ ಜಾಮೀನು ಅರ್ಜಿ ವಿಚಾರಣೆಯು ಬೆಂಗಳೂರಿನ 57ನೇ ಸಿಸಿಎಚ್ ಕೋರ್ಟ್‌ನಲ್ಲಿ ಗುರುವಾರ ನಡೆಯಿತು. ಸುದೀರ್ಘವಾಗಿ ವಾದ-ಪ್ರತಿವಾದ ಆಲಿಸಿದ ನ್ಯಾಯಾಲಯ ಜಾಮೀನು ಅರ್ಜಿ ವಿಚಾರಣೆ ಆದೇಶ ಅ.14ಕ್ಕೆ ಕಾಯ್ದಿರಿಸಿದೆ. ಈ ಮೂಲಕ ದರ್ಶನ್ ಜಾಮೀನು ಭವಿಷ್ಯ ಮೂರು ದಿನ ಮುಂದಕ್ಕೆ ಹೋಗಿದ್ದು, ನಟ ದರ್ಶನ್ ಜೈಲುವಾಸದಲ್ಲಿ ಇರುವಂತಾಗಿದೆ.

ಸಾಕ್ಷಿಗಳ ಹೇಳಿಕೆ ದಾಖಲಿಸುವಲ್ಲಿ ವಿಳಂಬ ತೋರಿಸಿಲ್ಲ ಎಂದು ಬುಧವಾರ ಪ್ರಸನ್ನ ಕುಮಾರ್ ಅವರ ವಾದಕ್ಕೆ ಗುರುವಾರ ಪ್ರತಿಯಾಗಿ ದರ್ಶನ್ ಪರ ಹಿರಿಯ ವಕೀಲ ಸಿ.ವಿ. ನಾಗೇಶ್ ವಾದಿಸಿದರು. ಜೂನ್ 9ರಂದು ಆರೋಪಿ ಇರುವ ಸ್ಥಳದ ಬಗ್ಗೆ ಗೂಗಲ್ ನಕ್ಷೆ ಅಥವಾ ಸ್ಯಾಟಲೈಟ್ ಚಿತ್ರ ತೋರಿಸಿದ್ದಾರೆ ಎಂದು ಭಾವಿಸಿದ್ದೆ. ಪರಿಶೀಲಿಸಿದಾಗ ಪೊಲೀಸರು ಗೂಗಲ್ ಮ್ಯಾಪ್ ತೆಗೆದುಕೊಂಡು ಅಂಟಿಸಿ ನಕ್ಷೆ ತಯಾರಿಸಿರುವುದು ಗೊತ್ತಾಯಿತು. ಮಧ್ಯೆ ಪ್ರವೇಶಿಸಿದ ನ್ಯಾಯಾಧೀಶರು ನಕ್ಷೆಯ ಕೆಳಗೇ ಅದನ್ನು ಬರೆದಿದ್ದಾರೆ. ಲೊಕೇಷನ್ ಆಧಾರದಲ್ಲಿ ಇದನ್ನು ಸಿದ್ಧಪಡಿಸಲಾಗಿದೆ ಎಂದು ಪೊಲೀಸರೇ ಬರೆದಿದ್ದಾರೆ ಎಂದರು.

ತನಿಖಾಧಿಕಾರಿಗಳು ನೀಡಿದ ಮಾಹಿತಿ ಮೇರೆಗೆ ನಕ್ಷೆ ಸಿದ್ಧಪಡಿಸಿದ್ದಾರೆ. ಇದು ಗೂಗಲ್ ಪಿಕ್ಚರ್, ಸ್ಯಾಟಲೈಟ್ ಪಿಕ್ಚರ್ ಅಲ್ಲ. ಪೊಲೀಸ್ ಹೆಡ್ ಕಾನ್‌ಸ್ಟೇಬಲ್ ಅಂಟಿಸಿದ ಚಿತ್ರವಾಗಿದೆ. ಗೂಗಲ್ ವಿಳಾಸ ಪಡೆದಿಲ್ಲ. ಕರೆ ವಿವರ ಸಂಗ್ರಹಿಸಿಲ್ಲ. ಅದ್ಯಾವುದೂ ಇಲ್ಲದೇ ಈ ಸಾಕ್ಷಿಗಳು ಕೃತ್ಯದ ಸ್ಥಳದಲ್ಲಿದ್ದರೆಂದು ಹೇಗೆ ಹೇಳುತ್ತಾರೆ ಎಂದು ದರ್ಶನ್ ಪರ ವಕೀಲರು ಪ್ರಶ್ನಿಸಿದರು.

ಇದೇ ಟವರ್ ಲೊಕೇಷನ್ ವ್ಯಾಪ್ತಿಯಲ್ಲಿಯೇ ಆರೋಪಿಗಳ ವಾಸಸ್ಥಾನವಿದೆ. ಹೀಗಿರುವುದರಿಂದ ಕೃತ್ಯ ನಡೆದಾಗ ಇವರೆಲ್ಲಾ ಶೆಡ್‌ನಲ್ಲಿದ್ದರೆಂದು ಸಾಬೀತಾಗುವುದಿಲ್ಲ. ಐಪಿ ಅಡ್ರೆಸ್ ಮೂಲಕ ಇರುವ ಸಿಟಿ ಮಾತ್ರ ತೋರಿಸಬಹುದು. ನಾನು ಈಗ ನ್ಯೂಯಾರ್ಕ್ ನಲ್ಲಿರುವಂತೆಯೂ ತೋರಿಸಬಹುದು. ತಾಂತ್ರಿಕ ವರದಿಗಳ ಪ್ರಕಾರ 5 ಮೈಲಿಗಳಿಂದ 25 ಮೈಲಿಗಳವರೆಗೂ ಇದರ ವ್ಯಾಪ್ತಿಯಿದೆ. ಹೀಗಿದ್ದಾಗ ಪಟ್ಟಣಗೆರೆ ಶೆಡ್‌ನಲ್ಲೇ ಇವರೆಲ್ಲರೂ ಇದ್ದರೆಂದು ಹೇಳುವುದು ಹೇಗೆ?. ರೇಣುಕಾಸ್ವಾಮಿ ಕೊಲೆಯಾದಾಗ ಸಾಕ್ಷಿಗಳು ಅಲ್ಲಿಯೇ ಇದ್ದರೆಂದು ಹೇಳುವುದು ಹೇಗೆ? ಆರೋಪಿಗಳು ಅಲ್ಲಿಯೇ ಇದ್ದರೆಂದು ಐಪಿ ಅಡ್ರೆಸ್ ಮೂಲಕವೂ ಹೇಳುವುದಕ್ಕೆ ನಂಬಲಸಾಧ್ಯ. ನಾನು ಕಚೇರಿಯಿಂದ ನೇರವಾಗಿ ಈ ಕೋರ್ಟ್‌ಗೆ ಬಂದಿದ್ದೇನೆ. ಆದರೆ ನಾನು ನನ್ನ ಕಚೇರಿಯಿಂದ ಎಸಿಪಿ ಚಂದನ್ ಕುಮಾರ್ ಕಚೇರಿಗೆ, ನಂತರ ವಿಧಾನಸೌಧಕ್ಕೆ ಹೋಗಿದ್ದಾಗಿ ಎಡಿಟ್ ಮಾಡಬಹುದು. ಗೂಗಲ್ ಮ್ಯಾಪ್ ಅನ್ನು ಎಡಿಟ್ ಮಾಡಲೂ ಅವಕಾಶವಿದೆ ಎಂದು ವಿವರಿಸಿದರು.

ಎಸ್‌ಪಿಪಿ ಪ್ರಸನ್ನಕುಮಾರ್ ಮಂಡಿಸಿದ ವಾದವೇನು?

ಪಟ್ಟಣಗೆರೆ ಶೆಡ್‌ನಲ್ಲಿ ಮಣ್ಣಷ್ಟೇ ಅಲ್ಲ, ರಕ್ತದ ಕಲೆಯೂ ಸಿಕ್ಕಿದೆ. ಮನೆಯಲ್ಲಿ ಶೂ ಇಟ್ಟ ಬಗ್ಗೆ ದರ್ಶನ್ ಸ್ವ ಇಚ್ಛಾ ಹೇಳಿಕೆ ನೀಡಿದ್ದಾರೆ. ನಂತರ ಪತ್ನಿ ಮನೆಯಲ್ಲಿ ಪೊಲೀಸರು ಶೂ ವಶಕ್ಕೆ ಪಡೆದುಕೊಂಡಿದ್ದಾರೆ. ಆರೋಪಿಗಳ ಹಾಗೂ ಸಾಕ್ಷಿಗಳ ಕರೆ ದತ್ತಾಂಶ ವಿಶ್ಲೇಷಿಸಲಾಗಿದೆ. ಸುಮಾರು 10 ಸಾವಿರ ಪುಟಗಳ ಸಿಡಿಆರ್ ದತ್ತಾಂಶ ವಿಶ್ಲೇಷಣೆ ಮಾಡಲಾಗಿದೆ. ತನಿಖಾಧಿಕಾರಿಗಳ ಕರ್ತವ್ಯವಾಗಿರುವು ದರಿಂದ ಸಿಡಿಆರ್ ಹಾಗೂ ಟವರ್ ಲೋಕೇಷನ್ ಮ್ಯಾಪ್ ಸಿದ್ಧಪಡಿಸಿದ್ದಾರೆ. ನಾವಿರುವ ಸ್ಥಳದ ನಿಖರತೆ ಬಗ್ಗೆ ತಂತ್ರಜ್ಞಾನದಿಂದ ಪತ್ತೆ ಹಚ್ಚಬಹುದಾಗಿದೆ. ಕೇವಲ 5 ಮೀಟರ್ ವ್ಯತ್ಯಾಸವಾಗಬಹುದಾಗಿದೆ. ತಂತ್ರಜ್ಞಾನ ತುಂಬಾ ಅಭಿವೃದ್ಧಿಯಾಗಿದೆ. ಹೀಗಾಗಿ ವ್ಯಕ್ತಿಯ ಇರುವಿಕೆಯ ಸ್ಥಳದ ನಿಖರತೆ ಪತ್ತೆ ಹಚ್ಚಬಹುದಾಗಿದೆ ಎಂದರು. ಎ 14 ಪ್ರದೋಶ್ ಸಾಕ್ಷಿ ನಾಶ ಮಾಡಲು ಗೂಗಲ್ ಸರ್ಚ್ ಮಾಡಿದ್ದಾನೆ. ಕೃತ್ಯದಲ್ಲಿ ಭಾಗಿಯಾಗಿಲ್ಲವೆಂದರೆ ಯಾಕೆ ಗೂಗಲ್ ಸರ್ಚ್ ಮಾಡುತ್ತಿದ್ದ ಎಂದು ಪ್ರಶ್ನಿಸಿದರು. 10 ಸಾವಿರ ಪುಟ ಕೊಡುವ ಬದಲು ಸುಲಭವಾಗಿ ಅರ್ಥವಾಗಲು ನಕ್ಷೆ ತಯಾರಿಸಿದ್ದಾರೆ. ತಾಂತ್ರಿಕ ಸಾಕ್ಷಿಗಳು ತನಿಖೆ ಹಾಗೂ ಆರೋಪಪಟ್ಟಿ ಪ್ರಮುಖ ಭಾಗವಾಗಿವೆ. 2020-21 ರಲ್ಲಿ ಶೆಡ್ ನಲ್ಲಿ ದರ್ಶನ್ ಸಿನಿಮಾ ಚಿತ್ರೀಕರಣವಾಗಿದೆ. ಐಪಿ ವಿಳಾಸ ಆಧಾರದ ಮೇರೆಗೆ ತನಿಖೆ ನಡೆಸಿಲ್ಲ. ಹೇಮಂತ್ ಹೆಸರಿನಲ್ಲಿ ದರ್ಶನ್ ಸಿಮ್ ಬಳಸುತ್ತಿದ್ದಾರೆ ಎಂದು ಆರೋಪಿ ಪರ ವಕೀಲರು ವಾದಿಸಿದ್ದಾರೆ. ಪವಿತ್ರಾ, ಗೌಡ ಜತೆ ಚಾಟ್ ಮಾಡಿರುವುದೆಲ್ಲವೂ ಹೇಮಂತ್ ಎಂದು ಹೇಳುತ್ತಿದ್ದಾರೆಯೇ ಎಂದು ಪ್ರಶ್ನಿಸಿದರು. ಬಿಲಿಯೇನರ್ ಬಳಿ ಸಾವಿರಾರು ಉದ್ಯೋಗಿಗಳು ಕೆಲಸ ಮಾಡುತ್ತಿದ್ದಾರೆ ಎಂಬ ಮಾತ್ರಕ್ಕೆ ಜಾಮೀನು ನೀಡಲಾಗಲ್ಲ. ಉದ್ಯಮಿ ಸುಬ್ರತಾ ರಾಯ್‌ಗೆ ಸುಪ್ರೀಂಕೋರ್ಟ್ ಜಾಮೀನು ನೀಡಿರಲಿಲ್ಲ. ಹೀಗಾಗಿ ದರ್ಶನ್‌ಗೆ ಜಾಮೀನು ನೀಡಬಾರದೆಂದು ಮನವಿ ಮಾಡಿದರು.

ಪ್ರಜಾಪರ ಯೂಟ್ಯೂಬ್ ಚಾನಲ್ ಅಂತ ಹೇಳಿಕೊಂಡು ಧಮ್ಕಿ

ಬೇಕರಿ ಮಾಲೀಕರಿಗೆ ಬೆದರಿಕೆ ಯೂಟ್ಯೂಬರ್ ಬಂಧನ

ಬೆಂಗಳೂರು: 50ಕ್ಕೂ ಹೆಚ್ಚು ಬೇಕರಿ ಮಾಲೀಕರಿಗೆ ಬೆದರಿಕೆ ಹಾಕಿದ್ದ ಯೂಟ್ಯೂಬರ್ ಒಬ್ಬನನ್ನು ಹುಳಿಮಾವು ಪೊಲೀಸರು ಬಂಧಿಸಿದ್ದಾರೆ.

ಬೊಮ್ಮನಹಳ್ಳಿ ಶಫಿ ಬಂಧಿತ ಆರೋಪಿ. ಯುಟ್ಯೂಬರ್ ಆಗಿದ್ದ ಶಫಿ ನಗರದಲ್ಲಿರುವ ಹಲವು ಬೇಕರಿ ಮಾಲೀಕರಿಗೆ ಸ್ವಚ್ಛತೆಯಿಲ್ಲ, ಮೆಂಟೈನೆನ್ಸ್ ಇಲ್ಲ ಎಂದು ಬೆದರಿಕೆ ಹಾಕುತ್ತಿದ್ದ. ಬೇಕರಿ ಒಳಗೆ ನುಗ್ಗಿ ವಿಡಿಯೊ ಚಿತ್ರೀಕರಣ ಮಾಡಿಕೊಂಡು ಲೈಸೆನ್ಸ್ ರದ್ದು ಮಾಡಿಸುತ್ತೇನೆ ಅಂತ ಬೆದರಿಕೆ ಹಾಕುತ್ತಿದ್ದ. ಇದೇ ರೀತಿ ಹುಳಿಮಾವು ಬಳಿಯ ಅಕ್ಷಯ್ ನಗರದ ಡಿಎಲ್‌ಎಫ್ ಬಳಿಯ ಬೇಕರಿಗಳಲ್ಲಿ ಬೆದರಿಕೆ ಹಾಕಿದ್ದಾನೆ. ಪತ್ರಕರ್ತ ಅಂತ ಹೇಳಿಕೊಂಡು ಬೇಕರಿ ಮಾಲೀಕರಿಂದ 10,000 ರು. ಯುಪಿಐ ಮಾಡಿಸಿಕೊಂಡಿದ್ದಾನೆ. ಈ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಪ್ರಜಾಪರ ಯೂಟ್ಯೂಬ್ ಚಾನಲ್ ಅಂತ ಹೇಳಿಕೊಂಡು ಧಮ್ಕಿ ಹಾಕಿದ್ದಾನೆ. ಇದೇ ವೇಳೆ ಹಣಕ್ಕೆ ಡಿಮ್ಯಾಂಡ್ ಮಾಡುವಾಗ ನೇರವಾಗಿ ಸಿಕ್ಕಿಬಿದ್ದಿದ್ದಾನೆ. ಬೇಕರಿ ಮಾಲೀಕರ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡ ಹುಳಿಮಾವು ಪೊಲೀಸರು ಆರೋಪಿಯನ್ನ ಬಂಧಿಸಿದ್ದಾರೆ.

ಸುದ್ದಿ ಹಾಕಬಾರದು ಅಂದರೆ 50 ಸಾವಿರ ಕೊಡಬೇಕು ಇಲ್ಲದಿದ್ದರೆ, ನಂಗೆ ಲೋಕಲ್ ಎಎಲ್‌ಎ, ಬಿಡಿಎ ಅಧಿಕಾರಿಗಳು, ಆಹಾರ ಇಲಾಖೆಯ ಅಧಿಕಾರಿಗಳೆಲ್ಲರೂ ಗೊತ್ತು . ನೀ ಹೇಗೆ ಬೇಕರಿ ನಡೆಸುತ್ತಿಯಾ ನೋಡ್ತಿನಿ ಎಂದು ಧಮ್ಕಿ ಹಾಕಿದ್ದ. ಇದರಿಂದ ಹೆದರಿದ ರಮೇಶ್ ಆತನಿಗೆ ಬೆದರಿಕೆ ಹಾಕಿ ಹತ್ತು ಸಾವಿರ ಗೂಗಲ್ ಪೇ ಮಾಡಿದ್ದ. ನಂತರ ರಮೇಶ್ ಬೇಕರಿ ಅಸೋಸಿಯೇಷನ್ ಗಮನಕ್ಕೆ ತಂದಾಗ ಸುಮಾರು ನಲವತ್ತು ಐವತ್ತು ಜನರಿಗೆ ಇದೇ ರೀತಿಯಲ್ಲಿ ಬ್ಲ್ಯಾಕ್ ಮೇಲ್ ಮಾಡಿರುವುದು ತಿಳಿದು ಬಂದಿದೆ. ಹುಳಿಮಾವು ಪೊಲೀಸರು ನಕಲಿ ಪತ್ರಕರ್ತನನ್ನು ಹೆಡೆಮುರಿ ಕಟ್ಟಿ ವಿಚಾರಣೆ ನಡೆಸುತ್ತಿದ್ದಾರೆ. ಈ ಸಂಬಂಧ ಹುಳಿಮಾವು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಬಿಯರ್ ಭರ್ಜರಿ ಮಾರಾಟ ಅಬಕಾರಿ ಇಲಾಖೆಗೆ ಆದಾಯ ಹೆಚ್ಚಳ

ಬೆಂಗಳೂರು: ರಾಜ್ಯದಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಬಿಯರ್ ಮಾರಾಟದಲ್ಲಿ ಏರಿಕೆಯಾಗಿದೆ ಎಂದು ಅಬಕಾರಿ ಇಲಾಖೆ ತಿಳಿಸಿದೆ.

ಕಳೆದ ಹಣಕಾಸು ವರ್ಷಕ್ಕೆ ಹೋಲಿಸಿದರೆ 2024-25ರ ಹಣಕಾಸು ವರ್ಷದಲ್ಲಿ ಒಟ್ಟಾರೆ ಮದ್ಯ ಮಾರಾಟದಲ್ಲಿ ಶೇ 5.55 ರಷ್ಟು ಏರಿಕೆಯಾಗಿದೆ. ಅಬಕಾರಿ ಇಲಾಖೆ ದಾಖಲೆಗಳ ಪ್ರಕಾರ, ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ 921.90 ಕೋಟಿ ರು. ಮೌಲ್ಯದ ಮದ್ಯ ಮಾರಾಟವಾಗಿದೆ. ಬಿಯರ್ ಮಾರಾಟದಲ್ಲಿ ತೀವ್ರ ಏರಿಕೆ ಕಂಡುಬಂದಿದೆ ಮತ್ತು ಭಾರತೀಯ ನಿರ್ಮಿತ ಮದ್ಯದ (ಐಎಂಎಲ್) ಮಾರಾಟದಲ್ಲಿ ಕುಸಿತ ಕಂಡುಬಂದಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ, ಬಿಯರ್ ಮಾರಾಟದಲ್ಲಿ ಶೇ 14.90 ಏರಿಕೆ ಮತ್ತು ಐಎಂಎಲ್ ಮಾರಾಟದಲ್ಲಿ ಶೇ. 2 ಇಳಿಕೆಯಾಗಿದೆ.

ಕಳೆದ ಆರು ತಿಂಗಳಲ್ಲಿ, ಬಿಯರ್ ಮಾರಾಟ ಶೇ.15 ರಷ್ಟು ಬೆಳವಣಿಗೆ ತೋರಿಸಿದೆ. ಇದು ಹವಾಮಾನ, ವೆಚ್ಚ, ರಜಾದಿನಗಳು ಮತ್ತು ಇತರವುಗಳನ್ನು ಒಳಗೊಂಡಂತೆ ಅನೇಕ ಅಂಶಗಳಿಂದಾಗಿ ಆಗಿದೆ ಎಂದು ಅಬಕಾರಿ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಎರಡು ತಿಂಗಳ ಹಿಂದೆ ಪ್ರೀಮಿಯಂ ಮತ್ತು ಸೆಮಿ ಪ್ರೀಮಿಯಂ ಬ್ರಾಂಡ್‌ಗಳ ಮೇಲಿನ ಬೆಲೆ ಏರಿಕೆ, ಕಡಿಮೆ ಉತ್ಪಾದನೆ ಮತ್ತು ಸ್ಟಾಕ್‌ಗಳಿಂದಾಗಿ ಐಎಂಎಲ್ ಮಾರಾಟದಲ್ಲಿ ಕುಸಿತವಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಅಬಕಾರಿ ಇಲಾಖೆ ಅಧಿಕಾರಿಗಳ ಪ್ರಕಾರ, 2023-24ರಲ್ಲಿ ಏಪ್ರಿಲ್-ಸೆಪ್ಟೆಂಬರ್‌ವರೆಗೆ 352.82 ಲಕ್ಷ ಪೆಟ್ಟಿಗೆಗಳಷ್ಟು ಐಎಂಎಲ್ ಮಾರಾಟವಾಗಿತ್ತು. 2024-25ರ ಅದೇ ಅವಧಿಯಲ್ಲಿ 345.76 ಲಕ್ಷ ಪೆಟ್ಟಿಗೆಗಳಷ್ಟು ಮಾರಾಟವಾಗಿವೆ. ಅದೇ ರೀತಿ, 2023-24ರಲ್ಲಿ ಏಪ್ರಿಲ್-ಸೆಪ್ಟೆಂಬರ್‌ವರೆಗೆ 211.25 ಲಕ್ಷ ಸಿಬಿ ಬಿಯರ್ ಮಾರಾಟವಾಗಿದ್ದರೆ, 2024-25ರಲ್ಲಿ ಅದೇ ಅವಧಿಯಲ್ಲಿ 242.73 ಲಕ್ಷ ಸಿಬಿ ಮಾರಾಟವಾಗಿವೆ.

17,533.01 ಕೋಟಿ ರು. ಆದಾಯ ಸಂಗ್ರಹ

2023 ರ ಏಪ್ರಿಲ್-ಸೆಪ್ಟೆಂಬರ್‌ವರೆಗೆ ಮದ್ಯ ಮಾರಾಟದಿಂದ 16,611.11 ಕೋಟಿ ರು. ಆದಾಯ ಸಂಗ್ರಹವಾಗಿದ್ದರೆ, ಈ ವರ್ಷದ ಅದೇ ಅವಧಿಯಲ್ಲಿ 17,533.01 ಕೋಟಿ ರು. ಆದಾಯ ಸಂಗ್ರಹವಾಗಿದೆ. ಆದಾಯದಲ್ಲಿ 921.90 ಕೋಟಿ ರು. ಅಥವಾ ಶೇ 5.55 ರಷ್ಟು ಏರಿಕೆಯಾಗಿದೆ. ಕಳೆದ ಆರ್ಥಿಕ ವರ್ಷದಲ್ಲಿ ಶೇ. 48.15ರಷ್ಟು ಮಾರಾಟ ಗುರಿ ಸಾಧಿಸಲಾಗಿದ್ದು, ಈ ವರ್ಷ ಶೇ 45.51ರಷ್ಟು ಗುರಿ ಸಾಧಿಸಲಾಗಿದೆ. 2024 ರ ಏಪ್ರಿಲ್‌ನಲ್ಲಿ ಸಂಚಿತ ಬೆಳವಣಿಗೆಯು ಶೇ.28.84 ಆಗಿದೆ. 2023 ರ ಏಪ್ರಿಲ್‌ಗೆ ಹೋಲಿಸಿದರೆ ವ್ಯತ್ಯಾಸವು ಶೇ 11.13 ಆಗಿದೆ ಎಂದು ಅಬಕಾರಿ ಇಲಾಖೆ ತಿಳಿಸಿದೆ.

ಆರ್‌ಬಿಐಗೆ ನಕಲಿ ನೋಟು ಕೊಟ್ಟು ವಂಚಿಸಲು ಸಂಚು: ನಾಲ್ವರ ಬಂಧನ

ಬೆಂಗಳೂರು: ಕಂತೆ ಕಂತೆ ನಕಲಿ ನೋಟುಗಳನ್ನು ಮುದ್ರಿಸಿ ಆರ್‌ಬಿಐಗೆ ನೀಡಿ ಟೋಪಿ ಹಾಕಲು ಯತ್ನಿಸಿದ ವಂಚಕರ ಗ್ಯಾಂಗ್ ಪೊಲೀಸರ ಬಲೆಗೆ ಬಿದ್ದಿದೆ.



ಬಂಧಿತ ಆರೋಪಿಗಳನ್ನು ಅಬ್ದುಲ್, ಪ್ರಸೀತ್, ಮೊಹಮ್ಮದ್ ಅಫ್ನಾಸ್, ನೂರು ದ್ದೀನ್ ಅನ್ವರ್ ಹಾಗೂ ಪ್ರಿಯೇಶ್ ಎಂದು ತಿಳಿದು ಬಂದಿದೆ. ಆರೋಪಿಗಳು ಹಿಂದಿಯ ವೆಬ್ ಸೀರಿಸ್ ಒಂದರಲ್ಲಿ ನೋಟುಗಳನ್ನ ಮುದ್ರಿಸಿ ವಾಮಮಾರ್ಗದಲ್ಲಿ ಸರಬರಾಜು ಮಾಡುವ ಕತೆ ಮೀರಿಸುವ ಹಾಗೆ ನಕಲಿ ನೋಟುಗಳನ್ನು ಮುದ್ರಿಸಿ ವಂಚಿಸುತ್ತಿದ್ದರು. ಅಲ್ಲದೇ ನಕಲಿ ನೋಟುಗಳನ್ನು ಆರ್‌ಬಿಐಗೆ ನೀಡಿ ರಾಜಾರೋಷವಾಗಿ ಚಾಲ್ತಿಗೆ ತರಲು ಪ್ರಯತ್ನಿಸಿದ್ದರು.

ಇದರಲ್ಲಿ ಸಿರಗುಪ್ಪ ಮೂಲದ ಅಬ್ದುಲ್ ಉದ್ಯಮಿ ಆಗಿದ್ದು, ಪ್ರಸೀತ್ ಅಲಿಯಾಸ್ ಪ್ರಸಿದ್‌ಗೆ 40 ಲಕ್ಷ ರು. ಮೌಲ್ಯದ ಗ್ರ್ಯಾನೈಟ್ ಮಾರಾಟ ಮಾಡಿದ್ದ. ಪದೇ ಪದೇ ಹಣ ಕೇಳುತ್ತಿದ್ದ. ಅಬ್ದುಲ್‌ಗೆ ನನ್ನ ಹತ್ತಿರ 2000 ರು. ಮುಖಬೆಲೆಯ 25 ಲಕ್ಷ ರು. ಹಣ ಇದೆ, ಅದನ್ನು ಆರ್‌ಬಿಐನಲ್ಲಿ ಎಕ್ಸ್‌ಚೇಂಜ್ ಮಾಡಿಸಿಕೋ ಎಂದು ಪ್ರಸಿದ್ 25 ಲಕ್ಷ ರು. ನಕಲಿ ನೋಟ್ ಕೊಟ್ಟಿದ್ದ. ಈ ಹಣ ಬೆಂಗಳೂರಿನ ಆರ್‌ಬಿಐಗೆ ತಂದ ಅಬ್ದುಲ್, ಅಲ್ಲಿ ಮೆಷಿನ್‌ನಲ್ಲಿ ಹಾಕಿದಾಗ ಹಣ ಚಲಾವಣೆ ಆಗಿರಲಿಲ್ಲ. ಈ ವೇಳೆ ಅಬ್ದುಲ್‌ಗೆ ನೋಟಿನ ಬಗ್ಗೆ ಅನುಮಾನ ಬಂದಿದ್ದರೂ ಕೂಡ, ನೇರವಾಗಿ ಅಧಿಕಾರಿಗಳ ಬಳಿ ಹೋಗಿ ನೋಟು ಬದಲಾವಣೆ ಮಾಡಲು ಕೇಳಿದ್ದಾನೆ. ಈ ವೇಳೆ ನೋಟು ಪರಿಶೀಲನೆ ಮಾಡಿದಾಗ ನಕಲಿ ನೋಟುಗಳು ಎಂಬುದು ಬೆಳಕಿಗೆ ಬಂದಿದೆ.

ಆರ್‌ಬಿಐ ಅಧಿಕಾರಿಗಳು ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಪೊಲೀಸರು ತನಿಖೆ ಆರಂಭಿಸಿದ್ದಾರೆ. ನಕಲಿ ನೋಟಿನ ಮೂಲ ಬೆನ್ನತ್ತಿ ವಿಚಾರಣೆ ನಡೆಸಿದಾಗ ಕೇರಳದ ಕಾಸರಗೋಡು ಲಿಂಕ್ ಸಿಕ್ಕಿದ್ದು, ಅಲ್ಲಿನ ಪ್ರಿಯೇಶ್, ಮೊಹಮ್ಮದ್ ಅಫ್ನಾಸ್ ಹಾಗೂ ನೂರುದ್ದೀನ್ ಬಂಧಿಸಿ ವಿಚಾರಣೆ ನಡೆಸಿದ್ದಾರೆ.

ಈ ವೇಳೆ ಆರೋಪಿ ಪ್ರಿಯೇಶ್ ಪ್ರಿಂಟಿಂಗ್ ಪ್ರೆಸ್ ಹೊಂದಿದ್ದು, ಅದರಲ್ಲಿ ಎರಡು ಸಾವಿರ ಮುಖಬೆಲೆ ಖೋಟಾ ನೋಟು ಮುದ್ರಿಸಿ ಹಂಚಿಕೆ ಮಾಡುತ್ತಿದ್ದ ಎಂಬ ವಿಚಾರ ಬೆಳಕಿಗೆ ಬಂದಿದೆ.

52 ಲಕ್ಷ ರು. ನಕಲಿ ನೋಟು ಪತ್ತೆ

ಹಲಸೂರು ಗೇಟ್ ಪೊಲೀಸರು ಕಾಸರಗೋಡಿನಲ್ಲಿ 29 ಲಕ್ಷ ರು. ನಕಲಿ ನೋಟು, ಪ್ರಿಂಟಿಂಗ್ ಮೆಷಿನ್, ಕಚ್ಚಾ ಪೇಪರ್ ಹಾಗೂ ವಸ್ತುಗಳನ್ನ ವಶಕ್ಕೆ ಪಡೆದಿದ್ದಾರೆ. ಒಟ್ಟು 52 ಲಕ್ಷ ರು. ನಕಲಿ ನೋಟು ಪತ್ತೆಯಾಗಿದ್ದು, ಎಲ್ಲವನ್ನು ಜಪ್ತಿ ಮಾಡಿದ್ದಾರೆ. ಪ್ರಕರಣದಲ್ಲಿ ಇನ್ನೊಬ್ಬ ಆರೋಪಿ ತಲೆಮರೆಸಿಕೊಂಡಿದ್ದು ಪೊಲೀಸರು ಹುಡುಕಾಟ ನಡೆಸಿದ್ದಾರೆ.

ಉತ್ತಮ ಸೇವೆ: ಸರಕಾರಿ ಆಸ್ಪತ್ರೆಗಳು ಮುಂಚೂಣಿ

ಬೆಂಗಳೂರು: ಉತ್ತರ ಭಾರತದಿಂದ ಬೆಂಗಳೂರಿನ ಪ್ರತಿಷ್ಠಿತ ಆಸ್ಪತ್ರೆಗಳಿಗೆ ಬರುವ ರೋಗಿಗಳ ಸಂಖ್ಯೆ ಹೆಚ್ಚಾದರೂ ಉತ್ತಮ ಆರೋಗ್ಯ ಸೌಲಭ್ಯ ಕಲ್ಪಿಸುವಲ್ಲಿ ಸರಕಾರಿ ಆಸ್ಪತ್ರೆಗಳು ಮುಂಚೂಣಿಯಲ್ಲಿವೆ. ರಾಜ್ಯದಲ್ಲಿ ಸರಕಾರದ ಅಧೀನದ ಆಸ್ಪತ್ರೆಗಳಲ್ಲಿ ಗುಣಮಟ್ಟದ ಚಿಕಿತ್ಸೆ ದೊರೆಯುತ್ತಿದೆ. ಬೇರೆ ಬೇರೆ ರಾಜ್ಯಗಳಿಂದ ರೋಗಿಗಳು ಚಿಕಿತ್ಸೆಗಾಗಿ ಬೆಂಗಳೂರಿನ ಆಸ್ಪತ್ರೆಗೆ ಬರುತ್ತಿರುವ ಸಂಖ್ಯೆ ಹೆಚ್ಚಾಗಿದೆ. ನೆರೆ ರಾಜ್ಯಗಳಾದ ಆಂಧ್ರಪ್ರದೇಶ, ತಮಿಳುನಾಡು, ಕೇರಳಗಿಂತ ಒಳ್ಳೆಯ ಆರೋಗ್ಯ ಸೇವೆ ಕರ್ನಾಟಕದಲ್ಲಿ ಇದೆ ದೊರೆಯುತ್ತಿದೆ. ಆರೋಗ್ಯ ಎಲ್ಲಾ ಸೌಲಭ್ಯಗಳು ಉತ್ತಮವಾಗಿದೆ. ಸಿಲಿಕಾನ್ ಸಿಟಿ ಪ್ರತಿಷ್ಠಿತ ಸರಕಾರಿ ಆಸ್ಪತ್ರೆಗಳ ಮೇಲೆ ಉತ್ತರ ಭಾರತ ರೋಗಿಗಳ ಒತ್ತಡ ಹೆಚ್ಚಾಗಿದೆ.

ಕಳೆದ ಕೆಲವು ವರ್ಷಗಳಿಂದ ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆ, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, , ರಾಜೀವ್ ಗಾಂಧಿ ಆಸ್ಪತ್ರೆಗೆ ನಿತ್ಯವೂ ಹೊರ ರಾಜ್ಯಗಳಿಂದ ಸಾವಿರಾರೂ ರೋಗಿಗಳು ಈ ಆಸ್ಪತ್ರೆಗಳಿಗೆ ಬರುತ್ತಿದ್ದಾರೆ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಲಿಂಗರಾಜ ಗಾಂಧಿ ನವರಾತ್ರಿ ಪ್ರಯುಕ್ತ ಕಚೇರಿಯಲ್ಲಿ ದುರ್ಗಾಪೂಜೆ, ವಾಹನ ಪೂಜೆ ನೇರವೇರಿಸಿ ಸಿಬ್ಬಂದಿಗೆ ಸಿಹಿ ಹಂಚಿ ಶುಭಾಶಯ ಕೋರಿದರು.

ಮಗಳೊಂದಿಗೆ ಸೇರಿ ಸೈಕಲ್ ಕಳ್ಳತನ: ಬಂಧನ

ಬೆಂಗಳೂರು: ಅಪ್ರಾಪ್ತ ಮಗಳ ಜೊತೆ ಸೇರಿಕೊಂಡು ಸೈಕಲ್ ಕದಿಯುತ್ತಿದ್ದ ಮಲತಂದೆಯನ್ನು ಹುಳಿಮಾವು ಪೊಲೀಸರು ಬಂಧಿಸಿದ್ದಾರೆ. ಆರೋಪಿ ಮೊಹಮ್ಮದ್ ಫಯಾಜ್ ಉದ್ದೀನ್ ತನ್ನ ಮಗಳನ್ನು ಜತೆಯಾಗಿಸಿಕೊಂಡು ಬೆಂಗಳೂರಿನ ಅಪಾರ್ಟ್‌ಮೆಂಟ್‌ಗಳಲ್ಲಿ ಸೈಕಲ್ ಕದಿಯುತ್ತಿದ್ದ. ಸದ್ಯ ತಂದೆ-ಮಗಳ ಕೃತ್ಯ ಬಯಲಾಗಿದ್ದು ಪೊಲೀಸರು ತಂದೆಯನ್ನು ಬಂಧಿಸಿ 15 ವರ್ಷದ ಅಪ್ರಾಪ್ತೆ ವಿರುದ್ಧವೂ ಕಾನೂನು ಕ್ರಮಕ್ಕೆ ಮುಂದಾಗಿದ್ದಾರೆ.

ಹಿರಿಯ ಪತ್ರಕರ್ತ ಜಿ.ಗಣೇಶ್ ನಿಧನ

ಬೆಂಗಳೂರು: ಕನ್ನಡ ಪತ್ರಿಕೋದ್ಯಮದಲ್ಲಿ ಕ್ರೈಂ ಗಣೇಶ್ ಎಂದೇ ಗುರುತಿಸಿಕೊಂಡಿದ್ದ ಹಿರಿಯ ಪತ್ರಕರ್ತ ಜಿ.ಗಣೇಶ್(41)ಗುರುವಾರ ಅನಾರೋಗ್ಯದಿಂದ ಇಹಲೋಕ ತ್ಯಜಿಸಿದ್ದಾರೆ.

ಕಳೆದ 20 ವರ್ಷಗಳಿಂದ ಪತ್ರಿಕಾರಂಗದಲ್ಲಿ

ಸೇವೆ ಸಲ್ಲಿಸುತ್ತಿದ್ದ ಅವರು ಅನಾರೋಗ್ಯದಿಂದಾಗಿ ನಗರದ ಮಹಾವೀರ್ ಜೈನ್ ಆಸ್ಪತ್ರೆಯಲ್ಲಿ ದಾಖಲಾಗಿದ್ದರು.

ಚಿಕಿತ್ಸೆ ಫಲಕಾರಿ ಯಾಗದೆ ಅವರು ಗುರು ವಾರ ಬೆಳಗ್ಗೆ ಮೃತಪಟ್ಟಿದ್ದಾರೆ. ಮೂಲತಃ ಮಾಗಡಿ ತಾಲೂಕಿನ ತಾಳೆಕೆರೆಯ ಗಂಗಯ್ಯ ಮತ್ತು ಕೆಂಪಮ್ಮ ದಂಪತಿ ಪುತ್ರರಾಗಿದ್ದ ಗಣೇಶ್ ಅವರು ಪತ್ನಿ ಹಾಗೂ ಪುತ್ರನನ್ನು ಅಗಲಿದ್ದಾರೆ. ಗುರುವಾರ ಅವರ ಮೃತದೇಹವನ್ನು ತಾಳೆಕೆರೆಗೆ ಕೊಂಡೊಯ್ದು ಗುಡ್ಡೆ ರಂಗನಾಥಸ್ವಾಮಿ ಗುಡಿ ರಸ್ತೆಯಲ್ಲಿ ರುವ ಅವರ ಜಮೀನಿನಲ್ಲಿ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು. ಕಸ್ತೂರಿ ಟಿವಿ ಮೂಲಕ ಕಸ್ತೂರಿ ಗಣೇಶ್ ಎಂದು ಪರಿಚಿತರಾಗಿದ್ದ ಗಣೇಶ್ ಅವರ ಕ್ರೈಂ ವರದಿಗಾರಿಕೆಯಲ್ಲಿ ನಿಪುಣರಾಗಿ ದ್ದರು. ಅವರ ಮಾರ್ಗದರ್ಶನದಲ್ಲಿ ಇಂದು ಹಲವಾರು ಯುವ ಪತ್ರಕರ್ತರು ಯಶಸ್ವಿ ಪತ್ರಕರ್ತರಾಗಿ ವಿವಿಧ ಮಾಧ್ಯಮಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಟಿವಿ 5 ನಲ್ಲಿ ಇನ್ ಪುಟ್ ಚೀಫ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಇತ್ತೀಚೆಗೆ ಪ್ರೆಸ್‌ಕ್ಲಬ್‌ನ ಖಜಾಂಚಿಯಾಗಿ ಆಯ್ಕೆಯಾಗಿದ್ದರು.

ಗಣ್ಯರ ಕಂಬನಿ

ಗಣೇಶ್ ಅವರ ನಿಧನಕ್ಕೆ ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷರಾದ ಆಯೇಶಾ ಖಾನಮ್ ಹಾಗೂ ಸದಸ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ. ಇದಲ್ಲದೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಕರ್ನಾಟಕ ಪತ್ರಕರ್ತರ ಸಹಕಾರ ಸಂಘ, ಪ್ರೆಸ್‌ಕ್ಲಬ್, ಬೆಂಗಳೂರು ವರದಿಗಾರರ ಕೂಟ ಕಂಬನಿ ಮಿಡಿದಿದೆ. ಅದೇ ರೀತಿ ಹಲವಾರು ಗಣ್ಯರು, ಹಿರಿಯ ಪೊಲೀಸ್ ಅಧಿಕಾರಿಗಳು ಗಣೇಶ್ ಅವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

CAUTION NOTICE

This is to notify to the public at large that we came across a complaint against one Mr. Mohsin Pasha being Ex- Director of TM Aerospace Pvt. Ltd – a subsidiary of Trentar company wherein the said Mr. Mohsin Pasha still posing himself as a Director/ Representative of TM Aerospace Pvt. and / or Trentar Group (and its associated/group companies), and with ulterior motive to earn wrongful gain and/or cheat the prospective vendors, suppliers, clients, contractors and etc., Mr. Mohsin Pasha by making some concocted story and asking them to deposit some amount in certain bank accounts i.e., either in personal account or TM Aerosports a Proprietary concern owned by Mr. Mohsin Pasha prior to forming TM Aerospace Pvt. Ltd.
We wish to caution the general public that said Mr. Mohsin Pasha resigned as on dated 20/04/2023 as a Director of TM Aerospace Pvt. Ltd., (and its associated/group companies) and thereafter he is not re-appointed nor authorized to issue any letters or act on our behalf or use the name, trademark and logo/websites of TM Aerospace Pvt. Ltd.
The public in general are also advised not to fall prey to such fraudulent activities. The TM Aerospace Pvt. Ltd., (and its associated/group companies) do not ask, solicit and accept any monies in any form from the vendors, suppliers, clients, contractors and etc., apart from the actual billing / Invoices. The said TM Aerospace Pvt. Ltd., (and its associated / group companies) bears no responsibility for any amounts being deposited / withdrawn therefrom by / with Mr. Mohsin Pasha in any account.
Anyone dealing with Mr. Mohsin Pasha would be doing so at his / her own risk and the TM Aerospace Pvt. Ltd or its associated/group companies will not be held responsible for any loss or damage suffered by such persons, directly or indirectly. The company strongly recommends to all that they should not respond to such act and verify the same with us.
Should you come across any such fraudulent incident or have any information regarding solicitation for money by Mr. Mohsin Pasha in name of TM Aerospace Pvt. Ltd (and its associated/group companies), please assist us in taking appropriate action to curb such mala fide activities.
Contact- Cs@trentar.com

PUBLIC NOTICE

My Client **Smt. Manjula. T** W/o. Sri. Ravi has misplaced/lost the original Gift Deed dated 05/10/2012, which is registered on 11/10/2012, as Document No. RMN-1-05982-2012-13, Book-I, Stored at CD No. RMND187, in the office of the Sub-Registrar, Ramanagara.
Any person finding the same may contact the undersigned ***within 7 days*** from this day, failing which my Client will proceed further.
Address
Sharanya P.A., Advocate,
#417, 12th Main Road, 75th Cross, 6th Block, Rajajinagar, Bangalore -560 010.
(M) : 8792232913
Bengaluru Date: 10.10.2024

ಮಾನ1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ.496/2024
ಅರ್ಜಿದಾರರು: 1. ಶ್ರೀಮತಿ ಸುಶೀಲಮ್ಮ ಬಿನ್ ಲೇಟ್ ಬಸವೇಗೌಡ 2. ಶ್ರೀ ಶಿವಸ್ವಾಮಿ ಬಿನ್ ಲೇಟ್ ಬಸವೇಗೌಡ 3. ಶ್ರೀ ರಾಮು ಬಿನ್ ಲೇಟ್ ಬಸವೇಗೌಡ 4. ಶ್ರೀ ಪುಟ್ಟೇಗೌಡ ಬಿನ್ ಲೇಟ್ ಲಿಂಗೇಗೌಡ ಎಲ್ಲರ ವಾಸ: ಶಿವನೇಗೌಡನದೊಡ್ಡಿಗ್ರಾಮ ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಹಾಗೂ ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ಕನಕಪುರ, 2. ಗ್ರಾಮ ಲೆಕ್ಕಾಧಿಕಾರಿಗಳು, ಕೋಟೆಕೊಪ್ಪ ವೃತ್ತ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಕನಕಪುರ.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ರಿಂದ 4ನೇ ಅರ್ಜಿದಾರರ ತಂದೆಯಾದ ಬಸವೇಗೌಡ ಬಿನ್ ಲೇಟ್ ಬಸವೇಗೌಡ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಉಯ್ಯಂಬಳ್ಳಿ ಹೋಬಳಿ, ಶಿವನೇಗೌಡನದೊಡ್ಡಿ ಗ್ರಾಮದಲ್ಲಿ ದಿನಾಂಕ 08-06-1999 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರ-ರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗದಿಪಡಿಸಿದ ದಿನಾಂಕದಂದು ಅಂದರೆ, 27-11-2024 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
ದಿನಾಂಕ 07/10/2024 ರಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮತ್ತು ಜೆ.ಎಂ.ಎಫ್.ಸಿ. ಕನಕಪುರ
ಅರ್ಜಿದಾರರ ಪರ ವಕೀಲರು
ಬಿ.ಎಸ್.ನಾರಾಯಣಗೌಡ., ವಕೀಲರು
ಹಾರೋಹಳ್ಳಿ ಪೋಲೀಸ್ ಠಾಣೆ ಎದುರು
ಹಾರೋಹಳ್ಳಿ ಟೌನ್/ಹೋಬಳಿ/ತಾಲ್ಲೂಕು
ರಾಮನಗರ ಜಿಲ್ಲೆ
ಸ್ಥಳ : ಕನಕಪುರ
ದಿನಾಂಕ:

ಮಾನ1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ.495/2024
ಅರ್ಜಿದಾರರು: 1. ಶ್ರೀಮತಿ ಸುಶೀಲಮ್ಮ ಬಿನ್ ಲೇಟ್ ಬಸವೇಗೌಡ 2. ಶ್ರೀ ಶಿವಸ್ವಾಮಿ ಬಿನ್ ಲೇಟ್ ಬಸವೇಗೌಡ 3. ಶ್ರೀ ರಾಮು ಬಿನ್ ಲೇಟ್ ಬಸವೇಗೌಡ 4. ಶ್ರೀ ಪುಟ್ಟೇಗೌಡ ಬಿನ್ ಲೇಟ್ ಲಿಂಗೇಗೌಡ ಎಲ್ಲರ ವಾಸ: ಶಿವನೇಗೌಡನದೊಡ್ಡಿಗ್ರಾಮ ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಹಾಗೂ ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ಕನಕಪುರ, 2. ಗ್ರಾಮ ಲೆಕ್ಕಾಧಿಕಾರಿಗಳು, ಕೋಟೆಕೊಪ್ಪ ವೃತ್ತ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಕನಕಪುರ.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ರಿಂದ 4ನೇ ಅರ್ಜಿದಾರರ ತಾಯಿಯಾದ ಶ್ರೀಮತಿ ಕೆಂಪಮ್ಮ ಕೋಂ ಲೇಟ್ ಬಸವೇಗೌಡ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಉಯ್ಯಂಬಳ್ಳಿ ಹೋಬಳಿ, ಶಿವನೇಗೌಡನದೊಡ್ಡಿ ಗ್ರಾಮದಲ್ಲಿ ದಿನಾಂಕ 04-02-1965 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರ-ರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗದಿಪಡಿಸಿದ ದಿನಾಂಕದಂದು ಅಂದರೆ, 27-11-2024 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
ದಿನಾಂಕ 07/10/2024 ರಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮತ್ತು ಜೆ.ಎಂ.ಎಫ್.ಸಿ. ಕನಕಪುರ
ಅರ್ಜಿದಾರರ ಪರ ವಕೀಲರು
ಬಿ.ಎಸ್.ನಾರಾಯಣಗೌಡ., ವಕೀಲರು
ಹಾರೋಹಳ್ಳಿ ಪೋಲೀಸ್ ಠಾಣೆ ಎದುರು
ಹಾರೋಹಳ್ಳಿ ಟೌನ್/ಹೋಬಳಿ/ತಾಲ್ಲೂಕು
ರಾಮನಗರ ಜಿಲ್ಲೆ
ಸ್ಥಳ : ಕನಕಪುರ
ದಿನಾಂಕ:

ಬೇಡ ಜಂಗಮ ಜಾತಿ ಪ್ರಮಾಣಪತ್ರ: ಅರ್ಜಿ ವಜಾ

ಬೆಂಗಳೂರು: ಈ ಹಿಂದೆ ತನಗೆ ಮಂಜೂರು ಮಾಡಿದ್ದ ಲಿಂಗಾಯತ ಜಾತಿ ಪ್ರಮಾಣಪತ್ರ ವಾಪಸ್ ಪಡೆದು, ಬೇಡ ಜಂಗಮ ಜಾತಿ ಪ್ರಮಾಣಪತ್ರ ನೀಡುವಂತೆ ಸರಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿ ರಾಯಚೂರು ಜಿಲ್ಲೆಯ ಸಿಂಧನೂರಿನ ರುದ್ರಯ್ಯ ಸ್ವಾಮಿ ಎಂಬುವರು ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಹೈಕೋರ್ಟ್ ಕಲಬುರಗಿ ಪೀಠದಲ್ಲಿ ರುದ್ರಯ್ಯಸ್ವಾಮಿ ಸಲ್ಲಿಸಿದ್ದ ಅರ್ಜಿ ಆಲಿಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದೆ. ಪ್ರಕರಣವು ಜಾತಿ ಪ್ರಮಾಣಪತ್ರಕ್ಕೆ ಸಂಬಂಧಿಸಿದ ವ್ಯಾಜ್ಯವಾಗಿದೆ. ಅರ್ಜಿದಾರರಿಗೆ ಮೊದಲೇ ಲಿಂಗಾಯತ ಎಂದು ಪ್ರಮಾಣಪತ್ರ ವಿತರಿಸಲಾಗಿದೆ. ಆದರೆ, ಅರ್ಜಿದಾರರು 2018ರಲ್ಲಿ ತಮಗೆ ಮೊದಲು ನೀಡಿದ್ದ ಲಿಂಗಾಯತ ಜಾತಿ ಪ್ರಮಾಣಪತ್ರ ರದ್ದುಗೊಳಿಸಬೇಕು ಮತ್ತು ಹೊಸದಾಗಿ ಬೇಡರ ಜಂಗಮ ಪ್ರಮಾಣಪತ್ರ ನೀಡಲು ನಿರ್ದೇಶನ ನೀಡಬೇಕು ಎಂದು ಕೋರಿದ್ದಾರೆ. ಆದರೆ ಅದಕ್ಕೆ ಕಾರಣ ನೀಡಿಲ್ಲ ಎಂದು ಪೀಠ ತಿಳಿಸಿದೆ.

ಅಲ್ಲದೇ, ಅರ್ಜಿದಾರರ ಪರ ವಕೀಲರು ಮೊದಲು ತಪ್ಪಾಗಿ ಸರ್ಟಿಫಿಕೇಟ್ ನೀಡಲಾಗಿದೆ. ಅದನ್ನು ಬದಲಾಯಿಸಬೇಕು ಎಂದಷ್ಟೇ ಮೌಖಿಕವಾಗಿ ಹೇಳಿದ್ದಾರೆ. ಆದರೆ ಅದಕ್ಕೆ ಯಾವುದೇ ದಾಖಲೆಗಳನ್ನು ಒದಗಿಸಿಲ್ಲ. ಹಾಗಾಗಿ, ಪ್ರಕರಣದ ವಿವರ ಗಮನಿಸಿದರೆ ಮೊದಲು ನೀಡಿದ್ದ ಜಾತಿ ಪ್ರಮಾಣಪತ್ರ ರದ್ದುಗೊಳಿಸಿ, ಹೊಸದಾಗಿ ಸರ್ಟಿಫಿಕೇಟ್ ನೀಡಬೇಕು ಎಂಬುದಾಗಿ ಕೋರಿಕೆ ಅಪ್ರಸ್ತುತವಾಗಿದೆ. ಹಾಗಾಗಿ, ಅರ್ಜಿ ವಜಾಗೊಳಿಸಲಾಗುತ್ತಿದೆ ಎಂದು ಪೀಠ ಹೇಳಿದೆ.

ವಾಲ್ಮೀಕಿ ನಿಗಮದ ಹಗರಣ: ಜಾಮೀನು ಆದೇಶ ಕಾಯ್ದಿರಿಸಿದ ವಿಶೇಷ ಕೋರ್ಟ್

ಬೆಂಗಳೂರು: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ (ಕೆಎಂವಿಎಸ್ ಟಿಡಿಸಿಎಲ್) ಬ್ಯಾಂಕ್ ಖಾತೆಯಿಂದ ಅಕ್ರಮವಾಗಿ 95 ಕೋಟಿ ರು. ಹಣ ವರ್ಗಾಯಿಸಿರುವ ಆರೋಪಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶ

ನಾಲಯ ದಾಖಲಿಸಿರುವ ಪ್ರಕರಣದಲ್ಲಿ ಮಾಜಿ ಸಚಿವ ಬಿ ನಾಗೇಂದ್ರ ಮತ್ತು ಅವರ ಆಪ್ತ ನೆಕ್ಕುಂಟಿ ನಾಗರಾಜ್ ಅವರ ಜಾಮೀನು ಅರ್ಜಿಗಳ ಆದೇಶವನ್ನು ಜನಪ್ರತಿನಿಧಿಗಳ ವಿಶೇಷ ಸತ್ರ ನ್ಯಾಯಾಲಯ ಬುಧವಾರ ಕಾಯ್ದಿರಿಸಿದ್ದು, ಸೋಮವಾರ (ಅ.14) ಆದೇಶ ಪ್ರಕಟಿಸುವುದಾಗಿ ತಿಳಿಸಿದೆ.

ಜಾರಿ ನಿರ್ದೇಶನಾಲಯದಿಂದ ಬಂಧಿತ ರಾಗಿ ನ್ಯಾಯಾಂಗ ಬಂಧನದಲ್ಲಿರುವ ನಾಗೇಂದ್ರ ಮತ್ತು ನೆಕ್ಕುಂಟಿ ನಾಗರಾಜ್ ಸಲ್ಲಿಸಿರುವ ಜಾಮೀನು ಅರ್ಜಿಗಳ ವಿಚಾರಣೆ ಯನ್ನು ವಿಶೇಷ ಸತ್ರ ನ್ಯಾಯಾಧೀಶರಾದ ಸಂತೋಷ್ ಗಜಾನನ ಭಟ್ ಅವರು ನಡೆಸಿದರು. ಈ ಪ್ರಕರಣದಲ್ಲಿ ಸೆಪ್ಟೆಂಬರ್ 9ರಂದು ಜಾರಿ ನಿರ್ದೇಶನಾಲಯ ಅಕ್ರಮ ಹಣ ವರ್ಗಾವಣೆ ಕಾಯಿದೆಯ ಸೆಕ್ಷನ್ 3 ಮತ್ತು 4ರ ಅಡಿಯ ಆರೋಪಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ 4,970 ಪುಟಗಳ ಆರೋಪ ಪಟ್ಟಿ ಹಾಗೂ 144 ಪುಟಗಳ ದೂರನ್ನು ಸಲ್ಲಿಸಿತ್ತು. ಪ್ರಕರಣದಲ್ಲಿ ನಾಗೇಂದ್ರ ಅವರನ್ನು ಮೊದಲ ಆರೋಪಿಯನ್ನಾಗಿ ಮಾಡಲಾಗಿದೆ. ಈ ಮಧ್ಯೆ, ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ದಾಖಲಿಸಿರುವ ಪ್ರಕರಣದಲ್ಲಿ 12ನೇ ಆರೋಪಿಯಾಗಿರುವ ನೆಕ್ಕುಂಟಿ ನಾಗರಾಜ್‌ಗೆ ಕರ್ನಾಟಕ ಹೈಕೋರ್ಟ್ ಇತ್ತೀಚಿಗೆ ಜಾಮೀನು ಮಂಜೂರು ಮಾಡಿದೆ.

ನಿಗಮದ ಖಾತೆಯಿಂದ ಒಟ್ಟಾರೆ 84 ಕೋಟಿಯ ಅಕ್ರಮವಾಗಿ ಬಳಕೆ ಮಾಡಲಾ ಗಿದೆ. ಮಾಜಿ ಸಚಿವ ನಾಗೇಂದ್ರ ಅವರು ನಕಲಿ ಖಾತೆ ಸೃಷ್ಟಿಸಲು ಸೂಚಿಸಿ, ಹಣ ವರ್ಗಾವಣೆ ಮಾಡಲು ನಿರ್ದೇಶಿಸಿದ್ದಾರೆ. ನಾಗೇಂದ್ರ ಸೂಚನೆಯಂತೆ ಪದ್ಮನಾಭರಿಂದ ಹಣ ವರ್ಗಾವಣೆಯಾಗಿದೆ. ಈ ಪ್ರಕರಣದಲ್ಲಿ ನಾಗೇಂದ್ರ ಒಳಸಂಚು ರೂಪಿಸಿದ್ದು, ಆನಂತರ ಸಾಕ್ಷ್ಯ ನಾಶಕ್ಕೆ ಪ್ರಯತ್ನಿಸಿದ್ದಾರೆ. ಆನಂತರ ವಸಂತ ನಗರದ ಶಾಂಗ್ರಿಲಾ ಹೋಟೆಲ್‌ನಲ್ಲಿ ನಾಗೇಂದ್ರ ಸಭೆ ನಡೆಸಿದ್ದಾರೆ. ವಾಲ್ಮೀಕಿ ಅಭಿವೃದ್ಧಿ ನಿಗಮನಕ್ಕೆ ಪದ್ಮನಾಭ ಅವರನ್ನು ನಾಗೇಂದ್ರ ಆಪ್ತನಾದ ನೆಕ್ಕಂಟಿ ನಾಗರಾಜ್ ಮೂಲಕ ನೇಮಕ ಮಾಡಲಾಗಿತ್ತು ಎಂದು ಆರೋಪಿಸಲಾಗಿದೆ.

ಪ್ರಕರಣದಲ್ಲಿ 15 ಸಾಕ್ಷ್ಯಗಳ ಸಂಗ್ರಹ

ಲೋಕಸಭಾ ಚುನಾವಣೆಯಲ್ಲಿ ಬಳ್ಳಾರಿ ಕ್ಷೇತ್ರದಲ್ಲಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ಬಳಕೆ ಮಾಡಲಾಗಿದೆ. ನಾಗೇಂದ್ರನ ಆಪ್ತ ಸಹಾಯಕನಾದ 8ನೇ ಆರೋಪಿ ವಿಜಯ್ ಕುಮಾರ್ ಮೊಬೈಲಿನಲ್ಲಿ ಹಣದ ಮೊತ್ತ, ಯಾರಿಗೆಲ್ಲಾ ಪೂರೈಸಲಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ ಎಂದು ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ. ಬಳ್ಳಾರಿ ಲೋಕಸಭಾ ಚುನಾವಣೆಗೆ 20.19 ಕೋಟಿ ರೂಪಾಯಿ ಬಳಕೆ ಮಾಡಲಾಗಿದೆ ಎಂದು ವಿವರಿಸಲಾಗಿದೆ. ಈ ಸಂಬಂಧ ಎಲ್ಲಾ ಆರೋಪಿಗಳ ಹೇಳಿಕೆ ದಾಖಲಿಸಲಾಗಿದೆ. ಪ್ರಕರಣದಲ್ಲಿ ಸದ್ಯ 15 ಸಾಕ್ಷ್ಯಗಳ ಕಲೆ ಹಾಕಲಾಗಿದ್ದು, ನಾಗೇಂದ್ರ 5.26 ಕೋಟಿ ರುಪಾಯಿ ಬಳಕೆ ಮಾಡಿದ್ದಾರೆ. ಆದರೆ, ಈ ಸಂಬಂಧ ಉತ್ತರಿಸಲು ನಾಗೇಂದ್ರ ನಿರಾಕರಿಸಿದ್ದಾರೆ. ಸಣ್ಣ ಕೆಲಸಗಳಿಗೆ ಹೆಚ್ಚಿನ ಮೊತ್ತದ ನಕಲಿ ಬಿಲ್‌ಗಳನ್ನು ಸೃಷ್ಟಿಸಲಾಗಿದೆ.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ದಕ್ಷಿಣ ಕೊರಿಯಾದ ಖ್ಯಾತ ಲೇಖಕಿ ಹಾನ್ ಕಾಂಗ್‌ಗೆ 2024ನೇ ಸಾಲಿನ ಸಾಹಿತ್ಯ ನೊಬೆಲ್ ಪ್ರಶಸ್ತಿ ಪ್ರಕಟಿಸಲಾಗಿದೆ. ಸಣ್ಣ ಕಥೆ, ಕಾದಂಬರಿ ಮತ್ತು ಕಾವ್ಯ ರಚನೆಯಲ್ಲಿ ನಿರಂತರವಾಗಿ ತೊಡಗಿರುವ ಹಾನ್‌ಕಾಂಗ್ , ಮಾನವ ಜೀವನದ ಸೂಕ್ಷ್ಮಗಳು ಮತ್ತು ಎದುರಿಸಿದ ಆಘಾತಗಳನ್ನು ಕಾವ್ಯಾತ್ಮಕವಾಗಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ ಎಂದು ರಾಯಲ್ ಸ್ವೀಡಿಷ್ ಅಕಾಡೆಮಿ ಗುರುವಾರ ತಿಳಿಸಿದೆ.

ಪುಟ ತೆರೆದಂತೆ...

ನಂಬಿಕೆ ಎರಡು ಕಥೆಗಳು
ಶಿಶಿರಕಾಲ
ಶಿಶಿರ್ ಹೆಗಡೆ

ಸಂ.ಪುಟ | 6

ಹಕ್ಕಿ ಫೋಟೋ ತೆಗೆಯದೇ ವಾಪಸಾದೆ!
ಶಶಾಂಕಣ
ಶಶಿಧರ ಹಾಲಾಡಿ

ಸಂ.ಪುಟ | 6

ದಾರಿದೀಪೋಕ್ತಿ

ಒಂದು ಸಮಸ್ಯೆಗೆ ಉತ್ತರವನ್ನು ಕಂಡುಕೊಳ್ಳಬೇಕು, ಇಲ್ಲವೇ ಸಮಸ್ಯೆಯನ್ನು ಬಿಟ್ಟು ದೂರ ಸರಿಯಬೇಕು. ಆದರೆ ಸಮಸ್ಯೆಯ ಜತೆಗೇ ಬದುಕುವುದನ್ನು ಅಭ್ಯಾಸ ಮಾಡಿಕೊಳ್ಳಬಾರದು. ಹಾಗೆ ಮಾಡಿದರೆ ನೀವು ಯಾವ ಸಮಸ್ಯೆಯನ್ನೂ ಇತ್ಯರ್ಥಪಡಿಸುವುದಿಲ್ಲ.

ವಕ್ರತುಂಡೋಕ್ತಿ

ಯಾರು ಲಂಚವನ್ನು ಕೊಡುವುದಿಲ್ಲವೋ ಅವರಿಗೆ ಅದರ ಮಹತ್ವ ಗೊತ್ತಿಲ್ಲ ಎಂದರ್ಥ.

ರಾಜ್ಯಗಳಿಗೆ ತೆರಿಗೆ ಪಾಲು ಬಿಡುಗಡೆ

ದೆಹಲಿ: ಕೇಂದ್ರ ಸರ್ಕಾರ ಕರ್ನಾಟಕ ಸೇರಿದಂತೆ 28 ರಾಜ್ಯಗಳಿಗೆ ತೆರಿಗೆ ಪಾಲಿನ ಕಂತಿನ ರೂಪದಲ್ಲಿ 1,78,173 ಕೋಟಿ ರು.ಗಳನ್ನು ಗುರುವಾರ ಬಿಡುಗಡೆ ಮಾಡಿದೆ. ಈ ಪೈಕಿ ಕರ್ನಾಟಕದ ಪಾಲಿನ ಕಂತು 6,498 ಕೋಟಿ ಬಿಡುಗಡೆಯಾಗಿದೆ. ಉತ್ತರಪ್ರದೇಶಕ್ಕೆ 31,962 ಕೋಟಿ ರು. ಬಿಡುಗಡೆಯಾಗಿದ್ದರೆ, ರಾಜಸ್ಥಾನಕ್ಕೆ 10,737 ಕೋಟಿ, ಮಧ್ಯಪ್ರದೇಶಕ್ಕೆ 13,987 ಕೋಟಿ, ಪಶ್ಚಿಮ ಬಂಗಾಳಕ್ಕೆ 13,404 ಕೋಟಿ ರು. ನೀಡಲಾಗಿದೆ.

ಡಿ'ಕುನ್ಹಾ ವರದಿ ಪರಿಶೀಲನೆಗೆ ಡಿಕೆಶಿ ನೇತೃತ್ವದ ಸಮಿತಿ

ಕೋವಿಡ್ ಹಗರಣ ತನಿಖೆಗೆ ಎಸ್‌ಐಟಿ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ವಿಧಾನಸಭಾ ಚುನಾವಣೆಯಿಂದಲೂ ಬಿಜೆಪಿ ವಿರುದ್ಧ ಬ್ರಹ್ಮಾಂಡ ಭ್ರಷ್ಟಾಚಾರದ ಆರೋಪ ಹೋರಿಸಿದ್ದ ಕಾಂಗ್ರೆಸ್ ಇದೀಗ, ಕೋವಿಡ್ ಅಕ್ರಮದ ತನಿಖೆಗೆ ವಿಶೇಷ ತನಿಖಾ ದಳ ರಚಿಸಲು ತೀರ್ಮಾನಿಸಿದೆ.

ಬೆಂಗಳೂರಿನಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಮಹತ್ವದ ತೀರ್ಮಾನ ಕೈಗೊಂಡಿರುವ ರಾಜ್ಯ ಸರಕಾರ, ಬಿಜೆಪಿ ಸರಕಾರದ ಅವಧಿಯಲ್ಲಿ ನಡೆದಿರುವ ಕೋವಿಡ್ ಹಗರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲು ಎಸ್‌ಐಟಿ ರಚಿಸಲು ಮುಂದಾಗಿದೆ. ಈಗಾಗಲೇ ನ್ಯಾ.ಮೈಕೆಲ್ ಕುನ್ಹಾ ಸಲ್ಲಿಸಿದ ಮಧ್ಯಂತರ ವರದಿ ಸಲ್ಲಿಸಿದ್ದರೂ ಹೆಚ್ಚುವರಿ ತನಿಖೆಯ ಅಗತ್ಯವಿದೆ. ಇದರೊಂದಿಗೆ ಈ ಪ್ರಕರಣದಲ್ಲಿ ಕ್ರಿಮಿನಲ್ ಆರೋಪಗಳಿರುವುದರಿಂದ ಎಸ್‌ಐಟಿಯಿಂದ ತನಿಖೆ ಮುಂದುವರಿಸಲು ತೀರ್ಮಾನಿಸಲಾಗಿದೆ.

ಸಂಪುಟ ಉಪಸಮಿತಿ ಪರಿಶೀಲನೆ: ಡಿ'ಕುನ್ಹಾ ಅವರು ಮಧ್ಯಂತರ ವರದಿಯನ್ನು ಮುಖ್ಯ ಮಂತ್ರಿ ಗಳಿಗೆ ಸಲ್ಲಿಸಿದ್ದರು. ಈ ವರದಿಯ ಪರಿಶೀಲನೆಗೆ ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿತ್ತು. ಇದೀಗ ಈ ಸಮಿತಿ ಯೊಂದಿಗೆ ವಿಶೇಷ ತನಿಖಾ ತಂಡ ರಚಿಸಲು ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್, ಬಿಜೆಪಿ ಸರಕಾರದ ಅವಧಿಯಲ್ಲಿ ಕೋವಿಡ್ ವೇಳೆ ಉಪಕರಣ ಖರೀದಿ ಅಕ್ರಮ ಕುರಿತಂತೆ ನ್ಯಾ.ಮೈಕೆಲ್ ಡಿ.ಕುನ್ಹಾ ವಿಚಾರಣಾ ಆಯೋಗದ ಮಧ್ಯಂತರ ವರದಿ ಆಧರಿಸಿ ಕ್ರಮ ಜರುಗಿಸುವ ಕುರಿತು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ. ಈಗಾಗಲೇ ಸಚಿವ ಸಂಪುಟ ಉಪಸಮಿತಿ ರಚಿಸಲಾಗಿದ್ದು, ಇದರೊಂದಿಗೆ ವಿಶೇಷ ತನಿಖಾ ದಳ ರಚನೆಗೆ ಒಪ್ಪಿಗೆ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದರು.

500 ಕೋಟಿ ವಸೂಲಿಗೆ ಆಯೋಗದ ಶಿಫಾರಸು: ಕುನ್ಹಾ ವಿಚಾರಣಾ ಆಯೋಗ ಸಲ್ಲಿಸಿರುವ ಮಧ್ಯಂತರ ವರದಿಯ ಮೇಲೆ ಕೈಗೊಳ್ಳಬೇಕಾಗುವ ಕ್ರಮಗಳ ಕುರಿತು ಚರ್ಚೆ ನಡೆದಿದೆ. ಆಯೋಗ 11 ಸಂಪುಟಗಳಲ್ಲಿ ವರದಿ ನೀಡಿದೆ. 7,223.64 ಕೋಟಿ ಮೊತ್ತದ ಅವ್ಯವಹಾರದ ತನಿಖೆ ನಡೆದಿದೆ. 500 ಕೋಟಿ ರು. ವಸೂಲಾತಿಗೆ ಆಯೋಗ ಶಿಫಾರಸು ಮಾಡಿದೆ ಎಂದು ವಿವರಿಸಿದರು.

→ 4

- ಬಿಜೆಪಿ ಅವಧಿಯ ಹಗರಣದ ಬಗ್ಗೆ ಮತ್ತೊಂದು ತನಿಖಾಸ್ತ್ರ
- ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕ್ಕೆ ಸಂಪುಟ ತೀರ್ಮಾನ
- 7223 ಕೋಟಿ ಮೊತ್ತದ ಅವ್ಯವಹಾರ; 500 ಕೋಟಿ ವಸೂಲಿಗೆ ಶಿಫಾರಸು
- ನ್ಯಾ. ಮೈಕೆಲ್ ಡಿ'ಕುನ್ಹಾ ಮಧ್ಯಂತರ ವರದಿ ಆಧಾರದ ಮೇಲೆ ಸರಕಾರದ ಕ್ರಮ
- ಕೋವಿಡ್ ಅಕ್ರಮದಲ್ಲಿ ಭಾಗಿಯಾದ ಸಂಸ್ಥೆ, ಏಜೆನ್ಸಿಗಳನ್ನು ಕಪ್ಪುಪಟ್ಟಿಗೆ ಸೇರಿಸಲು ನಿರ್ಣಯ

ವರದಿಯಲ್ಲಿ ಏನಿದೆ?

- ಕೋವಿಡ್ ಹಗರಣದ 55 ಸಾವಿರ ಕಡತ ಪರಿಶೀಲಿಸುವ ಅಗತ್ಯವಿದೆ
- 7223 ವ್ಯವಹಾರದಲ್ಲಿ 500 ಕೋಟಿ ವಸೂಲಿಗೆ ಶಿಫಾರಸು
- ಅಕ್ರಮದಲ್ಲಿ ಭಾಗವಹಿಸಿರುವ ಸಂಸ್ಥೆ, ಗುತ್ತಿಗೆದಾರರನ್ನು ಬ್ಲ್ಯಾಕ್ ಲಿಸ್ಟ್‌ಗೆ ಸೇರಿಸಲು ತೀರ್ಮಾನ

ಕೋವಿಡ್ ಹಗರಣದಲ್ಲಿ ಯಾರಿದ್ದಾರೆ ಎಂಬುದನ್ನು ನಾವು ಹೇಳುವುದಕ್ಕೆ ಆಗುವುದಿಲ್ಲ, ಯಾರಿದ್ದಾರೆ ಅಂತ ಕುನ್ಹಾ ಅವರು ಹೇಳಬೇಕು. ಸಂಪೂರ್ಣ ವರದಿ ಬಂದ ಮೇಲೆ ಅದು ಹೊರಬರಲಿದೆ. ಕುನ್ಹಾ ಆಯೋಗ ವೇಗದಿಂದ ಕೆಲಸ ಮಾಡ್ತಿದೆ. ನ್ಯಾಯ ಸಿಗುವ ವಿಶ್ವಾಸ ನಮಗಿದೆ.
ಎಚ್.ಕೆ. ಪಾಟೀಲ್, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ

ಡಿಕೆಶಿ ನೇತೃತ್ವದಲ್ಲಿ ಸಮಿತಿ



ಕೋವಿಡ್ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ರಚಿಸಿದ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಸಚಿವ ಸಂಪುಟ ಉಪಸಮಿತಿಯನ್ನು ರಚಿಸಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ನೇತೃತ್ವದಲ್ಲಿ ಏಳು ಸಚಿವರ ಸಮಿತಿ ಯನ್ನು ರಚಿಸಲಾಗಿದೆ. ಗೃಹ ಸಚಿವ ಡಾ. ಜಿ ಪರಮೇಶ್ವರ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ ಪಾಟೀಲ್, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಆರ್.ಡಿಪಿಆರ್ ಸಚಿವ ಪ್ರಿಯಾಂಕ್ ಖರ್ಗೆ, ಕಾರ್ಮಿಕ ಸಚಿವ ಸಂತೋಷ್ ಲಾಡ್, ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ಪಾಟೀಲ್ ಸಮಿತಿಯ ಸದಸ್ಯರಾಗಿದ್ದಾರೆ.

ಜಂಬೂ ಸವಾರಿಗೆ ಕ್ಷಣಗಣನೆ

ಮೈಸೂರು: ಶರನ್ನವರಾತ್ರಿ ಕಳೆದು ಅಂತಿಮವಾಗಿ ವಿಜಯಪತಾಕೆ ಹಾರಿಸುವ ವಿಜಯದಶಮಿಯ ಐತಿಹಾಸಿಕ ಕ್ಷಣಕ್ಕೆ ಅರಮನೆ ನಗರಿ ಮೈಸೂರು ಕಾತುರದಿಂದ ನಿರೀಕ್ಷಿಸುತ್ತಿದೆ. ಕಳೆದ ಒಂಬತ್ತು ದಿನಗಳಿಂದ ಸಾಂಸ್ಕೃತಿಕ ನಗರಿ ಮೈಸೂರು ನವವಧುವಿನಂತೆ ಕಂಗೊಳಿಸಿದೆ. ಅಂತಿಮವಾಗಿ ವಿಜಯದಶಮಿ ಆಚರಣೆಗೆ ಜಿಲ್ಲಾಡಳಿತ ಸಕಲ ಸಿದ್ಧತೆ ನಡೆಸಿದೆ.

ಅ.12ರಂದು ಮಧ್ಯಾಹ್ನ 1-41ರಿಂದ 2.10ರೊಳಗಿನ ಶುಭ ಮಕರಲಗ್ನದಲ್ಲಿ ನಂದಿಧ್ವಜ ಪೂಜೆ ಹಾಗೂ ಸಂಜೆ 4ರಿಂದ 4.30ರೊಳಗೆ ಶುಭ ಕುಂಭಲಗ್ನದಲ್ಲಿ ಚಿನ್ನದ ಅಂಬಾರಿಯೊಳಗೆ ಸರ್ವಾಲಂಕೃತಳಾಗಿ ಕುಳಿತ ತಾಯಿ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ನೆರವೇರಲಿದೆ.

ಮುಖ್ಯಮಂತ್ರಿ ಚಾಲನೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಪರಿವಾರ ನಂದಿಧ್ವಜಕ್ಕೆ ಪೂಜೆಮಾಡಿ ಜಂಬೂಸವಾರಿಗೆ ಚಾಲನೆ ನೀಡಲಿದ್ದಾರೆ. ನಾಡಿನ ಹಿರಿಮೆ-ಗರಿಮೆ ಅಭಿವ್ಯಕ್ತಗೊಳಿಸುವ, ನಾಡಹಬ್ಬದ ಅಂತಿಮಘಟ್ಟ ವಿಜಯದಶಮಿ ಮೆರವಣಿಗೆಯಲ್ಲಿ ದೇಶದ ಬಹು ಸಂಸ್ಕೃತಿ, ಸಂಪ್ರದಾಯದ ಅಶ್ವಪಡೆ, ಸ್ತಬ್ಧಚಿತ್ರ, ಜಾನಪದ ಕಲಾತಂಡಗಳು, ಪೊಲೀಸ್ ತುಕಡಿ ಸಾಗಲಿವೆ.

ಜಂಬೂಸವಾರಿ ಆಕರ್ಷಣೆ: 750 ಕೆಜಿ ತೂಕದ ಚಿನ್ನದ ಅಂಬಾರಿ ಹೊತ್ತ ಅಭಿಮನ್ಯು ಕುಮ್ಕಿ ಆನೆಗಳಾದ ಲಕ್ಷ್ಮಿ ಮತ್ತು ವಿಜಯ ಜತೆ ರಾಜಮಾರ್ಗದಲ್ಲಿ ಸಾಗಲಿದ್ದಾನೆ. ಅಭಿಮನ್ಯು 5ನೇ ಬಾರಿ ಅಂಬಾರಿ ಹೊರಲಿದ್ದಾನೆ. ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ರಾಜವಂಶಸ್ಥ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಚಿವರಾದ ಡಾ.ಎಚ್.ಸಿ.ಮಹದೇವಪ್ಪ ಮತ್ತು ಶಿವರಾಜ ತಂಗಡಗಿ, ಜಿಲ್ಲಾಧಿಕಾರಿ ಜಿ. ಲಕ್ಷ್ಮಿಕಾಂತರೆಡ್ಡಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ವೇದಿಕೆಯಲ್ಲಿರುವರು.

ಪಾರ್ಸಿ ಸಂಪ್ರದಾಯದ ಬದಲು ದೇಹ ದಹನ | ಸಕಲ ಸರಕಾರಿ ಗೌರವಗಳೊಂದಿಗೆ ಅಂತಿಮ ಸಂಸ್ಕಾರ | ದೇಶದೆಲ್ಲೆಡೆ ಅಶ್ರುತರ್ಪಣ ನಾಡಿನ ಅಸಂಖ್ಯ ಗಣ್ಯರಿಂದ ರತನ್ ಟಾಟಾ ಅಂತಿಮ ದರ್ಶನ

ಭಾರತದ ರತನ ಪಂಚಭೂತಗಳಲ್ಲಿ ಲೀನ

ಮುಂಬೈ: ತಮ್ಮ ಸರಳತೆ ಮತ್ತು ಪರೋಪಕಾರದ ಮೂಲಕ ದೇಶದ ಮನಗೆದ್ದ ರತನ್ ಟಾಟಾ ಅವರ ಅಂತ್ಯಕ್ರಿಯೆಯನ್ನು ಮುಂಬೈನ ವರ್ಲಿ ಚಿತಾಗಾರದಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಗುರುವಾರ ನೆರವೇರಿಸಲಾಯಿತು.

ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ 86 ವರ್ಷದ ರತನ್ ಟಾಟಾ ಅವರು ಬುಧವಾರ ರಾತ್ರಿ ಮುಂಬೈನ ಬ್ರೀಚ್ ಕ್ಯಾಂಡಿ ಆಸ್ಪತ್ರೆಯಲ್ಲಿ ನಿಧರಾಗಿದ್ದರು. ವರ್ಲಿಯ ಶವಾಗಾರದಲ್ಲಿ ಅಂತ್ಯಕ್ರಿಯೆ ನೆರವೇರಿಸುವ ಮುನ್ನ ಮುಂಬೈ ಪೊಲೀಸರು ಟಾಟಾ ಅವರಿಗೆ ಗನ್ ಸೆಲ್ಯೂಟ್ ಮೂಲಕ ಗೌರವ ಸಲ್ಲಿಸಿದರು.

ಮಲಸಹೋದರ ನೋಯೆಲ್ ಟಾಟಾ ಸೇರಿದಂತೆ ಉದ್ಯಮದ ದಿಗ್ಗಜರ ಕುಟುಂಬದ ಸದಸ್ಯರು ಮತ್ತು ಟಾಟಾ ಗ್ರೂಪ್‌ನ ಅಧ್ಯಕ್ಷ ಎನ್ ಚಂದ್ರಶೇಖರನ್ ಅವರಂತಹ ಉನ್ನತ ಅಧಿಕಾರಿಗಳು ವರ್ಲಿಯಲ್ಲಿರುವ ಸ್ಮಶಾನದಲ್ಲಿ ನಡೆದ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ್ದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ, ಅವರ ಸಂಪುಟ ಸಹೋದ್ಯೋಗಿ ಪಿಯೂಷ್ ಗೋಯಲ್, ಮಹಾರಾಷ್ಟ್ರ ಸಿಎಂ ಏಕನಾಥ್ ಶಿಂಧೆ, ಡಿಸಿಎಂ ದೇವೇಂದ್ರ ಫಡ್ನವಿಸ್, ಮಾಜಿ ಸಿಎಂ ಸುಶೀಲ್ ಕುಮಾರ್ ಶಿಂಧೆ, ಕ್ರಿಕೆಟಿಗ ಸಚಿನ್ ತೆಂಡೂಲ್ಕರ್, ಕುಮಾರ ಮಂಗಲಂ ಬಿರ್ಲಾ, ಅಂಬಾನಿ, ಅದಾನಿ ಸೇರಿದಂತೆ ಉದ್ಯಮ ಕ್ಷೇತ್ರದ ನೂರಾರು ಪ್ರಮುಖರು ರತನ್ ಟಾಟಾಗೆ ಅಂತಿಮ ನಮನ ಸಲ್ಲಿಸಿದರು.

ಅಂತಿಮ ಸಂಸ್ಕಾರದ ಪದ್ಧತಿ ಬದಲು: ಬದಲಾದ ಪರಿಸ್ಥಿತಿ ಹಿನ್ನೆಲೆಯಲ್ಲಿ ಪಾರ್ಸಿ ಸಂಪ್ರದಾಯದಂತೆ ರತನ್ ಟಾಟಾ ಅವರ ಪಾರ್ಥಿವ ಶರೀರವನ್ನು ಸೂರ್ಯರಶ್ಮಿ ಹಾಗೂ ರಣ ಹದ್ದುಗಳಿಗೆ ಆಹಾರವಾಗಿ ನೀಡದೆ ದಹನಕ್ರಿಯೆ ಮೂಲಕ ಅಂತ್ಯಕ್ರಿಯೆ ನಡೆಸಲಾಯಿತು.

ಭಾರತರತ್ನಕ್ಕೆ ಶಿಫಾರಸು: ಟಾಟಾಗೆ ದೇಶದ ಭಾರತರತ್ನ ನೀಡುವಂತೆ ಕೇಂದ್ರ ಸರಕಾರವನ್ನು ಕೋರುವ ಪ್ರಸ್ತಾವನೆಗೆ ಮಹಾರಾಷ್ಟ್ರ ಸಚಿವ ಸಂಪುಟ ಅನುಮೋದನೆ ನೀಡಿದೆ.

ಟಾಟಾಗೆ ನಮನ: ರತನ್ ಟಾಟಾಗೆ ಪ್ರಪಂಚದ ಮೂಲೆಮೂಲೆ ಗಳಿಂದಲೂ ಶ್ರದ್ಧಾಂಜಲಿಯ ಮಹಾಪೂರ ಹರಿದು ಬರುತ್ತಿದೆ.

→ 4

ನಕಲಿ ದಾಖಲೆ ಸೃಷ್ಟಿಸಿ 70 ಕೋಟಿ ವಂಚನೆ ಐವರ ಬಂಧನ

ಬೆಂಗಳೂರು: ಕಂತೆ ಕಂತೆ ನಕಲಿ ನೋಟುಗಳನ್ನು ಮುದ್ರಿಸಿ ಆರ್‌ಬಿಐಗೆ ನೀಡಿ ಟೋಪಿ ಹಾಕಲು ಯತ್ನಿಸಿದ ವಂಚಕರ ಗ್ಯಾಂಗ್ ಪೊಲೀಸರ ಬಲೆಗೆ ಬಿದ್ದಿದೆ. ಬಂಧಿತರನ್ನು ಅಬ್ದುಲ್, ಪ್ರಸೀತ್, ಮೊಹಮ್ಮದ್ ಅಫ್ನಾಸ್, ನೂರುದ್ದೀನ್ ಅನ್ವರ್ ಹಾಗೂ ಪ್ರಿಯೇಶ್ ಎಂದು ತಿಳಿದು ಬಂದಿದೆ. ಆರೋಪಿಗಳು ಹಿಂದಿಯ ವೆಬ್ ಸೀರಿಸ್‌ನಲ್ಲಿ ನೋಟುಗಳನ್ನು ಮುದ್ರಿಸಿ ಕಳ್ಳಮಾರ್ಗದಲ್ಲಿ ಸರಬರಾಜು ಮಾಡುವ ಕತೆ ಮೀರಿಸುವ ಹಾಗೆ ನಕಲಿ ನೋಟುಗಳನ್ನು ಮುದ್ರಿಸಿ ವಂಚಿಸುತ್ತಿದ್ದರು. ಅಲ್ಲದೆ, ನಕಲಿ ನೋಟುಗಳನ್ನು ಆರ್‌ಬಿಐಗೆ ನೀಡಿ ರಾಜಾ ರೋಷವಾಗಿ ಚಾಲ್ತಿಗೆ ತರಲು ಪ್ರಯತ್ನಿಸಿದ್ದರು.

ವಿನಯ್ ಅತ್ಯಾಚಾರ ಪ್ರಕರಣ ಸಿಐಡಿಗೆ

ಬೆಂಗಳೂರು: ಕೆಪಿಸಿಸಿ ಕಾರ್ಯಾಧ್ಯಕ್ಷ, ಶಾಸಕ ವಿನಯ್ ಕುಲಕರ್ಣಿ ವಿರುದ್ಧ ಕೇಳಿಬಂದಿರುವ ಅತ್ಯಾಚಾರ ಆರೋಪದ ತನಿಖೆಯನ್ನು ಸಿಐಡಿಗೆ ವಹಿಸಿ ರಾಜ್ಯ ಸರಕಾರ ಆದೇಶಿಸಿದೆ.

ವಿನಯ್ ಕುಲಕರ್ಣಿ ವಿರುದ್ಧ ಹಾವೇರಿ ಮೂಲದ ಮಹಿಳೆ ಸಂಜಯನಗರ ಪೊಲೀಸ್ ಠಾಣೆಗೆ ಹಾಗೂ ಶಾಸಕರು ದೂರು- ಪ್ರತಿ ದೂರು ನೀಡಿರುವುದರಿಂದ ಈ ಪ್ರಕರಣಗಳನ್ನು ಸಿಐಡಿಗೆ ವರ್ಗಾಯಿಸಲಾಗಿದೆ. ಗುರುವಾರ ರಾಜ್ಯ ಸರಕಾರ ಆದೇಶ ಹೊರಡಿಸಿದ್ದು, ಶಾಸಕ ವಿನಯ್ ಕುಲಕರ್ಣಿ ಅತ್ಯಾಚಾರ ನಡೆಸಿದ್ದಾಗಿ ಆರೋಪಿಸಿ ಮಹಿಳೆ ದೂರು ನೀಡಿದ್ದರು. ಇದಕ್ಕೆ ಪ್ರತಿಯಾಗಿ ದೂರುದಾರೆ ವಿರುದ್ಧವೂ ವಿನಯ್ ಕುಲಕರ್ಣಿ ಪ್ರತಿದೂರು ನೀಡಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಪ್ರತೀದಿನ 90 ಎಣ್ಣೆ ಹಾಕೋರು ತಪ್ಪದೆ ಈ ಸುದ್ದಿಯನ್ನೊಮ್ಮೆ ಓದಿ
ಸುದ್ದಿ

ಅನಧಿಕೃತ ಸಭೆ ನಿಲ್ಲಸಲು ಎಐಸಿಸಿ ತಾಕೀತು | ಸಿದ್ದು ಅವರೇ ಸಿಎಂ: ಜಾರಕಿಹೊಳಿ ರಾಜಕೀಯ ಸಭೆ ನಡೆಸಿಲ್ಲ: ಪರಂ | ಸಭೆ ಬಗ್ಗೆ ಕಿಚನ್ ಕ್ಯಾಬಿನೆಟ್‌ನಲ್ಲಿ ಚರ್ಚೆ

ಪಕ್ಷದ ಶಿಸ್ತು ಉಲ್ಲಂಘಿಸಿದರೆ ಕಠಿಣ ಕ್ರಮ: ಸಿಎಂ ಎಚ್ಚರಿಕೆ

ಬೆಂಗಳೂರು :ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾ ಮಯ್ಯ ಅವರ ರಾಜೀನಾಮೆ ಇಲ್ಲ ಎನ್ನುವ ಸ್ಪಷ್ಟ ಸಂದೇಶವನ್ನು ರವಾನಿಸಿದ ಬಳಿಕವೂ, ಕೆಲ ಕಾಂಗ್ರೆಸ್ ನಾಯಕರ ಪದೇಪದೆ ಗೊಂದಲ ಸೃಷ್ಟಿಸುವ ರೀತಿಯಲ್ಲಿ ಹೇಳಿಕೆ ನೀಡುವುದು ಹಾಗೂ ನಡೆದುಕೊಳ್ಳುತ್ತಿರುವುದಕ್ಕೆ ಸಿದ್ದರಾಮಯ್ಯ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ದಲಿತ ಸಚಿವರ ಸರಣಿ ಸಭೆ, ಊಟದ ನೆಪದಲ್ಲಿ ನಡೆಯುತ್ತಿ ರುವ ಗೌಪ್ಯ ಸಭೆ ಹಾಗೂ ಸಿಎಂ ಹುದ್ದೆಯೇ ಖಾಲಿಯಿಲ್ಲದಿದ್ದರೂ 'ದಲಿತ ಮುಖ್ಯಮಂತ್ರಿ'ಯ ಕೂಗಿಗೆ ಅಸಮಾಧಾನ ವ್ಯಕ್ತಪಡಿಸಿರುವ ಸಿದ್ದರಾಮಯ್ಯ ಅವರು ಈ ಎಲ್ಲ ನಡೆಯನ್ನು ಕೂಡಲೇ ನಿಲ್ಲಿಸಬೇಕು ಎಂದು ಸಚಿವರಿಗೆ ಸೂಚನೆ ನೀಡಿದ್ದಾರೆ. ಗುರುವಾರ ನಡೆದ ಸಂಪುಟ ಸಭೆಯ ಬಳಿಕ ನಡೆದ ಈ ವಿಷಯವನ್ನು ಪ್ರಸ್ತಾಪಿಸಿರುವ ಸಿದ್ದರಾಮಯ್ಯ ಅವರು, ಈ ರೀತಿ ಹೇಳಿಕೆಗಳನ್ನು ನೀಡುವ ಮೂಲಕ ಗೊಂದಲ ಸೃಷ್ಟಿಯಾಗುತ್ತಿದೆ. ಈಗಾಗಲೇ ಸಿಎಂ ಬದಲಾವಣೆ ಯಿಲ್ಲ ಎನ್ನುವ ಸ್ಪಷ್ಟ ಸಂದೇಶ ಪಕ್ಷದ ಹೈಕಮಾಂಡ್ ನೀಡಿದೆ. ಆದ್ದರಿಂದ ಇನ್ನುಮುಂದೆ ಸಿಎಂ ಬದಲಾವಣೆಗೆ ಬಗ್ಗೆ ಮಾತನಾಡುವಂತಿಲ್ಲ. ಯಾವುದೇ ಸಭೆ ನಡೆಸಬೇಡಿ ಎಂದು ಸೂಚನೆ ನೀಡಿದ್ದಾರೆ ಎನ್ನಲಾಗಿದೆ.

ಇನ್ಮುಂದೆ ಸಭೆಗಳನ್ನು ನಡೆಸಲ್ಲ: ಗೃಹ ಸಚಿವ ಪರಮೇಶ್ವರ ನಡೆಸಿದ ಹಲವು ಸಭೆಗಳ ಬಗ್ಗೆ ಪಹೈಕಮಾಂಡ್ ಎಚ್ಚರಿಕೆ ನೀಡಿದ ಬೆನ್ನಲ್ಲೇ, ಇನ್ನು ಮುಂದೆ ಯಾವುದೇ ಸಭೆಗಳಲ್ಲಿ ಭಾಗವಹಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಸಿಎಂ ಬದಲಾವಣೆ ಬಗ್ಗೆ ಮಾತಾಡಿದ್ರೆ ನೋಟಿಸ್: ಎಚ್ಚರಿಕೆ

ಇನ್ನು ಸಿಎಂ ಬದಲಾವಣೆಗೆ ಸಂಬಂಧಿಸಿದಂತೆ ನಿತ್ಯ ಒಂದಿಲ್ಲೊಂದು ಗೊಂದಲದ ಬೆನ್ನಲ್ಲೇ ಎಚ್ಚೆತ್ತಿರುವ ಕಾಂಗ್ರೆಸ್ ಹೈಕಮಾಂಡ್, ಮುಖ್ಯಮಂತ್ರಿ ಬದಲಾವಣೆಗೆ ಸಂಬಂಧಿಸಿದಂತೆ ಯಾವುದೇ ನಾಯಕರು ಮಾತನಾಡುವಂತಿಲ್ಲ. ಒಂದು ವೇಳೆ ಮಾತನಾಡಿದರೆ ಕಠಿಣ ಕ್ರಮ ಕೈಗೊಳ್ಳುವ ಎಚ್ಚರಿಕೆಯನ್ನು ರವಾನಿಸಿದೆ. ಸಿಎಂ ಬದಲಾವಣೆ ಬಗ್ಗೆ ಸಚಿವರು ಅಥವಾ ಶಾಸಕರು ಹೇಳಿಕೆ ನೀಡಿದರೆ ನೋಟಿಸ್ ಜಾರಿಮಾಡಿ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸುರ್ಜೇವಾಲಗೆ ಸೂಚನೆ ನೀಡಿದ್ದಾರೆ. ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಇಲ್ಲ. ಅವರೆ, ಮುಂದುವರಿಯುತ್ತಾರೆ ಎಂದು ಹೈಕಮಾಂಡ್ ಹೇಳಿದ್ದರೂ ಕೆಲ ಸಚಿವರು ದಲಿತ ಮುಖ್ಯಮಂತ್ರಿ ವಿಚಾರವನ್ನು ಮುಂದಿಟ್ಟುಕೊಂಡು ರಹಸ್ಯ ಸಭೆಗಳನ್ನು ನಡೆಸಿ ಸಿಎಂ ಬದಲಾವಣೆ ಬಗ್ಗೆ ಹೇಳಿಕೆ ನೀಡಿರುವುದನ್ನು ಹೈಕಮಾಂಡ್ ಗಂಭೀರವಾಗಿ ತೆಗೆದುಕೊಂಡಿದ್ದು, ಎಲ್ಲರೂ ಬಾಯಿಗೆ ಬೀಗ ಹಾಕಿಕೊಳ್ಳಿ ಎಂದು ತಾಕೀತು ಮಾಡಿದೆ.

ಮುಡಾ: ಸಿಎಂ ಭಾವಮೈದುನ ವಿಚಾರಣೆಗೆ ಹಾಜರು

ಮೈಸೂರು: ಲೋಕಾಯುಕ್ತ ಪೊಲೀಸರು ಮುಡಾ ಪ್ರಕರಣದ ತನಿಖೆಯನ್ನು ಚುರುಕುಗೊಳಿಸಿದ್ದು ಪ್ರಕರಣದ 3ನೇ ಆರೋಪಿ , ಸಿಎಂ ಸಿದ್ದರಾಮಯ್ಯ ಭಾವಮೈದುನ ಮಲ್ಲಿಕಾರ್ಜುನ ಹಾಗೂ ನಾಲ್ಕನೇ ಆರೋಪಿ ದೇವರಾಜು ವಿಚಾರಣೆಗೆ ಹಾಜರಾಗಿದ್ದರು. ಲೋಕಾಯುಕ್ತ ಕಚೇರಿಗೆ ಆಗಮಿಸಿದ ಅವರು ಅಧಿಕಾರಿಗಳಿಂದ ವಿಚಾರಣೆ ಎದುರಿಸಿದರು.

ಜಮ್ಮು-ಕಾಶ್ಮೀರ ಸಿಎಂ ಸ್ಥಾನಕ್ಕೆ ಒಮರ್

ಶ್ರೀನಗರ: ಜಮ್ಮು-ಕಾಶ್ಮೀರ ವಿಧಾನಸಭಾ ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸಿದ ನ್ಯಾಷನಲ್ ಕಾನ್ಫರೆನ್ಸ್ ಮತ್ತು ಕಾಂಗ್ರೆಸ್ ಮೈತ್ರಿಕೂಟ ಸರಕಾರ ರಚನೆಗೆ ಸಜ್ಜಾಗಿದೆ. ಅತಿದೊಡ್ಡ ಪಕ್ಷವಾಗಿರುವ ಎನ್‌ಸಿ ಶಾಸಕಾಂಗ ಪಕ್ಷದ ನಾಯಕರಾಗಿ ಒಮರ್ ಅಬ್ದುಲ್ಲಾ ಅವರನ್ನು ಆಯ್ಕೆಮಾಡಲಾಗಿದೆ. ಶುಕ್ರವಾರ ನಡೆಯಲಿರುವ ಮೈತ್ರಿ ಸಭೆಯಲ್ಲಿ ಸಿಎಂ ಅಭ್ಯರ್ಥಿಯನ್ನು ಆಯ್ಕೆ ಮಾಡಲಾಗುವುದು ಎಂದು ವರಿಷ್ಠ ಫಾರೂಕ್ ಅಬ್ದುಲ್ಲಾ ತಿಳಿಸಿದ್ದಾರೆ.

ಬಳ್ಳಾರಿ ಜೈಲಿನಲ್ಲಿ ಸಂಗೀತ ನಿರ್ದೇಶಕ ಹರಿಕೃಷ್ಣ, ನಿರ್ಮಾಪಕಿ ಶೈಲಜಾ ನಾಗ್ ಭೇಟಿ | ಬೆನ್ನುನೋವಿಗೆ ಸರ್ಜರಿ: ವೈದ್ಯರ ಸಲಹೆ ಮತ್ತೆ ಪರಪ್ಪನ ಅಗ್ರಹಾರ ಜೈಲು ಸೇರಿದ ಆರೋಪಿ ಪ್ರದೋಶ್

ದರ್ಶನ್ ಜಾಮೀನು: 14 ರಂದು ತೀರ್ಪು

ಬೆಂಗಳೂರು/ಬಳ್ಳಾರಿ: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಆರೋಪಿ ದರ್ಶನ್ ಆ್ಯಂಡ್ ಗ್ಯಾಂಗ್ ಜಾಮೀನು ಭವಿಷ್ಯ ಸೋಮವಾರ ನಿರ್ಧಾರವಾಗಲಿದೆ.

ದರ್ಶನ್ ಸಲ್ಲಿಸಿದ್ದ ಜಾಮೀನು ಅರ್ಜಿ ವಿಚಾರಣೆಯು ಬೆಂಗಳೂರಿನ 57ನೇ ಸಿಸಿಎಚ್ ಕೋರ್ಟ್‌ನಲ್ಲಿ ಗುರುವಾರ ನಡೆಯಿತು. ಸುದೀರ್ಘವಾಗಿ ವಾದ-ಪ್ರತಿವಾದ ಆಲಿಸಿದ ನ್ಯಾಯಾಲಯ ಜಾಮೀನು ಅರ್ಜಿ ವಿಚಾರಣೆ ಆದೇಶ ಅ.14ಕ್ಕೆ ಕಾಯ್ದಿರಿಸಿದೆ.

ರೇಣುಕಾ ಸ್ವಾಮಿ ಕೊಲೆ ಪ್ರಕರಣದಲ್ಲಿ ಇಲ್ಲಿನ ಕೇಂದ್ರ ಕಾರಾಗೃಹದಲ್ಲಿರುವ ಕೊಲೆ ಆರೋಪಿ ದರ್ಶನ್‌ನನ್ನು ಚಲನ ಚಿತ್ರ, ಸಂಗೀತ ನಿರ್ದೇ ಶಕ ಹರಿಕೃಷ್ಣ ಮತ್ತು ನಿರ್ಮಾಪಕಿ ಶೈಲಜಾನಾಗ್ ಗುರುವಾರ ಭೇಟಿಮಾಡಿದ್ದರು. ಹರಿಕೃಷ್ಣ ದರ್ಶನ್ ಆರೋಗ್ಯ ವಿಚಾರಣೆ ಮಾಡಿದರು.

ವೈದ್ಯರ ಎಚ್ಚರಿಕೆ: ಬಳ್ಳಾರಿ ಜೈಲಿನಲ್ಲಿರುವ ದರ್ಶನ್‌ಗೆ ಬೆನ್ನುನೋವು ಉಂಟಾಗಿದ್ದು , ಕೂಡಲೇ ಶಸ್ತ್ರಚಿಕಿತ್ಸೆ ನಡೆಸದಿದ್ದರೆ ಅಪಾಯ ಎಂದು ಬಿಮ್ಸ್ ವೈದ್ಯ ಡಾ. ವೆಂಕಟೇಶಲು ಎಚ್ಚರಿಕೆ ನೀಡಿದ್ದಾರೆ ಎನ್ನಲಾಗಿದೆ. ಕಳೆದ 9 ವರ್ಷಗಳಿಂದ ದರ್ಶನ್‌ಗೆ ಬೆನ್ನುನೋವು ಇರುವುದನ್ನು ವೈದ್ಯರ ತಂಡ ಖಾತ್ರಿಪಡಿಸಿದೆ.

ಸ್ಥಳಾಂತರ: ಕೊಲೆ ಪ್ರಕರಣ ಆರೋಪಿ ಪ್ರದೋಶ್‌ನನ್ನು ಗುರುವಾರ ಬೆಳಗಾವಿ ಹಿಂಡಲಗಾ ಕಾರಾಗೃಹದಿಂದ ಬೆಂಗಳೂರಿನ ಪರಪ್ಪನ ಅಗ್ರಹಾರಕ್ಕೆ ಸ್ಥಳಾಂತರಿಸಲಾಗಿದೆ. ಕಳೆದಆಗಸ್ಟ್ 28 ರಂದು ಬೆಳಗಾವಿ ಹಿಂಡಲಗಾ ಜೈಲಿಗೆ ಆರೋಪಿ ಕರೆತಂದಿದ್ದ ಪೊಲೀಸರು, ಹೈಕೋರ್ಟ್ ಆದೇಶದ ಹಿನ್ನೆಲೆಯಲ್ಲಿ 44 ದಿನಗಳ ಬಳಿಕ ಮತ್ತೆ ಪರಪ್ಪನ ಅಗ್ರಹಾರಕ್ಕೆ ಪ್ರದೋಶ್‌ನನ್ನು ಬಿಗಿಭದ್ರತೆಯಲ್ಲಿ ಕರೆದೊಯ್ದಿದ್ದಾರೆ. ಪರಪ್ಪನ ಅಗ್ರಹಾರ ಜೈಲಿನಲ್ಲಿ ದರ್ಶನ್ ಗೆ ರಾಜಾತಿಥ್ಯ ವಿಚಾರಕ್ಕೆ ಸಂಬಂಧಿಸಿದಂತೆ ದರ್ಶನ್ ಸೇರಿ ಹಲವರನ್ನು ವಿವಿಧ ಜೈಲುಗಳಿಗೆ ಸ್ಥಳಾಂತರಿಸಲಾಗಿತ್ತು.

ಪಾಂಡವಪುರದ ಅಲ್ತಾಫ್‌ಗೆ ಒಲಿದ ಕೇರಳ ಅದೃಷ್ಟ ಲಕ್ಷ್ಮೀ | ಒಂದೇ ದಿನದಲ್ಲಿ ಕೋಟ್ಯಧಿಪತಿಯಾದ ಅದೃಷ್ಟವಂತ

ಲಾಟರಿಯಲ್ಲಿ 25 ಕೋಟಿ ಗೆದ್ದ ಮಂಡ್ಯದ ಮೆಕ್ಯಾನಿಕ್

ಪಾಂಡವಪುರ: ಅದೃಷ್ಟ ಅನ್ನೋದೇ ಹಾಗೆ. ಮನುಷ್ಯನಿಗೆ ಕೈಹಿಡಿಯಿತು ಎಂದರೆ ರಾತ್ರೋರಾತ್ರಿ ಶ್ರೀಮಂತನಾಗಬಹುದು. ಮೊನ್ನೆ ಮೊನ್ನೆಯವರೆಗೂ ಸ್ಕೂಟರ್ ಮೆಕ್ಯಾನಿಕ್ ಆಗಿದ್ದ ವ್ಯಕ್ತಿ ದಿಢೀರನೇ ಕೋಟ್ಯಾಧೀಶನಾಗಿದ್ದಾನೆ.

ಪಾಂಡವಪುರದ ನಿವಾಸಿ ಅಲ್ತಾಫ್ ಲಾಟರಿಯಲ್ಲಿ 25 ಕೋಟಿ ಗೆದ್ದು ಕೋಟ್ಯಾಧಿಪತಿಯಾಗಿರುವ ಸ್ಕೂಟರ್ ಮೆಕ್ಯಾನಿಕ್. ಕೇರಳದ ಬಹು ನಿರೀಕ್ಷಿತ ತಿರುವೋಣಂ ಬಂಪರ್ ಲಾಟರಿ ಸಂಸ್ಥೆಯಿಂದ 500 ರೂ.ಕೊಟ್ಟು ಒಂದು ಲಾಟರಿ ಟಿಕೆಟ್ ಖರೀದಿಸಿದ್ದ ಅಲ್ತಾಫ್‌ಗೆ ಲಾಟರಿ ಡ್ರಾನಲ್ಲಿ ಮೊದಲ ಬಹುಮಾನ ದೊರೆತಿದ್ದು ಬರೋಬ್ಬರಿ 25 ಕೋಟಿ ಗೆದ್ದು ಕೊಂಡಿದ್ದಾನೆ. ಇದರಲ್ಲಿ ತೆರಿಗೆ ಕಳೆದು 12.8 ಕೋಟಿ ರು. ಕೈಸೇರಲಿದೆ ಎಂದು ವಿಜೇತ ಅಲ್ತಾಫ್ ತಿಳಿಸಿದ್ದಾರೆ.

ಸ್ವಂತಮನೆ ಇಲ್ಲ: ದ್ವಿಚಕ್ರ ವಾಹನಗಳ ಮೈಕಾನಿಕ್ ಆಗಿ ಕೆಲಸ ಮಾಡುತ್ತಿರುವ ಅಲ್ತಾಫ್ ತುಂಬ ಕಡುಬಡತನದಲ್ಲಿ ಜೀವನ ನಡೆಸುತ್ತಿರುವ ವ್ಯಕ್ತಿಯಾಗಿದ್ದಾನೆ. ಅಲ್ಲಿ ದುಡಿದು ಅಲ್ಲಿ ತಿನ್ನುತ್ತಿದ್ದ ಕುಟುಂಬ ಅವರು. ಅಲ್ತಾಫ್‌ಗೆ ಇರೋದಕ್ಕೆ ಸ್ವಂತಮನೆ ಇಲ್ಲದೆ ತನ್ನ ಹೆಂಡತಿ- ಮಕ್ಕಳೊಂದಿಗೆ ಬಸವನಗುಡಿ ಬಡಾವಣೆಯಲ್ಲಿ ಬಾಡಿಗೆ ಮನೆಯಲ್ಲಿದ್ದರು. ಜೀವನ ನಿರ್ವಹಣೆಗಾಗಿ ಮಂಡ್ಯ ರಸ್ತೆಯಲ್ಲಿ ಸಣ್ಣದೊಂದು ಪೆಟ್ಟಿಗೆ ಅಂಗಡಿ ಸ್ಕೂಟರ್ ಮೆಕ್ಯಾನಿಕ್ ನಡೆಸುತ್ತಿದ್ದರು. ಸಣ್ಣಪುಟ್ಟ ಸಾಲ ಮಾಡಿಕೊಂಡು ತೀರಿಸಲಾಗಷ್ಟು ಸಂಕಷ್ಟದ ಸ್ಥಿತಿಯಲ್ಲಿ ಬದುಕು ನಡೆಸುತ್ತಿದ್ದರು.

- 500 ರು.ಗೆ ತಿರುವೋಣಂ ಬಂಪರ್ ಲಾಟರಿ ಟಿಕೆಟ್ ಖರೀದಿಸಿದ್ದ
- ದ್ವಿಚಕ್ರವಾಹನಗಳ ಮೆಕ್ಯಾನಿಕ್ ವೃತ್ತಿಯಲ್ಲಿದ್ದವನಿಗೆ ಬಂಪರ್
- ತೆರಿಗೆ ಕಡಿತದ ನಂತರ 12.8 ಕೋಟಿ ಕೈಸೇರಲಿದೆ
- ಕಿತ್ತು ತಿನ್ನುತ್ತಿದ್ದ ಬಡತನದಿಂದ ಒಮ್ಮೆಗೇ ಪಾರಾದ ಸಂತೋಷ

ಲಾಟರಿಯಲ್ಲಿ ನನಗೆ 25 ಕೋಟಿ ಬಂದಿದೆ ಎಂದ ತಕ್ಷಣ ತುಂಬಾ ಖುಷಿ ಆಯಿತು. ವಿಷಯ ತಿಳಿದು ಮನೆಗೆ ಹೋಗಿ ನನ್ನ ಹೆಂಡತಿ ಮತ್ತು ಮಗಳಿಗೆ ವಿಷಯ ತಿಳಿಸಿದೆ. ಆದರೆ ಅವರು ನನ್ನ ಮಾತನ್ನು ನಂಬಲಿಲ್ಲ. ಮೊಬೈಲ್‌ನಲ್ಲಿ ನನ್ನ ಲಾಟರಿ ಸಂಖ್ಯೆಯಗೆ 25 ಕೋಟಿ ಬಹುಮಾನ ಬಂದಿದೆ ಎಂದು ತೋರಿಸಿದಾಗ ನಂಬಿಕೆ ಬಂತು. ನನ್ನ ಹೆಂಡತಿ ಸಂತೋಷದಿಂದ ಕಣ್ಣೀರು ಹಾಕಿದರು. ಇರೋದಿಕ್ಕೂ ಸ್ವಂತ ಮನೆ ಇರಲಿಲ್ಲ. ಬಡತನದಲ್ಲಿ ಜೀವನ ನಡೆಸುತ್ತಿದ್ದೆವು. ಅಲ್ಲಾನ ದಯೆಯಿಂದ ನನಗೆ ಬಹುಮಾನ ಬಂದಿದೆ. ನಾನು ಕುಟುಂಬ ಸಮೇತ ಮೈಸೂರಿಗೆ ಬಂದು ನೆಲೆಸಬೇಕೆಂದು ತೀರ್ಮಾನ ಮಾಡಿಕೊಂಡಿದ್ದೆವು. ಭಗವಂತ ಅಲ್ಲಾ ಬರಿಗೈಯಲ್ಲಿ ಹೋಗಬೇಡ ಎಂದು ಕೈತುಂಬ ಕೊಟ್ಟು ಕಳುಹಿಸುತ್ತಿದ್ದಾನೆ. ಬರುವ ಹಣದಲ್ಲಿ ಕೈಲಾದ ಸಮಾಜಸೇವೆ ಮಾಡಿ ಮೈಸೂರಿನಲ್ಲಿ ಮನೆ ಖರೀದಿಸಿ ವ್ಯಾಪಾರ ಮಾಡಲು ನಿರ್ಧರಿಸಿದ್ದೇನೆ.
-ಅಲ್ತಾಫ್, ಪಾಂಡವಪುರ

ಅದೃಷ್ಟದ ಟಿಕೆಟ್ ಮಾರಾಟಕ್ಕೂ ಮುಂದಾಗಿದ್ದ: ಇತ್ತೀಚೆಗೆ ಕೇರಳಗೆ ಹೋಗಿದ್ದ ಅಲ್ತಾಫ್ 500 ರೂ.ಕೊಟ್ಟು ಲಾಟರಿ ಖರೀದಿಸಿದ್ದರು, ಮೊನ್ನೆ ಹಣವಿಲ್ಲದೆ ತಮ್ಮ ಬಳಿ ಇದ್ದ ಲಾಟರಿ ಟಿಕೆಟ್‌ನ್ನು ಪಕ್ಕದ ವೆಲ್ಡಿಂಗ್ ಶಾಪ್ ಅಂಗಡಿ ಮಾಲೀಕನಿಗೆ ಕೇವಲ 250 ರೂ. ಮಾರಾಟ ಮಾಡಲು ಮುಂದಾಗಿದ್ದರು. ಆದರೆ, ಅಂಗಡಿ ಮಾಲೀಕ 250 ರೂ. ಕೊಟ್ಟು ಲಾಟರಿ ಖರೀದಿಸಲು ನಿರಾಕರಿಸಿದರು. ಅದಾದ ಒಂದು ಗಂಟೆಗೆ ಆ ಲಾಟರಿಗೆ 25 ಕೋಟಿ ಬಹುಮಾನ ಬಂದಿದೆ ಎಂದು ಅಲ್ತಾಫ್ ಸ್ನೇಹಿತ ಸಮಿವುಲ್ಲ ತಿಳಿಸಿದರು.

ಅಲ್ತಾಫ್‌ಗೆ ಪತ್ನಿ ಸೀಮಾ ಹಾಗೂ 21 ವರ್ಷ ಪುತ್ರ ಹಾಗೂ 18 ವರ್ಷದ ಪುತ್ರಿ ಇದ್ದಾರೆ. ಕಷ್ಟದಲ್ಲಿದ್ದ ಅಲ್ತಾಫ್ ಮಗನನ್ನು ಶಾಲೆಗೆ ಕಳುಹಿಸಲಾಗದೆ ಶಾಲೆ ಬಿಡಿಸಿ ತನ್ನ ಗ್ಯಾರೇಜ್‌ನಲ್ಲಿ ಇರಿಸಿಕೊಂಡು ಸ್ಕೂಟರ್ ರಿಪೇರಿ ಕೆಲಸ ಕಲಿಸುತ್ತಿದ್ದ. ಅಂತಹ ಬಡವ ಅಲ್ತಾಫ್‌ಗೆ ಒಲಿದು ಬಂದಿದ್ದು ಇದೀಗ ಕೋಟ್ಯಾಧೀಶನಾಗಿದ್ದಾನೆ. ಬಹುಮಾನದ ಹಣ ಪಡೆಯಲು ಅಲ್ತಾಫ್ ಸ್ನೇಹಿತರೊಂದಿಗೆ ಕೇರಳಕ್ಕೆ ತೆರಳಿದ್ದಾರೆ.

ಕೋಳಿವಾಡ ಹೇಳಿಕೆಗೆ ಪುತ್ರನಿಂದ ಡ್ಯಾಮೇಜ್ ಕಂಟ್ರೋಲ್ ತಂದೆಗೆ ವಯಸ್ಸಾಗಿದೆ; ಸಕ್ರಿಯ ರಾಜಕಾರಣದಲ್ಲಿಲ್ಲ: ಪ್ರಕಾಶ್

ತಂದೆ ಪರವಾಗಿ ಕ್ಷಮೆ ಕೇಳಿದ ಪುತ್ರ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿದ್ದ ಹಾಗೂ ಹರಿಯಾಣದಲ್ಲಿ ಕಾಂಗ್ರೆಸ್ ಸೋಲಾಗಲು ಮುಡಾ ಪ್ರಕರಣವೇ ಕಾರಣ ಎನ್ನುವ ವಿವಾದಾತ್ಮಕ ಹೇಳಿಕೆ ನೀಡಿದ್ದ ಕಾಂಗ್ರೆಸ್ ಹಿರಿಯ ನಾಯಕ ಕೆ.ಬಿ. ಕೋಳಿವಾಡ ಅವರ ಹೇಳಿಕೆಗೆ ಇದೀಗ ಪುತ್ರನಿಂದಲೇ ವಿರೋಧ ವ್ಯಕ್ತವಾಗಿದ್ದು, ತಂದೆಯ ಪರವಾಗಿ ಅವರು ಕ್ಷಮೆಯಾಚಿಸಿದ್ದಾರೆ.

ಕೋಳಿವಾಡ ಹೇಳಿಕೆಯನ್ನೇ ಮುಂದಿಟ್ಟುಕೊಂಡು ಬಿಜೆಪಿಗರು ಸರಕಾರ ಹಾಗೂ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ್ದರು. ಕೋಳಿವಾಡ ಅವರ ಹೇಳಿಕೆ ಸಿದ್ದರಾಮಯ್ಯ ಅವರಿಗೂ ಬೇಸರ ತರಿಸಿತ್ತು. ಈ ಹೇಳಿಕೆಯಿಂದ 'ಭವಿಷ್ಯ'ದಲ್ಲಾಗಬಹುದಾದ ಸಮಸ್ಯೆಯನ್ನು ಗಮನಿಸಿ ಎಚ್ಚೆತ್ತಿರುವ ಕೋಳಿವಾಡ ಪುತ್ರ, ಶಾಸಕ ಪ್ರಕಾಶ್ ಕೋಳಿವಾಡ 'ತಂದೆಯ ಪರವಾಗಿ ಕ್ಷಮೆಯಾಚಿಸಿದ್ದಾರೆ'.

ನಮ್ಮ ತಂದೆಯವರು ಸದ್ಯ ಸಕ್ರಿಯ ರಾಜಕೀಯದಲ್ಲಿಲ್ಲ. ಅವರಿಗೆ ವಯಸ್ಸಾಗಿರುವ ಕಾರಣ ಹೇಳುವ ಪರಿಸ್ಥಿತಿಯಲ್ಲಿ ನಾನಿಲ್ಲ. ಆದರೆ ನಾನು ರಾಜಕೀಯಕ್ಕೆ ಬಂದಿದ್ದೆ ಸಿದ್ದರಾಮಯ್ಯ ಅವರಿಂದಾಗಿದೆ. ಆದ್ದರಿಂದ ತಂದೆ ನೀಡಿರುವ ಹೇಳಿಕೆಗೆ ನಾನು ಸಿದ್ದರಾಮಯ್ಯ ಅವರಿಗೆ ಕ್ಷಮೆ ಕೇಳುವೆ.
- ಪ್ರಕಾಶ್ ಕೋಳಿವಾಡ, ಶಾಸಕ

ಈ ಬಗ್ಗೆ ಸುದ್ದಿಗಾರರೊಂದಿಗೆ ಬೆಂಗಳೂರಿನಲ್ಲಿ ಮಾತನಾಡಿದ ಪ್ರಕಾಶ್ ಕೋಳಿವಾಡ, ನಮ್ಮ ತಂದೆಗೆ ವಯಸ್ಸಾಗಿದೆ. ಅವರು ಪ್ರಸ್ತುತ ರಾಜಕಾರಣದಲ್ಲಿಲ್ಲ. ಅವರು ಯಾವುದೇ ರೀತಿಯ ಹೇಳಿಕೆ ನೀಡಬಾರದೆಂದು ನಾನು ಅವರಿಗೆ ಮನವಿ ಮಾಡುವೆ ಎನ್ನುವ ಮೂಲಕ ತಂದೆಯ ವಿರುದ್ಧ ಮಗನೇ 'ಅಸಮಾಧಾನ' ಹೊರಹಾಕಿದ್ದಾರೆ.

→ 4

ಸಮಾಚಾರ ಸಣ್ಣದಲ್ಲ

ಬಾಲಕಿಯರಿಬ್ಬರು ನೀರುಪಾಲು

ಕಲಬುರಗಿ: ಬಟ್ಟೆ ತೊಳೆಯಲು ನದಿಗೆ ತೆರಳಿದ್ದ ಬಾಲಕಿಯರಿಬ್ಬರು ನೀರುಪಾಲಾದ ದುರ್ಘಟನೆ ಅಫಜಲಪುರ ತಾಲೂಕಿನ ಬನ್ನಹಟ್ಟಿ ಗ್ರಾಮದಲ್ಲಿ ನಡೆದಿದೆ. ಭೂಮಿಕಾ (8) ಮತ್ತು ಶ್ರಾವಣಿ (11) ನೀರುಪಾಲಾದ ದುರ್ದೈವಿಗಳು. ಬಟ್ಟೆ ತೊಳೆದ ಬಳಿಕ ಬಾಲಕಿಯರಿಬ್ಬರೂ ಈಜಾಡಲು ನದಿಗೆ ಇಳಿದಾಗ ಭೂಮಿಕಾ ಕಾಲುಜಾರಿ ಕೊಚ್ಚಿಕೊಂಡು ಹೋಗ್ತಿದ್ದಾಗ ಶ್ರಾವಣಿ ಕಾಪಾಡಲು ಮುಂದಾದಳು. ಈ ವೇಳೆ ಭೂಮಿಕಾ ಮತ್ತು ಶ್ರಾವಣಿ ಇಬ್ಬರೂ ನದಿಯ ಪಾಲಾಗಿದ್ದಾರೆ.

ವಿಷಮಿಶ್ರಿತ ಆಹಾರ ಸೇವನೆ: 20 ಮಂದಿ ಅಸ್ವಸ್ಥ

ರಾಯಚೂರು: ದೇವರ ಕಾರ್ಯಕ್ಕೆ ಮಾಡಿದ್ದ ಮಾಂಸಾಹಾರ ಸೇವಿಸಿದ ಬಳಿಕ ವಾಂತಿ ಭೇದಿಯಾಗಿ 20ಕ್ಕೂ ಹೆಚ್ಚು ಮಂದಿ ಅಸ್ವಸ್ಥಗೊಂಡಿರುವ ಘಟನೆ ಲಿಂಗಸುಗೂರು ತಾಲೂಕಿನ ಪರಂಪುರ ತಾಂಡದಲ್ಲಿ ನಡೆದಿದೆ. ಬುಧವಾರ ಮಧ್ಯಾಹ್ನದ ಊಟದ ಬಳಿಕ ಸಂಜೆ ವೇಳೆಗೆ ಆರೋಗ್ಯದಲ್ಲಿ ಏರುಪೇರು ಕಾಣಿಸಿಕೊಂಡಿದೆ. ಮಕ್ಕಳು ಹಿರಿಯರು ವಾಂತಿ ಭೇದಿಯಿಂದ ಬಳಲಿದ್ದು, 10 ಜನರಿಗೆ ನಿರ್ಜಲೀಕರಣವಾಗಿದೆ. ತೀವ್ರ ಅಸ್ವಸ್ಥಗೊಂಡವರನ್ನು ಲಿಂಗಸುಗೂರು ಆಸ್ಪತ್ರೆಗೆ ದಾಖಲಿಸಲಾಗಿದೆ. ಉಳಿದವರಿಗೆ ಗ್ರಾಮದಲ್ಲೇ ಚಿಕಿತ್ಸೆ ನೀಡಲಾಗುತ್ತಿದೆ.

ರಾಜ್ಯದಲ್ಲಿ ಮಳೆ ಆರ್ಭಟಕ್ಕೆ ಜನ ತತ್ತರ

ನಾನಾ ಬೆಳೆನಾಶ, ರೈತರು ಕಂಗಾಲು | ಹಳ್ಳಕೊಳ್ಳ ತುಂಬಿ ರಸ್ತೆ ಜಲಮಯ | ವಾಹನ ಸವಾರರ ಪರದಾಟ

ಬೆಂಗಳೂರು: ಬುಧವಾರ ರಾತ್ರಿ ಸುರಿದ ಭಾರಿ ಮಳೆಗೆ ನಾನಾ ಅವಾಂತರ ಸೃಷ್ಟಿಯಾಗಿದೆ. ಬೆಳಗಾವಿ, ಚಿಕ್ಕಮಗಳೂರು, ಧಾರವಾಡ ಮಳೆಯಿಂದಾಗಿ ಮನೆಗಳಿಗೆ ನೀರು ನುಗ್ಗಿದೆ. ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ದೇವಲಾಪೂರ ಗ್ರಾಮದಲ್ಲಿ ಮಳೆರಾಯನ ಅಟ್ಟಹಾಸಕ್ಕೆ ಉಡಚ್ಚಮ್ಮಾ ದೇವಿ ದೇವಸ್ಥಾನಕ್ಕೆ ನೀರು ನುಗ್ಗಿದೆ. ಭಾರಿ ಮಳೆಗೆ ಜನಜೀವನ ಅಸ್ತವ್ಯಸ್ತವಾಗಿದೆ.

ಚಿಕ್ಕಮಗಳೂರಿನಲ್ಲೂ ಮಳೆ ಆರ್ಭಟ: ಚಿಕ್ಕಮಗಳೂರಿನ ಚಾರ್ಮಾಡಿ ಘಾಟಿಯಲ್ಲಿ ಭಾರಿ ಮಳೆ ಹಿನ್ನೆಲೆಯಲ್ಲಿ ರಸ್ತೆಗೆ ಗುಡ್ಡದ ಮಣ್ಣು ಬಿದ್ದಿದ್ದು, 2 ಜೆಸಿಬಿಯಿಂದ ನಿರಂತರ ಮಣ್ಣು ತೆರವಿನ ಕಾರ್ಯ ನಡೆಯುತ್ತಿದೆ. ಸುರಿಯುತ್ತಿರುವ ಮಳೆ ಮಧ್ಯೆಯೇ ತೆರವು ಕಾರ್ಯ ನಡೆಯುತ್ತಿದೆ. ಇನ್ನು ಅಪಾರ ಪ್ರಮಾಣದಲ್ಲಿ ನೀರು ಹರಿದು ರಸ್ತೆ ಬದಿ ಗುಂಡಿಗಳು ನಿರ್ಮಾಣವಾಗಿದೆ. ಹೀಗಾಗಿ ಅಧಿಕಾರಿಗಳು ತಾತ್ಕಾಲಿಕವಾಗಿ ಮಣ್ಣನ್ನು ಹಾಕಿ ಗುಂಡಿಗಳನ್ನು ಮುಚ್ಚುತ್ತಿದ್ದಾರೆ. ಪ್ರಯಾಣಿಕರು ಎಚ್ಚರಿಕೆಯಿಂದ ವಾಹನ ಚಲಾಯಿಸುವಂತೆ ಮನವಿ ಮಾಡಿದ್ದಾರೆ.

ಉಕ್ಕಿ ಹರಿದ ಇಂದಿರಮ್ಮನ ಕೆರೆ: ಧಾರವಾಡದಲ್ಲಿ ಸುರಿದ ನಿರಂತರ ಮಳೆಗೆ ಅಳ್ನಾವರ ತಾಲೂಕಿನ ಇಂದಿರಮ್ಮನ ಕೆರೆ ತುಂಬಿ ಹರಿಯುತ್ತಿದೆ. ಕೆರೆ ಕೋಡಿ ಬಿದ್ದು ತುಂಬಿ ಹರಿಯುತ್ತಿರುವ ದೃಶ್ಯ ನೋಡಲು ಗ್ರಾಮಸ್ಥರು ಮುಗಿಬಿದ್ದಿದ್ದರು. ರಾತ್ರಿಯಿಡೀ ಸುರಿದ ಮಳೆಗೆ ಕಟಾವಿಗೆ ಬಂದಿದ್ದ ಬೆಳೆಗಳು ನೀರಲ್ಲಿ ಹೋಮವಾಗಿದೆ. ಲಕ್ಷಾಂತರ ರೂ ಮೌಲ್ಯದ ಬೆಳೆಗಳು ಮಳೆಗೆ ನೆಲಸಮವಾಗಿದೆ.

ಮನೆಗಳಿಗೆ ನುಗ್ಗಿದ ನೀರು: ಧಾರವಾಡದ ಭಾವಿಕಟ್ಟಿ ಫ್ಲಾಟ್ ಸೇರಿದಂತೆ ಹಲವೆಡೆ ಮನೆಗಳಿಗೆ ನೀರು ನುಗ್ಗಿ ಜನಜೀವನ ಅಸ್ತವ್ಯಸ್ತಗೊಂಡಿದೆ. ನೀರು ಹೊರಹಾಕಲು ಸ್ಥಳೀಯರು ಹರಸಾಹಸಪಟ್ಟರು. ಧಾರವಾಡ ಹೊರವಲಯದ ರಸ್ತೆಯ ದೊಡ್ಡಹಳ್ಳ ತುಂಬಿ ಹರಿಯುತ್ತಿದ್ದು ಧಾರವಾಡ -ಕವಲಗೇರಿ ನಡುವೆ ಸಂಚಾರಕ್ಕೆ ಅಡಚಣೆಯಾಗಿದೆ. ಹಳ್ಳದ ನೀರು ರಸ್ತೆ ಹರಿಯುತ್ತಿದ್ದರೂ ಬೈಕ್ ಸವಾರರು ಭಯವಿಲ್ಲದೆ ಸಂಚರಿಸುತ್ತಿದ್ದಾರೆ.

ಈರುಳ್ಳಿ ರಾಶಿಗೆ ನುಗ್ಗಿದ ಮಳೆ ನೀರು: ಈರುಳ್ಳಿ ರಾಶಿಯಲ್ಲಿ ಮಳೆಯ ನೀರು ಹರಿದ ಪರಿಣಾಮ ಈರುಳ್ಳಿ ರಕ್ಷಣೆಗೆ ಬಾಗಲಕೋಟೆ ಜಿಲ್ಲೆಯ ಬೀಳಗಿಯ ಸುನಗ ಗ್ರಾಮದ ರೈತರು ಪರದಾಡಿದರು. ಬೀಜ ಗೊಬ್ಬರ, ಕಳೆ ತಗೆಯುವುದು ಸೇರಿ ಸಾವಿರಾರು ರುಪಾಯಿ ಖರ್ಚು ಮಾಡಿ ಈರುಳ್ಳಿ ಬೆಳೆದು ಕಟಾವು ಮಾಡಿ ಸ್ವಚ್ಛಗೊಳಿಸಿ ಮಾರುಕಟ್ಟೆಗೆ ಕಳುಹಿಸಿ ಉತ್ತಮ ಆದಾಯದ ನಿರೀಕ್ಷೆಯಲ್ಲಿ ರೈತರಿದ್ದರು. ಆದರೆ ಅನಿರೀಕ್ಷಿತವಾಗಿ ಸುರಿದ ಮಳೆಯಿಂದಾಗಿ ಈರುಳ್ಳಿ ರಾಶಿ ಮಳೆಯ ನೀರಿನಲ್ಲಿ ತೇಲಾಡುವಂತಾಗಿದೆ.

ಲಕ್ಷ್ಮೇಶ್ವರ-ದೊಡ್ಡೂರ ರಸ್ತೆ ಸಂಪರ್ಕ ಕಡಿತ

ಭಾರಿ ಮಳೆಗೆ ಹಳ್ಳಕೊಳ್ಳ ತುಂಬಿ ಹರಿಯುತ್ತಿದೆ. ಗದಗ ಜಿಲ್ಲೆಯ ಲಕ್ಷ್ಮೇಶ್ವರ ತಾಲೂಕಿನ ದೊಡ್ಡೂರ ಬಳಿ ಹಳ್ಳದಲ್ಲಿ ನೀರು ತುಂಬಿ ಹರಿದಿದ್ದು, ಲಕ್ಷ್ಮೇಶ್ವರ-ದೊಡ್ಡೂರ ರಸ್ತೆ ಸಂಪರ್ಕ ಕಡಿತಗೊಂಡಿದೆ. ವಾಹನ ಸಂಚಾರ ಸಂಪೂರ್ಣ ಸ್ಥಗಿತಗೊಂಡಿದೆ. ಹಳ್ಳದಲ್ಲಿ ಬೆಳೆ ಕಟಾವು ಯಂತ್ರ ಸಿಲುಕಿದ್ದರಿಂದ ರೈತರು ಪರದಾಡಿದರು. ಪ್ರತಿ ಬಾರಿ ಮಳೆಯಾದರೆ ಇದೇ ಸಂಕಷ್ಟ ಎದುರಾಗುತ್ತದೆ. ಸೇತುವೆ ನಿರ್ಮಾಣಕ್ಕೆ ಅನೇಕ ಬಾರಿ ಮನವಿ ಮಾಡಿದ್ದರು ಕ್ಯಾರೆ ಅಂತಿಲ್ಲ ಎಂದು ಆಕ್ರೋಶ ಹೊರಹಾಕಿದರು.

ಹಾವೇರಿ: ಮಳೆಗೆ ಕೊಚ್ಚಿ ಹೋದ ಆಟೋ

ಭೀಕರ ಮಳೆಗೆ ಆಟೋವೊಂದು ಕೊಚ್ಚಿ ಹೋಗಿರುವ ಘಟನೆ ಹಾವೇರಿ ನಗರದ ನಾಗೇಂದ್ರನಮಟ್ಟಿ ಬಳಿ ಇರುವ ರೈಲ್ವೆ ಬ್ರಿಡ್ಜ್ ಬಳಿ ನಡೆದಿದೆ.

ನೀರಿನಲ್ಲಿ ಕೊಚ್ಚಿ ಹೋಗಿರುವ ಆಟೋವನ್ನು ತೆಗೆಯದೆ ಇದ್ದಿದ್ದಕ್ಕೆ ಅಧಿಕಾರಿಗಳ ವಿರುದ್ಧ ಆಟೋ ಚಾಲಕ ಆಕ್ರೋಶ ಹೊರಹಾಕಿದ್ದಾನೆ. ಧಾರಾಕಾರ ಮಳೆ ಸುರಿದಿದ್ದರಿಂದ ಆಟೋ ನೀರಿನಲ್ಲಿ ಕೊಚ್ಚಿ ಹೋಗಿ ಚಾಲಕ ಪ್ರಾಣಾಪಾಯದಿಂದ ಪಾರಾಗಿದ್ದ. ಆದರೆ ರಾತ್ರಿಯೇ ನೀರಿನಲ್ಲಿ ಆಟೋ ಕೊಚ್ಚಿಕೊಂಡು ಹೋಗಿದ್ದರೂ ಆಟೋವನ್ನು ನೀರಿನಿಂದ ಹೊರತೆಗೆಯುವ ಕಾರ್ಯ ಮಾಡಿಲ್ಲ. ಹೀಗಾಗಿ ಆಟೋ ಚಾಲಕ ಅಧಿಕಾರಿಗಳ ವಿರುದ್ಧ ಆಕ್ರೋಶ ಹೊರಹಾಕಿದ್ದಾನೆ.

ತಂದೆ ಪರವಾಗಿ ಕ್ಷಮೆ ಕೇಳಿದ ಪುತ್ರ

← ಮೊದಲಪುಟದಿಂದ

ಹೇಳಿಕೆ ಕೊಡಬೇಡಿ: ನಾನು ರಾಜಕಾರಣಕ್ಕೆ ಬರಲು ಸಿಎಂ ಸಿದ್ದರಾಮಯ್ಯನವರೇ ಕಾರಣ. ನಾನು ಸಿದ್ದರಾಮಯ್ಯ ಬೆಂಬಲಿಗ. ನಾನು ಬುದ್ಧ ,ಬಸವ ,ಅಂಬೇಡ್ಕರ್ ವಾದಿ ಎನ್ನುವ ಮೂಲಕ ತಂದೆಯ ಹೇಳಿಕೆಗೆ ಭಿನ್ನವಾದ ಹೇಳಿಕೆ ನೀಡಿದ್ದಾರೆ. ನಮ್ಮ ತಂದೆಗೆ ನಾಲ್ಕು ಆಪರೇಷನ್ ಆಗಿವೆ. ಹಾಗಾಗಿ ಇದರ ಬಗ್ಗೆ ಮಾತನಾಡುವುದು ಬೇಡ. ನಾನು ಅವರಿಗೆ ಹೇಳುವಷ್ಟು ದೊಡ್ಡವನೂ ಅಲ್ಲ. ಆದರೆ, ಇಂತಹ ಹೇಳಿಕೆಗಳನ್ನು ಕೊಡಬೇಡಿ ಎಂದು ನಾನು ಅವರಿಗೆ ಮನವಿ ಮಾಡುತ್ತೇನೆ ಎಂದರು.

ಮೊದಲಿನಿಂದಲೂ ನಾನು ನಿಮ್ಮ (ಸಿದ್ದರಾಮಯ್ಯ) ಅನುಯಾಯಿ. ನಿಮ್ಮ ಕಾರಣದಿಂದಲೇ ರಾಜಕಾರಣಕ್ಕೆ ಬರಲು ಸಾಧ್ಯವಾಗಿದೆ. ನಮ್ಮ ತಂದೆಯವರು ನಿಮ್ಮ ಬಗ್ಗೆ ಹೇಳಿಕೆ ನೀಡಿದ್ದು ನನಗೂ ಬೇಸರವಾಯಿತು. ಹಾಗಾಗಿ ಇದರ ಬಗ್ಗೆ ಕ್ಷಮೆ ಕೋರುತ್ತೇನೆ ಎಂದು ಕ್ಷಮೆ ಕೋರಿದ್ದಾರೆ.

ಜಾತಿಗಣತಿಗೆ ಕಾಂಗ್ರೆಸ್‌ನಲ್ಲೇ ವಿರೋಧ

ವೈಜ್ಞಾನಿಕವಾಗಿ ಜಾತಿಗಣತಿ ನಡೆಸಿ ಜಾರಿ ಮಾಡಲಿ: ಕೇಂದ್ರ ಸಚಿವ ಸೋಮಣ್ಣ ಒತ್ತಾಯ

ತುಮಕೂರು: ಜಾತಿ ಗಣತಿ ವರದಿಗೆ ಈಗ ಕಾಂಗ್ರೆಸ್ ನವರಿಂದಲೇ ವಿರೋಧ ವ್ಯಕ್ತವಾಗುತ್ತಿದೆ. ಹಾಗಾಗಿ ಮತ್ತೊಮ್ಮೆ ವೈಜ್ಞಾನಿಕವಾಗಿ ಜಾತಿ ಗಣತಿ ನಡೆಸಿ ಜಾರಿ ಮಾಡಲಿ ಎಂದು ರೈಲ್ವೆ ರಾಜ್ಯ ಖಾತೆ ಸಚಿವ ವಿ. ಸೋಮಣ್ಣ ಒತ್ತಾಯಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಪ್ರತಿಪಕ್ಷಗಳಿಗಿಂತ ಸ್ವಪಕ್ಷದಲ್ಲಿಯೇ ವಿರೋಧಿಗಳು ಅಧಿಕವಾಗಿದ್ದಾರೆ. ಜಾತಿಗಣತಿ ವರದಿ ಸಿದ್ಧಪಡಿಸಲು ಈಗಾಗಲೇ ನೂರಾರು ಕೋಟಿ ರು. ಖರ್ಚಾಗಿದೆ. ಮತ್ತೆ ಅಷ್ಟೊಂದು ಖರ್ಚು ಮಾಡಲು ಸಾಧ್ಯವಿಲ್ಲ ಎಂಬ ಮಾತನ್ನು ಮುಖ್ಯಮಂತ್ರಿ ಆಡುತ್ತಾರೆ. ಆದರೆ ಇಂತಹ ನೂರಾರು ಕೋಟಿ ರು. ಯಾವುದಕ್ಕೂ ಖರ್ಚು ಮಾಡುವುದಿಲ್ಲವೇ ಎಂದು ಪ್ರಶ್ನಿಸಿದರು.

ಜಾತಿಗಣತಿ ವರದಿಯಲ್ಲಿ ಬದ್ಧತೆ ಇರಬೇಕು. ಯಾವುದೇ ಸಮುದಾಯಕ್ಕೂ ಅನ್ಯಾಯವಾಗ ಬಾರದು. ಆದ್ದರಿಂದ ಮತ್ತೊಮ್ಮೆ ಜಾತಿ ಗಣತಿ ನಡೆಸಿ ವರದಿ ಜಾರಿ ಮಾಡಲಿ ಎಂದು ಸೋಮಣ್ಣ ಸಲಹೆ ಮಾಡಿದರು.

ಕಾಂಗ್ರೆಸ್‌ಲ್ಲಿ ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಕೇಳಿದ ಪ್ರಶ್ನೆಗೆ, ಅದು ಕಾಂಗ್ರೆಸ್ ಪಕ್ಷದ ವಿಚಾರ. ನಾನು ಈಗಾಗಲೇ ಏನು ಹೇಳಬೇಕೋ ಅದನ್ನು ಹೇಳಿದ್ದೇನೆ ಎಂದರು.

ಕನ್ನಡದಲ್ಲೇ ರೈಲ್ವೆ ಇಲಾಖೆ ನೇಮಕಾತಿ ಪರೀಕ್ಷೆ ಬರೆಯಲು ನಾನು ಮಂತ್ರಿಯಾದ ಬಳಿಕ ಶ್ರಮ ವಹಿಸಿ ಕೆಲಸ ಮಾಡಿದ್ದೇನೆ. ಇದರಿಂದ ಕನ್ನಡಿಗ ಅಭ್ಯರ್ಥಿಗಳಿಗೆ ತುಂಬಾ ಅನುಕೂಲವಾಗಿದೆ. ಜಮ್ಮು ಬಿಜೆಪಿಯ ಭದ್ರಕೋಟೆ. ಬಿಜೆಪಿ ಸರಿಯಿಲ್ಲ ಎಂದು ಹೇಳುತ್ತಿದ್ದವರು ಇಂದು ಬಿಜೆಪಿಯನ್ನು ಬೆಂಬಲಿಸುತ್ತಿದ್ದಾರೆ. ಇದು ಪ್ರಧಾನಿ ಮೋದಿಯವರ ಅಭಿವೃದ್ಧಿಯ ಸಂಕೇತ .

-ವಿ.ಸೋಮಣ್ಣ ಕೇಂದ್ರ ಸಚಿವ

ಭಾರತದ ರತನ ಪಂಚಭೂತಗಳಲ್ಲಿ ಲೀನ

← ಮೊದಲಪುಟದಿಂದ

ಬಾಲಿವುಡ್‌ನ ಹೆಸರಾಂತ ಕಲಾವಿದ ರಾದ ಸಲ್ಮಾನ್ ಖಾನ್, ಅಮೀರ್ ಖಾನ್, ಪ್ರಿಯಾಂಕ ಚೋಪ್ರಾ, ಅನುಷ್ಕಾ ಶರ್ಮಾ , ತೆಲು ಗಿನ ಜನಪ್ರಿಯ ನಿರ್ದೇಶಕ ರಾಜಮೌಳಿ ಸೇರಿದಂತೆ ಅಸಂಖ್ಯ ಸೆಲೆಬ್ರಿಟಿಗಳು ದೇಶಕ್ಕೆ ಟಾಟಾ ಅವರ ಸೇವೆಯನ್ನು ಸ್ಮರಿಸಿದ್ದಾರೆ. ನಿಮ್ಮ ಸಹೃದಯತೆ ಮತ್ತು ಉದಾರ ಮನೋಭಾವ ದಿಂದ ಲಕ್ಷಾಂತರ ಜನರನ್ನು ಸ್ಪರ್ಶಿಸಿದ್ದೀರಿ. ನಿಮ್ಮ ಜೀವನ ಮುಂದಿನ ಪೀಳಿಗೆಗಳಿಗೆ ಸ್ಫೂರ್ತಿಯಾಗಿ ಮುಂದುವರಿಯಲಿದೆ ಎಂದು ಪ್ರಿಯಾಂಕಾ ಚೋಪ್ರಾ ಹೇಳಿದ್ದಾರೆ. ಗೂಗಲ್ ಮುಖ್ಯಸ್ಥ ಸುಂದರ್ ಪಿಚ್ಚೈ ಸೇರಿದಂತೆ ಅನಿವಾಸಿ ಭಾರತೀಯ ಪ್ರಮುಖರೂ ರತನ್ ಟಾಟಾ ಸೇವೆಯನ್ನು ಹಾಡಿಹೊಗಳಿದ್ದಾರೆ.

ಉದ್ಯಮ ಕ್ಷೇತ್ರದಲ್ಲಿ ನೈತಿಕ ಮೌಲ್ಯಗಳನ್ನು ಅನುಸರಿಸಿ ಅಂತಾರಾಷ್ಟ್ರೀಯ ಮಟ್ಟದಲ್ಲಿ , ಮಹಾನ್ ದೇಶಭಕ್ತ ಮತ್ತು ಮಾನವತಾವಾದಿಯಾಗಿ ಸಾಮಾಜಿಕ ಸೇವೆಯಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದ ರತನ್ ಟಾಟಾ ಮಹಾರಾಷ್ಟ್ರ ಮತ್ತು ಭಾರತದ ಹೆಮ್ಮೆಯ ಪುತ್ರ. ಇಂತಹ ಮೇರುವ್ಯಕ್ತಿಗೆ ಭಾರತರತ್ನ ಪ್ರಶಸ್ತಿ ನೀಡಬೇಕೆಂದು ನಾವು ಕೇಂದ್ರಕ್ಕೆ ಮನವಿ ಮಾಡುತ್ತೇವೆ.

– ಏಕನಾಥ ಶಿಂಧೆ ಮಹಾರಾಷ್ಟ್ರ ಸಿಎಂ

ಲೆಜೆಂಡ್‌ಗಳು ಹುಟ್ಟಿ ಶಾಶ್ವತವಾಗಿ ಬದುಕುತ್ತಾರೆ. ಟಾಟಾ ಉತ್ಪನ್ನ ಬಳಸದ ದಿನವನ್ನೂ ಊಹಿಸಲು ಅಸಾಧ್ಯ, ಭಾರತಕ್ಕಾಗಿ ನೀವು ಮಾಡಿದ ಎಲ್ಲ ಕಾರ್ಯಕ್ಕೆ ಮತ್ತು ಅಸಂಖ್ಯ ಜನರ ಜೀವನದ ಮೇಲೆ ಪ್ರಭಾವ ಬೀರಿದ್ದಕ್ಕೆ ಧನ್ಯವಾದಗಳು. ತಲೆಮಾರುಗಳವರೆಗೂ ನಿಮ್ಮ ಹೆಗ್ಗುರುತು ಇರಲಿದೆ.

– ಎಸ್.ಎಸ್.ರಾಜಮೌಳಿ ಟಾಲಿವುಡ್ ನಿರ್ದೇಶಕ

...ಹಗರಣ ತನಿಖೆಗೆ ಎಸ್‌ಐಟಿ

← ಮೊದಲಪುಟದಿಂದ

ಪ್ರಕರಣದಲ್ಲಿ ಕ್ರಿಮಿನಲ್ ನಡೆಯಿರುವುದರಿಂದ ಎಸ್‌ಐಟಿ ರಚನೆಗೆ ತೀರ್ಮಾನ ಮಾಡಲಾಗಿದೆ. ಇದರೊಂದಿಗೆ ಸಚಿವ ಸಂಪುಟ ಉಪಸಮಿತಿ ರಚನೆ ಮಾಡಲು ನಿರ್ಧರಿಸಿದ್ದೇವೆ. 500 ಕೋಟಿ ರು. ವಸೂಲಾತಿಗೆ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಹೇಳಿದರು. ಕೋವಿಡ್ ಹಗರಣದಲ್ಲಿ ಭಾಗಿಯಾದ ಕಂಪನಿಗಳು, ಸಂಸ್ಥೆಗಳನ್ನು ಬ್ಲಾಕ್ ಲಿಸ್ಟ್‌ಗೆ ಸೇರಿಸಲು ತೀರ್ಮಾನಿಸಲಾಗಿದೆ. ಎಲ್ಲೆಲ್ಲಿ ಅವ್ಯವಹಾರ ಆಗಿದೆ ಅದರ ಬಗ್ಗೆ ಎಸ್‌ಐಟಿ ತನಿಖಾ ತಂಡ ಗಮನಕೊಡಲಿದೆ. ಯಾರ ಪಾತ್ರ ಏನು ಎಂಬುದು ಎಸ್‌ಐಟಿ ತನಿಖೆಯಲ್ಲಿ ತಿಳಿದು ಬರಲಿದೆ. ಪೂರ್ಣ ವರದಿ ಬಂದ ಮೇಲೆ ಅವ್ಯವಹಾರ, ಇದರಲ್ಲಿ ಯಾರು ಪಾಲುದಾರರು ಎಂಬುದು ಗೊತ್ತಾಗುತ್ತದೆ. ಯಾರೇ ತಪ್ಪಿತಸ್ಥರಿದ್ದರೂ ಕ್ರಮ ಆಗಲಿದೆ ಎಂದರು.

ಕರ್ನಾಟಕ ಗೃಹ ಮಂಡಳಿ
3ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009, ದೂರವಾಣಿ: 080–22273511–16
ನೋಟಿಫಿಕೇಷನ್ ಸಂ : KHB/CE/MWD/KHB/2024-25/SE0111/ CALL-2
ದಿನಾಂಕ : 07.10.2024
ಟೆಂಡರ್ ಪ್ರಕಟಣೆ (ಕೆಪಿಪಿಪಿ ಮೂಲಕ)
ರಾಯಚೂರು ಜಿಲ್ಲೆ, ರಾಯಚೂರು ಪಟ್ಟಣ ಯರಮರಸ್ ಕ್ಯಾಂಪ್‌ನಲ್ಲಿ ನಿರ್ಮಿಸಲು ಉದ್ದೇಶಿಸಿರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೊರಾರ್ಜಿ ದೇಸಾಯಿ ವಸತಿ ಕಾಲೇಜು ಕಟ್ಟಡ ಕಾಮಗಾರಿಗೆ ವಾಸ್ತುಶಿಲ್ಪಿ ಸಂಸ್ಥೆ (AEF) ನೇಮಕಾತಿಗಾಗಿ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿದೆ.
ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ 16.10.2024 ಸಂಜೆ 4.00 ಗಂಟೆಯವರೆಗೆ
ಕಾಮಗಾರಿಯ ಬಗ್ಗೆ ಹಾಗೂ ಇನ್ನಿತರ ವಿವರಗಳಿಗೆ ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ.
ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿಭವನ, ಬೆಂಗಳೂರು
ಖಿಜಟ: 080–22273511 website: https://kppp.karnataka.gov.in
ಸಹಿ/–
ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.
DIPR/CP/2509/Zen/2024-25

ಮಹಾನಗರ ಪಾಲಿಕೆ, ವಿಜಯಪುರ
ಸಂಖ್ಯೆ: ಮನಪಾ/ಲೋವಿ/ಕಾಅ/ಡಿಎಮ್ಎ/ಟಿಎನ್‌ಡಿ/ಇಪ್ರೊ/2024–25/
ದಿನಾಂಕ: 10.10.2024
ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ವಿಜಯಪುರ ಮಹಾನಗರ ಪಾಲಿಕೆ ಬಿಡುಗಡೆಯಾದ **ಸನ್ 2024–25ನೇ ಸಾಲಿನ 15ನೇ ಹಣಕಾಸು ಆಯೋಗದ ಅನುದಾನದಲ್ಲಿ 05 ಕಾಮಗಾರಿಗಳು ಮತ್ತು ಸನ್ 2024–25 ನೇ ಸಾಲಿನ ಮಹಾನಗರ ಪಾಲಿಕೆಯ ಅನುದಾನದಲ್ಲಿ 02 ಕಾಮಗಾರಿಗಳು** ಕೆ.ಪಿ.ಡಬ್ಲ್ಯೂಡಿ ಇವರಿಂದ ನೋಂದಾಯಿತ ಗುತ್ತಿಗೆದಾರರಿಂದ ಇ–ಪ್ರೋಕ್ಯೂರ್‌ಮೆಂಟ್ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರ್‌ನ್ನು ಆವ್ಹಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ್ ಮೂಲಕ ವೆಬ್‌ಸೈಟ್ (https://kppp. karnataka.gov.in) ನಲ್ಲಿ ಪ್ರಕಟಿಸಲಾಗಿದೆ.
ಸೂಚನೆ: ಟೆಂಡರ್ ತಿದ್ದುಪಡಿ ಹಾಗೂ ದಿನಾಂಕ ವಿಸ್ತರಣೆ kppp.karnataka.gov.in ಪೋರ್ಟಲ್‌ನಲ್ಲಿ ನಮೂದಿಸಲಾಗುವುದು.
1. ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 24.10.2024.
ಸಹಿ/– ಕಾರ್ಯಪಾಲಕ ಅಭಿಯಂತರರು,
ಮಹಾನಗರ ಪಾಲಿಕೆ, ವಿಜಯಪುರ
ವಾಸಾಸಂಇ/ವಿಜಯಪುರ/322/ಕೆಎಸ್‌ಎಂಸಿಎ/2024–25

ಕಾರ್ಯಪಾಲಕ ಅಭಿಯಂತರವರ ಕಛೇರಿ,
ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ
ಫೋನ್ ನಂ.: 08182–222942, Email- spdivision@gmail.com
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಏಕ–ಲಕೋಟೆ ಪದ್ಧತಿ) (ಕೆ.ಪಿ.ಪಿ–ಪೋರ್ಟಲ್ ಮೂಲಕ)
ಐ.ಎಫ್.ಟಿ ಸಂಖ್ಯೆ: 15/2024–25 ದಿ: 07.10.2024
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ–1 ನಿಯುಮದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 4ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಗೆ ಶಿವಮೊಗ್ಗ, ತೀರ್ಥಹಳ್ಳಿ ಮತ್ತು ಭದ್ರಾವತಿ ತಾಲ್ಲೂಕಿಗಳಲ್ಲಿ 2059–80–053–4–00–200 ವಿವಿಧ ಇಲಾಖಾ ಕಟ್ಟಡಗಳ ದುರಸ್ಥಿ/ನಿರ್ವಹಣೆ ಮತ್ತು 2216– 07–053–0–01–200 ಲೋಕೋಪಯೋಗಿ ವಸತಿ ಗೃಹಗಳು ಹಾಗೂ ನ್ಯಾಯಾಂಗ ವಸತಿ ಗೃಹಗಳ ದುರಸ್ಥಿ/ನಿರ್ವಹಣೆ ಹಾಗೂ ಮಳೆಹಾನಿ ದುರಸ್ಥಿ ಕಾಮಗಾರಿಗಳ ಲೆಕ್ಕ ಶೀರ್ಷಿಕೆಯಡಿ ಕಾಮಗಾರಿಗೆ ಟೆಂಡರ್‌ನ್ನು ಏಕ–ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಟೆಂಡರ್‌ಗಿಟ್ಟ ಗರಿಷ್ಟ ಮೊತ್ತ ರೂ.42.36 ಲಕ್ಷ ಮತ್ತು ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ. 0.75 ಲಕ್ಷ ಹಾಗೂ ಇ.ಎಂ.ಡಿ, ಗರಿಷ್ಟ ಮೊತ್ತ ರೂ. 0.848 ಲಕ್ಷ ಮತ್ತು ಇ.ಎಂ.ಡಿ. ಕನಿಷ್ಠ ಮೊತ್ತ ರೂ. 0.019 ಲಕ್ಷ. ಕಾಲಾವಧಿ ಮಳೆಗಾಲ ಸೇರಿ ಕೆ.ಪಿ.ಪಿ. ಪೋರ್ಟ್‌ಲ್‌ನಲ್ಲಿ ನಮೂದಿಸಿದಂತೆ. ಅರ್ಹ ಗುತ್ತಿಗೆದಾರರು ಕೆ.ಪಿ.ಪಿ.ಪಿ ಪೋರ್ಟ್‌ಲ್ http://KPPP.karnataka.gov.in ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್–2 ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್–4 ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ ದಿನಾಂಕ:07–10–2024 ರಿಂದ 15.10.2024 ರ 11.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು ದಿನಾಂಕ: 15–10–2024 ರ ಬೆಳಿಗ್ಗೆ 11.30 ಗಂಟೆಯೊಳಗೆ ಕೆ.ಪಿ.ಪಿ.ಪಿ ಪೋರ್ಟ್‌ಲ್ ನಲ್ಲಿ ಭರಿಸತಕ್ಕದ್ದು. ಕಾಮಗಾರಿಯ ತಾಂತ್ರಿಕ/ಆರ್ಥಿಕ ಬಿಡ್‌ನ್ನು ಕೆ.ಪಿ.ಪಿ.ಪಿ ಪೋರ್ಟ್‌ಲ್ ನಲ್ಲಿ ದಿನಾಂಕ: 16–10–2024 ರಂದು ಸಂಜೆ 5.30 ಕ್ಕೆ ತೆರೆಯಲಾಗುವುದು. ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.
ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ,
ವಿಶೇಷ ವಿಭಾಗ, ಶಿವಮೊಗ್ಗ
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/24–25/38/10/834

ಕರ್ನಾಟಕ ಅರಣ್ಯ ಇಲಾಖೆ
ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಕಾರ್ಯಯೋಜನೆ ಮತ್ತು ಮೋಜಣಿ, ಧಾರವಾಡ.
ದೂರವಾಣಿ: 0836–2748522, ಇ–ಮೇಲ್: cfwpsdwd@aranya.gov.in
ಸಂ:ಎ2/ಬಿಜಿಟಿ/ಡಬ್ಲೂಪಿಆರ್‌ಟಿ/ಗಡಿ ಮೋಜಣಿ/ಮರು ಇ–ಟೆಂಡರ/ಸಿಆರ್–361/2024–25 ದಿನಾಂಕ: 07–10–2024
ಮರು ಇ–ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (ಕೆಪಿಪಿ) ಮೂಲಕ)
ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾರ್ಯಯೋಜನೆ, ಧಾರವಾಡ ಇವರ ಕಛೇರಿಯಲ್ಲಿ ಪ್ರಸಕ್ತ 2024–25 ನೇ ಸಾಲಿನಲ್ಲಿ ಹೆಸರು ನೋಂದಾಯಿಸಿದ ಅರ್ಹ ಗುತ್ತಿಗೆದಾರರು ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಈ ಕೆಳಗೆ ನಮೂದಿಸಿದ ಕೆಲಸಕ್ಕೆ **ದ್ವಿ–ಲಕೋಟೆ ಪದ್ಧತಿಯಲ್ಲಿ** ಅಲ್ಪಾವಧಿ ಮರು ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್: **https://kppp.karnataka.gov.in/#/portal/portal-home** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು.
2024–25 ನೇ ಸಾಲಿಗೆ ಹಾವೇರಿ ವಿಭಾಗದ ವ್ಯಾಪ್ತಿಯಲ್ಲಿ ಬರುವ ಹಾನಗಲ್ ಹಾಗೂ ಬ್ಯಾಡಗಿ ವಲಯದ ಕಾಯ್ದಿಟ್ಟ / ರಕ್ಷಿತ ಅರಣ್ಯ ಪ್ರದೇಶದ ಗಡಿ ಮೋಜಣಿ ಮಾಡಿ, ಸದರಿ ಮೋಜಣಿ ಸ್ಥಳಗಳಲ್ಲಿ ಹೊಸ ಮಾದರಿಯ ಆರ್.ಸಿ.ಸಿ. ಪಿಲ್ಲರ್‌ಗಳನ್ನು ತಯಾರಿಸಿಕೊಂಡು ಅಳವಡಿಸುವುದು ಹಾಗೂ ಆರ್.ಸಿ.ಸಿ. ಪಿಲ್ಲರಿನ ಭೂಮಿಯ ಮೇಲ್ಭಾಗದಲ್ಲಿ ಇರುವ ಎಲ್ಲಾ ಬದಿಗಳಿಗೆ ಬಣ್ಣ ಹಚ್ಚುವ ಕಾಮಗಾರಿಗೆ ವಿವರ ಈ ಕೆಳಗಿನಂತೆ,
1) ಒಟ್ಟು: 45.72 ಕಿ.ಮೀ. ಹಾಗೂ 322 ಆರ್.ಸಿ.ಸಿ. ಪಿಲ್ಲರ್‌ಗಳು ಅಂದಾಜು ಮೊತ್ತ **ರೂ. 32,34,747/–.**
ವಿಶೇಷ ಸೂಚನೆ: ಅರ್ಹ ಗುತ್ತಿಗೆದಾರರು ಮೋಜಣಿ ಮಾಡಿ ಪ್ರತಿ ಕಿ.ಮೀ. ಗೆ 07 (ಏಳು) ರಂತೆ ಹೊಸ ಮಾದರಿಯ ಆರ್.ಸಿ.ಸಿ. ಪಿಲ್ಲರ್‌ಗಳನ್ನು ತಯಾರಿಸಿಕೊಂಡು ಅಳವಡಿಸತಕ್ಕದ್ದು. ಸಂಕ್ಷಿಪ್ತ ಇ–ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಟೆಂಡರ್‌ದಾರರು ಟೆಂಡರ್ ಫಾರ್ಮಗಳನ್ನು ದಿನಾಂಕ: **17–10–2024ರ ತನಕ ವೆಬ್‌ಸೈಟ್ ಮುಖಾಂತರ ಡೌನಲೋಡ್ ಮಾಡಿಕೊಳ್ಳಬಹುದು** ಹಾಗೂ ದಿನಾಂಕ: **18–10–2024 ರ ಮಧ್ಯಾಹ್ನ 4.00 ಘಂಟೆವರೆಗೆ ವೆಬ್‌ಸೈಟ್‌ನಲ್ಲಿ ಟೆಂಡರ್ ಸಲ್ಲಿಸಬಹುದು.** ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **19–10–2024 ರಂದು ಮಧ್ಯಾಹ್ನ 4.15 ಘಂಟೆಯ ನಂತರ** ಹಾಗೂ ಆರ್ಥಿಕ ಬಿಡ್‌ಗಳನ್ನು ದಿನಾಂಕ: **20–10–2024 ರಂದು ಮಧ್ಯಾಹ್ನ 4.30 ಘಂಟೆಯ ನಂತರ ತೆರೆಯಲಾಗುವುದು.**
ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಕಾರ್ಯಯೋಜನೆ, ಧಾರವಾಡ.
ವಾಸಾಸಂಇ/ಧಾರವಾಡ/502/ಅಡ್ವರ್ಟೋರ್/2024–25

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ. 8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ,
ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು –560 052.
ದೂರವಾಣಿ: 080–22283366, ಟೆಲಿಫ್ಯಾಕ್ಸ್: 080–22262288
ಸಂಖ್ಯೆ: KREIS/INFR/OTH/61/2024-ADMN ದಿನಾಂಕ: 09.10.2024
ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ವಸತಿ ಶಾಲೆ/ಕಾಲೇಜುಗಳಿಗೆ ಡೆಸ್ಕ್ ಕಂ ಬೆಂಚ್‌ಗಳನ್ನು ಖರೀದಿಸಲು ಇ–ಪೋರ್ಟಲ್ ಮುಖಾಂತರ ದಿನಾಂಕ : 09.10.2024 ರಂದು ಟೆಂಡರನ್ನು ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ:23.10.2024 ಎಂದು ನಿಗಧಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ http://e-procurement.gov.in. ರಲ್ಲಿ ನೋಡಬಹುದಾಗಿದೆ.
ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು
ಕವಶಿಸಸಂ, ಬೆಂಗಳೂರು
DIPR/CP/2496(A)/Zen/2024-25

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರವರ ಕಚೇರಿ, ಕನೀನಿನಿ, ಮಬದಕಾನಿ ವಿಭಾಗ ನಂ. 3
ಬ್ಯಾಹಟ್ಟಿ. ತಾ: ಹುಬ್ಬಳ್ಳಿ, ಜಿ: ಧಾರವಾಡ 580023. ಫೋನ್ : 0836–2315225
ಫ್ಯಾಕ್ಸ್ :2315226. ಇ–ಮೇಲ್: eemrbcc3byt@gmail.com
ಸಂ.ಕನೀನಿನಿ/ಮಬದವಿ–3/ಎ.ಇ–1/ಇ–ಟೆಂಡರ/2024–25/1296 ದಿನಾಂಕ:09/10/2024
ಟೆಂಡರ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ ಪೋರ್ಟಲ್ ಮುಖಾಂತರ)
ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ರವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್ ಕನೀನಿನಿ, ಮಬದಕಾನಿ ವಿಭಾಗ ಸಂ.3, ಬ್ಯಾಹಟ್ಟಿ ವ್ಯಾಪ್ತಿಯ **4701 ಎಸ್.ಸಿ.ಪಿ/ಟಿ.ಎಸ್.ಪಿ ಅಡಿ –02 ಈ ಕೆಳಗೆ ನಮೂದಿಸಿರುವ ಇಂಡೆಂಟ ನಂಬರಿನ 02 ಕಾಮಗಾರಿಗಳಿಗೆ ಶೇಕಡಾವಾರು ಟೆಂಡರನ್ನು ಏಕಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರಮೆಂಟ ಮೂಲಕ ಆಹ್ವಾನಿಸಲಾಗಿದೆ.**
Work Indent No: 1623 & 1581 ಕಾಮಗಾರಿಯ ಅಂದಾಜು ಮೊತ್ತ: ತಲಾ ರೂ.25.00 ಲಕ್ಷಗಳಿಂದ 50.00 ಲಕ್ಷಗಳವರೆಗೆ. ಇ.ಎಂ.ಡಿ ಮೊತ್ತ: ತಲಾ ರೂ.42500/– ರಿಂದ 85000/– ಇ–ಪೋರ್ಟಲ್ ಮೂಲಕ ಟೆಂಡರಗಳನ್ನು ದಿನಾಂಕ: 04/11/2024 ರ ಸಂಜೆ 4.00 ರ ತನಕ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 06/11/2024 ರಂದು ಮುಂಜಾನೆ 11.00 ಗಂಟೆಯಿಂದ.
ಹಾಗೂ ಕಾಮಗಾರಿವಾರು ಇತರೆ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ ಪೋರ್ಟಲ್ ವೆಬ್‌ಸೈಟ್ **http://kppp.karnataka.gov.in** ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ: 0836–2315225 ನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/–
ಕಾರ್ಯನಿರ್ವಾಹಕ ಇಂಜಿನೀಯರರು
ಕನೀನಿನಿ, ಮಬದಕಾನಿ ವಿಭಾಗ ನಂ. 3 ಬ್ಯಾಹಟ್ಟಿ
ವಾ.ಸಾ.ಇ./ಧಾರವಾಡ/494/ ಮಣಿಪಾಲ್/2024–25

ಪುರಸಭಾ ಕಾರ್ಯಾಲಯ, ಕೋನಪ್ಪನ ಅಗ್ರಹಾರ
ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–560100.
E-Mail: ka.konappanaagrahara.tmc@gmail.com
ಕ್ರಮಸಂ:ಪುಸ:ಕೋ:ತಾಂ:ಶಾ: 12:2024:25 ದಿನಾಂಕ: 10.10.2024
ಮರು ಅಲ್ಪಾವಧಿ ಹಾಗೂ ಟೆಂಡರ್ ಪ್ರಕಟಣೆ
ಕೋನಪ್ಪನ ಅಗ್ರಹಾರ ಪುರಸಭೆ ವ್ಯಾಪ್ತಿಯಲ್ಲಿ 2024–25ನೇ ಸಾಲಿನ ಎಸ್.ಎಫ್.ಸಿ ಹಾಗೂ ಪುರಸಭಾ ನಿಧಿಯ ಶೇ 24.10, ಶೇ 7.25, ಶೇ 5 ರ ಅನುದಾನದಡಿಯಲ್ಲಿ, ಹಾಗೂ 2024–25ನೇ ಸಾಲಿನ 15ನೇ ಹಣಕಾಸು, 2024–25ನೇ ಸಾಲಿನ ಪುರಸಭಾ ಸಾಮಾನ್ಯ ನಿಧಿ ಅಡಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲು ನಿಯಮಾನುಸಾರ ಮರು ಅಲ್ಪಾವದಿ ಮತ್ತು ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ಗುತ್ತಿಗೆದಾರರುಗಳು ತಮ್ಮ ಟೆಂಡರ್ ಗಳನ್ನು https://kppp.karnataka.gov.in ಮುಂಖಾಂತರ ಟೆಂಡರ್ ಸಲ್ಲಿಸತಕ್ಕದ್ದು, ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಸಮಯ ಈ ಕೆಳಕಂಡಂತೆ ಇದೆ. ಹೆಚ್ಚಿನ ವಿವರಗಳನ್ನು https://kppp.karnataka.gov.in ಮುಖಾಂತರ ಹಾಗೂ ಕಛೇರಿ ಸಮಯದಲ್ಲಿ ಅಭಿಯಂತರರಿಂದ ಪಡೆಯತಕ್ಕದ್ದು.

ಕ್ರಮ ಸಂ	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ಲಕ್ಷಗಳಲ್ಲಿ)	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ & ಸಮಯ
1	DMA/2024-25/RD/WORK_INDENT25354/CALL-3 (ಸಾಮಾನ್ಯ) ಅನುದಾನ: ಎಸ್.ಎಫ್.ಸಿ ಶೇ 7.25/2024–25	1.22	ಕ್ರಮ ಸಂ 1 ರಿಂದ 5ಕ್ಕೆ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ 21.10.2024 ಸಮಯ: 17.00 ಗಂಟೆಗೆ. 2) ಟೆಂಡರ್ ತೆರೆಯುವ ದಿನಾಂಕ 22.10.2024 @ 17.30 ಸಮಯಕ್ಕೆ
2	DMA/2024-25/OW/WORK_INDENT25364CALL-3 (ಸಾಮಾನ್ಯ) ಅನುದಾನ: ಪುರಸಭಾ ನಿಧಿ ಶೇ24.10/2024–25	4.45	
3	DMA/2024-25/OW/WORK_INDENT25366CALL-3 (ಪರಿಶಿಷ್ಟ ವರ್ಗ) ಅನುದಾನ: ಪುರಸಭಾ ನಿಧಿ ಶೇ5/2024–25	1.35	
4	DMA/2024-25/OW/WORK_INDENT25365CALL-3 (ಪರಿಶಿಷ್ಟ ಜಾತಿ)	2.35	
5	DMA/2024-25/RD/WORK_INDENT19905/CALL-2 (ಸಾಮಾನ್ಯ) 2024–25 ಸಾಲಿನ 15ನೇ ಹಣಕಾಸು ಸಾಮಾನ್ಯ ಅನುಧಾನ	43.60	
6	DMA/2024-25/EL/WORK_INDENT30863 (ಸಾಮಾನ್ಯ) ಪುರಸಭಾ ಸಾಮಾನ್ಯ ಅನುಧಾನ 2024–25	16.50	ಕ್ರಮ ಸಂ 6 ರಿಂದ 7ಕ್ಕೆ ಟೆಂಡರ್‌ಸಲ್ಲಿಸುವ ಕೊನೆಯ ದಿನಾಂಕ 28.10.2024 ಸಮಯ : 17.00ಗಂಟೆಗೆ. 2)ಟೆಂಡರ್ ತೆರೆಯುವ ದಿನಾಂಕ 29.10.2024 @ 17.30 ಸಮಯಕ್ಕೆ
7	DMA/2024-25/WS/WORK_INDENT30887 (ಸಾಮಾನ್ಯ) ಪುರಸಭಾ ಸಾಮಾನ್ಯ ಅನುಧಾನ 2024–25	8.10	

ಸಹಿ /–
ಮುಖ್ಯಾಧಿಕಾರಿ
ಪುರಸಭೆ, ಕೋನಪ್ಪನ ಅಗ್ರಹಾರ
ಸಹಿ/–
ಆಡಳಿತಾಧಿಕಾರಿಗಳು
ಪುರಸಭೆ, ಕೋನಪ್ಪನ ಅಗ್ರಹಾರ
ವಾಸಾಸಂಇ/ವಾ.ಪ್ರ/2488/ಎಸ್‌ಎಸ್‌ಸಿ/2024–25

ಜಿಲ್ಲಾ ಪಂಚಾಯತ ಬೆಳಗಾವಿ
ಗುಣಾತ್ಮಕ ಶಿಕ್ಷಣಕ್ಕಾಗಿ ಕ್ರಿಯಾಶೀಲ ಆಡಳಿತ
ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಸಮಗ್ರ ಶಿಕ್ಷಣ ಕರ್ನಾಟಕ, ಬೆಳಗಾವಿ
ಸಂ: ಸ.ಶಿ.ಕ/ಇ.ಪ್ರೊ/ಟೆಂಡರ್/2024–25 ದಿನಾಂಕ: 09/10/2024
ಮರು ಟೆಂಡರ್ (ಅಲ್ಪಾವಧಿ) ಪ್ರಕಟಣೆ
ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಚೇರಿ ಸಮಗ್ರ ಶಿಕ್ಷಣ ಕರ್ನಾಟಕಬೆಳಗಾವಿ ಕಚೇರಿಯಿಂದ ವಿವಿಧ ಶೈಕ್ಷಣಿಕ ಸಂಸ್ಥೆ ಹಾಗೂ ಜಿಲ್ಲಾ ಮತ್ತು ಬ್ಲಾಕ್ ಕಚೇರಿಗಳಿಗೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು ಆಸಕ್ತ ಸಂಸ್ಥೆಗಳಿಂದ ಪ್ರತ್ಯೇಕ 04 ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಬಿಡ್‌ದಾರರು ಸದರಿ ನಾಲ್ಕು ಟೆಂಡರ್‌ಗಳಿಗೆ ಭಾಗವಹಿಸಲು ದಿನಾಂಕ: 19/10/2024 ಕೊನೆಯ ದಿನಾಂಕವಾಗಿದ್ದು ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರಮೆಂಟ್ ತಂತ್ರಾಂಶದ ವೆಬ್‌ಸೈಟ್ **www.kppp.karnataka.gov.in** ಅವಲೋಕಿಸುವುದು ಅಥವಾ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಚೇರಿ ಸಮಗ್ರ ಶಿಕ್ಷಣ ಕರ್ನಾಟಕ ಬೆಳಗಾವಿ ಇವರ ಕಚೇರಿಯನ್ನು ಸಂಪರ್ಕಿಸುವುದು. (ಮೋ. 9448999328) ನಾಲ್ಕೂ ಟೆಂಡರ್‌ಗಳ ವಿವರ ಈ ಕೆಳಗಿನಚಿತಿರುತ್ತದೆ.
1. ಟೆಂಡರ್‌ನ ವಿವರ: ಜಿಲ್ಲಾ ಮತ್ತು ಬ್ಲಾಕ್ ಕಚೇರಿಗಳಿಗೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯುವ ಕುರಿತು. ಟೆಂಡರ್‌ನ ಉಲ್ಲೇಖ ಸಂಖ್ಯೆ: MANPOWER/2024-25/BGM. ಟೆಂಡರ್‌ನ ಅಂದಾಜು ಮೊತ್ತ: ರೂ. 61,04,000/–, ಇ.ಎಂ.ಡಿ.: ರೂ. 1,22,080/–
2. ಟೆಂಡರ್‌ನ ವಿವರ: ಕೆ.ಜಿ.ಬಿ.ವಿ ಟೈಪ್–1 ಶಾಲೆಗಳಿಗೆ ಮಾನವ ಸಂಪನ್ಮೂಲ ಸೇವೆ ಪಡೆಯುವ ಕುರಿತು. ಟೆಂಡರ್ ಉಲ್ಲೇಖ ಸಂಖ್ಯೆ: KGBV TYPE-1 MANPOWER/Bgm/2024-25. ಟೆಂಡರ್‌ನ ಅಂದಾಜು ಮೊತ್ತ: ರೂ. 25,26,000/–, ಇ.ಎಂ.ಡಿರೂ. 63,150/–
3. ಟೆಂಡರ್‌ನ ವಿವರ: ಕೆ.ಜಿ.ಬಿ.ವಿ ಟೈಪ್–4 ಶಾಲೆಗಳಿಗೆ ಮಾನವ ಸಂಪನ್ಮೂಲ ಸೇವೆ ಪಡೆಯುವ ಕುರಿತು. ಟೆಂಡರ್ ಉಲ್ಲೇಖ ಸಂಖ್ಯೆ: KGBV TYPE-4 MANPOWER/Bgm/2024-25. ಟೆಂಡರ್‌ನ ಅಂದಾಜು ಮೊತ್ತ: ರೂ. 7,17,000/, ಇ.ಎಂ.ಡಿ: ರೂ. 17,925/–
4. ಟೆಂಡರ್‌ನ ವಿವರ: ಕೆ.ಕೆ.ಜಿ.ಬಿ.ವಿ ಶಾಲೆಗಳಿಗೆ ಮಾನವ ಸಂಪನ್ಮೂಲ ಸೇವೆ ಪಡೆಯುವ ಕುರಿತು. ಟೆಂಡರ್ ಉಲ್ಲೇಖ ಸಂಖ್ಯೆ: KKGBV MANPOWER 24-25. ಟೆಂಡರ್‌ನ ಅಂದಾಜು ಮೊತ್ತ: ರೂ. 8,86,000/–, ಇ.ಎಂ.ಡಿ: ರೂ. 17,720/–
ಸಹಿ/–
ಉಪನಿರ್ದೇಶಕರು (ಆಡಳಿತ) ಹಾಗೂ ಪದನಿಮಿತ್ತ
ಜಿಲ್ಲಾಯೋಜನಾ ಸಮನ್ವಯಾಧಿಕಾರಿಗಳು
ಸಮಗ್ರ ಶಿಕ್ಷಣ ಕರ್ನಾಟಕ, ಬೆಳಗಾವಿ
ವಾ.ಸಾ.ಇ./ಬೆಳಗಾವಿ/965/ ಮಣಿಪಾಲ್/2024–25

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ ವಿಶ್ವೇಶ್ವರಯ್ಯ ನಾಲಾ ವಿಭಾಗ, ಮಂಡ್ಯ ದೂರವಾಣಿ ಸಂಖ್ಯೆ:08232–225046
E-mail:vcdnmndya@gmail.com
ಟೆಂಡರ್ ಪ್ರಕಟಣೆ ಸಂಖ್ಯೆ : 08/24–25 ದಿನಾಂಕ: 07.10.2024
ದ್ವಿ – ಲಕೋಟಿ ಪದ್ಧತಿ
ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು/ಬೆಂಗಳೂರು ಇವರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ 3ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಕಾಮಗಾರಿಗೆ ಐಟಂವಾರು ದರದ ಟೆಂಡರ್‌ನ್ನು ಇ–ಪ್ರೊಕ್ಯೂಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಒಟ್ಟು ಕಾಮಗಾರಿಗಳ ಸಂಖ್ಯೆ–04, ಟೆಂಡರ್‌ಗಿಟ್ಟ ಕನಿಷ್ಟ ಮೊತ್ತ ರೂ. 59.11 ಲಕ್ಷಗಳಿಂದ ಗರಿಷ್ಠ ಮೊತ್ತ ರೂ. 84.68 ಲಕ್ಷಗಳು, ಕೆಲಸ ಪೂರ್ಣಗೊಳಿಸಲು ನಿಗಧಿ ಪಡಿಸಿರುವ ಅವಧಿ 120 ದಿನಗಳು (ಮಳೆಗಾಲ ಸೇರಿ) ಇ.ಎಂ.ಡಿ ಶುಲ್ಕವನ್ನು ಟೆಂಡರಿಗಿಟ್ಟ ಮೊತ್ತಕ್ಕೆ ಶೇ 2.0% ರಷ್ಟು ಇ–ಪೇಮೆಂಟ್ ಮೂಲಕ ಸಂದಾಯ ಮಾಡುವುದು, Date of access in e-portal: As per e-portal, ಆನ್‌ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್ ಗಳನ್ನು ಇ.ಎಂ.ಡಿ ಯೊಂದಿಗೆ ಸಲ್ಲಿಸುವ ಕೊನೆಯ ದಿನಾಂಕ: As per e-portal, ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: As per e-portal, ಆರ್ಥಿಕ ಬಿಡ್ ತೆರೆಯುವ ದಿನಾಂಕ : As per e-portal. ಹೆಚ್ಚಿನ ವಿವರಗಳಿಗೆ kppp.karnataka.gov.in ನಲ್ಲಿ ಹಾಗೂ ಈ ಕಛೇರಿಯ ದೂರವಾಣಿ ಸಂಖ್ಯೆ 08232 225046 ನಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/–ಕಾರ್ಯಪಾಲಕ ಇಂಜಿನಿಯರ್,
ಕಾವೇರಿ ನೀರಾವರಿ ನಿಗಮ (ನಿ), ವಿಸಿ ವಿಭಾಗ, ಮಂಡ್ಯ
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/366/2024–25

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಕೊಪ್ಪಳ.
ಸಂ:ಕಾನಿಇಂ:ಲೋಇ:ವಿಕೊ:ಡಿಬಿ:KW–2& 4:ಟೆಂ:2024–25:2108 ದಿನಾಂಕ: 09–10–2024.
ಅಲ್ಪಾವಧಿ ಟೆಂಡರ್ ಪ್ರಕಟಣೆ
2023–24ನೇ ಸಾಲಿನ ಲೆಕ್ಕ ಶೀರ್ಷಿಕೆ: 2023–24ನೇ ಸಾಲಿನ ಲೆಕ್ಕ ಶೀರ್ಷಿಕೆ: 4059–80–051–0–29–386 ಇಲಾಖಾ ಕಟ್ಟಡಗಳು, 2023–24 ಮತ್ತು 2024–25ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಯೋಜನೆಯ ಮೈಕ್ರೋ ಅಕ್ಷರ ಅವಿಷ್ಕಾರ ಅನುದಾನದ ಮೈಕ್ರೋ – ಸಾಮಾಜಿಕ – ಇತರೆ ಮತ್ತು 2023–24ನೇ ಸಾಲಿನ 8443 ಠೇವಣಿ ವಂತಿಕೆ ಅಡಿಗಳಲ್ಲಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಪಾರದರ್ಶಕತೆ ಆ್ಯಕ್ಟ 2000ರ ನಿಯಮದಂತೆ, ಸ್ಟ್ಯಾಂಡರ್ಡ ಬಿಡ್ ಡಾಕೂಮೆಂಟ್ KW-2&4 ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಟೆಂಡರಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಕೆಪಿಪಿಪಿ ಪೋರ್ಟಲ್ http://kppp.karnataka.gov.in ಮುಖಾಂತರ ಭಾಗವಹಿಸಬಹುದು. **ಒಟ್ಟು 6 ಕಾಮಗಾರಿಗಳಿಗೆ (ವರ್ಕ ಇಂಡೆಂಟ್ ಸಂಖ್ಯೆ: 11253/Call–2, 15368, 14711, 14924, 14964 & 15432/Call–3)** ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ: **21–10–2024 ಸಮಯ 16.00** ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **22–10–2024 ಸಮಯ 16.30** ಗಂಟೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ: **25–10–2024 ಸಮಯ 11.00** ಗಂಟೆ, ಕನಿಷ್ಟ ಅಂದಾಜು ಮೊತ್ತ ರೂ. 25.00 ಲಕ್ಷಗಳು ಹಾಗೂ ಗರಿಷ್ಟ ಅಂದಾಜು ಮೊತ್ತ ರೂ. 300.00 ಲಕ್ಷಗಳು ಇರುತ್ತದೆ. ಈ ಟೆಂಡರ್ ದಾಖಲೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿಯ ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ.ಎಂ.ಡಿ, ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರೀಬಿಡ್ ಮೀಟಿಂಗ್ ದಿನಾಂಕ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣ ಹಾಗೂ ಇತ್ಯಾದಿಗಳಿಗಾಗಿ ಹೆಚ್ಚಿನ ಮಾಹಿತಿಗಳನ್ನು http://kppp.karnataka.gov.in ನೋಡಿಕೊಳ್ಳುವುದು/ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು. **ವಿಶೇಷ ಸೂಚನೆ:** ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಬದಲಾವಣೆಯಾದಲ್ಲಿ ಹಾಗೂ ಇತರೆ ಬದಲಾವಣೆಯಾದಲ್ಲಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು ಪ್ರತ್ಯೇಕವಾಗಿ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರು,
ಲೋ.ಇ ವಿಭಾಗ, ಕೊಪ್ಪಳ
ವಾ.ಸಾ.ಇ/ಕೊಪ್ಪಳ/467/ದೇಶಪಾಂಡೆಪಬ್ಲಿಸಿಟಿ/2024–25

ಸಿಎಂ ಸಿದ್ದರಾಮಯ್ಯರಿಂದ ನಾಳೆ ಚಾಲನೆ | ಮಧ್ಯಾಹ್ನ 1-41ರಿಂದ 2.10ರ ಮಕರಲಗ್ನ- ನಂದಿ ಧ್ವಜಕ್ಕೆ ಪೂಜೆ | ಸಂಜೆ 4ರಿಂದ 4.30ರ ಕುಂಭ ಲಗ್ನ- ಅಂಬಾರಿ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ

ಜಂಬೂಸವಾರಿಗೆ ಅರಮನೆ ನಗರಿ ಸಜ್ಜು

ಕೆ.ಜಿ.ಲೋಕೇಶ್ ಬಾಬು, ಮೈಸೂರು

ಶರನ್ನವರಾತ್ರಿ ಕಳೆದು ಅಂತಿಮವಾಗಿ ವಿಜಯಪತಾಕೆ ಹಾರಿಸುವ ವಿಜಯದಶಮಿಯ ಐತಿಹಾಸಿಕ ಕ್ಷಣಕ್ಕೆ ಅರಮನೆ ನಗರಿ ಮೈಸೂರು ಕಾಯ್ದು ಕುಳಿತಿದೆ. ಕಳೆದ ಒಂಬತ್ತು ದಿನಗಳಿಂದ ಸಾಂಸ್ಕೃತಿಕ ನಗರಿ ಮೈಸೂರು ನವವಧುವಿನಂತೆ ಕಂಗೊಳಿಸಿದೆ. ಅಂತಿಮವಾಗಿ ವಿಜಯದಶಮಿ ಆಚರಣೆಗೆ ಕೆಲವೇ ಗಂಟೆಗಳು ಬಾಕಿ ಉಳಿದಿದ್ದು, ಜಿಲ್ಲಾಡಳಿತ ಕೊನೆಯ ಕ್ಷಣದ ತಯಾರಿ ನಡೆಸಿದೆ.

ಅ.12ರಂದು ಮಧ್ಯಾಹ್ನ 1-41ರಿಂದ 2.10ರೊಳಗಿನ ಶುಭ ಮಕರ ಲಗ್ನದಲ್ಲಿ ನಂದಿಧ್ವಜ ಪೂಜೆ ಹಾಗೂ ಸಂಜೆ 4ರಿಂದ 4.30ರೊಳಗಿನ ಶುಭ ಕುಂಭ ಲಗ್ನದಲ್ಲಿ ಚಿನ್ನದ ಅಂಬಾರಿಯೊಳಗೆ ಸರ್ವಾಲಂಕೃತಳಾಗಿ ಕುಳಿತ ಬೆಟ್ಟದ ತಾಯಿ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ನೆರವೇರಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಪರಿವಾರ ಮತ್ತು ಲಕ್ಷಕ್ಕೂ ಅಧಿಕ ಮಂದಿ ಈ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗಲಿದ್ದಾರೆ. ನಾಡಹಬ್ಬ ದಸರೆಯ ಪ್ರಮುಖ ಘಟ್ಟವಾದ ಜಂಬೂಸವಾರಿ ಈ ನಾಡಿನ ಜನರೆದುರು ಅನಾವರಣಗೊಳ್ಳಲಿದೆ.

ಮುಖ್ಯಮಂತ್ರಿ ಚಾಲನೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಪರಿವಾರ ನಂದಿಧ್ವಜಕ್ಕೆ ಪೂಜೆಮಾಡಿ ಜಂಬೂಸವಾರಿಗೆ ಚಾಲನೆ ನೀಡಲಿದ್ದಾರೆ. ತದನಂತರದ ಕೆಲವೇ ನಿಮಿಷಗಳ ಅಂತರದಲ್ಲಿ ನಿಶಾನೆ ಹೊತ್ತ ಧನಂಜಯ ಗಾಂಭೀರ್ಯದಿಂದ ಅರಮನೆ ಮುಂಭಾಗ ಆಗಮಿಸಿ ಜಂಬೂಸವಾರಿಗೆ ಅನುಮತಿ ನೀಡುವಂತೆ ಗಣ್ಯರನ್ನು ಕೋರಲಿದೆ.

ತದನಂತರ ನಾಡಿನ ಹಿರಿಮೆ ಗರಿಮೆಗಳನ್ನು ಅಭಿವ್ಯಕ್ತಗೊಳಿಸುವ, ಸಾಂಸ್ಕೃತಿಕ ವೈವಿಧ್ಯ ಪಸರಿಸುವ, ಬಹುತ್ವದ ಕನ್ನಡಿ, ಸರ್ವರನ್ನೂ ಒಳಗೊಂಡ ನಾಡಹಬ್ಬದ ಅಂತಿಮ ಘಟ್ಟ ವಿಜಯದಶಮಿ ಮೆರವಣಿಗೆಯಲ್ಲಿ ದೇಶದ ಬಹು ಸಂಸ್ಕೃತಿ, ಸಂಪ್ರದಾಯದ ಅಶ್ವಪಡೆ, ಸ್ತಬ್ಧಚಿತ್ರ, ಜಾನಪದ ಕಲಾತಂಡಗಳು, ಪೊಲೀಸ್ ತುಕಡಿ ಸಾಗಲಿವೆ.

ಜಂಬೂಸವಾರಿ ಆಕರ್ಷಣೆ: ಕೊನೆಯದಾಗಿ 750 ಕೆಜಿ ತೂಕದ ಚಿನ್ನದ ಅಂಬಾರಿ ಹೊತ್ತ ಅಭಿಮನ್ಯು ಕುಮ್ಕಿ ಆನೆಗಳಾದ ಲಕ್ಷ್ಮಿ ಮತ್ತು ವಿಜಯ ಅವರೊಂದಿಗೆ ರಾಜಮಾರ್ಗದಲ್ಲಿ ಗಂಭೀರವದನನಾಗಿ ಸಾಗಲಿದ್ದಾನೆ. ಈ ವೇಳೆ 7 ಕುಶಾಲತೋಪುಗಳ ಮೂಲಕ ಮೂರು ಸುತ್ತಿನಲ್ಲಿ 21 ಸಿಡಿಮದ್ದುಗಳನ್ನು ಸಿಡಿಸಲಾಗುವುದು. ನಂತರದ ಕ್ಷಣದಲ್ಲೇ ರಾಷ್ಟ್ರಗೀತೆ ಮೊಳಗಲಿದೆ.

ವಜ್ರಮುಷ್ಟಿ ಕಾಳಗ: ವಿಜಯದಶಮಿ ಪ್ರಯುಕ್ತ ಅರಮನೆಯ ಕರಿಕಲ್ಲು ತೊಟ್ಟಿಯಲ್ಲಿ ವಜ್ರಮುಷ್ಟಿ ಕಾಳಗ ನಡೆಯಲಿದೆ. ಅರಮನೆ ಆವರಣದಲ್ಲಿರುವ ವರಹಾಸ್ವಾಮಿ ದೇವಸ್ಥಾನದ ಬಳಿ ಜಟ್ಟಿಗಳ ಮೈಗೆ ಕೆಮ್ಮಣ್ಣು ಮೆತ್ತಿ, ಕೈಗೆ ಬಟ್ಟೆಗಳನ್ನು ಕಟ್ಟುವ ಮೂಲಕ ಅಖಾಡಕ್ಕೆ ಇಳಿಸಲಾಗುತ್ತದೆ. ಇಬ್ಬರ ನಡುವಿನ ಕಾಳಗದಲ್ಲಿ ಯಾರ ಶಿರಭಾಗದಲ್ಲಿ ರಕ್ತ ಚಿಮ್ಮಿಸುವರೋ ಅವರು ವಿಜಯಶಾಲಿಗಳಾಗಲಿದ್ದಾರೆ. ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ರಾಜವಂಶಸ್ಥ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹ ದೇವಪ್ಪ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, ಜಿಲ್ಲಾಧಿಕಾರಿ ಜಿ. ಲಕ್ಷ್ಮಿಕಾಂತರೆಡ್ಡಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಕೂಡ ಪುಷ್ಪಾರ್ಚನೆ ಮಾಡುವ ವೇದಿಕೆಯಲ್ಲಿ ಉಪಸ್ಥಿತರಿರುವರು.

ಪಂಜಿನ ಕವಾಯತು

ಅಂಬಾರಿ ಹೊತ್ತ ಅಭಿಮನ್ಯು ಅರಮನೆಯಿಂದ ಬನ್ನಿಮಂಟಪ ಮೈದಾನ ತಲುಪಿದ ನಂತರ ಡ್ರೋನ್ ಪ್ರದರ್ಶನ, ರೋಮಾಂಚನಗೊಳಿಸುವ ಅಶ್ವಾರೋಹಿ ದಳ ಪೊಲೀಸರ ಟೆಂಟ್ ಪೆಗ್ಗಿಂಗ್, 300 ಪೊಲೀಸರು, 600 ಪಂಜುಗಳನ್ನು ಹಿಡಿದು ಮನಮೋಹಕ ದೃಶ್ಯಗಳು, ಅಕ್ಷರಾಕೃತಿಗಳನ್ನು ರಚಿಸಿ ಪಂಜಿನಲ್ಲೇ ಮೋಡಿ, ಸಾಂಸ್ಕೃತಿಕ ಕಾರ್ಯಕ್ರಮ, ಕರ್ನಾಟಕದ ವೈಭವ, ಅಶ್ವಾರೋಹಿ ಪಡೆ, ಕೆಎಸ್‌ಆರ್‌ಪಿ ತುಕಡಿ, ನಗರ ಸಶಸ್ತ್ರ ಮೀಸಲು ಪಡೆ, ಜಿಲ್ಲಾ ಸಶಸ್ತ್ರ ಮೀಸಲು ಪಡೆ, ಗೃಹ ರಕ್ಷಕ ದಳ, ಎನ್‌ಸಿಸಿಯ ಭೂದಳ, ನೌಕದಳ, ವಾಯುದಳ, ಸ್ಕೌಟ್ಸ್ ಮತ್ತು ಗೈಡ್ಸ್ ಬಾಲಕಿಯರು, ಸೇವಾದಳ ಸೇರಿದಂತೆ ಹಲವು ತುಕಡಿಗಳಿಂದ ನಡೆದ ಪರೇಡ್ ನಡೆದು ಅಂತಿಮವಾಗಿ 21 ಕುಶಾಲತೋಪುಗಳನ್ನು ಸಿಡಿಸಲಾಗುವುದು.

ಅಭಿಮನ್ಯುವಿಗೆ 5ನೇ ಬಾರಿ ಅಂಬಾರಿ

ಜಂಬೂಸವಾರಿಯ ಆನೆಗಳ ಮುಂದಾಳತ್ವ ವಹಿಸಿರುವ ಅಭಿಮನ್ಯು ಸತತ 5ನೇ ಬಾರಿಗೆ ಚಿನ್ನದ ಅಂಬಾರಿ ಹೊರಲಿದ್ದಾನೆ. 2020, 2021ರಲ್ಲಿ ಕರೋನಾ ಕಾರಣಕ್ಕೆ ಜಂಬೂ ಸವಾರಿ ಅರಮನೆಗೆ ಸೀಮಿತವಾದ್ದರಿಂದ ಬನ್ನಿಮಂಟಪದವರೆಗೆ ಅಂಬಾರಿ ಹೊತ್ತಿರಲಿಲ್ಲ. 2022 ಹಾಗೂ 2023ರಲ್ಲಿ 750 ಕೆಜಿ ತೂಕದ ಅಂಬಾರಿ ಹೊತ್ತು ರಾಜಗಾಂಭೀರ್ಯದಲ್ಲಿ ಹೆಜ್ಜೆ ಹಾಕುತ್ತ ಅರಮನೆ ಆವರಣದಿಂದ ಬನ್ನಿಮಂಟಪದವರೆಗೆ ಸಾಗಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದ್ದ.

- ಅರಮನೆ ನಗರಿಯ ಎಲ್ಲೆಡೆ ಜನಸಾಗರ
- ಮೈಸೂರು ಜಿಲ್ಲಾಡಳಿತದಿಂದ ಕೊನೆಯ ಕ್ಷಣದ ಸಿದ್ಧತೆ
- ಲಕ್ಷಕ್ಕೂ ಅಧಿಕ ಮಂದಿ ಭಾಗವಹಿಸುವ ನಿರೀಕ್ಷೆ
- 5000 ಪೊಲೀಸರಿಂದ ರಕ್ಷಣಾ ಕಾರ್ಯ

ರಕ್ಷಣೆಗೆ 5 ಸಾವಿರ ಪೊಲೀಸರು

ಜಂಬೂಸವಾರಿಗೆ ಪೊಲೀಸ್ ಇಲಾಖೆ ಸರ್ವಸನ್ನದ್ಧವಾಗಿದೆ. ಅದಕ್ಕಾಗಿ 5000 ಪೊಲೀಸ್ ಸಿಬ್ಬಂದಿಯನ್ನು ಭದ್ರತಾ ಕಾರ್ಯಕ್ಕೆ ನಿಯೋಜಿಸಲಾಗಿದೆ. ಅರಮನೆ, ಜಂಬೂಸವಾರಿ ಮಾರ್ಗ, ಹಾಗೂ ಪಂಜಿನ ಕವಾಯತು ಮೈದಾನದಲ್ಲಿ 2 ಡಿಐಜಿ, 27 ಎಸ್‌ಪಿ, 989 ಇತರೆ ಅಧಿಕಾರಿಗಳು, 3981 ಸಿಬ್ಬಂದಿ ಸೇರಿ 4999 ಸಿಬ್ಬಂದಿ ಹಾಗೂ 1500 ಹೋಂ ಗಾರ್ಡ್‌ಗಳನ್ನು ಭದ್ರತೆಗೆ ನಿಯೋಜಿಸಲಾಗಿದೆ. ಆ ಪೈಕಿ 10 ಸಿಎಆರ್, 33 ಕೆಎಸ್‌ಆರ್‌ಪಿ, 29 ಎಎಸ್‌ಸಿ, 3 ಬಿಡಿಡಿಎಸ್, 1 ಗರುಡಾಪಡೆ, 1 ಐಎಸ್‌ಡಿ, ಸಿಐಇಡಿ ತುಕಡಿ ರಕ್ಷಣಾ ಕಾರ್ಯ ನಿರ್ವಹಿಸಲಿದೆ.

ಲಕ್ಷಾಂತರ ಜನರು ಭಾಗಿ

ಈ ಬಾರಿ ಅದ್ದೂರಿ ದಸರಾ ಮಹೋತ್ಸವ ಎಂಬ ಘೋಷಣೆಯಾಗಿದ್ದರಿಂದ ಜಂಬೂಸವಾರಿಗೆ ಲಕ್ಷಕ್ಕೂ ಅಧಿಕ ಮಂದಿ ಸೇರುವ ನಿರೀಕ್ಷೆ ಇದೆ. ಅದಕ್ಕಾಗಿ ಅರಮನೆ ಆವರಣ ಸೇರಿದಂತೆ ಮೆರವಣಿಗೆ ಸಾಗಿದ ನಾಲ್ಕೂವರೆ ಕಿ.ಮೀ. ರಾಜಮಾರ್ಗದ ಇಕ್ಕೆಲಗಳಲ್ಲಿ ಮೂಲಸೌಕರ್ಯ ಕಲ್ಪಿಸಲಾಗಿದೆ.

ಯದುವೀರರ ವಿಜಯಯಾತ್ರೆ

ಅರಮನೆಯಲ್ಲಿ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ವಿಜಯಯಾತ್ರೆ ನಡೆಸಿ ಬನ್ನಿಪೂಜೆ ನೆರವೇರಿಸಿದ ಬಳಿಕ ಕಂಕಣ ವಿಸರ್ಜನೆ ಮಾಡುವ ಮೂಲಕ ಮೈಸೂರು ರಾಜಮನೆತನದ ವಿಜಯದಶಮಿ ಆಚರಣೆಗೆ ತೆರೆ ಎಳೆಯುವರು.

ಸಮಾಚಾರ ಸಣ್ಣದಲ್ಲ

ಸಾಲದ ಸುಳಿ: ದಂಪತಿ ನೇಣಿಗೆ ಶರಣು

ರಾಮನಗರ: ದಂಪತಿಗಳಿಬ್ಬರು ದನದ ಕೊಟ್ಟಿಗೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾದ ಘಟನೆ



ಚನ್ನಪಟ್ಟಣ ತಾಲೂಕಿನ ಕರ್ಲಹಳ್ಳಿ ಗ್ರಾಮದಲ್ಲಿ ಗುರುವಾರ ನಡೆದಿದೆ. ರಾಜು (34) ಹಾಗೂ ಲಕ್ಷ್ಮೀ (30) ಮೃತ ದಂಪತಿ. ಈ ದಂಪತಿಗೆ ಮೂರು ವರ್ಷದ ಹೆಣ್ಣುಮಗುವಿದೆ. ಸಾಲದ ಸುಳಿಯಲ್ಲಿ ಸಿಲುಕಿ ಆತ್ಮಹತ್ಯೆ ಮಾಡಿಕೊಂಡ ಶಂಕೆ ವ್ಯಕ್ತವಾಗಿದೆ. ಮನೆಯ ದನದ ಕೊಟ್ಟಿಗೆಯಲ್ಲಿ ಗುರುವಾರ ಬೆಳಗ್ಗೆ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸ್ಥಳಕ್ಕೆ ಅಕ್ಕೂರು ಪೊಲೀಸರು ಭೇಟಿ ನೀಡಿದ್ದರು.

ಮಗು ಮಾರಾಟ: 6 ಮಂದಿ ಬಂಧನ

ದಾವಣಗೆರೆ: ನಕಲಿ ದಾಖಲೆ ಸೃಷ್ಟಿಸಿ ನವಜಾತ ಶಿಶುವನ್ನು 4 ಲಕ್ಷ ರು.ಗಳಿಗೆ ಮಾರಾಟ ಮಾಡಿದ ಜಾಲ ಭೇದಿಸಿದ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಮಹಿಳಾ ಠಾಣೆಯ ಪೊಲೀಸರು, ವೈದ್ಯೆ ಸೇರಿ 6



ಆರೋಪಿಗಳನ್ನು ಬಂಧಿಸಿದ್ದಾರೆ. ದಾವಣಗೆರೆಯ ಎಂ.ಕೆ.ಮೆಮೊರಿಯಲ್ ಆಸ್ಪತ್ರೆಯ ವೈದ್ಯೆ ಭಾರತಿ, ಶಿಶುವಿನ ತಾಯಿ ಕಾವ್ಯಾ, ಶಿಶು ಖರೀದಿಸಿದ್ದ ಜಯಾ ಹಾಗೂ ಪ್ರಶಾಂತ್ ಕುಮಾರ್ ದಂಪತಿ, ಮಧ್ಯವರ್ತಿಗಳಾದ ವಾದಿರಾಜ್, ಮಂಜಮ್ಮ ಬಂಧಿತರು. ಆರೋಪಿಗಳು ತಪ್ಪೊಪ್ಪಿಕೊಂಡಿದ್ದು, ಪೊಲೀಸರು ಎಲ್ಲರನ್ನೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಮಾರಾಟವಾಗಿದ್ದ ಎರಡೂವರೆ ತಿಂಗಳ ಗಂಡು ಶಿಶುವಿಗೆ ಮಕ್ಕಳ ಆರೈಕೆ ಕೇಂದ್ರದಲ್ಲಿ ಆಶ್ರಯ ಕಲ್ಪಿಸಲಾಗಿದೆ. ಮಕ್ಕಳ ಸಹಾಯವಾಣಿಗೆ ಕರೆ ಮಾಡಿದ ವ್ಯಕ್ತಿಯೊಬ್ಬರು ಕಾವ್ಯಾ ಎಂಬುವರಿಗೆ ಸೇರಿದ ಮಗುವನ್ನು ಮಧ್ಯವರ್ತಿಗಳ ಮೂಲಕ ಎಂಕೆ ಸ್ಮಾರಕ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ ಭಾರತಿ ಅವರು ಜಯ ಮತ್ತು ಪ್ರಶಾಂತ್ ಕುಮಾರ್ ಕುರುಡೇಕರ್‌ಗೆ ಮಾರಾಟ ಮಾಡಿದ್ದಾರೆಂಬ ಮಾಹಿತಿ ನೀಡಿದ್ದರು.

{ ಎಚ್.ಸಿ.ಮಹದೇವಪ್ಪ } ಸಚಿವ

ಈಗ ಸಿದ್ದರಾಮಯ್ಯ ಸಿಎಂ ಆಗಿದ್ದಾರೆ. ಬದಲಾವಣೆ ಪ್ರಶ್ನೆ ಯಾಕೆ? ಊಹಾಪೋಹಗಳಿಗೆ ಅವಕಾಶ ನೀಡಬೇಡಿ. ಎಲ್ಲರೂ ಒಟ್ಟಾಗಿ ಅವರ ನಾಯಕತ್ವದಲ್ಲಿ ಮುಂದುವರಿಯುತ್ತಿದ್ದೇವೆ. ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಹೇಳಲು ಬಿಜೆಪಿಯವರಿಗೆ ಅಧಿಕಾರ ಇಲ್ಲ. ಎಲ್ಲವನ್ನೂ ಕಾಂಗ್ರೆಸ್ ಹೈಕಮಾಂಡ್ ತೀರ್ಮಾನಿಸುತ್ತದೆ.

ರಾಜ್ಯ ಸಚಿವ ಸಂಪುಟ ತೀರ್ಮಾನ | 113 ಕಬ್ಬಿಣ ಗಣಿ ರಫ್ತು ಪ್ರಕರಣ ವಿಚಾರಣೆಗೆ ಬಾಕಿ: ಎಚ್.ಕೆ.ಪಾಟೀಲ್

ಗಣಿಗಾರಿಕೆ ತನಿಖಾ ತಂಡದ ಅವಧಿ ವಿಸ್ತರಣೆ

ಬೆಂಗಳೂರು: ಗಣಿಗಾರಿಕೆಯ ತನಿಖೆಗಾಗಿ ಸೃಜಿಸಲಾದ ಲೋಕಾಯುಕ್ತದ ವಿಶೇಷ ತನಿಖಾ ತಂಡದ ಕಾರ್ಯಾವಧಿ ಒಂದು ವರ್ಷದ ಅವಧಿಗೆ ವಿಸ್ತರಿಸಲು ರಾಜ್ಯ ಸಚಿವ ಸಂಪುಟ ತೀರ್ಮಾನಿಸಿದೆ.

ಸಚಿವ ಸಂಪುಟದ ನಿರ್ಣಯವನ್ನು ಕಾನೂನು ಸಚಿವ ಎಚ್.ಕೆ.ಪಾಟೀಲ್ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು. 113 ಕಬ್ಬಿಣ ಗಣಿ ರಫ್ತು ಪ್ರಕರಣ ವಿಚಾರಣೆಗೆ ಬಾಕಿ ಇದೆ. ಅಲ್ಲದೆ 2 ಪ್ರಕರಣಗಳಿಗೆ ಹೈಕೋರ್ಟ್ ತಡೆಯಾಜ್ಞೆ, 8 ಪ್ರಕರಣ ಸಿಆರ್‌ಪಿಸಿ 173(8) ತನಿಖೆ ಬಾಕಿ ಇದ್ದು, ಅದಿರು ಮೌಲ್ಯಮಾಪನ ಸಮಿತಿಯ ವರದಿ ನಿರೀಕ್ಷಿಸಲಾಗಿದೆ. ಇದಲ್ಲದೆ 6 ಪ್ರಕರಣ ತನಿಖಾ ಹಂತದಲ್ಲಿರುವುದರಿಂದ ವಿಶೇಷ ತನಿಖಾ ತಂಡದ ಕಾರ್ಯಾವಧಿ ವಿಸ್ತರಿಸುವುದು ಸೂಕ್ತವೆಂದು ಭಾವಿಸಿ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದರು.

ಇದಲ್ಲದೆ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ 60 ಕ್ರಿಮಿನಲ್ ಮೊಕದ್ದಮೆ ಅಭಿಯೋಜನೆಯಿಂದ ಹಿಂಪಡೆಯಲು ಸಂಪುಟ ನಿರ್ಧರಿಸಿದೆ. ರಾಜ್ಯ ಕಾನೂನು ಆಯೋಗದ ಅವಧಿ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಕಾನೂನು ಆಯೋಗದ ಹೊಸ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಕ ಮಾಡಲು ಮುಖ್ಯಮಂತ್ರಿಯವರಿಗೆ ಅಧಿಕಾರ ನೀಡಲಾಗಿದೆ ಎಂದರು.

ಇತರೆ ಪ್ರಮುಖ ತೀರ್ಮಾನಗಳು

ಮೆ|| ಮೃಣಾಲ್ ಶುಗರ್ಸ್ ಲಿ., ಪುಡಕಲಕಟ್ಟಿ, ಧಾರವಾಡ ತಾಲೂಕು, ಧಾರವಾಡ ಜಿಲ್ಲೆ ಈ ಸಕ್ಕರೆ ಕಾರ್ಖಾನೆಯಿಂದ 7.50 ಕಿ.ಮೀ ತ್ರಿಜ್ಯಾಕಾರದಲ್ಲಿರುವ ಗ್ರಾಮಗಳನ್ನು ಶ್ರೀ ಸೋಮೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೈಲಹೊಂಗಲ ತಾಲೂಕು, ಬೆಳಗಾವಿ ಜಿಲ್ಲೆ ಇವರಿಂದ ಹಿಂಪಡೆಯುವುದು ಮತ್ತು ಮರುಹಂಚಿಕೆ ಮಾಡಿ ಧಾರವಾಡ ಜಿಲ್ಲೆಯ 19 ಗ್ರಾಮ ಕಬ್ಬು ಖರೀದಿಗಾಗಿ ಮರು ಹಂಚಿಕೆ ಮಾಡಲು ಸಂಪುಟ ತೀರ್ಮಾನಿಸಿದೆ. ಅಲ್ಲದೆ 19 ಗ್ರಾಮಗಳನ್ನು ಶ್ರೀ ಸೋಮೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆಯಿಂದ ಹಿಂಪಡೆದು ಮೆ|| ಮೃಣಾಲ್ ಶುಗರ್ಸ್‌ಗೆ ಮೀಸಲು ಕ್ಷೇತ್ರಕ್ಕೆ ಹಂಚಿಕೆ ಮಾಡಲಾಗಿದೆ.

ಪುಡಕಲಕಟ್ಟೆ, ಉಪ್ಪಿನ ಬೆಟಗೇರಿ, ಹನುಮನಾಳ, ಕಲ್ಲೆ, ಕಬ್ಬೇನೂರ, ಕರಡಿಗುಡ್ಡ, ತಿಮ್ಮಾಪೂರ, ಮರೇವಾಡ, ಅಮ್ಮಿನಭಾವಿ, ಹಾರೋಬೆಳವಡಿ, ಕಲ್ಲೂರ, ಲೋಕೂರ, ಶಿಬಾರಗಟ್ಟಿ, ಯಾದವಾಡ, ಮುಳಮುತ್ತಲ, ಮಂಗಳಗಟ್ಟಿ, ಲಕಮಾಪೂರ, ದಾಸನಕೊಪ್ಪ ಮತ್ತು ಕುರುಬಗಟ್ಟೆ ಒಟ್ಟು 11 ಗ್ರಾಮ ಈ ಸಕ್ಕರೆ ಕಾರ್ಖಾನೆಗೆ ಸೇರ್ಪಡೆ ಮಾಡಲಾಗಿದೆ ಎಂದರು.

ರೇಷ್ಮೆ ಭವನ ನಿರ್ಮಾಣಕ್ಕೆ ಅನುಮೋದನೆ

ಬೆಂಗಳೂರಿನ ಓಕಳಿಪುರಂನಲ್ಲಿ ರೇಷ್ಮೆ ಇಲಾಖೆಗೆ ಸೇರಿದ 4.25 ಎಕರೆ ಜಮೀನಿನಲ್ಲಿ ಕರ್ನಾಟಕ ರಾಜ್ಯ ಖನಿಜ ನಿಗಮ ನಿಯಮಿತ ಇವರಿಂದ ಸಂಪೂರ್ಣ ಬಂಡವಾಳ ಹೂಡಿಕೆಯೊಂದಿಗೆ 527.50 ಕೋಟಿಗಳ ಅಂದಾಜು ಮೊತ್ತದಲ್ಲಿ ರೇಷ್ಮೆ ಭವನ ನಿರ್ಮಾಣ ಮಾಡಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ರಾಷ್ಟ್ರೀಯ ರೇಷ್ಮೆ ಕೃಷಿ ನೀತಿಯಡಿ ಕೇಂದ್ರ ರೇಷ್ಮೆ ಮಂಡಳಿ ಮತ್ತು ರಾಜ್ಯ ರೇಷ್ಮೆ ಇಲಾಖೆಯ ಪರಸ್ಪರ ಒಪ್ಪಂದದೊಂದಿಗೆ ಸಂಪೂರ್ಣ ನಿರ್ಮಾಣ ವೆಚ್ಚ ಕೇಂದ್ರ ರೇಷ್ಮೆ ಮಂಡಳಿಯು ಭರಿಸಿದ್ದು, ಈ ಕಟ್ಟಡದಲ್ಲಿ ಎರಡೂ ಕಾರ್ಯಾಲಯ ಇರುತ್ತವೆ. ಹಾಲಿ ಇರುವ ಕಟ್ಟಡ ಕೆಡವಿ ನೂತನ ರೇಷ್ಮೆ ಭವನ ಕರ್ನಾಟಕ ರಾಜ್ಯ ಖನಿಜ ನಿಗಮ ನಿಯಮಿತ ವತಿಯಿಂದ ಸಂಪೂರ್ಣ ವೆಚ್ಚ ಭರಿಸಿ ನಿರ್ಮಾಣ ಮಾಡಲು ತೀರ್ಮಾನಿಸಲಾಗಿದೆ. 76465.26 ಚ.ಮೀ ವಿಸ್ತೀರ್ಣದ ಕಟ್ಟಡ ನಿರ್ಮಾಣ ಮಾಡಲಾಗುವುದು.

ಪೆರಿಫೆರಲ್ ರಿಂಗ್ ರಸ್ತೆ ಪರಿಷ್ಕೃತ ಆದೇಶಕ್ಕೆ ಒಪ್ಪಿಗೆ

ಬಿಡಿಎ ಸಲ್ಲಿಸಿದ್ದ ಪ್ರಸ್ತಾವನೆಯಂತೆ ಸರಕಾರಿ ಆದೇಶದ ಭಾಗ ಕ್ರಮ ಸಂಖ್ಯೆ (3)ರ ಅಂಶ ರದ್ದುಪಡಿಸಿ ತಿದ್ದುಪಡಿ ಆದೇಶ ಹೊರಡಿಸಿರುವ ಕ್ರಮಕ್ಕೆ ಸಚಿವ ಸಂಪುಟದ ಘಟನೋತ್ತರ ಅನುಮೋದನೆ ನೀಡಲಾಗಿದೆ. ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಪೆರಿಫೆರಲ್ ರಿಂಗ್ ರಸ್ತೆ)ನ ಯೋಜನೆಯಲ್ಲಿ ಒಳಗೊಂಡಿರುವ ಗ್ರಾಮಗಳ ಜಮೀನಿನ ಮಾರ್ಗಸೂಚಿ ದರ ವಿಭಿನ್ನವಾಗಿರುವುದರಿಂದ ಭೂ ಸ್ವಾಧೀನ ಪಡಿಸಿಕೊಳ್ಳುವ ಜಮೀನಿನ ಭೂಮಾಲೀಕರಿಗೆ ಆಯಾ ಗ್ರಾಮವಾರು ಮಾರ್ಗಸೂಚಿ ದರ ಗಮನದಲ್ಲಿರಿಸಿಕೊಂಡು ಸಂಧಾನ ಸೂತ್ರ (ಸಂಧಾನಿತ ಮೊತ್ತ)ದ ಮೂಲಕ ಭೂಸ್ವಾಧೀನ ಕಾಯ್ದೆ 1894 ರಡಿ ನಿಗಧಿಪಡಿಸಬಹುದಾದ ಭೂಪರಿಹಾರ ಮೊತ್ತಕ್ಕಿಂತ ಹೆಚ್ಚಿನ ಪರಿಹಾರ ಮೊತ್ತ ನಿಗಧಿಪಡಿಸಲು ಅಥವಾ ಭೂಮಾಲೀಕರು ಒಪ್ಪಿದಲ್ಲಿ ಟಿಡಿಆರ್ ನೀಡಲು ಆದೇಶ ಹೊರಡಿಸಲಾಗಿತ್ತು.

- ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ 60 ಕ್ರಿಮಿನಲ್ ಮೊಕದ್ದಮೆ ಅಭಿಯೋಜನೆಯಿಂದ ಹಿಂಪಡೆಯಲು ಸಂಪುಟ ನಿರ್ಧಾರ.

ಹೈಟೆಕ್ ರೇಷ್ಮೆಗೂಡಿನ ಮಾರುಕಟ್ಟೆ ನಿರ್ಮಾಣ

ಚಿಕ್ಕಬಳ್ಳಾಪುರ ಜಿಲ್ಲೆ ಶಿಡ್ಲಘಟ್ಟದಲ್ಲಿ ಹೈಟೆಕ್ ರೇಷ್ಮೆಗೂಡಿನ ಮಾರುಕಟ್ಟೆ 200 ಕೋಟಿ ರು. ವೆಚ್ಚದಲ್ಲಿ ನಿರ್ಮಾಣ ಮಾಡಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಮಾರುಕಟ್ಟೆ ವಿಸ್ತೀರ್ಣ ಐದು ಎಕರೆಯಲ್ಲಿದ್ದು, ಹೈಟೆಕ್ ಮಾರುಕಟ್ಟೆ ಮಾಡಲು ಅಸಾಧ್ಯ. ಪ್ರತಿನಿತ್ಯ 1500 ರಿಂದ 2000 ಜನ ವಹಿವಾಟಿನಲ್ಲಿ ಭಾಗವಹಿಸುತ್ತಿ ರುವುದರಿಂದ ಹೆಚ್ಚಿನ ಜನಸಂದಣಿಯಿಂದಾಗಿ ಸುಗಮ ವಹಿವಾಟಿಗೆ ಧಕ್ಕೆಯಾಗಿದೆ. ಮಾರುಕಟ್ಟೆಗೆ ಪ್ರತಿದಿನ ಪ್ರಸ್ತುತ ಬರುತ್ತಿರುವ 30 ರಿಂದ 35 ಟನ್ ರೇಷ್ಮೆ ಗೂಡಿನ ವಹಿವಾಟು 80 ರಿಂದ 100 ಟನ್ ಹೆಚ್ಚಿಸಲು ಯೋಜಿಸಲಾಗಿದೆ. ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ ಹೆಸರಿನಲ್ಲಿ ಹೊಸ ಕಂಪನಿ ಸ್ಥಾಪಿಸಲು ನಿರ್ಣಯಿಸಲಾಗಿದ್ದು ಇದಕ್ಕೆ ಒಪ್ಪಿಗೆ ನೀಡಲಾಗಿದೆ ಎಂದರು.

ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರಿಗೆ ಸಮವಸ್ತ್ರ

ಪ್ರತಿ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಪ್ರತಿ ವರ್ಷ 2 ಸೀರೆ ವಿತರಿಸಲಾಗುತ್ತದೆ. ಕರ್ನಾಟಕ ಕೈಮಗ್ಗ ನಿಗಮ ನಿಯಮಿತದಿಂದಲೇ ಖರೀದಿಸಬೇಕೆಂಬ ಷರತ್ತು ವಿಧಿಸಿ ಈ ಹಿಂದೆ ಸಚಿವ ಸಂಪುಟ ಅನುಮೋದನೆ ನೀಡಿತ್ತು. ಕೇಂದ್ರ ಸರಕಾರದ ಅನುದಾನ ಇರುವುದರಿಂದ ಇ-ಟೆಂಡರ್ ಅಥವಾ ಜೆಮ್ ಪೋರ್ಟಲ್ ಮುಖಾಂತರ ಖರೀದಿಸುವುದು ಸೂಕ್ತವಾಗಿದೆ ಎಂದು ಪರಿಗಣಿಸಿ ಟೆಂಡರ್ ಮುಖಾಂತರ ಖರೀದಿಸಲು ಸಚಿವ ಸಂಪುಟ ನಿರ್ಣಯಿಸಿದೆ.



ಸಣ್ಣ ಕೈಗಾರಿಕೆಗಳ ತರಬೇತಿ ಮತ್ತು ಸಾಮಾನ್ಯ ಸೌಲಭ್ಯ ಕೇಂದ್ರ ರಾಷ್ಟ್ರೀಯ ಸಣ್ಣ ಕೈಗಾರಿಕಾ ನಿಗಮ ಸಂಸ್ಥೆಗೆ ಹಂಚಿಕೆ ಮಾಡಲು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ಪೀಣ್ಯ 1ನೇ ಹಂತದಲ್ಲಿರುವ ಕೈಗಾರಿಕಾ ವಸಾಹತು ನಿವೇಶನ/ಮಳಿಗೆ ಸಂಖ್ಯೆ ಎ-180 ನ್ನು 30 ವರ್ಷಗಳ ಕರಾರು ಅವಧಿಗೆ ವಾರ್ಷಿಕ 1 ರು. ಶುಲ್ಕದ ಆಧಾರದ ಮೇಲೆ ನೀಡಲು ತೀರ್ಮಾನಿಸಿದೆ.

-ಎಚ್.ಕೆ. ಪಾಟೀಲ್, ಕಾನೂನು ಮತ್ತು ಸಂಸದೀಯ ವ್ಯವಹಾರ ಇಲಾಖೆ

ಈರುಳ್ಳಿ ದೋಸೆ, ರತನ್ ಟಾಟಾ ಹಾಗೂ ನೆನಪು

ಸ್ಮರಣೆ

ತೇಜಸ್ವಿನಿ ಅನಂತಕುಮಾರ್
ಮುಖ್ಯಸ್ಥರು, ಅದಮ್ಯ ಚೇತನ ಫೌಂಡೇಶನ್

ದೇಶ ಕಂಡ ಶ್ರೇಷ್ಠ ಕೈಗಾರಿ ಕೋದ್ಯಮಿಗಳಲ್ಲಿ ಅಗ್ರಸಾಲಿನಲ್ಲಿ ರತನ್ ಟಾಟಾ ಅವರು ನಿಲ್ಲುತ್ತಾರೆ. ಅದ್ಭುತ ನಾಯಕನಷ್ಟೇ ಅಲ್ಲದೇ ಶ್ರೇಷ್ಠ ವ್ಯಕ್ತಿಯಾಗಿದ್ದ ಟಾಟಾ ಅವರೊಂದಿಗೆ ದಿ. ಅನಂತಕುಮಾರ ಅವರ ಒಡನಾಟ ವಿತ್ತು. ಅನಂತಕುಮಾರ ಅವರು ಕೇಂದ್ರ ವಿಮಾನಯಾನ ಸಚಿವರಾಗಿದ್ದಾಗ ದೆಹಲಿಯ ನಮ್ಮ ಮನೆಗೆ ಆಗ್ಗಾಗ್ಗೆ ಟಾಟಾ ಅವರು ಬರುತ್ತಿದ್ದರು.

1998ರಿಂದ 2000ದ ಅವಧಿಯಲ್ಲಿ ಹಲವು ಬಾರಿ ಪೃಥ್ವಿರಾಜ್ ಮಾರ್ಗ್‌ನಲ್ಲಿದ್ದ ಅಧಿಕೃತ ನಿವಾಸಕ್ಕೆ ಆಗಮಿಸುತ್ತಿದ್ದ ರತನ್ ಟಾಟಾ ಅವರು ದೇಶದ ಪ್ರವಾಸೋದ್ಯಮ, ವಿಮಾನಯಾನ ಸೇವೆ, ಒಪೆನ್ ಸ್ಕೈ ಪಾಲಿಸಿ, ಏರ್ ಇಂಡಿಯಾ ಸೇರಿದಂತೆ ಹಲವು ವಿಷಯದ ಬಗ್ಗೆ ಚರ್ಚೆ ನಡೆಸುತ್ತಿದ್ದರು. ಆದರೆ ಈ ಗಂಭೀರ ಚರ್ಚೆಗಳ ನಡುವೆಯೂ ಅವರಿಗೆ ನಮ್ಮ ಮನೆಯ ಅಡುಗೆ ಭಟ್ಟರು ಮಾಡುತ್ತಿದ್ದ ಈರುಳ್ಳಿ ದೋಸೆ ಎಂದರೆ ಬಹು ಇಷ್ಟವಾಗಿತ್ತು.

ಸಾಮಾನ್ಯವಾಗಿ ಸಂಜೆ ವೇಳೆಗೆ ನಮ್ಮ ಮನೆಗೆ ಆಗಮಿಸುತ್ತಿದ್ದ ಅವರಿಗೆ ನಮ್ಮ ಮನೆಯ ಅಡುಗೆ ಭಟ್ಟರಾದ ಕಾಳಿದಾಸ ಅವರು ಈರುಳ್ಳಿ ದೋಸೆಯನ್ನು ಮಾಡಿಕೊಡುತ್ತಿದ್ದರು. ಅವರಿಗೆ ಫೋರ್ಕ್‌ನಲ್ಲಿ ತಿನ್ನಲು ಸರಿಯಾಗುವಂತೆ ಸಣ್ಣ ಸಣ್ಣ ದೋಸೆಗಳನ್ನು ಮಾಡಿಕೊಡುತ್ತಿದ್ದರಿಂದ, ಅಧಿಕೃತ ಚರ್ಚೆಗಳೊಂದಿಗೆ ಈರುಳ್ಳಿ ದೋಸೆಗಳನ್ನು ಸೇವಿಸುತ್ತಿದ್ದರು. ಈರುಳ್ಳಿ ದೋಸೆಯ ಪರಿಮಳವೇ

ಟಾಟಾ ಅವರು ನಮ್ಮ ಮನೆಗೆ ಬಂದಿರುವುದನ್ನು ತೋರಿಸುತ್ತಿತ್ತು. ರಾಜನಾಥ್ ಸಿಂಗ್ ಅವರು ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ ತಾಜ್ ಮಹಲ್ ಅನ್ನು ಅಭಿವೃದ್ಧಿಪಡಿಸುವ ಒಡಂಬಡಿಕೆಗೆ ಸಹಿ ಹಾಕಿದ್ದರು. ಈ ಮಹತ್ವದ ಕಾರ್ಯವನ್ನು ಟಾಟಾ ಸಂಸ್ಥೆಯಿಂದ ಮಾಡಿಸಲು ಮುಂದಾಗುವ ಮೂಲಕ ಭಾರತದ ಪರಂಪರೆಯ ಬಗ್ಗೆ ಅವರಿಗೆ ಇದ್ದ ಕಾಳಜಿಯನ್ನು ತೋರಿಸುತ್ತದೆ.

ರತನ್ ಟಾಟಾ ಅವರೊಂದಿಗಿನ ಮರೆಯಲಾಗದ ಮತ್ತೊಂದು ನೆನಪು ಎಂದರೆ 'ಆಟ-ಪಾಠ' ಯೋಜನೆಯ ಸಮಯದಲ್ಲಿ. ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ನಮಗೆ ಕೆಲ ಮಿನಿ ಬಸ್‌ಗಳ ಅಗತ್ಯವಿತ್ತು. ಟಾಟಾ ಸಮೂಹದಿಂದ ನಮಗೆ ಮಿನಿ ಬಸ್ ಅನ್ನು ದೇಣಿಗೆಯಾಗಿ ನೀಡಿದ್ದರು. ಈ ದೇಣಿಗೆಯ ಹಿಂದೆ ರತನ್ ಟಾಟಾ ಅವರಿದ್ದರು. ಈ ಮೂಲಕ ಅವರ ಸಾಮಾಜಿಕ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಬಗೆ ತೋರಿಸುತ್ತಿತ್ತು.

ಇಂತಹ ಶ್ರೇಷ್ಠ ವ್ಯಕ್ತಿಯನ್ನು ಇಂದು ದೇಶ ಕಳೆದುಕೊಂಡಿದೆ. ಕೈಗಾರಿಕಾ ಕ್ಷೇತ್ರದಲ್ಲಿ ಮರೆಯಲಾಗದ ಸಾಧನೆಯನ್ನು ಮಾಡಿರುವ ರತನ್ ಟಾಟಾ ಅವರು ಭಾರತ ಹಾಗೂ ವಿಶ್ವಕ್ಕೆ ನೀಡಿರುವ ಕೊಡುಗೆಗಳನ್ನು ಬಿಟ್ಟು ಹೋಗಿದ್ದಾರೆ. ಸಮಾಜದ ಅಭಿವೃದ್ಧಿ ವಿಷಯದಲ್ಲಿ ಅವರಿಗಿದ್ದ ಬದ್ಧತೆ ಮುಂದಿನ ಯುವ ಪೀಳಿಗೆಗೆ ದಾರಿದೀಪವಾಗಲಿದೆ. ರತನ್ ಟಾಟಾ ಅವರ ಅಗಲಿಕೆಯ ನೋವನ್ನು ಟಾಟಾ ಕುಟುಂಬ, ಸಂಸ್ಥೆ ಹಾಗೂ ರತನ್ ಟಾಟಾ ಅವರ ಒಡನಾಡಿಗಳಿಗೆ ಭರಿಸುವ ಶಕ್ತಿ ನೀಡಲೆಂದು ದೇವರನ್ನು ಪ್ರಾರ್ಥಿಸುವೆ.

ವಿಶ್ವವಾಣಿ

ಸಂಪಾದಕೀಯ

ರತನ್ ಟಾಟಾ ದೇಶದ ವರಪುತ್ರ

ಟಾಟಾ ಸಮೂಹದ ಮಾಜಿ ಅಧ್ಯಕ್ಷ ರತನ್ ಟಾಟಾ ಅವರ ನಿಧನಕ್ಕೆ ಇಡೀ ದೇಶ ಮರುಗಿದೆ. ಉದ್ಯಮ ರಂಗದ ಗಣ್ಯರಿಂದ ಹಿಡಿದು ಜನಸಾಮಾನ್ಯರವರೆಗೆ ಎಲ್ಲರೂ ರತನ್ ಟಾಟಾ ಅವರ ಗುಣಗಾನ ಮಾಡುತ್ತಿದ್ದಾರೆ. ಟಾಟಾ ಸಮೂಹದ ಉತ್ಪನ್ನಗಳನ್ನು ಬಳಸುತ್ತಿರುವ ಪ್ರತಿಯೊಬ್ಬರೂ ತಮ್ಮ ಹತ್ತಿರದ ಬಂಧುವೊಬ್ಬರನ್ನು ಕಳೆದುಕೊಂಡಂತೆ ದು:ಖಿಸುತ್ತಿದ್ದಾರೆ. ರತನ್ ಟಾಟಾ ಅವರು ಕೇವಲ ಉದ್ಯಮಿಯಾಗಿದ್ದರೆ ದೇಶವಾಸಿಗಳೆಲ್ಲರೂ ಅವರನ್ನು ಹಚ್ಚಿಕೊಳ್ಳುವ ಪ್ರಮೇಯ ಇರುತ್ತಿರಲಿಲ್ಲ. ರತನ್ ಟಾಟಾ ಅವರು ಉದ್ಯಮಿಯಾಗಿಯೂ ಸಂತನಂತೆ ಬಾಳಿದವರು. ವಿಶ್ವದ ಶ್ರೀಮಂತ ಉದ್ಯಮಿಗಳಲ್ಲಿ ಒಬ್ಬರಾದರೂ ಸದಾ ಸೂಟು ಬೂಟುಗಳಲ್ಲಿ ಕಾಣಿಸಿಕೊಳ್ಳದೆ ಅರ್ಧ ತೋಳಿನ ಶರ್ಟಿನಲ್ಲಿ ಜನ ಸಾಮಾನ್ಯರಂತೆ ಕಾಣಿಸಿಕೊಂಡವರು. ಮುತ್ತಜ್ಜ ಜಮಶೆಡ್‌ಜಿ ಟಾಟಾ ಅವರಂತೆ ದೇಶದ ಬಗ್ಗೆ ಚಿಂತಿಸುತ್ತಲೇ ತಮ್ಮ ಉದ್ಯಮವನ್ನು ವಿಸ್ತರಿಸಿದವರು. 10 ಸಾವಿರ ಕೋಟಿ ರು. ಮೌಲ್ಯದ ಉದ್ಯಮ ಸಮೂಹವನ್ನು ಲಕ್ಷ ಕೋಟಿ ರು.ಗಳಿಗೆ ವಿಸ್ತರಿಸಿದ ಬಳಿಕವೂ ಬೀಗದೆ ಸದಾ ಬಾಗಿ ನಡೆದವರು. ತಮ್ಮ ಸಿರಿವಂತಿಕೆಯ ಪ್ರದರ್ಶನಕ್ಕಾಗಿ ಗಗನಚುಂಬಿ ಬಂಗಲೆಗಳನ್ನು ಕಟ್ಟಿಕೊಳ್ಳದೆ, ದೇಶದ ಪ್ರಜೆಗಳಿಗಾಗಿ ತಾರಾ ಹೊಟೇಲ್‌ಗಳನ್ನು ಕಟ್ಟಿದವರು. ಜಾಗ್ವಾರ್, ಲ್ಯಾಂಡ್ ರೋವರ್‌ನಂತಹ ವಿಶ್ವದ ದುಬಾರಿ ಕಂಪನಿಗಳನ್ನು ತನ್ನ ತೆಕ್ಕೆಗೆ ಪಡೆದ ಬಳಿಕವೂ ಟಾಟಾ ಕಂಪನಿಯ ಮಧ್ಯಮ ಶ್ರೇಣಿಯ ಕಾರುಗಳನ್ನು ಬಳಸಿದವರು. ಸರಕಾರದ ಮಾಡದ ಅದೆಷ್ಟೋ ಕೆಲಸಗಳನ್ನು ತಾನು ಮಾಡುವ ಮೂಲಕ ಅಭ್ಯುದಯದ ದಾರಿ ತೋರಿಸಿದವರು. ತಮ್ಮ ಕಂಪನಿಗಳಿಗೆ ಲೈಸೆನ್ಸ್, ಗುತ್ತಿಗೆ ಪಡೆಯಲು ಎಂದೂ ಅಡ್ಡದಾರಿ ಹಿಡಿದವರಲ್ಲ. ಅನಗತ್ಯ ಹೇಳಿಕೆಗಳನ್ನು ನೀಡಿ ವಿವಾದಕ್ಕೆ ಗುರಿಯಾದವರಲ್ಲ. ಸರಕಾರದ ಮುಂದೆ ಕೈಯೊಡ್ಡಿ ನಿಂತವರಲ್ಲ. ಉದ್ಯಮ ರಂಗದಲ್ಲಿ ಏನೇ ಸಾಹಸ ಮಾಡಿದರೂ ಈ ದೇಶದ ಕೆಳ ಮಧ್ಯಮ ಮತ್ತು ಮಧ್ಯಮ ವರ್ಗದ ಬಗ್ಗೆ ಚಿಂತಿಸುತ್ತಲೇ ಅವರಿಗಾಗಿ ಕೈಗೆಟಕುವ ದರದಲ್ಲಿ ಉತ್ಪನ್ನಗಳನ್ನು ಬಿಡುಗಡೆ ಮಾಡಿದವರು. ರತನ್ ಟಾಟಾ ಬಗ್ಗೆ ಹೇಳುವುದಾದರೆ ಇಂತಹ ನೂರೆಂಟು ವಿಷಯಗಳಿವೆ. ಅಂತಿಮವಾಗಿ ರತನ್ ಟಾಟಾ ನಮ್ಮ ನೆನಪಿನಲ್ಲಿ ಉಳಿಯುವುದು ಅವರು ನಡೆದು ತೋರಿಸಿದ ನೈತಿಕತೆಯ ಮಾರ್ಗಕ್ಕಾಗಿ, ಅವರ ಸರಳತೆಗಾಗಿ. ನಮ್ಮ ಸರಕಾರ ಇಂತಹ ನಾಯಕನಿಗೆ ಭಾರತ ರತ್ನ ನೀಡದಿದ್ದರೂ ಇವರು ನಿಜವಾದ ಭಾರತ ರತ್ನ, ದೇಶದ ವರಪುತ್ರ.

ಸೊಂಪಾದಕೀಯ

‘ಕ್ರಿಮಿ’ನಲ್ ‘ರೆಕಾರ್ಡ್’

ಪೊಲಿಟಿಕ್ಸ್ ಈಸ್ ದ ಲಾಸ್ಟ್ ರೆಸಾರ್ಟ್ ಆಫ್ ಸ್ಕೌಂಡ್ರಲ್ಸ್ ಅನ್ನೋ ಮಾತನ್ನು ಎಲ್ಲರೂ ಕೇಳಿಯೇ ಇರುತ್ತೀರಿ. ಇತ್ತೀಚೆಗೆ ರೆಸಾರ್ಟ್ ರಾಜಕಾರಣ ಮಾಡುತ್ತಿರುವ ಅನೇಕ ರಾಜಕಾರಣಿಗಳು ಇದನ್ನು ಈಗಾಗಲೇ ಬಹಳಷ್ಟು ಸಲ ಪ್ರೂವ್ ಮಾಡಿದ್ದಾರೆ. ಅದನ್ನು ಪುಷ್ಟೀಕರಿಸುವಂಥ ಅನೇಕ ವಿಷಯಗಳು ನಮ್ಮ ದೇಶದಲ್ಲಿ ನಡೀತಾನೇ ಇರ್ತವೆ. ಈಗ ಅಧಿಕೃತ ಮಾಹಿತಿಯ ಪ್ರಕಾರ ನಮ್ಮ ದೇಶದ 44 ಪರ್ಸೆಂಟ್ ಶಾಸಕರ ಮೇಲೆ ಕ್ರಿಮಿನಲ್ ಕೇಸ್ ಇದೆಯಂತೆ. ಅಂದರೆ ನಮ್ಮನ್ನು ಆಳೋಕೆ ಅಂತ ನಾವು ಆರಿಸಿ ಕಳುಹಿಸಿದ ಮಹಾನುಭಾವರಲ್ಲಿ ಆಲ್ಮೋಸ್ಟ್ ಅರ್ಧ ಮಂದಿ ಅದಕ್ಕೆ ಯೋಗ್ಯತೆ ಇಲ್ಲದವರು ಅನ್ನೋದು ಇದರ ಅರ್ಥ. ಇದನ್ನು ನೋಡಿದ ಮೇಲೆ, ನಾವು ಶಾಲೆಗಳಲ್ಲಿ ಓದಿದಂತೆ ಕ್ರಿಮಿನಲ್ ಹಿನ್ನೆಲೆ ಉಳ್ಳವರಿಗೆ ಚುನಾವಣೆಗೆ ನಿಂತುಕೊಳ್ಳೋ ಅರ್ಹತೆ ಇಲ್ಲ ಅನ್ನೋದು ನಿಜವೋ ಸುಳ್ಳೋ ಅನ್ನೋ ಅನುಮಾನ ಬರೋದು ಸಹಜ. ಈಗ ಈ 44 ಪರ್ಸೆಂಟ್ ಶಾಸಕರು, ಚುನಾವಣೆಯಲ್ಲಿ ಆಯ್ಕೆ ಆದ ಮೇಲೆ ಕ್ರಿಮಿನಲ್ ಕೇಸುಗಳನ್ನು ಹಾಕಿಸಿಕೊಂಡಿದ್ದಾರೋ ಅಥವಾ ಚುನಾವಣೆಗೆ ಮುನ್ನವೇ ಇವರ ಮೇಲೆ ಕೇಸುಗಳು ಇದ್ದವೋ ಅನ್ನೋದರ ಬಗ್ಗೆ ಕ್ಲ್ಯಾರಿಟಿ ಇಲ್ಲ. ಒಮ್ಮೆ ಕ್ರಿಮಿನಲ್ ಕೇಸು ಬಿದ್ದ ಮೇಲಾದರೂ ಅವರನ್ನು ಚುನಾವಣೆಯಲ್ಲಿ ಸ್ಪರ್ಧಿಸದಂತೆ ಮಾಡಬಹುದಲ್ಲವೇ ಅಂತ ಕೇಳುವ ಮುನ್ನ, ನಮ್ಮ ದೇಶದ ಕಾನೂನಲ್ಲಿ ಏನೇ ಮಾಡಿದರೂ ಲೂಪ್ ಹೋಲ್ ಹುಡುಕಿಕೊಳ್ಳುವ ದಾರಿ ಇದ್ದೇ ಇರುತ್ತದೆ ಎಂಬುದರ ಬಗ್ಗೆ ಅರಿವು ಇರಬೇಕಾಗುತ್ತದೆ. ಯಾಕಂದ್ರೆ ಅವರ ಮೇಲೆ ಕೇಸ್ ಇದೆ, ಆದ್ರೆ ಪ್ರೂವ್ ಆಗಿಲ್ಲ ಅನ್ನೋ ಸಮಜಾಯಿಷಿಗಳು ಧಾರಾಳವಾಗಿ ಬರುತ್ತವೆ. ಅಲ್ಲದೆ, ಕ್ರಿಮಿನಲ್ ಹಿನ್ನೆಲೆ ಇಲ್ಲದವರು ಮಾತ್ರ ಚುನಾವಣೆಗೆ ಸ್ಪರ್ಧೆ ಮಾಡಬೇಕು ಅನ್ನೋ ಕಾನೂನನ್ನು ಸ್ಟ್ರಿಕ್ಟ್ ಆಗಿ ಜಾರಿಗೆ ತಂದರೆ, ಚುನಾವಣೆಗೆ ನಿಂತುಕೊಳ್ಳೋಕೆ ಅಭ್ಯರ್ಥಿಗಳೇ ಸಿಗದೇ ಹೋಗೋ ಸಾಧ್ಯತೆಗಳೇ ಹೆಚ್ಚು. ಅಷ್ಟೇ ಯಾಕೆ ಜೈಲಿನಲ್ಲಿ ಇದ್ದುಕೊಂಡೇ ಚುನಾವಣೆಗೆ ನಾಮಪತ್ರ ಸಲ್ಲಿಸಿ, ತಮಗಿರುವ ಕ್ರಿಮಿನಲ್ ಬ್ಯಾಕ್ ಗ್ರೌಂಡ್ ಅನ್ನೇ ಬಂಡವಾಳವಾಗಿಸಿಕೊಂಡು, ಸ್ಪರ್ಧೆ ಮಾಡಿದ ಮತ್ತು ಗೆದ್ದ ಅನೇಕ ಉದಾಹರಣೆಗಳೂ ನಮ್ಮ ದೇಶದಲ್ಲಿ ಬೇಕಾದಷ್ಟಿವೆ. ಹಾಗಾಗಿ ಇದನ್ನು ಪ್ರಶ್ನೆ ಮಾಡೋದೆಲ್ಲಾ ಕ್ರಿಮಿನಲ್ ಅಪರಾಧ ಆಗುತ್ತದೆ ಎಂದರೆ ಅದರಲ್ಲಿ ತಪ್ಪೇನಿಲ್ಲ ಬಿಡಿ.

ಸಂಪಾದಕರ ಸದ್ಯಶೋಧನೆ

ಹೀಗಿದ್ದರು ರತನ್ ಟಾಟಾ

ಟಾಟಾ ಸಮೂಹ ಸಂಸ್ಥೆಗಳ ಮುಖ್ಯಸ್ಥರಾಗಿದ್ದ, ರಾಷ್ಟ್ರದ ಹೆಮ್ಮೆಯ ಉದ್ಯಮಿ ರತನ್ ನವಲ್ ಟಾಟಾ ನಿಧನಕ್ಕೆ ಜಗತ್ತಿನಾದ್ಯಂತ ಶೋಕ ಸಂದೇಶಗಳು ಹರಿದು ಬಂದಿರುತ್ತಿವೆ. ನಮ್ಮ ದೇಶದಲ್ಲಿ ಶ್ರೀಮಂತ ಉದ್ಯಮಿಗಳನ್ನು ಖಳನಾಯಕನಂತೆ ನೋಡುವ ಅಭ್ಯಾಸವಿದೆ. ಅವರನ್ನು 'ಬಂಡವಾಳಶಾಹಿಗಳು' ಎಂದು ಜರೆಯುತ್ತಾರೆ. ಆದರೆ ರತನ್ ಟಾಟಾ ವಿಷಯದಲ್ಲಿ ಈ ಯಾವ ಹೀಗಳಿಕೆ, ಮೂದಲಿಕೆಗಳು ಅವರ ನಿಧನದ ಬಳಿಕ ಅಲ್ಲ, ಅವರು ಬದುಕಿರುವಾಗಲೂ ಕೇಳಿ ಬಂದಿರಲಿಲ್ಲ. ಒಂದು ಆದರ್ಶ ಸಿದ್ಧಾಂತಕ್ಕೆ ಕಟಿಬದ್ಧವಾಗಿ, ಮೌಲ್ಯಗಳನ್ನು ಇಟ್ಟುಕೊಂಡು ಭಾರತದಂಥ ದೇಶದಲ್ಲಿ ಬಿಜಿನೆಸ್ ಮಾಡಬಹುದು ಎಂಬುದನ್ನು ತೋರಿಸಿಕೊಟ್ಟ ಟಾಟಾ ಸಂಸ್ಥೆಯ ಭವ್ಯ ಪರಂಪರೆಯನ್ನು ಮತ್ತಷ್ಟು ಗಟ್ಟಿಗೊಳಿಸಿದವರು ರತನ್ ಟಾಟಾ. ಉದ್ಯಮಿಗಳೆಂದರೆ 'ರಾಜಕಾರಣಿಗಳ ಹಣದ ಥೈಲಿಗಳು' ಎಂಬ ಅಭಿಪ್ರಾಯ ಸಾರ್ವತ್ರಿಕವಾಗಿ ನೆಲೆಸಿರುವ ದಿನಗಳಲ್ಲಿ ಉತ್ತಮ ಸಿದ್ಧಾಂತಗಳನ್ನು ಪ್ರತಿಪಾದಿಸುವ ಮೂಲಕವೂ ಬಿಜಿನೆಸ್ ಮಾಡಿ ಯಶಸ್ವಿಯಾಗಬಹುದು ಎಂಬುದನ್ನು ಟಾಟಾ ಸಾಬೀತುಪಡಿಸಿದವರು. ಸಾಮಾನ್ಯವಾಗಿ ಯಾವುದೇ ಹೊಸ ಉದ್ಯಮ ಆರಂಭಿಸುವಾಗ, ಪರವಾನಿಗಿ, ಭೂಮಿ ಮತ್ತು ಇನ್ನಿತರ ಸವಲತ್ತುಗಳನ್ನು ಪಡೆಯಲು ಉದ್ಯಮಿಗಳಿಂದ ರಾಜಕಾರಣಿಗಳು 'ಮಾಮೂಲು' ನಿರೀಕ್ಷಿಸುತ್ತಾರೆ. ಆದರೆ ಈ ವಿಷಯದಲ್ಲಿ ರತನ್ ಟಾಟಾ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, 'ಮಾಮೂಲು' ಕೊಡುವುದನ್ನೂ ನಿಲ್ಲಿಸಿಬಿಟ್ಟರು. ಟಾಟಾ ಸಂಸ್ಥೆ ತಮ್ಮ ರಾಜ್ಯದಲ್ಲಿ ಬಂದು ಬಂಡವಾಳ ಹೂಡುವುದು ತಮಗೆ ಲಾಭವೆಂದು ಭಾವಿಸಿ ಅವರು ಕೇಳಿದ ಎಲ್ಲ ಸವಲತ್ತುಗಳನ್ನೂ ರಾಜಕಾರಣಿಗಳು ಒದಗಿಸಿಕೊಡುತ್ತಿದ್ದರು. ಟಾಟಾ ಸಂಸ್ಥೆ ಉದ್ಯಮ ಆರಂಭಿಸುವುದು ಯಾವುದೇ ರಾಜ್ಯಕ್ಕೆ ಪ್ರತಿಷ್ಠೆಯ ವಿಷಯವಾಗಿತ್ತು. ಟಾಟಾ ಎಂದೂ ತಮ್ಮ ರಾಜಕೀಯ ನಿಲುವನ್ನು ಸಾರ್ವಜನಿಕವಾಗಿ ಪ್ರಕಟಪಡಿಸಿದವರಲ್ಲ. ಹಾಗೆಂದು ಅವರಿಗೆ ಎಲ್ಲ ರಾಜಕೀಯ ಪಕ್ಷಗಳಲ್ಲೂ ಸ್ನೇಹಿತರಿದ್ದರು. ರಾಜಕಾರಣಿಗಳ ಸಖ್ಯ ಬಯಸಲು ಉದ್ಯಮಿಗಳು ಇನ್ನಿಲ್ಲದ ಕಸರತ್ತು ಮಾಡುವುದು ಹೊಸತೇನಲ್ಲ. ಆದರೆ ರಾಜಕಾರಣಿಗಳು ರತನ್ ಟಾಟಾ ಸಖ್ಯಕ್ಕಾಗಿ ಹಾತೊರೆಯುತ್ತಿದ್ದರು. ಹಾಗೆಯೇ ದೇಶದ ಗಣ್ಯ ವ್ಯಕ್ತಿಗಳು ಕೂಡ ರತನ್ ಟಾಟಾ ಸ್ನೇಹ-ಸಾಮೀಪ್ಯ ಬಯಸುತ್ತಿದ್ದರು. ಆ ಮನುಷ್ಯನಲ್ಲಿ ಅಂಥ ಆಕರ್ಷಣೆ ಇತ್ತು. ಟಾಟಾ ಒಂದು ಆದರ್ಶ ಮೌಲ್ಯದ ಸಂಕೇತವಾಗಿದ್ದರು. ಟಾಟಾ ಅವರನ್ನು ಯಾರಾದರೂ ಭೇಟಿ ಮಾಡಬಹುದಿತ್ತು. ಅವರು ನವಉದ್ಯಮಿಗಳ ಜತೆ ಸಾಕಷ್ಟು ಸಮಯ ಕಳೆಯುತ್ತಿದ್ದರು. ನವ ಉದ್ಯಮಿಗಳು ಬಂಡವಾಳ ಅಪೇಕ್ಷಿಸಿದರೆ, ರತನ್ ಟಾಟಾ ಆ ಉದ್ಯಮದ ಬೇಕು-ಬೇಡಗಳನ್ನು ನೋಡಿ, ಬಂಡವಾಳ ಹೂಡಿ ಪ್ರೋತ್ಸಾಹಿಸುತ್ತಿದ್ದರು. ರತನ್ ಟಾಟಾ ಸಹಾಯ ನಿರೀಕ್ಷಿಸಿ ಯಾರೇ ಅವರನ್ನು ಭೇಟಿ ಮಾಡಿದರೂ, ಖಾಲಿ ಕೈಯಲ್ಲಿ ಕಳಿಸುತ್ತಿರಲಿಲ್ಲ. ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿರುವ ನರವಿಜ್ಞಾನ ಕೇಂದ್ರದ ಮುಖ್ಯಸ್ಥರು ರತನ್ ಅವರನ್ನು ಭೇಟಿಯಾಗಿ, ಅಲ್ಜೈಮೈರ್ ಕಾಯಿಲೆಗೆ ಸಂಬಂಧಿಸಿದಂತೆ ಸಂಶೋಧನೆಗೆ ಧನಸಹಾಯ ಬಯಸಿದಾಗ, ಅವರು ವೈಯಕ್ತಿಕವಾಗಿ 75 ಕೋಟಿ ರುಪಾಯಿಗಳನ್ನು ನೀಡಿದ್ದರು. ರತನ್ ಟಾಟಾ ಅವರಿಗೆ ಸಂದರ್ಶನವೊಂದರಲ್ಲಿ, ‘ನಿಮಗೆ ನಿಮ್ಮ ಯಾವ ಗುಣ ಅಥವಾ ಅಭ್ಯಾಸ ಇಷ್ಟವಾಗುತ್ತದೆ ಮತ್ತು ಇಷ್ಟವಾಗುವುದಿಲ್ಲ’ ಎಂದು ಕೇಳಿದಾಗ, ‘ಹಲ್ಲಿನಲ್ಲಿ ಉಗುರು ಕಡಿಯುವುದು’ ಎಂದು ಮುಕ್ತವಾಗಿ ಹೇಳಿದ್ದರು. ‘ನನಗೆ ಉಗುರು ಕಡಿಯದೇ ಯೋಚನೆ ಮಾಡುವುದಕ್ಕೆ ಬರುವುದಿಲ್ಲ. ನನ್ನ ತಲೆಯಲ್ಲಿ ಗಂಭೀರವಾದ ಯೋಚನೆ ಹಾದು ಹೋಗುತ್ತಿದ್ದಂತೆ, ನಾನು ಕೈ ಉಗುರು ಕಡಿಯಲು ಆರಂಭಿಸುತ್ತೇನೆ. ಇದು ಕೆಟ್ಟ ಅಭ್ಯಾಸ ಎಂಬುದು ನನಗೆ ಮನವರಿಕೆ ಆಗಿದೆ. ಆದರೆ ಅದನ್ನು ಬಿಡಲು ಸಾಧ್ಯವಾಗಿಲ್ಲ. ಆದರೆ ಉಗುರು ಕಡಿದ ಬಳಿಕ ಕೈಯನ್ನು ಸ್ವಚ್ಛಗೊಳಿಸಿಕೊಳ್ಳುತ್ತೇನೆ. ಈ ಅಭ್ಯಾಸದಿಂದ ನನಗೆ ಅನುಕೂಲವೇ ಆಗಿದೆ. ನಾನು ಉಗುರು ಕಡಿಯುತ್ತಿದ್ದರೆ, ನನ್ನ ಸ್ವಭಾವ ಗೊತ್ತಿದ್ದವರು ನನ್ನನ್ನು ಡಿಸ್ಟರ್ಬ್ ಮಾಡುವುದಿಲ್ಲ’ ಎಂದು ಉತ್ತರಿಸಿದ್ದರು. ರತನ್ ಟಾಟಾ ನಿಧನಕ್ಕೆ ಜಗತ್ತಿನೆಲ್ಲೆಡೆಗಳಿಂದ ಶೋಕ ಹರಿದು ಬರುತ್ತಿರುವುದು ಅವರ ಮೇರು ವ್ಯಕ್ತಿತ್ವಕ್ಕೆ ನಿದರ್ಶನ.

ನಂಬಿಕೆ - ಎರಡು ಕಥೆಗಳು

ಶಿಶಿರಕಾಲ

ಶಿಶಿರ್ ಹೆಗಡೆ
vveditoped@gmail.com

ನಿಮಗೆ ಇವತ್ತು ಎರಡು ಕಥೆಗಳನ್ನು ಹೇಳುವವನಿದ್ದೇನೆ. ಈ ಕಥೆಗಳು ನಂಬಿಕೆಗೆ ಸಂಬಂಧಿಸಿದ್ದು. ಸತ್ಯಘಟನೆ.

ಎರಡನೇ ಮಹಾಯುದ್ಧ ಆಗಷ್ಟೇ ಮುಗಿದಿತ್ತು. ಅಂದಿನ ಕ್ರೌರ್ಯ, ದೌರ್ಜನ್ಯ, ಎಂಟು ಕೋಟಿ ಜನರ ಸಾವು ಇವೆಲ್ಲ ಪಾಶ್ಚಿಮಾತ್ಯರಲ್ಲಿ ದೇವರ ಬಗೆಗಿನ ನಂಬಿಕೆಯ ರೂಪಗಳನ್ನು ಇನ್ನಷ್ಟು ವಿಕಾರಗೊಳಿಸಿದ್ದವು. ಶಿಕಾಗೋ ಸಮೀಪದ ಉಪನಗರ ಓಕ್ ಪಾರ್ಕ್. ಇಸವಿ 1954, ಕ್ರಿಸ್ಮಸ್ ದಿನ. ಡಿಸೆಂಬರ್ ಎಂದರೆ ಶಿಕಾಗೋದಲ್ಲಿ ವಿಪರೀತ ಚಳಿಯಿರುತ್ತದೆ. ಅಂಥದ್ದರಲ್ಲಿ ಅಲ್ಲಿನ ಒಂದು ಮನೆಯ ಎದುರು ಜನರ ದೊಡ್ಡ ಗುಂಪು ನೆರೆದಿತ್ತು. ಅವರೆಲ್ಲ ಮೇಲುಧ್ವನಿಯಲ್ಲಿ ಒಂದೇಸಮನೆ ರಸ್ತೆಯಲ್ಲಿ, ಪಕ್ಕದ ಪಾರ್ಕಿನಲ್ಲಿ ಕ್ರಿಸ್ಮಸ್ ಗೀತೆಗಳನ್ನು ಹಾಡುತ್ತಿದ್ದರು. ಆ ಗುಂಪಿನ ನಾಯಕಿ ಡಾರ್ಥಿ ಮಾರ್ಟಿನ್. ಅವಳು ಸ್ವಯಂಘೋಷಿತ ದೇವಮಾನವ. ಅವಳಿಗೆ ಈಗೆರಡು ವರ್ಷದ ಹಿಂದೆ ಕನಸಿನಲ್ಲಿ ಬಂದ ದೇವರು ಜಗತ್ತು ದುರುಳರಿಂದ ತುಂಬಿಹೋಗಿದೆ. ಈ ಕ್ರಿಸ್ಮಸ್ ದಿನದಂದು ಅಮೆರಿಕ ಸಂಪೂರ್ಣ ನೀರಿನಲ್ಲಿ ಮುಳುಗಲಿದೆ. ಈ ಸಂಕಷ್ಟದಿಂದ ಕೆಲವರನ್ನೇ ರಕ್ಷಿಸಲು ದೇವರು ಇಚ್ಛಿಸಿದ್ದಾನೆ. ಇಲ್ಲಿಂದ ಎರಡನೇ ಕ್ರಿಸ್ಮಸ್ ದಿನದಂದು ನೀನು ಜನರನ್ನು ಆಯ್ಕೆ ಮಾಡಿ ಓಕ್ ಪಾರ್ಕಿಗೆ ಕರೆದು ತರಬೇಕು. ಅವರನ್ನು ಪರಿಶುದ್ಧರನ್ನಾಗಿ ತರುವ ಜವಾಬ್ದಾರಿ ನಿನ್ನದು. ಅವರನ್ನು ಬಿಟ್ಟು ಉಳಿದವರನ್ನೆಲ್ಲ ನಾನು ನಾಶಮಾಡಿ ಹೊಸ ಜಗತ್ತನ್ನು ಪುನಃ ಸೃಷ್ಟಿಸಲಿದ್ದೇನೆ. ಅದಕ್ಕೆ ನೀವು ವಾರಸುದಾರರು' ಎಂದು ಹೇಳಿದ್ದಂತೆ. ಕಳೆದ ಎರಡು ವರ್ಷದಿಂದ ಡೋರ್ಥಿ ಹೋದಲ್ಲೆಲ್ಲಾ ಇದನ್ನೇ ಹೇಳಿಕೊಂಡು ಬಂದಿದ್ದಳು. ಅಷ್ಟೇ ಅಲ್ಲ, ಪತ್ರಿಕೆಗಳಲ್ಲಿ ಜಾಹೀರಾತಾಗಿ ಪ್ರಕಟಿಸಿದ್ದಳು. ಒಟ್ಟಾರೆ ಇಷ್ಟೆಲ್ಲಾ ಪ್ರಚಾರ ಮಾಡಲಾಗಿ, ಅವಳನ್ನು ನಂಬುವ ಗುಂಪೊಂದು ತಯಾರಾಯಿತು. ನೀವು ಶುದ್ಧರಾಗಬೇಕೆಂದರೆ, ಮನುಷ್ಯ ಸಂತತಿಯನ್ನು ಮುಂದುವರಿಸುವ ರೂವಾರಿಗಳಾಗಿರಬೇಕೆಂದರೆ ನಿಮ್ಮ ಮನೆ, ಉದ್ಯೋಗ, ಸಂಬಂಧ ಎಲ್ಲವನ್ನೂ ತೊರೆದು ಬರಬೇಕು. ಯಾವುದೇ ಜೀವನದ ಸಂಕೋಲೆಗಳಿದ್ದರೆ ದೇವರು ನಿಮ್ಮನ್ನು ಅವನ ವಾಹನಕ್ಕೆ ಹತ್ತಿಸಿಕೊಳ್ಳುವುದಿಲ್ಲ.' ಎಂದು ಡೋರ್ಥಿ ಹೇಳಿದ್ದನ್ನು ಕೇಳಿಕೊಂಡು, ನಂಬಿಕೊಂಡು ಅದೆಷ್ಟೋ ಮಂದಿ ಸರ್ವಸ್ವವನ್ನೂ ತೊರೆದು ಅಲ್ಲಿಗೆ ಬಂದಿದ್ದರು. ಘನಘೋರ ಚಳಿಯನ್ನು ಲೆಕ್ಕಿಸದೆ ಹಿಮದಲ್ಲಿ ಕಾಲನ್ನು ಹೂತು ನಿಂತು ಕ್ರಿಸ್ಮಸ್ ಹಾಡು ಹಾಡುತ್ತಿದ್ದರು. ಒಂದೆರಡು ತಾಸಾಯಿತು. ಮಧ್ಯರಾತ್ರಿಗೆ ಇನ್ನೊಂದು ತಾಸು. ಅಷ್ಟು ತಡವಾದರೂ ಇವರ ಹಾಡು ಮುಗಿಯುತ್ತಲೇ ಇಲ್ಲ, ಮಧ್ಯರಾತ್ರಿ ದೇವರ ವಾಹನ ಬರಬೇಕಿತ್ತು - ಬರಲೇ ಇಲ್ಲ, ಕ್ರಮೇಣ ಕಿರಿಕಿರಿ ಹೆಚ್ಚಿ ಪೊಲೀಸರು ಬಂದು ಜನರನ್ನು ಅಟ್ಟಬೇಕಾಯಿತು.

ಆ ದಿನ ಡೋರ್ಥಿ ಹೇಳಿದಂತೆ ದೇವರು ರಕ್ಷಣೆಗೆ ವಾಹನ ಕಳುಹಿಸಲಿಲ್ಲ, ಈ ಸುದ್ದಿ ಮಾರನೆಯ ದಿನ ಪತ್ರಿಕೆಗಳ ಮುಖಪುಟದಲ್ಲಿ ಪ್ರಕಟವಾದವು. ಜನರು ಈ ಗುಂಪಿನವರನ್ನು ಕಂಡು ನಕ್ಕರು, ಹಾಸ್ಯಮಾಡಿದರು. ಆದರೆ ಅವರ ನಂಬಿಕೆ ಕದಲಿರಲಿಲ್ಲ, ಅವಳ ಹಿಂಬಾಲಕರಲ್ಲಿ ಕಾಕಪೋಕರಷ್ಟೇ ಅಲ್ಲ, ದೊಡ್ಡ ಯುನಿವರ್ಸಿಟಿಯ ಪ್ರೊಫೆಸರುಗಳಿದ್ದರು, ಒಳ್ಳೆ ಕಲಿತವರೂ ಇದ್ದರು. ಅವರು ಸಂಸಾರ, ಉದ್ಯೋಗ, ಮನೆ ಎಲ್ಲವನ್ನೂ ತ್ಯಜಿಸಿ ಈ ದಿವ್ಯ ಕೆಲಸದಲ್ಲಿ ಭಾಗಿಯಾಗಲು ಬಂದಿದ್ದರು. ಅವರಲ್ಲಿ ಕೆಲವರು ಗಂಡ, ಹೆಂಡತಿ ಮಕ್ಕಳಾದಿಯಾಗಿ ಪೂರ್ಣ ಸಂಸಾರವೇ ಬಂದವರೂ ಇದ್ದರು. ಕಂಡ ಕಂಡವರೆಲ್ಲ ಅವರ ಮೂರ್ಖತನವನ್ನು ಹೀಯಾಳಿಸುತ್ತಿದ್ದರೆ ಈ ಗುಂಪು ಮಾತ್ರ ಅದ್ಯಾವುದಕ್ಕೂ ತಲೆಕೆಡಿಸಿಕೊಳ್ಳಲಿಲ್ಲ, ಅವರ ನಂಬಿಕೆ ಅದೆಷ್ಟು ಗಟ್ಟಿಯಾಗಿತ್ತು ಎಂದರೆ ಅವರಿಗೆ ತಮ್ಮಲ್ಲಿಯೇ ಏನೋ ತಪ್ಪಾಗಿದೆ, ಹಾಗಾಗಿಯೇ ದೇವರು ಕಾಪಾಡಲು ಬಂದಿಲ್ಲ' ಎಂದು ಕಾರಣಗಳನ್ನು ಹುಡುಕಿದರು. ಡೋರ್ಥಿ ಕನಸಿನಲ್ಲಿ ಮತ್ತೆ ಬಂದ ದೇವರು ಇದು ಒಂದು ಟ್ರಯಲ್ ರನ್ - ತಾಲೀಮು. ಮುಂದಿನ ತಿಂಗಳು ತಯಾರಾಗಿರಿ, ಆಕಾಶದಿಂದ ನನ್ನ ವಾಹನ ಬರುತ್ತದೆ ಮತ್ತು ನಿಮ್ಮನ್ನು ಒಯ್ಯಲಿಕ್ಕಿದೆ.'. ಮತ್ತೆ ಆ ಜನರ ಗುಂಪು ಅದನ್ನು ನಂಬಿಕೊಂಡಿತು.

ಆ ದಿನ ಬಂತು. ಮತ್ತೆ ಇವರ ಯೇಸು ಭಜನೆ ಶುರುವಾಯಿತು. ಕಾಕತಾಳೀಯ ಎನ್ನುವಂತೆ ಅದೇ ದಿನ ಅಮೆರಿಕದ ಒಂದುಕಡೆ ಪ್ರವಾಹ ಬಂದಿತ್ತು. ಈ ಸುದ್ದಿ ಬರುತ್ತಿದ್ದಂತೆ ಅವರಲ್ಲಿ ಎಲ್ಲಿಲ್ಲದ ಉತ್ಸಾಹ. ಆ ದಿವ್ಯ ದಿನ ಬಂದೇ ಬಿಟ್ಟಿತು ಎಂಬ ಸಂಭ್ರಮ. ಈ ಬಾರಿಯೂ ಮಧ್ಯರಾತ್ರಿ ಕಳೆದರೂ ದೇವರು ವಾಹನ ಜತೆಯಾಗಿ ಬರಲೇ ಇಲ್ಲ, ಮತ್ತೆ ಯಥಾಪ್ರಕಾರ ಇವರನ್ನೆಲ್ಲ ಪೊಲೀಸರು ಚದುರಿಸಿದರು. ಈ ಬಾರಿಯೂ ಇದು ದೇವರ ಪರೀಕ್ಷೆ ಎಂದೇ ಆ ಗುಂಪಿನವರು ಅಂದುಕೊಂಡರು. ಆ ದಿನ ಅಲ್ಲೆಲ್ಲೋ ಆದ ಪ್ರವಾಹ ಮುನ್ಸೂಚನೆಯಾಗಿ ಕಂಡು ಅವರ ನಂಬಿಕೆ ಇನ್ನಷ್ಟು ಹೆಚ್ಚಿತು. ದೇವರ ಸಂದೇಶ ಸುಳ್ಳಾಗಳಿಕ್ಕಿದೆಯೇ? ಸಾಧ್ಯವೇ ಇಲ್ಲ. ದೇವರ ಸಂದೇಶ ಗ್ರಹಿಸುವಲ್ಲಿ ನಮ್ಮದೇ ಏನೋ ತಪ್ಪಾಗಿದೆ. ಇದು ಹೀಗೆಯೇ ಸುಮಾರು ಎಂಟು ವರ್ಷ, ಸುಮಾರು ಇಪ್ಪತ್ತು ಸಲ ನಡೆಯಿತು. ಇವರೆಲ್ಲ ಗುಂಪಿನಲ್ಲಿ ಬರುವುದು - ದೇವರ ವಾಹನಕ್ಕೆ ಕಾಯುವುದು - ಭಜನೆ ಮಾಡುವುದು. ದೇವರ ವಾಹನ ಬರುವುದೇ ಇಲ್ಲ.

ಆದರೆ ಇಲ್ಲಿ ಸರ್ವಸ್ವವನ್ನೂ ಬಿಟ್ಟು ಬಂದವರಿಗೆ ವಾಪಸ್ ಹೋಗುವ, ನಂಬಿದ್ದು ಸುಳ್ಳೆಂದು ಒಪ್ಪುವ ಸ್ಥಿತಿ ಇರಲಿಲ್ಲ. ಕೆಲವರು ಕೆಲಸ ಬಿಟ್ಟು ಬಂದವರು ಭೂಮಿಯ ಮೇಲಿನ ನಮ್ಮ ಬದುಕು ಇನ್ನು ಕೆಲವೇ ದಿನ ಎಂದು ತಮ್ಮಲ್ಲಿದ್ದ ಹಣವನ್ನೆಲ್ಲ ಖಾಲಿಮಾಡಿ ಕೊಂಡುಬಿಟ್ಟಿದ್ದರು. ಮೊದಲ ಬಾರಿ ವಾಹನ ಬರದಾಗ, ಮತ್ತೆ ನಂಬಿದರು. ಇದು ಹಾಗೆಯೇ ಮುಂದುವರಿಯಿತು. ನಂಬಿಕೆ ಸುಳ್ಳಿರಬಹುದು ಎಂದೆನಿಸಿದರೂ ಮೊದಮೊದಲು ಒಪ್ಪಲಾಗಲಿಲ್ಲ. ಏಕೆಂದರೆ ಇದನ್ನು ನಂಬಿ ಬಹಳ ಮುಂದೆ ಸಾಗಿ ಬಂದಾಗಿದೆ. ಅದನ್ನು ಎದುರಿಸುವ, ಪುನಃ ಬದುಕನ್ನು ಸಹಜಕ್ಕೆ ಮರಳಿಸುವ ಯಾವುದೇ



ಸಾಧ್ಯತೆ ಅವರಲ್ಲಿರಲಿಲ್ಲ. ಕೆಲವರು ಬೀದಿಪಾಲದರು, ಕೆಲವರು ಆತ್ಮಹತ್ಯೆ ಮಾಡಿಕೊಂಡರು, ಇನ್ನು ಕೆಲವರು ಹುಚ್ಚರಾದರು. ಈ ಕಥೆಯನ್ನು ಇಲ್ಲಿಗೇ ಸ್ವಲ್ಪ ನಿಲ್ಲಿಸೋಣ.

ಎರಡನೇ ಕಥೆ. ಇಸವಿ 2018. ಮಧ್ಯವಯಸ್ಸಿನ ಅಮೆರಿಕನ್ ಮಹಿಳೆ. ಹೆಸರು ಶೆರಿಲ್. ಅವಳ ಗಂಡ ಸರಿಯಿರಲಿಲ್ಲ. ಪರಸಂಗ, ಕುಡಿತ, ಜೂಜು ಇತ್ಯಾದಿ. ಅವರಿಬ್ಬರಲ್ಲಿ ಮಾತು, ರೊಮ್ಯಾನ್ಸ್, ಸೆಕ್ಸ್ ಯಾವುದೂ ಉಳಿದಿರಲಿಲ್ಲ. ಆದರೂ ಶೆರಿಲ್ ಅವನ ಜತೆ ಸುಮಾರು ವರ್ಷ ಸಂಸಾರ ದೂಡಿದಳು. ಕೊನೆಗೊಂದು ದಿನ ಅವನ ಅಸಹನೆ ಮತ್ತು ಇವಳ ಸಹನೆ ಎರಡೂ ಮಿತಿಮೀರಿ ವಿವಾಹ ವಿಚ್ಛೇದನವಾಯಿತು. ಈಗ ಏಕಾಂಗಿ ಬದುಕು. ಅವಳಲ್ಲಿ ಸಾಕಷ್ಟು ಸಮಾಧಾನ, ನೆಮ್ಮದಿಯನ್ನು ತಂದಿತು. ಆದರೆ ಅವಳ ಬದುಕಿನಲ್ಲಿ ಪ್ರೀತಿಯ ಕೊರತೆ ಕಾಡಲಾರಂಭಿಸಿತು. ಅವಳನ್ನು ಕೊನೆಯ ಬಾರಿ ಇನ್ನೊಬ್ಬರು ಪ್ರೀತಿಸಿದ್ದೇ ನೆನಪಿರಲಿಲ್ಲ. ಕ್ರಮೇಣ ತನಗೊಬ್ಬ ಸಾಥಿ, ಜೊತೆಗಾರ ಬೇಕೆನ್ನುವ ಸಹಜ ಬಯಕೆ.

ಇನ್ನುಳಿದ ಬದುಕನ್ನಾದರೂ ಪ್ರೀತಿಸುವನೊಬ್ಬನ ಜೊತೆ ಬದುಕಬೇಕೆಂಬ ಕಾರಣಕ್ಕೆ ಡೇಟಿಂಗ್ ಸೈಟ್ (ಜೊತೆಗಾರರನ್ನು ಹುಡುಕಿಕೊಳ್ಳುವ ವೆಬ್‌ಸೈಟ್)ನಲ್ಲಿ ಹೋಗಿ ತನ್ನನ್ನು ರಿಜಿಸ್ಟರ್ ಮಾಡಿಕೊಂಡಳು. ಮಾರನೆಯ ದಿನವೇ ಆ ವೆಬ್‌ಸೈಟ್‌ನಲ್ಲಿ ಡೈವರ್ಸ್ ಆದ ಜೇವಿಯರ್ ಎಂಬ ವ್ಯಕ್ತಿಯ ಪ್ರೊಫೈಲ್ ಅವಳಿಗೆ ಇಷ್ಟವಾಯಿತು. ಫೋಟೋ ನೋಡಿದ್ದೇ ಏನೋ ಒಂದು ಸೆಳೆತ. ಫ್ರೆಂಡ್ ರಿಕ್ವೆಸ್ಟ್ ಕಳುಹಿಸಿದಳು. ತಕ್ಷಣ ಆ ಕಡೆಯಿಂದ ಪ್ರತಿಕ್ರಿಯೆ ಬಂತು. ಅವನ ಪ್ರೊಫೈಲ್ ಫೋಟೋ ಚೆನ್ನಾಗಿತ್ತು. ನಲವತ್ತರ ಆಸುಪಾಸು, ಅತಿ ಸುಂದರನೇನಲ್ಲ, ಆದರೂ ಹ್ಯಾಂಡ್ಸಮ್. ಅಲ್ಲಿಂದ ಮುಂದೆ ಅವರಿಬ್ಬರೂ ತಮ್ಮ ಬದುಕಿನ ಬಗ್ಗೆ ವಿವರಗಳನ್ನು ಹಂಚಿಕೊಂಡರು. ನಿಧಾನಕ್ಕೆ ಚಾಟ್‌ನಿಂದ ಫೋನ್ ಕರೆಯಲ್ಲಿ ಮಾತುಗಳು ಮುಂದುವರಿದವು. ಅವನದು ಗಡುಸಾದ ಗಂಡಸಿನ ಮೆಲ್ ಧ್ವನಿ. ಆದರೊಂದು ಸಮಸ್ಯೆಯಿತ್ತು. ಅವನಿದ್ದದ್ದು ದೂರದ ಇಟಲಿಯಲ್ಲಿ, ಶೆರಿಲ್ ಇರುವುದು ಅಮೆರಿಕ. ಆದರೂ ಅವರ ನಡುವಿನ ಕೆಮಿಸ್ಟ್ರಿ ಶೆರಿಲ್‌ಗೆ ಬಹಳ ಇಷ್ಟವಾಗಿತ್ತು. ಒಂದು ದಿನ ಅವಳು ಅವನಲ್ಲಿ ವಿಡಿಯೊ ಕಾಲ್ ಮಾಡಿ ಮಾತಾಡೋಣ ಎಂದಳು. ನಾನಿರುವಲ್ಲಿ ಇಂಟರ್ನೆಟ್ ಅಷ್ಟು ಸರಿಯಿಲ್ಲ ಎಂದ. ತಾನು ವಿಡಿಯೊ ಕಾಲ್ ಅನ್ನು ಇಷ್ಟು ಬೇಗ ಕೇಳಬಾರದಿತ್ತೇನೋ ಎಂದುಕೊಂಡಳು. ಗಡಿಬಿಡಿ ಬಿದ್ದೇನೇನೋ, ಆಗತಾನೇ ಪರಿಚಯವಾಗಿತ್ತಲ್ಲ.

ಕ್ರಮೇಣ ಅವನ ಡೈವರ್ಸ್ ಬಗ್ಗೆ ಜೇವಿಯರ್ ಒಂದು ದಿನ ಹೇಳಿಕೊಂಡ. ಅವನ ಮಾಜಿ ಪತ್ನಿ ಅವನ ಮಗನನ್ನು ನೋಡಲು ಬಿಡುತ್ತಿಲ್ಲ ಎಂದು ಶೆರಿಲ್ ಬಳಿ ಹೇಳಿಕೊಂಡು ಅತ್ತ. ಅದೊಂದು ದಿನ ಜೇವಿಯರ್ ಬಹಳ ಸಂತೋಷದಿಂದ ಶೆರಿಲ್‌ಗೆ ಕರೆ ಮಾಡಿದ್ದ. ನಾನು ಟರ್ಕಿಗೆ ಹೋಗುತ್ತಿದ್ದೇನೆ. ಅಲ್ಲೊಂದು ಮಲ್ಟಿ ಮಿಲಿಯನ್ ಡಾಲರಿನ ಪ್ರಾಜೆಕ್ಟಿಗೆ ಸಹಿ ಹಾಕುವವನಿದ್ದೇನೆ. ಅದೇನಾದರೂ ತನಗೆ ಸಿಕ್ಕಿಬಿಟ್ಟರೆ ಲೈಫ್ ಸೆಟಲ್ ಆಗಿಬಿಡುತ್ತೇನೆ' ಎಂದಾಗ ಶೆರಿಲ್‌ಗೆ ಅವನ ಬಗ್ಗೆ ಹೆಮ್ಮೆಯೆನಿಸಿತು. ಜತೆಯಲ್ಲಿ ತಾನೊಬ್ಬ ಅನಾಥ ಮಗುವನ್ನು ದತ್ತು ತೆಗೆದುಕೊಳ್ಳುತ್ತಿದ್ದೇನೆ ಎಂದಾಗ ಅವನ ಮೇಲಿನ ಅಭಿಮಾನ ನೂರ್ಮಡಿಯಾಯಿತು. ಜೇವಿಯರ್‌ನೊಂದಿಗೆ ಹೀಗೆಯೇ ಇನ್ನೊಂದಿಷ್ಟು ದಿನ ಫೋನ್ ಮಾತುಕತೆ ಮುಂದುವರಿಯಿತು. ಅದೊಂದು ದಿನ ಜೇವಿಯರ್ ಬಹಳ ಬೇಸರದಿಂದ ಇದ್ದ. ಶೆರಿಲ್ ಬಳಿ ಆ ಪ್ರಾಜೆಕ್ಟ್ ತನಗೆ ಒದಗಿಬರಬೇಕೆಂದರೆ ಅಲ್ಲೊಂದಿಷ್ಟು ಮಂದಿಗೆ ಲಂಚ ತಿನ್ನಿಸಬೇಕು, ಆದರೆ ತನ್ನಲ್ಲಿ ಹಣವಿಲ್ಲ, ಹಾಗಾಗಿ ಆ ಪ್ರಾಜೆಕ್ಟ್ ಕೈತಪ್ಪಿ ಹೋಗಲಿದೆ' ಎಂದು ಅವಲತ್ತುಕೊಂಡ. ಶೆರಿಲ್ ಮನಸ್ಸು ಕರಗಿತು. ತಾನು ಆ ಹಣವನ್ನು ಕೊಡುತ್ತೇನೆ ಎಂದಳು. ಜೇವಿಯರ್ ಅದಕ್ಕೆ ಮೊದಲು ಒಲ್ಲೆನೆಂದ. ನಂತರ ಒಪ್ಪಿಕೊಂಡ. ಶೆರಿಲ್ ತನ್ನ ಕೂಡಿಟ್ಟ ಆಪತ್ಕಾಲದ ಹಣದ ಕಾಲು ಭಾಗವನ್ನು ಇನ್ನೂ ಭೇಟಿಯಾಗದ ಜೇವಿಯರ್‌ಗೆ ಕಳುಹಿಸಿಕೊಟ್ಟಳು.

ಇದನ್ನೆಲ್ಲ ತನ್ನ ಸ್ನೇಹಿತೆಯರಿಗೆ ಶೆರಿಲ್ ಹೇಳಿಕೊಂಡಳು. ತನ್ನ ಮರುಭೂಮಿಯಂತಹ ಬದುಕಿಗೆ ಪ್ರೀತಿಯ ಸೆಲೆಯಾಗಿ ದೂರದ ಇಟಲಿಯ ಜೇವಿಯರ್ ಜತೆಯಾಗಿರುವ ಸಂಭ್ರಮವನ್ನು ಹಂಚಿಕೊಂಡಳು. ಸ್ನೇಹಿತೆಯರಿಗೆ ಜೇವಿಯರ್ ಮೇಲೆ ಅನುಮಾನ. ಅವನನ್ನೆಂದೂ ಶೆರಿಲ್ ನೋಡಿಲ್ಲ, ಭೇಟಿಯಾಗಿಲ್ಲ, ಆ ಸ್ನೇಹಿತೆಯರು ಇಂಟರ್‌ನೆಟ್‌ನಲ್ಲಿ ಇಂತಹ ಸ್ಕ್ಯಾಮ್‌ಗಳ ಬಗ್ಗೆ ಹುಡುಕಾಡಿದರು. ಯಥಾವತ್ ಇವಳಿಗೆ ಹೇಳಿದ ಕಥೆಯೇ FBI ವೆಬ್‌ಸೈಟ್ ನಲ್ಲಿ ನಮೂದಾಗಿತ್ತು. ಶೆರಿಲ್‌ಗೆ ನೀನು ಮೋಸಹೋಗಿದ್ದೀಯಾ ಎಂದು ಸ್ನೇಹಿತೆಯರು ಹೇಳಿದರು. ಆದರೆ ಅವಳಿಗೆ ಜೇವಿಯರ್ ಮೇಲೆ ಎಲ್ಲಿಲ್ಲದ ನಂಬಿಕೆ. ಅದಲ್ಲದೆ ಮುಂದಿನ ತಿಂಗಳು ಜೇವಿರ್ಯ ಅಮೆರಿಕಕ್ಕೆ ಶೆರಿಲ್‌ನ ಹುಟ್ಟುಹಬ್ಬಕ್ಕೆ ಬರುತ್ತೇನೆ ಎಂದು ಹೇಳಿದ್ದ. ಇದು ಮೋಸವಾದರೆ ಅವನು ಬರುತ್ತಾನೆಯೇ? ಜೇವಿಯರ್ ಅಮೆರಿಕಕ್ಕೆ ಬರುವ ದಿನ ಬಂದೇಬಿಟ್ಟಿತು. ಶೆರಿಲ್‌ಗೆ ಸಂಭ್ರಮ. ಅವನೊಂದಿಗೆ ಸಮಯ ಕಳೆಯಲು ಐಷಾರಾಮಿ ರೆಸಾರ್ಟ್ ಬುಕಿಂಗ್ ಮಾಡಿಕೊಂಡಿದ್ದಳು. ಜೇವಿಯರ್ ಹೊರಟಿದ್ದೇನೆ ಎಂದು ಸಂದೇಶ ಕಳುಹಿಸಿದ್ದ. ಆ ದಿನ ಏರ್‌ಪೋರ್ಟ್‌ಗೆ ಡ್ರೈವ್ ಮಾಡಿಕೊಂಡು ಹೋದಳು. ಕಾದಳು. ಜೇವಿಯರ್ ಹೇಳಿದ ವಿಮಾನ ಬಂತು. ಜೇವಿಯರ್ ಬರಲೇ ಇಲ್ಲ, ತಕ್ಷಣ ಅವಳಿಗೆ ಅವಳಿಗೆ ತಾನು ವಂಚನೆಗೊಳಗಾದ ಎಂದೆನಿಸಿತು. ಕುಸಿದುಹೋದಳು. ಸ್ನೇಹಿತೆಗೆ ಫೋನ್ ಮಾಡಿದಳು. ತಾನು ಮೋಸ ಹೋದೆ ಎಂದು ಅತ್ತಳು.

ಮಾರನೆಯ ದಿನ ಶೆರಿಲ್ ಮತ್ತೆ ಜೇವಿಯರ್‌ನ ಫೋನ್‌ಗೆ ಕರೆ ಮಾಡಿದಳು. ಅವನು ಅದೇ ಮೆಲ್ಲನೆಯ ಧ್ವನಿಯಲ್ಲಿ ಹಾಲೋ ಎಂದ. ಇವಳಿಗೆ ನಖಶಿಖಾಂತ ಸಿಟ್ಟು. ಅವನು ಅಷ್ಟೇ ಸಮಾಧಾನದಲ್ಲಿ, ‘ನನಗೆ ಏನಾಯ್ತು ಎಂಬುದನ್ನು ನೀನು ತಿಳಿದರೆ ಹೀಗೆ ಸಿಟ್ಟುಮಾಡಿಕೊಳ್ಳುವುದಿಲ್ಲ’ ಎಂದ. ಏನೆಂದು ಕೇಳಿದಳು. ನಾನು ಏರ್‌ಪೋರ್ಟ್‌ಗೆ ಹೊರಟಿದ್ದೆ, ಮಾರ್ಗಮಧ್ಯೆ ನನ್ನ ಹಳೆಯ ಹೆಂಡತಿಯ ಫೋನ್ ಬಂತು. ನನ್ನ ಮಗ ಆಕ್ಸಿಡೆಂಟಿನಲ್ಲಿ ತೀರಿಕೊಂಡಿದ್ದಾನೆ ಎಂದು ಜೇವಿಯರ್ ಅತ್ತಕಡೆಯಿಂದ ಅಳುತ್ತಿದ್ದ. ಶೆರಿಲ್‌ಗೆ ಇಂತಹ ವ್ಯಕ್ತಿಯನ್ನು ಅನುಮಾನಿಸಿಬಿಟ್ಟೆನಲ್ಲ ಎಂದು ಬೇಸರವಾಯಿತು. ಪುನಃ ಶೆರಿಲ್‌ಗೆ ಜೇವಿಯರ್ ಮೇಲೆ ಎಲ್ಲಿಲ್ಲದ ನಂಬಿಕೆ. ಮೋಸಹೋಗಿಲ್ಲವೆಂಬ ದೃಢತೆ. ಅಷ್ಟರಲ್ಲೇ ಜೇವಿಯರ್ ಅವಳು ಕೊಟ್ಟ ಹಣದಲ್ಲಿ ಸ್ವಲ್ಪ ಹಣವನ್ನು ವಾಪಸ್ ಮಾಡಿದ್ದ. ಇದೆಲ್ಲ ನಡೆದದ್ದೇ ಆತನನ್ನು ಶೆರಿಲ್ ಸಂಪೂರ್ಣ ನಂಬಿಬಿಟ್ಟಳು. ಕಥೆ ಹೀಗೆ ಮುಂದುವರಿಯುತ್ತದೆ. ಆನಂತರದಲ್ಲಿ ಜೇವಿಯರ್ ಎಂಬ ಫ್ರಾಡ್ ಮೋಸಗಾರ ವಿದೇಶದಲ್ಲಿಯೇ ಕೂತು ಶೆರಿಲ್‌ನ ಎಲ್ಲಾ ಉಳಿತಾಯದ ಹಣವನ್ನು ಲೂಟಿಮಾಡಿಬಿಡುತ್ತಾನೆ. ಅಷ್ಟೇ ಅಲ್ಲ, ಅವಳ ಕ್ರೆಡಿಟ್ ಕಾರ್ಡ್ ಬಳಸಿ ಅದರಲ್ಲಿಯೂ ಹಣವನ್ನೂ ಲೂಟಿ ಮಾಡಿ ಅವಳನ್ನು ಮಿಲಿಯನ್ ಗಟ್ಟಲೆ ಸಾಲಕ್ಕೆ ದೂಡಿಬಿಡುತ್ತಾನೆ. ಕೊನೆಗೊಂದು ದಿನ ಅವಳಿಗೆ ತಾನು ಫ್ರಾಡ್ - ಮೋಸಗಾರ ಎಂಬುದನ್ನು ಹೇಳುತ್ತಾನೆ. ಅಲ್ಲಿಯವರೆಗೂ ಶೆರಿಲ್ ಅವನನ್ನು ನಂಬುತ್ತಲೇ ಹೋಗುತ್ತಾಳೆ. ಪ್ರತಿ ಬಾರಿ ಅವನ ಮೇಲೆ ಅಪನಂಬಿಕೆ ಹುಟ್ಟಿದಾಗಲೂ ಆಕೆಗೆ ಸಿಗುವ ಒಂದೇ ಒಂದು ಚಿಕ್ಕ ಸಾಕ್ಷ್ಯ ಉಳಿದೆಲ್ಲ ಸುಳ್ಳನ್ನು ಕಾಣದಂತೆ ಮಾಡಿಬಿಡುತ್ತದೆ. ಶೆರಿಲ್ ದಡ್ಡಿಯಲ್ಲ, ಡಬಲ್ ಡಿಗ್ರಿ ಓದಿರುವ ಜಾಣೆ. ಆದರೆ ಆಕೆ ಈ ನಂಬಿಕೆಯ ಖೆಡ್ಡಾದೊಳಕ್ಕೆ ಬೀಳುತ್ತ, ತನಗೆ ಒದಗಿ ಬರುವ ಅನುಮಾನಗಳನ್ನು ಪಕ್ಕಕ್ಕೆ ಸರಿಸುತ್ತ, ಮುಂದೊಂದು ದಿನ ಇದು ಸುಳ್ಳು ಎಂದು ತಿಳಿದರೂ ಪುನಃ ಮರಳಿ ಬಾರದ ಹಂತಕ್ಕೆ ತಲುಪಿಬಿಡುತ್ತಾಳೆ.

ಮನುಷ್ಯನ ಈ ನಡವಳಿಕೆಗೆ ಕಾರಣ Cognitive Dissonance’. ಮನುಷ್ಯ ಮೊದಲು ಬಲವಾಗಿ ನಂಬುತ್ತಾನೆ. ಆನಂತರ ಆ ನಂಬಿಕೆಯ ಕಾರಣದಿಂದ ಬದಲಾಯಿಸಲಾಗದ ಕೆಲಸವೊಂದನ್ನು ಮಾಡಿಕೊಂಡುಬಿಡುತ್ತಾನೆ. ಉದಾಹರಣೆಗೆ ಡೋರ್ಥಿ ಮಾರ್ಟಿನ್ ಅನುಯಾಯಿಗಳಂತೆ ಮನೆ, ಮಠ, ಉದ್ಯೋಗ ಎಲ್ಲವನ್ನೂ ಬಿಟ್ಟು ಬರುವುದು. ಶೆರಿಲ್ ಕಥೆಯಲ್ಲಿ ಭಾವನಾತ್ಮಕವ ಘಾಸಿಗೊಳ್ಳುವುದರೊಂದಿಗೆ ಹಣ ಕಳೆದುಕೊಳ್ಳುವುದು. ಅಥವಾ ಅತ್ಯಂತ ಖಾಸಗಿ ವಿಷಯವನ್ನು ಅಂಥವರ ಜತೆ ಹಂಚಿಕೊಳ್ಳುವುದು. ಇದರೊಂದಿಗೆ ವೈಯಕ್ತಿಕ ದೌರ್ಬಲ್ಯವೊಂದು ಸೇರಿಕೊಂಡುಬಿಟ್ಟರೆ ಮುಗಿದೇ ಹೋಯಿತು. ಈ ಹಂತದಲ್ಲಿ ತಾನು ಬಲವಾಗಿ ನಂಬಿದ ಯಾವುದನ್ನೇ ಪ್ರಶ್ನಿಸುವ ಸ್ಥಿತಿ ಎದುರಾದಾಗ ತಲ್ಲಣಗೊಳ್ಳುತ್ತಾನೆ.

ಕೆಲವರಿಗೆ ಅವರು ನಂಬಿದ್ದು ಮೋಸ, ಸುಳ್ಳು, ತಪ್ಪು ಇತ್ಯಾದಿ ತಕ್ಷಣ ತಿಳಿದುಬಿಡುತ್ತದೆ. ಆದರೆ ಕೆಲವರ ನಂಬಿಕೆಗಳು ಹಾಗಲ್ಲ. ಅವು ನಿಧಾನಕ್ಕೆ ವ್ಯಕ್ತಿತ್ವದ ಭಾಗವಾಗಿಬಿಟ್ಟಿರುತ್ತದೆ. ಯಾವುದೋ ಒಂದು ಸ್ವಾಮೀಜಿಯ, ಮಠದ, ದೇವಮಾನವರೆನಿಸಿಕೊಂಡವರ ಸಾಮೀಪ್ಯ ಕ್ರಮೇಣ ಅಂಥವರನ್ನು ಅವರ ಮಾಯಾಜಾಲದೊಳಕ್ಕೆ ಎಳೆದುಕೊಂಡುಬಿಡುತ್ತದೆ. ಅದೆಷ್ಟೋ ಯುವಕ ಯುವತಿಯರು ಸಂಸಾರ-ಕುಟುಂಬ ತ್ಯಜಿಸಿ ಕಳ್ಳ ದೇವಮಾನವರ ಆಶ್ರಮಗಳನ್ನು ಸೇರುವುದಿದೆ. ಎಲ್ಲರೂ ಕಳ್ಳರಲ್ಲ, ನೂರಕ್ಕೆ ತೊಂಬತ್ತೊಂಬತ್ತು ಒಳ್ಳೆಯವರೇ ಇದ್ದಾರೆ. ಆದರೆ ಅದೊಮ್ಮೆ ಕಳ್ಳ ನಿತ್ಯಾನಂದನಂಥವರ ಬಳಿ ಸೇರಿಕೊಂಡರೆ ಅದು ಬಹುತೇಕರಿಗೆ ಒನ್ ವೇ. ಏಕಮುಖ ದಾರಿ.

ಕೆಲವೊಮ್ಮೆ ಈ ರೀತಿ ನಂಬಿಕೊಂಡು ತನ್ನ ಆಸ್ತಿ ಪಾಸ್ತಿ ಎಲ್ಲವನ್ನೂ ಕಳ್ಳ ದೇವಮಾನವರಿಗೆ ಬರೆದುಕೊಡುವ, ಮಕ್ಕಳನ್ನು, ಮಡದಿಯನ್ನು ಆಶ್ರಮದ ಭಾಗವಾಗಿಸುವ ಹಂತಕ್ಕೆ ಹೋಗುವುದನ್ನು ನೋಡಿದ್ದೇನೆ. ಕ್ರಮೇಣ ಠಕ್ಕ ದೇವಮಾನವರ ಸಾಮೀಪ್ಯ ಅದೆಷ್ಟಾಗುತ್ತದೆ ಎಂದರೆ ಅವರು ಹೇಳಿದ್ದನ್ನೆಲ್ಲಾ ಮಾಡಲು ಮುಂದಾಗುತ್ತಾರೆ. ಕೆಲವರಿಗೆ ಆಶ್ರಮ, ಮಠ ಎನ್ನುವುದು ಅದರ ಉದ್ದೇಶ ಮೀರಿದ ಐಡೆಂಟಿಟಿ. ಗುರೂಜಿ ಹೇಳಿದರೆಂದರೆ ಮುಗಿದೇ ಹೋಯಿತು. ಇಂಥವರು ಒಳ್ಳೆಯ ಸ್ವಾಮೀಜಿಗಳ, ಸನ್ಯಾಸಿಗಳ ಜತೆಯಾದಲ್ಲಿ ಒಳ್ಳೆಯ ಕೆಲಸಗಳು ಆಗುವುದು ನಿಜ. ಒಂದು ವೇಳೆ ಅಲ್ಲಿರುವುದು ದೇವಮಾನವನ ವೇಷದ ದಗಲ್ ಬಾಜಿಯಾಗಿದ್ದರೆ ಅವರ ಜೊತೆ ಸಂಸಾರವೇ ಬೀದಿಗೆ ಬಿದ್ದರೂ ಅದರ ಅರಿವಾಗುವುದು ತಡವಾಗಿರುತ್ತದೆ. ಅಂಥವರು ಬೀದಿಗೆ ಬೀಳುತ್ತಾರೆ ಅಥವಾ ಬೀದಿಗಿಳಿದು ರಂಪ ಮಾಡುತ್ತಾರೆ. ಆದರೆ ಸಮಯ ಮೀರಿರುತ್ತದೆ.

ಹಕ್ಕಿ ಫೋಟೋ ತೆಗೆಯದೇ ವಾಪಸಾದೆ!

ಶಶಾಂಕಣ

ಶಶಿಧರ ಹಾಲಾಡಿ
shashidhara.halady@gmail.com

ನಾವಿರುವ ಮನೆಯ ಹತ್ತಿರದ ಪುಟ್ಟ ಉದ್ಯಾನವನದಲ್ಲಿ ಕೆಲವೇ ಕೆಲವು ಹಕ್ಕಿಗಳನ್ನು ಕಾಣಲು ಸಾಧ್ಯ; ಅವುಗಳಲ್ಲಿ ಎದ್ದು ಕಾಣುವವು ಎಂದರೆ ಸೂರಕ್ಕಿಗಳು ಅಥವಾ ಸನ್‌ಬರ್ಡ್‌ಗಳು. ಇವು ಸುಂದರ ಹೊಳೆಯುವ ದೇಹದ, ಉದ್ದ ಕೊಕ್ಕಿನ, ಚಟುವಟಿಕೆಯ ಪುಟಾಣಿ ಹಕ್ಕಿಗಳು. ಮನುಷ್ಯರ ವಾಸಸ್ಥಳದ ಹತ್ತಿರವಿರುವ ದಾಸವಾಳ ಮೊದಲಾದ ಹೂವುಗಳ ಮೇಲೆ ಕುಳಿತು, ತನ್ನ ಉದ್ದನೆಯ ಕೊಕ್ಕನ್ನು ಆ ಹೂವಿನ ಬುಡಕ್ಕೆ ತೂರಿಸಿ, ಮಕರಂದ ಹೀರುವುದು ಅವುಗಳ ನೆಚ್ಚಿನ ಹವ್ಯಾಸ. ಚಿಂವ್ ಚಿರ್ ಎಂದು ಕೂಗುತ್ತಾ, ಅತ್ತಿತ್ತ ಹಾರಾಡುತ್ತಾ ಹೂವಿನಿಂದ ಹೂವಿಗೆ ಜಿಗಿಯುವ ಅವುಗಳ ನೋಟವು, ನೋಡುವವರ ಮನಸ್ಸಿನಲ್ಲಿ ಉಲ್ಲಾಸವನ್ನೂ ತುಂಬುತ್ತದೆ! ನಮ್ಮ ನಾಡಿನಲ್ಲಿ ನಾಲ್ಕಾರು ಪ್ರಭೇದದ ಸೂರಕ್ಕಿಗಳು ಇವೆ. ಇವುಗಳ ಪೈಕಿ ನೇರಳೆ ಬಣ್ಣದ ಸೂರಕ್ಕಿ, ನೇರಳೆ ಪ್ರಷ್ಠದ ಸೂರಕ್ಕಿ, ಲೋಟೆನ್ಸ್ ಸೂರಕ್ಕಿಗಳು ಸುಲಭವಾಗಿ ಕಾಣಸಿಗುತ್ತವೆ.

ಮಹಾನಗರದ ಮಧ್ಯೆ ಸೂರಕ್ಕಿಗಳ ಹಾರಾಟವನ್ನು ಕಂಡಾಗ, ನಮ್ಮ ಹಳ್ಳಿಯಲ್ಲಿ ಹಕ್ಕಿಗಳಿಗೆ ಸಂಬಂಧಿಸಿದಂತೆ ನಡೆದ ಒಂದೆರಡು ವಿದ್ಯಮಾನಗಳು ನೆನಪಾಯಿತು. ನಾನಾಗ ಹೈಸ್ಕೂಲಿನಲ್ಲಿ ಓದುತ್ತಿದ್ದೆ. ನಮ್ಮ ಮನೆಯಲ್ಲಿ ಹಳೆಯ ಕಾಲದ ಒಂದು ರೇಡಿಯೋ ಇತ್ತು. ಆಗಿನ ಕಾಲದ ಆ ಡುಬ್ಬ ರೇಡಿಯೋಗಳಿಗೆ ಏರಿಯಲ್ ವಯರಿನ ಸಂಪರ್ಕ ಬೇಕಿತ್ತು. ಮನೆಯ ಉಪ್ಪರಿಗೆಯ ತನಕ ಸಾಗಿದ್ದ ಏರಿಯಲ್ ವಯರನ್ನು ರೇಡಿಯೋದ ಹಿಂಭಾಗದಲ್ಲಿರದ್ದ ರಂಧ್ರದಲ್ಲಿ ಅಳವಡಿಸಿದಾಗ ಮಾತ್ರ, ಅದು ದೂರದ ಭದ್ರಾವತಿ ಸ್ಟೇಷನ್‌ನ ತರಂಗಗಳನ್ನು ಗ್ರಹಿಸುತ್ತಿತ್ತು. ಉಪ್ಪರಿಗೆಯಲ್ಲಿ ತೂಗು ಹಾಕಿದ್ದ ಏರಿಯಲ್ ತಂತಿಗಳಿಗೆ ಸಂಪರ್ಕ ನೀಡುವ ಒಂದು ಕಪ್ಪನೆಯ ವಯರು ಉದ್ದಕ್ಕೂ ಇಳಿಬಂದು, ಚಾವಡಿಯಲ್ಲಿದ್ದ ರೇಡಿಯೋಕ್ಕೆ ಸಿಕ್ಕಿಕೊಂಡಿತ್ತು.

ಈ ಕಪ್ಪನೆಯ ವಯರನ್ನು ಕಂಡರೆ, ಆ ಸೂರಕ್ಕಿ ದಂಪತಿಗಳಿಗೆ ಅದೇನೋ ಪ್ರೀತಿ. ಗೋಡೆಯಿಂದ ಇಳಿಬಂದಿದ್ದ ಆ ವಯರಿಗೆ ತಮ್ಮ ಗೂಡನ್ನು ಅಂಟಿಸಿದ ಅವುಗಳ ಕೌಶಲ ವಿಶಿಷ್ಟ. ತರಗಲೆ, ಬೂರುಗದ ಹತ್ತಿಯ ಚೂರು, ಜೇಡರ ಬಲೆ ಮೊದಲಾದ ಸಾಮಗ್ರಿಗಳಿಂದ ತಯಾರಿಸಿದ ಆ ಗೂಡಿಗೆ ಒಂದು ಪ್ರವೇಶದ್ವಾರ. ನಮ್ಮ ಮನೆಯ ಎದುರಿನಲ್ಲಿ ಸದಾ ನೀರಿನಿಂದ ತುಂಬಿರುತ್ತಿದ್ದ ಅಗೇಡಿಯ ಮೇಲೆ ಜೋತಾಡುವಂತಿದ್ದ ಆ ಗೂಡಿನ ಪ್ರವೇಶ ದ್ವಾರವು, ಬಯಲಿನ ಕಡೆಗೆ ತೆರೆದುಕೊಂಡಿತ್ತು.

ಆ ಸಂಜೆ ಗೂಡು ಕಟ್ಟುವ ಕೆಲಸ ಮುಗಿದಿರಬೇಕು. ಆ ಪುಟಾಣಿ ಸೂರಕ್ಕಿ, ತನ್ನ ಉದ್ದನೆಯ ಕೊಕ್ಕನ್ನು ಹೊರಗೆ ಚಾಚಿಕೊಂಡು, ಆ ಗೂಡಿನಲ್ಲಿ ಹುದುಗಿ ಕುಳಿತಿತ್ತು! ಮೊಟ್ಟೆಯಿಟ್ಟು, ಆ ಮೊಟ್ಟೆಗಳಿಗೆ ಕಾವುಕೊಡಲು ಕುಳಿತಿತ್ತು ಎನಿಸುತ್ತದೆ. ನಮ್ಮ ಮನೆಯ ಮುಂಭಾಗದ ಜಗಲಿಯಲ್ಲಿ ನಿಂತರೆ, ಆರೇಳು ಅಡಿ ಎತ್ತರದಲ್ಲಿ ಇದ್ದ ಆ ತೂಗಾಡುವ ಗೂಡು ಸ್ಪಷ್ಟವಾಗಿ ಕಾಣಿಸುತ್ತಿತ್ತು. ಆ ಸೂರಕ್ಕಿ ಹೊರಗೆ ಚಾಚಿದ್ದ ಒಂದಿಂಚು ಉದ್ದದ ಕೊಕ್ಕಿನ ವಿನ್ಯಾಸ, ಆ ಕೊಕ್ಕಿನ ತುದಿಯಿಂದ ಆಗಾಗ ಹೊರಗೆ ಚಾಚುತ್ತಿದ್ದ ತೆಳ್ಳನೆಯ ನಾಲಗೆಯಂತಿರುವ ಹೀರುಕೊಳವೆ ಕಾಣಿಸುತ್ತಿತ್ತು.ಆ ಸೂರಕ್ಕಿ ದಂಪತಿಗಳು ಮೊಟ್ಟೆಯಿಟ್ಟು ಮರಿ ಮಾಡಿ, ಮರಿಗಳಿಗೆ ಹಾರಲು ಕಲಿಸಿ ಕರೆದುಕೊಂಡು ಹೋದವು! ತಮ್ಮ ಮರಿಗಳಿಗೆ ಪ್ರತಿದಿನ ಅವು ಕೀಟಗಳನ್ನು ತಂದು ತಿನ್ನಿಸುವುದನ್ನು ಹತ್ತಿರದಿಂದ ನೋಡುವ ಅವಕಾಶ. ಜತೆಯಲ್ಲೇ, ಗೂಡಿನಲ್ಲಿದ್ದ ಕಲ್ಮಶಗಳನ್ನು ಸಹ ಕೊಕ್ಕಿನಲ್ಲಿ ಕಚ್ಚಿ ಹೊರಗೆ ಕೊಂಡೊಯ್ದು ದೂರದಲ್ಲಿ ಎಸೆದು, ಚೊಕ್ಕಟವಾಗಿಡುತ್ತಿದ್ದವು!

ಅಚ್ಚರಿ ಎಂದರೆ, ಮುಂದಿನ ವರ್ಷವೂ ಅದೇ ವಯರಿಗೆ ಆ ಸೂರಕ್ಕಿಗಳು ತಮ್ಮ ಗೂಡನ್ನು ಅಂಟಿಸಿದ್ದವು. ಆದರೆ ಆ ವರ್ಷ ಒಂದು ಪುಟ್ಟ ಅನಾಹುತವಾಯಿತು. ಆಗಿನ್ನೂ ಗೂಡು ಶೇ.90ರಷ್ಟು ಮುಗಿದಿತ್ತು ಅಥವಾ ಪೂರ್ತಿಯಾಗಿತ್ತೋ ಸರಿಯಾಗಿ ನೆನಪಿಲ್ಲ. ಅದೇ ಸಮಯದಲ್ಲಿ ದೀಪಾವಳಿ ಹಬ್ಬ ಬಂತು. ಆಗಿನ ದಿನಗಳಲ್ಲಿ ಪಟಾಕಿಗಳನ್ನು ಸುಡುವುದೆಂದರೆ ನಮ್ಮಪ್ಪನಿಗೆ ವಿಪರೀತ ಹುಚ್ಚು. ದೂರದ ಊರಿನಲ್ಲಿ ವೃತ್ತಿಯಲ್ಲಿದ್ದ ಅವರು, ದೀಪಾವಳಿಗೆ ಬರುವಾಗ ತಪ್ಪದೇ ಒಂದಿಷ್ಟು ಪಟಾಕಿಗಳನ್ನು ಉತ್ಸಾಹದಿಂದ ತರುತ್ತಿದ್ದರು. ದೀಪಾವಳಿಯ ರಾತ್ರಿ ಗದ್ದೆಗೆ ದೀಪ ಹಚ್ಚಿ ಬಂದ ನಂತರ, ಹಲವು ಪಟಾಕಿ ಸುಟ್ಟು ನಂತರ, ಒಂದೆರಡು ಬಿರುಸುಗಳನ್ನು ಹಕ್ಕಿ ಗೂಡಿನ ಕೆಳಗೆ, ಜಗಲಿಯ ಮೇಲೆ ಇಟ್ಟು ಹಚ್ಚಿದರು ನಮ್ಮಪ್ಪ.

‘ಆ ಜಗಲಿಯ ಮೇಲೆ ಬಿರುಸನ್ನಿಟ್ಟು ಹಚ್ಚಬೇಡಿ, ಅಲ್ಲೇ ಮೇಲೆ ಸೂರಕ್ಕಿಯ ಗೂಡು ಇದೆ’ ಎಂದು ನಾನು ಕೂಗಿಕೊಂಡೆ. ‘ಏನೂ ಆಗಲ್ಲ ಬಿಡು, ಗೂಡು ತುಂಬಾ ಮೇಲಿದೆ’ ಎಂದು, ಅಲ್ಲೇ ಇಟ್ಟು ಬಿರುಸಿಗೆ ಬೆಂಕಿ ಹಚ್ಚಿದರು. ಬರ್ ಎಂದು ಮೇಲಕ್ಕೆ ನೆಗೆದ ಬಿರುಸಿನ ಕಿಡಿಗಳು ಸೂರಕ್ಕಿಯ ಗೂಡಿಗೆ ತಗುಲಿದವು. ಒಂದೇ ಕ್ಷಣದಲ್ಲಿ ಸೂರಕ್ಕಿಯ ಗೂಡು ಭಸ್ಮ! ಪಾಪ, ಮರುದಿನ ಬೆಳಿಗ್ಗೆ ಅಲ್ಲೇ ಸುತ್ತ ಮುತ್ತ ಹಾರಾಡುತ್ತಿದ್ದ ಸೂರಕ್ಕಿಗಳು, ತಮ್ಮ ಉರಿದು ಹೋದ ಗೂಡನ್ನು ಕಂಡು ಮರುಗಿದವೋ ಏನೋ. ಇನ್ನು ನಮ್ಮ ಮನೆಯ ಹತ್ತಿರ ಅವು ಗೂಡು ಕಟ್ಟುವುದಿಲ್ಲವೇನೋ ಎಂದುಕೊಂಡೆ ನಾನು!

ಆದರೆ, ಸೂರಕ್ಕಿಗಳು ಯಾವುದೇ ಭಯವಿಲ್ಲದೇ, ಮರುವರ್ಷವೂ ಅದೇ ಜಾಗದಲ್ಲಿ ತಮ್ಮ ಗೂಡು ಕಟ್ಟಿದವು. ನಮ್ಮ ಮನೆಯ ಪರಿಸರದ ಮೇಲೆ, ಆ ಕಪ್ಪನೆಯ ವಯರಿನ ಮೇಲೆ ಆ ಸೂರಕ್ಕಿಗಳಿಗಿದ್ದ ವಿಶ್ವಾಸ ಕಂಡು ನಮಗೆಲ್ಲಾ ಹೆಮ್ಮೆ, ಅಚ್ಚರಿ. ಆದರೆ ಈ ವರ್ಷ ಮತ್ತೊಂದು ಗಂಡಾಂತರ ಕಾದಿತ್ತು. ನಮ್ಮ ಹಳ್ಳಿ ಮನೆಯ ಉಪ್ಪರಿಗೆಯ ಮಾಡಿಗೆ ತಾಗಿಕೊಂಡಿದ್ದ ಒಂದು ದೊಡ್ಡ ಹಲಸಿನ ಮರದ ಕೊಂಬೆಗಳು ಚಾಚಿಕೊಂಡಿರುವುದು ಮಾಮೂಲು. ಅವು ಚಾವಣಿಯ ಮೇಲೆ ಮುಚ್ಚಿಕೊಂಡಿದ್ದರೂ, ಆ ಕೊಂಬೆಗಳನ್ನು ಕಡಿದು ಹಾಕುವ ಪದ್ಧತಿ ಅಂದು ಇರಲಿಲ್ಲ. ನಮ್ಮ ಉಪ್ಪರಿಗೆಯ ತುದಿಯಲ್ಲಿ, ದೊಂಬೆ ಹೆಂಚಿನ ಉದ್ದನೆಯ ಸಂದಿಯಲ್ಲಿ ಇಲಿಗಳು ವಾಸಿಸುತ್ತಿದ್ದುದು ಸಹ ಸಾಮಾನ್ಯ ಸಂಗತಿ. ಆ ಇಲಿಗಳನ್ನು ಹುಡುಕಿಕೊಂಡು ಹಗಲಿನ ಹೊತ್ತಿನಲ್ಲಿ ನಾಗರ ಹಾವುಗಳು ಸಹ ಬರುತ್ತಿದ್ದವು! ನಮ್ಮೂರಿನವರು ಆ ಹಾವಿಗೆ ಅದೆಷ್ಟು ಗೌರವ, ಭಯ, ಭಕ್ತಿ ತೋರುತ್ತಿದ್ದರೆಂದರೆ, ಅದನ್ನು ದೇವರ ಹಾವು ಎಂದು ಕರೆದು, ಅದಕ್ಕೆ ಯಾವುದೇ ಅಪಾಯವಾಗದಂತೆ ನೋಡಿಕೊಳ್ಳುತ್ತಿದ್ದರು! ಮನೆಯ ಮಾಡಿನ ಮೇಲೆ ಹಾವು ನಿಧಾನವಾಗಿ ಸಂಚರಿಸುತ್ತಾ, ಇಲಿಗಳ ವಾಸನೆಯನ್ನು ಗ್ರಹಿಸಲು ತನ್ನ ನಾಲಗೆಯನ್ನು ಝಳಪಿಸುತ್ತಾ ಓಡಾಡುವುದನ್ನು ನಾನು ಹಲವು ಬಾರಿ ಕಂಡಿದ್ದೆ. ‘ಅದು ಅದರ ಪಾಡಿಗೆ ಬಂದು ಹೋಗುತ್ತದೆ, ನಮಗೆ ಏನೂ ಮಾಡುವುದಿಲ್ಲ’ ಎನ್ನುತ್ತಿದ್ದರು ನಮ್ಮ ಅಮ್ಮಮ್ಮ!

ಆ ವರ್ಷ, ಆ ರೀತಿ ಉಪ್ಪರಿಗೆಯ ಮಾಡಿನ ಮೇಲೆ ಇಲಿಗಳನ್ನು ಹುಡುಕುತ್ತಾ ಬಂದ ಒಂದು ನಾಗರಹಾವು, ನಿಧಾನವಾಗಿ ಸೂರಕ್ಕಿಯ ಗೂಡಿನ ಕಡೆ ಚಲಿಸಿತು. ಆ ನಾಗರಹಾವಿಗೆ ಅದೆಂತಹ ಕೌಶಲವಿತ್ತೆಂದರೆ, ಗೂಡಿನ ಕಡೆ ನಿಧಾನವಾಗಿ ಚಲಿಸಿ, ವಯರಿಗೆ ಅಂಟಿಕೊಂಡಿದ್ದ ಸೂರಕ್ಕಿಯ ಗೂಡನ್ನು ಪತ್ತೆ ಮಾಡಿ, ವಯರನ್ನು ಮತ್ತು ಗೋಡೆಯನ್ನೇ ಆಧಾರ ಮಾಡಿಕೊಂಡು, ಅದರೊಳಗೆ ಇಣುಕಿತು! ಹತ್ತಿರದಲ್ಲೇ ಇದ್ದ ಸೂರಕ್ಕಿಗಳು ಅತ್ತಿತ್ತ ಹಾರಾಡುತ್ತಾ ಆರ್ತನಾದ ಮಾಡುತ್ತಿದ್ದವು. ಆ ನಾಗರಹಾವು ಸೂರಕ್ಕಿಯ ಗೂಡಿಗೆ ಭೇಟಿ ಇತ್ತಾಗ, ಅಲ್ಲಿ ಮೊಟ್ಟೆ ಇತ್ತೋ ಇಲ್ಲವೋ ನನಗೆ ಸ್ಪಷ್ಟವಾಗಿ ಗೊತ್ತಿಲ್ಲ; ಹಾವು ಮೊಟ್ಟೆಯನ್ನು ನುಂಗಿದ್ದನ್ನು ಸಹ ನಾನು ಕಣ್ಣಾರೆ ನೋಡಿರಲಿಲ್ಲ. ಆದರೆ, ಆ ಎರಡು ಹಕ್ಕಿಗಳು ಅತ್ತಿಂದಿತ್ತ ಹಾರಾಡುತ್ತಾ, ಸನಿಹದ ಮಾವಿನ ಮರದ ಟೊಂಗೆಯ ಮೇಲೆ ಒಮ್ಮೊಮ್ಮೆ ಕುಳಿತು, ಮತ್ತೆ ಇತ್ತ ಹಾರಿ ಬರುತ್ತಾ, ಕೂಗುತ್ತಿದ್ದ ಪರಿಯನ್ನು ಕಂಡರೆ ಮಾತ್ರ, ಏನೋ ದೊಡ್ಡ ಅನಾಹುತ ಆಗಿರಲೇ ಬೇಕು ಎನಿಸಿತು. ಕೆಲವು ನಿಮಿಷಗಳ ನಂತರ ಹಾವು ಕೆಳಗಿಳಿದು, ಹೊರಟುಹೋಯಿತು.



ಸೂರಕ್ಕಿಗಳಿಗೆ ತಮ್ಮ ಗೂಡಿಗೆ ಭೇಟಿಕೊಟ್ಟ ಆ ನಾಗರಹಾವನ್ನು ಕಂಡು ಏನು ಅನಿಸಿತೋ, ಎಷ್ಟು ಭಯಪಟ್ಟವೋ! ಆ ದಿನ ತಮ್ಮ ಗೂಡನ್ನೇ ಬಿಟ್ಟು ಹೋದವು. ಮಾತ್ರವಲ್ಲ, ಮುಂದೆಂದೂ ಆ ವಯರಿಗೆ ಅಂಟಿದಂತೆ ತಮ್ಮ ಗೂಡನ್ನು ಕಟ್ಟಲೇ ಇಲ್ಲ. ದೀಪಾವಳಿ ದಿನ ಬೆಂಕಿ ತಗುಲಿ ಗೂಡು ಭಸ್ಮವಾದರೂ, ಅವು ಬೆದರಲಿಲ್ಲ. ಆದರೆ ನಾಗರಹಾವು ತಮ್ಮ ಗೂಡಿಗೆ ಭೇಟಿಕೊಟ್ಟದ್ದನ್ನು ಕಂಡು ಹೆದರಿದವು. ನಂತರದ ವರ್ಷಗಳಲ್ಲಿ ನಮ್ಮ ಮನೆಯ ಸುತ್ತ ಮುತ್ತ ಮೂರು ಪ್ರಭೇದದ ಸೂರಕ್ಕಿಗಳು ಹಾರಾಡುವುದನ್ನು ಕಂಡಿದ್ದೇನಾದರೂ, ಆ ಜಾಗದಲ್ಲಿ ಗೂಡು ಕಟ್ಟಲಿಲ್ಲ.

ಮನೆಯ ಕಿಟಿಕಿಗೆ ತಾಗಿಕೊಂಡಂತೆ ಕಟ್ಟಿದ್ದ ಸೂರಕ್ಕಿಯ ಗೂಡನ್ನು ಹತ್ತಿರದಿಂದ ನೋಡುವ ಅವಕಾಶ ಸಿಕ್ಕಿದ್ದರೂ, ಅಂದು ಅದರ ಛಾಯಾಚಿತ್ರ ತೆಗೆಯುವ ಅವಕಾಶ ನನಗಿರಲಿಲ್ಲ. ಅಂದಿನ ದಿನಗಳಲ್ಲಿ ನಮ್ಮ ಹಳ್ಳಿಯಲ್ಲೇ ಯಾರ ಬಳಿಯಲ್ಲೂ ಕ್ಯಾಮೆರಾ ಇರಲಿಲ್ಲ! ನಂತರದ ದಶಕಗಳಲ್ಲಿ, ನಾನು ಉದ್ಯೋಗಸ್ಥನಾದ ನಂತರ, ಒಂದು ಫಿಲಂ ಕ್ಯಾಮೆರಾ ಕೊಂಡುಕೊಂಡೆ. ‘ಹಕ್ಕಿಯ ಗೂಡು ಕಂಡರೆ ತಿಳಿಸು, ಫೋಟೋ ತೆಗೆಯುತ್ತೇನೆ’ ಎಂದು ತಾರಿಕಟ್ಟೆಯಲ್ಲಿದ್ದ ಬಂಧು, ರಾಜಣ್ಣನಿಗೆ ಹೇಳಿದ್ದೆ. ‘ಮನೆಯ ಹತ್ತಿರವೇ ಪುಟಾಣಿ ಹಕ್ಕಿಯೊಂದು ಗೂಡು ಕಟ್ಟಿದೆ, ಫೋಟೋ ತೆಗೆಯಬಹುದು, ಬಾ’ ಎಂದು ರಾಜಣ್ಣ ಕಾಗದ ಬರೆದ. ಅದೇ ಶನಿವಾರ ಕ್ಯಾಮೆರಾ ಮತ್ತು ಲೆನ್ಸ್ ಹೊತ್ತು ತಾರಿಕಟ್ಟೆಗೆ ಹೋದೆ. ರಾಜಣ್ಣನ ಮನೆಯ ಎದುರು ತುಸು ದೂರದಲ್ಲಿದ್ದ ತೇಗದ ಗಿಡದಲ್ಲಿ ದರ್ಜಿ ಹಕ್ಕಿಯೊಂದು (ಟೇಲರ್ ಬರ್ಡ್) ಗೂಡುಕಟ್ಟಿತ್ತು. ನೆಲದಿಂದ ಕೇವಲ ಮೂರು ಅಡಿ ಎತ್ತರದಲ್ಲಿ, ಎರಡು ತೇಗದ ಎಲೆಗಳನ್ನು ತನ್ನ ಕೊಕ್ಕಿನಿಂದಲೇ ಹೊಲಿದು ಗೂಡು ಕಟ್ಟಿ, ಮರಿ ಮಾಡಿತ್ತು.

ಆ ಗೂಡಿನ ಫೋಟೋ ಕ್ಲಿಕ್ಕಿಸಲು ನನಗೆ ಅನುಕೂಲವಾಗಲೆಂದು, ಸುತ್ತಲಿನ ಕುರುಚಲು ಗಿಡಗಳನ್ನು ರಾಜಣ್ಣ ಚೊಕ್ಕಟ ಮಾಡಿದ್ದ. ‘ಹಾಗೆ ಮಾಡಬಾರದಿತ್ತು, ಹಕ್ಕಿಗೆ ಹೆದರಿಕೆ ಆಗುತ್ತೆ’ ಎಂದೆ ನಾನು. ಆ ಗೂಡಿನ ಬಳಿ ಹೋಗಿ ನೋಡಿದಾಗ, ಎರಡು ಮರಿಗಳಿದ್ದವು. ನಾವಿಬ್ಬರೂ ಗೂಡಿನ ಹತ್ತಿರ ಸುಳಿದಾಡುವುದನ್ನು ಕಂಡು ತಾಯಿ ಹಕ್ಕಿಗೆ ಗಾಬರಿಯಾಗಿರಬೇಕು. ಆಚೀಚಿನ ಗಿಡಗಳಲ್ಲಿ ಕುಳಿತು, ಜೋರಾಗಿ ಕೂಗತೊಡಗಿತು. ನಾನು ಕ್ಯಾಮೆರಾ ಫೋಕಸ್ ಮಾಡಲು ಆರಂಭಿಸಿದೆ. ‘ಇನ್ನೂ ಒಂದೆರಡು ಎಲೆ, ಗೆಲ್ಲು ತೆಗೆದು ಹಾಕಿ, ಇನ್ನಷ್ಟು ಜಾಗ ಮಾಡಿಕೊಡಲೆ?’ ಎಂದು ರಾಜಣ್ಣ ಕೇಳಿದ. ‘ಖಂಡಿತಾ ಬೇಡ, ಆ ಹಕ್ಕಿಗೆ ತೊಂದರೆ ಆಗುತ್ತದೆ’ ಎಂದೆ.

ಸ್ಪಷ್ಟವಾಗಿ ಫೋಕಸ್ ಮಾಡಲು ಇನ್ನಷ್ಟು ಹತ್ತಿರ ಹೋದೆ. ತಾಯಿ ಹಕ್ಕಿ ಇನ್ನಷ್ಟು ತೀವ್ರವಾಗಿ ಕೂಗತೊಡಗಿತು. ಮರಿಗಳಿಗೆ ಅಪಾಯ ಮಾಡಲು ಬಂದಿದ್ದೇನೆ ಎಂದೇ ಅದು ಯೋಚಿಸಿರಬೇಕು. ನಾನಿನ್ನೂ ಒಂದೇ ಒಂದು ಫೋಟೋ ತೆಗೆದಿರಲಿಲ್ಲ, ಅದೇಕೋ ಮನಸ್ಸು ಒಮ್ಮೆಗೇ ಕಲವಿಲವಾಯಿತು. ಆ ಪುಟಾಣಿ ಮರಿಗಳ ಹತ್ತಿರ ಹೋಗಿ, ಅವುಗಳ ದಿನಚರಿಗೆ ಭಂಗ ತರುವಂತೆ ನಾನು ಫೋಟೋ ತೆಗೆಯಬೇಕೆ? ನಾವಿಬ್ಬರೂ ಅಷ್ಟು ಹತ್ತಿರ ಸುಳಿದಾಡಿದ್ದನ್ನು ಕಂಡು, ತಾಯಿ ಹಕ್ಕಿ, ಬೆದರಿ, ಖಾಯಂ ಆಗಿ ಆ ಜಾಗವನ್ನು ತೊರೆದರೆ, ಆ ಕ್ಷಣದಿಂದಲೇ ಆ ಮರಿಗಳು ಅನಾಥವಾಗಬಹುದಲ್ಲವೆ? ನಾನು ಫೋಟೋ ತೆಗೆಯುವುದು ಮುಖ್ಯವೇ ಅಥವಾ ಆ ಹಕ್ಕಿಗೂಡಿನ ಮರಿಗಳು ತಾಯಿಯ ಆರೈಕೆ ಪಡೆದು, ಬೆಳೆಯುವುದು ಮುಖ್ಯವೆ?

ಅದೇಕೋ ಆ ಕ್ಷಣದಲ್ಲಿ, ನಮ್ಮ ಹಳ್ಳಿ ಮನೆಯಲ್ಲಿ ಅಂದು ನಾಗರಹಾವನ್ನು ತಮ್ಮ ಗೂಡಿನ ಬಳಿ ಕಂಡು ಬೆದರಿ, ಆರ್ತನಾದ ಮಾಡುತ್ತಿದ್ದ ಲೋಟೆನ್ಸ್ ಸೂರಕ್ಕಿ ದಂಪತಿಯ ನೆನಪಾಯಿತು. ನಾಗರಹಾವು ತಮ್ಮ ಗೂಡಿಗೆ ಭೇಟಿ ನೀಡಿದ್ದನ್ನು ಕಣ್ಣಾರೆ ಕಂಡ ಆ ಹಕ್ಕಿಗಳು ಆರ್ತನಾದ ಮಾಡಿ ಗೌಜು ಎಬ್ಬಿಸಿದ್ದು ಮಾತ್ರವಲ್ಲ, ಆ ನಂತರ ಆ ಜಾಗವನ್ನೇ ಬಿಟ್ಟು ದೂರ ಹೊರಟುಹೋದವಲ್ಲ! ದರ್ಜಿ ಹಕ್ಕಿಯ ಕೂಗನ್ನು ಕೇಳಿ, ನನ್ನ ಕಿವಿಯಲ್ಲಿ ಸೂರಕ್ಕಿಗಳ ಯಾತನೆ ಅನುರಣಿಸಿತು. ರಾಜಣ್ಣನಿಗೆ ಹೇಳಿದೆ ‘ಫೋಟೋ ತೆಗೆಯುವುದಿಲ್ಲ ಮಾರಾಯ, ಈ ಹಕ್ಕಿ ತನ್ನ ಮರಿಗಳನ್ನು ಕ್ಷೇಮವಾಗಿ ಬೆಳೆಸಲಿ’ ಎಂದು ಕ್ಯಾಮೆರಾ ಮತ್ತು ಲೆನ್ಸ್‌ನ್ನು ಬ್ಯಾಗಿಗೆ ಸೇರಿಸಿ, ವಾಪಸು ಹೊರಟೆ.

ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀ ಯವಾಗಿ ಗುರುತಿಸಿಕೊಂಡಿರುವ ಹಿಂದೂ ರಾಷ್ಟ್ರೀಯವಾದಿ ಸಂಘಟನೆಯಾದ ರಾಷ್ಟ್ರೀಯ ಸ್ವಯಂಸೇವಕ ಸಂಘ ಜನಮಾನಸದಲ್ಲಿ ಆರ್‌ಎಸ್‌ಎಸ್ ಅಥವಾ ಸಂಘ ಎಂದೇ ಜನಪ್ರಿಯ. ಈಗ ಭಾರತವನ್ನು ಆಳುತ್ತಿರುವ ಭಾರತೀಯ ಜನತಾ ಪಕ್ಷದ (ಬಿಜೆಪಿ) ಮೂಲ ಇದೇ ಸಂಘಟನೆಯಲ್ಲಿದೆ.

ಆರ್‌ಎಸ್‌ಎಸ್‌ಗೆ 100 ವರ್ಷದ ಸಡಗರ

ಶತಮಾನೋತ್ಸವ ಸಂಭ್ರಮದಲ್ಲಿ ರಾಷ್ಟ್ರಿಯ ಸ್ವಯಂಸೇವಕ ಸಂಘ ಜಗತ್ತಿನ ಅತಿ ದೊಡ್ಡ ಸಂಘಟನೆಯ ಹಿನ್ನೋಟ ಇಲ್ಲಿದೆ...

ಅಂದಿಗೂ-ಇಂದಿಗೂ- ಎಂದೆಂದಿಗೂ ಹಿಂದೂಗಳನ್ನು ಒಗ್ಗೂಡಿಸುವ ಏಕೈಕ ಗುರಿ ಯೊಂದಿಗೆ, ಯಾವುದೇ ಲಾಭಾಕಾಂಕ್ಷೆ ಯಿಲ್ಲದೇ ಶ್ರಮಿಸುತ್ತಿರುವ, ವಿಶ್ವದ ಅತಿದೊಡ್ಡ ಸ್ವಯಂಸೇವಕರ ಸಂಸ್ಥೆ 'ರಾಷ್ಟ್ರೀಯ ಸ್ವಯಂಸೇವಕ ಸಂಘ'(ಆರ್‌ಎಸ್‌ಎಸ್). 2024ರ ವಿಜಯದಶಮಿ ದಿನವೇ 100ನೇ ವರ್ಷಕ್ಕೆ ಕಾಲಿಡಲಿದೆ.
ಸ್ವಾತಂತ್ರ್ಯ ಪೂರ್ವದಲ್ಲಿ ಹಿಂದೂಗಳ ಮೇಲೆ ನಡೆದ ದೌರ್ಜನ್ಯಗಳನ್ನು ಪ್ರಶ್ನಿಸಲೆಂದೇ ಆರ್‌ಎಸ್‌ಎಸ್ ಸ್ಥಾಪನೆಗೊಂಡಿತು. 99 ವರ್ಷಗಳ ಅಮೋಘ ಪಯಣ ಪೂರ್ಣಗೊಳಿಸಿ, ಅಪಾರ ಯಶಸ್ಸು ಗಳಿಸಿ 100ನೇ ವರ್ಷಕ್ಕೆ ಪದಾರ್ಪಣೆ ಮಾಡುತ್ತಿದೆ. ಅದ್ದೂರಿ, ಆಡಂಬರ, ವೈಭವದಿಂದ ಸದಾ ದೂರವಿರುವ, ಶಿಸ್ತಿನ ನಡೆನುಡಿಯ ಆರ್‌ಎಸ್‌ಎಸ್, ಶತಮಾನೋತ್ಸವವನ್ನೂ ಅಷ್ಟೇ ಸರಳವಾಗಿ ಆಚರಿಸುವುದಾಗಿ ಹೇಳಿದೆ.
ಮಹಾರಾಷ್ಟ್ರ ರಾಜ್ಯದ ನಾಗಪುರದಲ್ಲಿನ ಪ್ರಧಾನ ಕಚೇರಿ ಯಲ್ಲಿ ಪ್ರತಿವರ್ಷ ವಿಜಯ ದಶಮಿಯಂದು ಸಂಸ್ಥಾಪನಾ ದಿನಾಚರಣೆಯ ವಿಶೇಷ ಭಾಷಣವನ್ನು ಸರಸಂಘಚಾಲಕ್ ಮಾಡುವುದು ವಾಡಿಕೆ. ಅದರಂತೆ ಈ ವರ್ಷವೂ ಸಂಘದ ನಿಲು ವನ್ನು ದೇಶದ ಜನರಿಗೆ ಸರಸಂಘಚಾಲಕ್ ಸ್ಪಷ್ಟಪಡಿಸಲಿದ್ದಾರೆ. ವಿಶ್ವದ ಅತ್ಯಂತ ಬಲಿಷ್ಠ ಸಂಘಟನೆಯಾದ ಆರ್‌ಎಸ್‌ಎಸ್ ಸಾಗಿ ಬಂದಿರುವ ಹಾದಿಯ ಸ್ಮರಣೆ ಅನೇಕ ಕಾರಣಗಳಿಗೆ ಅತ್ಯಗತ್ಯ. ರಾಷ್ಟ್ರೀಯ ಸ್ವಯಂಸೇವಕ ಸಂಘ ಸ್ಥಾಪನೆಯಾದ ದಿನದಿಂದ 10 ದಶಕ ಕಾಲ ವಿವಿಧ ಹಂತಗಳನ್ನು ದಾಟಿ ಬಂದಿದೆ. ನಿಷೇಧ, ವಿರೋಧ, ಹೋರಾಟ, ಸೆರೆವಾಸ ಎಲ್ಲವನ್ನೂ ಆರ್‌ಎಸ್‌ಎಸ್‌ನ ಕಾರ್ಯಕರ್ತರು, ನಾಯಕರು ಕಂಡಿದ್ದಾರೆ. ಆದರೆ ಎಂದೂ ಹಿಂದುತ್ವ, ಸಮಾಜ ಮತ್ತು ರಾಷ್ಟ್ರದ ಆದರ್ಶಗಳೆಡೆಗಿನ ಬದ್ಧತೆಯನ್ನು ಸಂಘ ಎಂದೂ ಬದಲಿಸಿಲ್ಲ. ಸ್ಥಾಪಕ ಡಾ. ಕೇಶವ ಬಲಿರಾಂ ಹೆಡ್ಗೆವಾರ್ ಅವರಿಂದ ಹಿಡಿದು ಹಾಲಿ ಸರಸಂಘ ಚಾಲಕ್ ಮೋಹನ ಭಾಗವತ್ ಅವರವರೆಗೆ 6 ಸರಸಂಘಚಾಲಕ್ ಮುಂದಾಳತ್ವದಲ್ಲಿ ಸಾಗಿ ಬಂದಿರುವ ಆರ್‌ಎಸ್‌ಎಸ್, ದಿನ ಕಳೆದಂತೆ ಬಲವಾಗುತ್ತಾ ಬಂದಿದೆ. ಇದೀಗ ಅದರ ಶಾಖೆಗಳು ದೇಶದ ಮೂಲೆ ಮೂಲೆಗೂ ವ್ಯಾಪಿಸಿವೆ. ಹಿಂದೂ ರಾಷ್ಟ್ರ, ಭಾರತೀಯರೆಲ್ಲರೂ ಹಿಂದೂಗಳೇ ಎಂಬ ಸಂದೇಶವನ್ನು ದೇಶವ್ಯಾಪಿಯಾಗಿ ಪಸರಿಸುತ್ತಾ ಬಂದಿದೆ.

ಆರ್‌ಎಸ್‌ಎಸ್‌ನ ಪ್ರಥಮ ಶಾಖೆ

ಆರ್‌ಎಸ್‌ಎಸ್ ಸ್ಥಾಪನೆಯ ಆರಂಭದಲ್ಲಿ ಯಾವುದೇ ಔಪ ಚಾರಿಕ ಸಿದ್ಧತೆಗಳಿರಲಿಲ್ಲ. ಯುವಕರಿಗೆ ವ್ಯಕ್ತಿತ್ವ ನಿರ್ಮಾಣದ ತರಬೇತಿ ನೀಡುವುದೇ ಉದ್ದೇಶವಾಗಿತ್ತು. ಯುವಕರನ್ನು ದೈಹಿಕ-ಮಾನಸಿಕ-ಬೌದ್ಧಿಕವಾಗಿ ದೇಶಕ್ಕೆ ಸೇವೆ ಸಲ್ಲಿಸಲು ಸಿದ್ಧಪಡಿಸುವುದೇ ಏಕೈಕ ಕಾರ್ಯಸೂಚಿಯಾಗಿತ್ತು. ಆರ್‌ಎಸ್‌ಎಸ್ ಶಾಖೆ ಮೊದಲಿಗೆ ಆರಂಭಗೊಂಡಿದ್ದು 1926ರ ಮೇ 28ರಂದು. ಆಗ ಸ್ವಯಂಸೇವಕರು ನಾಗಪುರದ ಮೋಹಿತೆ ವಾಡಾ ಮೈದಾನದಲ್ಲಿ ನಿತ್ಯ ಸೇರುತ್ತಿದ್ದರು. ಆ ಪ್ರದೇಶವೇ ಈಗ ಆರ್‌ಎಸ್‌ಎಸ್‌ನ ಪ್ರಧಾನ ಕಚೇರಿಯ ಭಾಗವಾಗಿದೆ.

ಆರ್‌ಎಸ್‌ಎಸ್-ಹೆಸರು ಬಂದಿದ್ದು ಹೇಗೆ?

ಸಂಘ ಸ್ಥಾಪನೆಯಾದ 6 ತಿಂಗಳ ನಂತರ ರಾಷ್ಟ್ರೀಯ ಸ್ವಯಂ ಸೇವಕ ಸಂಘ(ಆರ್‌ಎಸ್‌ಎಸ್) ಎಂದು ನಾಮಕರಣ ಗೊಂಡಿತು. 1926ರ ಏಪ್ರಿಲ್ 17ರಂದು ಡಾ. ಹೆಡ್ಗೆವಾರ್ ತಮ್ಮ ಮನೆಯಲ್ಲಿ ಸಭೆ ಕರೆದಿದ್ದರು. 26 ಸ್ವಯಂಸೇವಕರು ಭಾಗವಹಿಸಿ ಸಂಘದ ಕುರಿತು ತಮ್ಮ ಆಲೋಚನೆಗಳನ್ನು ಹಂಚಿಕೊಂಡರು. ಹಲವು ಸುತ್ತುಗಳ ಚರ್ಚೆ ಬಳಿಕ 3 ಹೆಸರುಗಳ ಪಟಿ ಸಿದ್ಧಗೊಂಡಿತು. 'ರಾಷ್ಟ್ರೀಯ ಸ್ವಯಂಸೇವಕ ಸಂಘ' ಮತ್ತು 'ಜಾರಿಪಟ್ಕಾ ಮಂಡಲ್' ಹಾಗೂ 'ಭಾರತೋದ್ಧಾರಕ್ ಮಂಡಲ್' ಎಂಬವೇ ಆ ಹೆಸರುಗಳಾಗಿದ್ದವು. ಅದರಲ್ಲಿ ಕಡೆಗೆ 'ರಾಷ್ಟ್ರೀಯ ಸ್ವಯಂಸೇವಕ ಸಂಘ'ಕ್ಕೆ ಹೆಚ್ಚು ಮತಗಳಿಂದ ಆಯ್ಕೆಗೊಂಡಿತು.

1939ರಲ್ಲಿ ಸಿಂಧಿ ಸಭೆ

1939ರ ಫೆಬ್ರವರಿಯಲ್ಲಿ ನಾಗಪುರದಿಂದ 50 ಕಿ.ಮೀ ದೂರದ 'ಸಿಂಧಿ' ಎಂಬಲ್ಲಿ ಸ್ವಯಂಸೇವಕ ನಾನಾಸಾಹೇಬ್ ತಲತುಲೆ ನಿವಾಸದಲ್ಲಿ ಆರ್‌ಎಸ್‌ಎಸ್ ಮುಖಂಡರ ಮಹತ್ವದ ಸಭೆ ಆಯೋಜಿಸಲಾಗಿತ್ತು. ಸಂಸ್ಥಾಪಕ ಡಾ. ಹೆಡ್ಗೆವಾರ್, 'ಗುರೂಜಿ' ಎಂದೇ ಜನಪ್ರಿಯರಾಗಿದ್ದ ಎಂ.ಎಸ್.ಗೋಳ್ವಾಲ್ಕರ್, ಬಾಳಾ ಸಾಹೇಬ್ ದೇವರಸ್, ಅಪ್ಪಾಜಿ ಜೋಶಿ, ವಿಠ್ಠಲರಾವ್ ಪಾಟ್ಕಿ, ತಾತ್ಯಾರಾವ್ ತೇಲಂಗ್, ಬಾಬಾಜಿ ಸಲೋಡ್ಕರ್ ಮತ್ತು ಕೃಷ್ಣರಾವ್ ಮೊಹ್ರಿಲ್ ಆ ಸಭೆಯಲ್ಲಿದ್ದರು. ಆರ್‌ಎಸ್‌ಎಸ್ ಕಾರ್ಯವೈಖರಿ ಮೇಲೆ ದೀರ್ಘಕಾಲೀನ ಪರಿಣಾಮ ಬೀರುವ ಹಲವಾರು ಪ್ರಮುಖ ನಿರ್ಧಾರಗಳನ್ನು ಈ ಸಭೆಯಲ್ಲಿ ತೆಗೆದುಕೊಳ್ಳಲಾಯಿತು.

ಪ್ರಾರ್ಥನೆ, ಸಂದೇಶ , ಭಗವಾಧ್ವಜ

ಆರ್‌ಎಸ್‌ಎಸ್‌ನ ಸ್ವಯಂಸೇವಕರಿಗೆ ಆರಂಭದಲ್ಲಿ ಸಂಸ್ಕೃತದಲ್ಲಿ ಆದೇಶಗಳನ್ನು ನೀಡಲಾಗುತ್ತಿತ್ತು. ಬಳಿಕ ಸಂವಹನಕ್ಕಾಗಿ ಇಂಗ್ಲಿಷ್ ಬಳಸಲಾಯಿತು. ಆರ್‌ಎಸ್‌ಎಸ್ ಬೆಳೆಯುತ್ತಾ ಸಾಗಿದಂತೆ ಸಂವಹನ ಸ್ಥಳೀಯ ಭಾಷೆಗಳಿಗೆ ಬದಲಾಯಿತು. ಆಯಾ ಪ್ರದೇಶದ ಭಾಷೆಗಳಲ್ಲಿ ಭಾರತೀಯ ಸಂಸ್ಕೃತಿಯಲ್ಲಿ ನಂಬಿಕೆ ಬೆಳೆಸುವ ಪ್ರಯತ್ನ ನಡೆಯಿತು. ಹಾಗಿದ್ದೂ ಈಗಲೂ ಸಂಸ್ಕೃತದಲ್ಲೇ ಪ್ರಮುಖ ಆಜ್ಞೆಗಳನ್ನು ನೀಡುವ ರೂಢಿ ಮುಂದುವರೆದಿದೆ. ಕೇಸರಿ ಧ್ವಜವನ್ನು (ಭಗವಾಧ್ವಜ) ಈಗಲೂ ಹಾರಿಸಲಾಗುತ್ತಿದೆ. ಎದೆಗೆ ಹಸ್ತ ಅಡ್ಡವಾಗಿಟ್ಟು ಧ್ವಜಕ್ಕೆ ತಲೆಬಾಗಿ ನಮಸ್ಕರಿಸುವುದರೊಂದಿಗೇ ಈಗಲೂ ಶಾಖೆ ಆರಂಭಗೊಳ್ಳುತ್ತದೆ.

ರೂಪ ಕೊಟ್ಟ ಗೋಳ್ವಾಲ್ಕರ್

ಆರ್‌ಎಸ್‌ಎಸ್‌ನ ಪರಮೋಚ್ಚ ಹುದ್ದೆ ಸರಸಂಘಚಾಲಕ್. ಹೆಡ್ಗೆವಾರ್ ಬಳಿಕ ಈ ಹೊಣೆ ನಿರ್ವಹಿಸಿದವರು ಮಾಧವರಾವ್ ಸದಾಶಿವರಾವ್ ಗೋಳ್ವಾಲ್ಕರ್. ನಾಗಪುರದ ಬಳಿಕ ಆರ್‌ಎಸ್‌ಎಸ್‌ನ 2ನೇ ಶಾಖೆ ಕಾಶಿಯಲ್ಲಿ ಆರಂಭಗೊಂಡಿತು. ಕಾಶಿ ವಿವಿಯಲ್ಲಿ ಅಧ್ಯಾಪಕರಾಗಿದ್ದ ಗೋಳ್ವಾಲ್ಕರ್ ಸಂಘದ 2ನೇ ಸರಸಂಘಚಾಲಕ್ ಆಗಿ 33 ವರ್ಷ ಸಂಘವನ್ನು ಮುನ್ನಡೆಸಿದರು. ಸ್ವಂಘದ ಸ್ವಯಂಸೇವಕರ ಪಾಲಿಗೆ ಇವರು 'ಗುರೂಜಿ'. ಆರ್‌ಎಸ್‌ಎಸ್ ಚಿಂತನೆಗೆ, ಸೈದ್ಧಾಂತಿಕ ದೃಷ್ಟಿಕೋನಕ್ಕೆ ಸ್ಪಷ್ಟ ರೂಪ ಕೊಟ್ಟವರೇ ಗುರೂಜಿ. ಅವರು ಬರೆದ 'ಚಿಂತನಗಂಗಾ' ಕೃತಿ ಸಂಘದ ಸಂಪೂರ್ಣ ಪರಿಚಯ ಮಾಡಿಕೊಡುತ್ತದೆ. ಹೀಗಾಗಿ ಆರ್‌ಎಸ್‌ಎಸ್ ಶಾಖೆಗಳಲ್ಲಿ ಭಾರತಮಾತೆ, ಭಗವಾಧ್ವಜದ ಜತೆಗೆ ಗೋಳ್ವಾಲ್ಕರ್ ಫೋಟೊ ಕಡ್ಡಾಯ.

ಮೂರು ಬಾರಿ ನಿಷೇಧ

ಕೇಂದ್ರ ಸರಕಾರ, ಆರ್‌ಎಸ್‌ಎಸ್ ಸಂಘಟನೆ ಮೇಲೆ ಮೂರು ಬಾರಿ ನಿಷೇಧ ಹೇರಿತ್ತು. ಪ್ರತಿಬಾರಿಯೂ ಅದರ ವಿರುದ್ಧದ ಆರೋಪಗಳು ಆಧಾರರಹಿತ ಎಂದು ಸಾಬೀತಾಗಿದ್ದರಿಂದ ನಿಷೇಧ ಬೇಷರತ್ತಾಗಿ ತೆಗೆದುಹಾಕಬೇಕಾಯಿತು. ಮೊದಲ ಬಾರಿ ನಿಷೇಧವನ್ನು ಗಾಂಧಿ ಹತ್ಯೆಯಾದಾಗ 1948ರ ಫೆಬ್ರುವರಿ 4ರಂದು ವಿಧಿಸಲಾಯಿತು. ಬಳಿಕ 1949ರ ಜುಲೈ 12ರಂದು ನಿಷೇಧ ತೆರವು ಮಾಡಲಾಯಿತು. 1975ರ ಜುಲೈ 4ರಂದು ತುರ್ತು ಪರಿಸ್ಥಿತಿ ಜಾರಿ ಮಾಡಿದಾಗ ಆರ್‌ಎಸ್‌ಎಸ್ 2ನೇ ಬಾರಿ ನಿಷೇಧಕ್ಕೊಳಗಾಯಿತು. 1977ರ ಮಾರ್ಚ್ 22ರಂದು ಈ ನಿಷೇಧ ಮುಕ್ತವಾಯಿತು. ಶ್ರೀರಾಮ ಜನ್ಮಸ್ಥಳದಲ್ಲಿದ್ದ ವಿವಾದಿತ ಬಾಬರಿ ಕಟ್ಟಡ ಉರುಳಿದಾಗ ಸಂಘವನ್ನು 1992ರ ಡಿಸೆಂಬರ್ 10ರಂದು 3ನೇ ಬಾರಿ ನಿಷೇಧಿಸಲಾಯಿತು. ಬಳಿಕ 1993ರ ಜೂನ್ 4ರಂದು ನಿಷೇಧ ತೆರವಾಯಿತು.

73 ಸಾವಿರಕ್ಕೂ ಅಧಿಕ ಶಾಖೆಗಳು

ಆರ್‌ಎಸ್‌ಎಸ್ ಸ್ವಯಂಸೇವಕರನ್ನು ಆರಂಭದಲ್ಲಿ ಒಗ್ಗೂಡಿಸಿದ್ದು ಶಾಖೆಗಳು. ಸ್ಥಾಪನೆಗೊಂಡ ಆರಂಭದಲ್ಲಿ 3 ದಿನಗಳಿಗೊಮ್ಮೆ ಶಾಖೆ ಸೇರುತ್ತಿತ್ತು. ದೇಶಭಕ್ತಿ ಪಾಠ ಮಾಡಲಾಗುತ್ತಿತ್ತು. ಆ ಬಳಿಕ ನಿತ್ಯವೂ ಶಾಖೆ ನಡೆಸುವ ಪರಿಪಾಠವಾಯಿತು. ಒಂದರಿಂದ ನೂರು, ಸಾವಿರವಾಗಿ ಬೆಳೆದ ಶಾಖೆಗಳ ಸಂಖ್ಯೆ ಸದ್ಯ 73,117ಕ್ಕೆ ಮುಟ್ಟಿದೆ. ಬೆಳಗ್ಗೆ ಅಥವಾ ಸಂಜೆ 1 ಗಂಟೆ ಕಾಲ ಶಾಖೆಯಲ್ಲಿ ಕಸರತ್ತು, ಆಟೋಟ, ದೇಶಭಕ್ತಿ ಚಿಂತನೆ, ಪಂಚಾಂಗ ಪಠಣ ಸೇರಿದಂತೆ ವಿವಿಧ ಚಟುವಟಿಕೆಗಳನ್ನು ನಡೆಸಲಾಗುತ್ತದೆ. 100ನೇ ವಾರ್ಷಿಕೋತ್ಸವ ಸಂದರ್ಭ ಪ್ರತಿ ನಗರ, ಗ್ರಾಮದಲ್ಲಿನ ವಿಭಾಗಗಳನ್ನು ತಲುಪಲು, ಶಾಖೆಗಳ ಸಂಖ್ಯೆಯನ್ನು 1 ಲಕ್ಷಕ್ಕೆ ಮುಟ್ಟಿಸಲು ಗುರಿ ಇಟ್ಟುಕೊಳ್ಳಲಾಗಿದೆ.

ಆರ್‌ಎಸ್‌ಎಸ್ ಈಗ ಹೈಟೆಕ್

1970ರ ದಶಕದವರೆಗೆ ಆರ್‌ಎಸ್‌ಎಸ್ ಸಾಧಾರಣ ಸೌಲಭ್ಯಗಳಷ್ಟೇ ಇದ್ದ ಸಂಘಟನೆ. ಜನರ ಒಗ್ಗಟ್ಟೇ ಅದಕ್ಕೆ ಬಲವಾಗಿತ್ತು. ಅದರ ಹೊರತು ತಾಂತ್ರಿಕ ಸ್ಪರ್ಶವಿರಲಿಲ್ಲ. ಈಗ ಸಂಘ ಹೈಟೆಕ್ ಆಗಿದೆ. ತಂತ್ರಜ್ಞಾನ ಅಳವಡಿಸಿಕೊಂಡಿದೆ. ಹಿಂದಿನಂತೆ ನೋಟ್‌ಬುಕ್‌ಗಳು, ಲೆಡ್ಜರ್‌ಗಳು ಇಲ್ಲ. ಲಕ್ಷಾಂತರ ಸ್ವಯಂಸೇವಕರ ಡೇಟಾ(ದತ್ತಾಂಶ) ಇರುವ ಬೃಹತ್ ಕಂಪ್ಯೂಟರ್ ಜಾಲವಿದೆ. ಆರ್‌ಎಸ್‌ಎಸ್ ಅಪಾರ ಸೌಕರ್ಯಗಳಿರುವ ಬೃಹತ್ ಹಾಗೂ ಭವ್ಯವಾದ ಕಟ್ಟಡಗಳನ್ನು ಹೊಂದಿದೆ. ಹೊಸತನ ಅಳವಡಿಸಿಕೊಂಡು ಬಹುದೂರ ಸಾಗಿಬಂದಿದೆ.

ರಾಜಕೀಯ ನಿಲುವು

ಆರಂಭದಲ್ಲಿ ಹಿಂದೂ ಧರ್ಮ-ಬಲಿಷ್ಠ ರಾಷ್ಟ್ರ ನಿರ್ಮಾಣದ ಗುರಿಯನ್ನಷ್ಟೇ ಹೊಂದಿದ್ದ ಸಂಘ, ಬಳಿಕ ರಾಜಕೀಯ ಬಲವೂ ಅಗತ್ಯ ಎಂಬುದನ್ನು ಮನಗಂಡು 'ಜನ ಸಂಘ' ರಾಜಕೀಯ ಪಕ್ಷ ಸ್ಥಾಪಿಸಿತು. ಬಳಿಕ ಅದುವೇ 'ಭಾರತೀಯ ಜನತಾ ಪಕ್ಷ'(ಬಿಜೆಪಿ) ಆಗಿ ಬದಲಾಯಿತು. ಆರ್‌ಎಸ್‌ಎಸ್ ಬೆಂಬಲ ಹಾಗೂ ಹತೋಟಿಯಲ್ಲಿರುವ ಬಿಜೆಪಿ ಈಗ ವಿಶ್ವದ ಅತ್ಯಂತ ದೊಡ್ಡ ರಾಜಕೀಯ ಪಕ್ಷವಾಗಿ ಬೆಳೆದಿದೆ. ಆರ್‌ಎಸ್‌ಎಸ್ ಸ್ವಯಂಸೇವಕರೇ ಆಗಿದ್ದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಸತತ 3ನೇ ಬಾರಿ ಬಿಜೆಪಿ ಕೇಂದ್ರ ಸರಕಾರದ ಚುಕ್ಕಾಣಿ ಹಿಡಿದಿದೆ. ಬಿಜೆಪಿ ಸರಕಾರಗಳಿರುವ ರಾಜ್ಯಗಳಲ್ಲಿ ಪ್ರತಿ ಮೂವರು ಸಚಿವರಲ್ಲಿ ಒಬ್ಬರು ಆರ್‌ಎಸ್‌ಎಸ್ ಹಿನ್ನೆಲೆಯವರು ಎಂಬುದು ಉಲ್ಲೇಖಾರ್ಹ.

ಚಟುವಟಿಕೆಗಳ ವಿಸ್ತರಣೆ

'ಬಲಿಷ್ಠ ಹಿಂದೂ ರಾಷ್ಟ್ರ' ನಿರ್ಮಾಣದ ಗುರಿಯೊಂದಿಗೆ ಜನ್ಮತಳೆದ ಆರ್‌ಎಸ್‌ಎಸ್, ಕ್ರಮೇಣ ಅಗತ್ಯಕ್ಕೆ ತಕ್ಕಂತೆ ಚಟುವಟಿ ಕೆಗಳನ್ನೂ ವಿಸ್ತರಿಸಿಕೊಂಡಿದೆ. ಸೇವಾಭಾರತಿ, ವಿದ್ಯಾರ್ಥಿಗಳನ್ನು ಸಂಘಟಿಸಿ ಶೈಕ್ಷಣಿಕ ಸಮಸ್ಯೆಗಳ ಬಗ್ಗೆ ಧ್ವನಿಯೆತ್ತಲು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್(ಎಬಿವಿಪಿ), ರಾಜಕೀಯ ಧ್ವನಿಯಾಗಿ ಭಾರತೀಯ ಜನತಾ ಪಾರ್ಟಿ(ಬಿಜೆಪಿ), ಬುಡಕಟ್ಟು ಹಾಗೂ ವನವಾಸಿಗಳ ಬದುಕನ್ನು ಕಲ್ಯಾಣವಾಗಿಸಲು 'ವನವಾಸಿ ಕಲ್ಯಾಣ', ರೈತರ ಸಮಸ್ಯೆ ನಿವಾರಣೆಗೆ 'ಭಾರತೀಯ ಕಿಸಾನ್ ಸಂಘ' ಸೇರಿದಂತೆ ಹಲವಾರು ವಿಭಾಗಗಳನ್ನು ರಚಿಸಲಾಗಿದೆ. ಅವು ಈಗ ದೇಶವ್ಯಾಪಿ ವಿಸ್ತರಿಸಿವೆ.

ಸೇವೆಯೇ ಧ್ಯೇಯ

ಆರ್‌ಎಸ್‌ಎಸ್ ಸ್ವಯಂಸೇವಕರಿಗೆ ಸೇವೆಯೇ ಧ್ಯೇಯ ವಾಗಿದೆ. ಸುನಾಮಿ, ಭೂಕಂಪ, ಪ್ರವಾಹದಂತಹ ಪ್ರಾಕೃತಿಕ ವಿಕೋಪಗಳ ಸಂದರ್ಭದಲ್ಲಿ ಪ್ರಚಾರದ ಹಂಗಿಲ್ಲದೆ ಜನರ ಸೇವೆ ಮಾಡಿದ ಉದಾಹರಣೆ ಇವೆ. ಕರೋನಾ ಆರೋಗ್ಯ ಸಮಸ್ಯೆಯ ಸಂದರ್ಭದಲ್ಲಿ ಜನ ಸಾವಿಗೀಡಾದಾಗ ಅನಾಥರ, ಅಶಕ್ತರ ನೆರವಿಗೆ ಸಂಘ ನಿಂತಿದೆ. ಶವ ಮುಟ್ಟಲು ಕುಟುಂಬ ದವರೇ ಹೆದರುತ್ತಿದ್ದ ಸಂದರ್ಭದಲ್ಲಿ ದೇಶಾದ್ಯಂತ ಸಾವಿರಾರು ಶವಗಳಿಗೆ ಅಂತಿಮ ಸಂಸ್ಕಾರ ಮಾಡಿದ್ದು ಸಂಘ ಮತ್ತು ಅದರ ಸ್ವಯಂಸೇವಕರು ಎಂಬುದು ಉಲ್ಲೇಖಾರ್ಹ. ಸಂಘದ ನಿತ್ಯಶಾ ಖೆಯಲ್ಲಿ ಹಾಡುವ 'ಸೇವೆಯೆಂಬ ಯಜ್ಞದಲ್ಲಿ ಸಮಿಧೆಯಂತೆ ಉರಿಯುವ' ಹಾಡು ಸೇವಾ ಕಾರ್ಯಗಳಿಗೆ ಅನ್ವರ್ಥ.



ಸರಸಂಘಚಾಲಕ್

ಕೇಶವ ಬಲಿರಾಮ್ ಹೆಡ್ಗೆವಾರ್ (1925-1940)
ಲಕ್ಷ್ಮಣ್ ವಾಸುದೇವ್ ಪರಾಂಜಪೆ (1930-1931)
ಎಂ.ಎಸ್.ಗೋಳ್ವಾಲ್ಕರ್ (1940-1973)
ಮಧುಕರ್ ದತ್ತಾತ್ರೇಯ ದೇವರಸ್ (1973-1994)
ರಾಜೇಂದ್ರ ಸಿಂಗ್ (1994-2000)
ಕೆ.ಎಸ್. ಸುದರ್ಶನ್ (2000-2009)
ಮೋಹನ್ ಭಾಗವತ್ (2009ರಿಂದ..)

ದತ್ತಾತ್ರೇಯ ಹೊಸಬಾಳೆ

ಕನ್ನಡಿಗ ದತ್ತಾತ್ರೇಯ ಹೊಸಬಾಳೆ ಪ್ರಸ್ತುತ ರಾಷ್ಟ್ರೀಯ ಸ್ವಯಂಸೇವಕ ಸಂಘದ(ಆರ್‌ಎಸ್‌ಎಸ್) 'ಸರಕಾರ್ಯವಾಹ'(ಪ್ರಧಾನ ಕಾರ್ಯದರ್ಶಿ) ಆಗಿ 2024ರ ಮಾರ್ಚ್‌ನಲ್ಲಿ ಮರು ಆಯ್ಕೆಯಾಗಿದ್ದಾರೆ. ಆರ್‌ಎಸ್‌ಎಸ್‌ನ ಅಖಿಲ ಭಾರತೀಯ ಪ್ರತಿನಿಧಿ ಸಭಾ ಹೊಸಬಾಳೆ ಅವರಿಗೇ ಮತ್ತೊಮ್ಮೆ ಸರಕಾರ್ಯ ವಾಹ ಜವಾಬ್ದಾರಿಯನ್ನು ವಹಿಸಿಕೊಟ್ಟಿದೆ. ಮುಂದಿನ 3 ವರ್ಷಗಳ (2024-2027) ಅವಧಿಗೆ ಅವರು ಈ ಜವಾಬ್ದಾರಿ ನಿರ್ವಹಿಸಲಿದ್ದಾರೆ.

ಆರ್‌ಎಸ್‌ಎಸ್ ಮುನ್ನಡೆಸಿದ ಆರು ಸಾರಥಿಗಳ

ಚಿಂತನೆ, ದಿಟ್ಟ ನಿರ್ಧಾರ, ತ್ಯಾಗ...

ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀ ಯವಾಗಿ ಗುರುತಿಸಿಕೊಂಡಿರುವ ಹಿಂದೂ ರಾಷ್ಟ್ರೀಯವಾದಿ ಸಂಘಟನೆಯಾದ 'ರಾಷ್ಟ್ರೀಯ ಸ್ವಯಂಸೇವಕ ಸಂಘ' ಜನಮಾನಸದಲ್ಲಿ 'ಆರ್‌ಎಸ್‌ಎಸ್' ಅಥವಾ 'ಸಂಘ' ಎಂದೇ ಜನಪ್ರಿಯ. ಈಗ ಭಾರತವನ್ನು ಆಳುತ್ತಿರುವ ಭಾರತೀಯ ಜನತಾ ಪಕ್ಷದ(ಬಿಜೆಪಿ) ಮೂಲ ಇದೇ ಸಂಘಟನೆಯಲ್ಲಿದೆ. ಮಾತೃಭೂಮಿಯ ಸೇವೆಗಾಗಿ ಸಂಪೂರ್ಣವಾಗಿ ಸಮರ್ಪಿ ತವಾಗಿರುವ ಸ್ವಯಂಸೇವಕರ ರಾಜಕೀಯೇತರ ತಂಡವನ್ನು ರಚಿಸುವ ಉದ್ದೇಶದಿಂದ 1925ರಲ್ಲಿ ಡಾ. ಕೇಶವ ಬಲಿರಾಮ್ ಹೆಡ್ಗೆವಾರ್ ಅವರು ಆರ್‌ಎಸ್‌ಎಸ್ ಸ್ಥಾಪಿಸಿದರು. ಸಂಘ ಪರಿವಾರದ ಪ್ರಮುಖ ಸಂಘಟನೆಯಾದ ಆರ್‌ಎಸ್‌ಎಸ್ ವಿಶ್ವದ ಅತಿ ದೊಡ್ಡ ಸ್ವಯಂಸೇವಕ ಸಂಸ್ಥೆಯಾಗಿ ಗುರುತಿಸಿಕೊಂಡಿದೆ. ಮಹಾರಾಷ್ಟ್ರದ ನಾಗಪುರದಲ್ಲಿ ಅದರ ಪ್ರಧಾನ ಕಚೇರಿ ಇದೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ್ ಆಗಿ ಈವರೆಗೆ ಆರು ಗಣ್ಯರು ಕಾರ್ಯ ನಿರ್ವಹಿಸಿದ್ದಾರೆ. ಪ್ರಸ್ತುತ ಮೋಹನ್ ಭಾಗವತ್ ಜಿ ಹೊಣೆ ನಿಭಾಯಿಸುತ್ತಿದ್ದಾರೆ. ನಾಮ ನಿರ್ದೇಶನ ಮೂಲಕ ಸಂಘದ ಸರಸಂಘ ಚಾಲಕ್ ಆಯ್ಕೆಯಾಗುತ್ತದೆ.

• ಕೇಶವ ಬಲಿರಾಮ್ ಹೆಡ್ಗೆವಾರ್ (1925-1940)



1925ರಲ್ಲಿ ಕೇಶವ ಬಲಿರಾಮ್ ಹೆಡ್ಗೆವಾರ್ ಅವರಿಂದ ಸ್ಥಾಪಿತವಾದ ಆರ್‌ಎಸ್‌ಎಸ್‌ನ ಮೊದಲ ಸರಸಂಘ ಚಾಲಕರಾಗಿ ಅವರೇ ಜವಾಬ್ದಾರಿ ವಹಿಸಿ ಕೊಂಡರು. 1925-1930 ರವರೆಗೆ ಮತ್ತು ನಂತರ 1931- 1940ರವರೆಗೆ ಅವರು ಕಾರ್ಯ ನಿರ್ವಹಿಸಿದರು. ಡಾಕ್ಟರ್ ಜಿ ಎಂದೇ ಕರೆಯಲಾಗುತ್ತಿದ್ದ ಹೆಡ್ಗೆವಾರ್ ಹಿಂದೂ ರಾಷ್ಟ್ರೀಯತೆಯ ಸಿದ್ಧಾಂತದ ಮೇಲೆ ನಾಗಪುರದಲ್ಲಿ ಆರ್‌ಎಸ್‌ಎಸ್ ಸಂಘಟನೆಯನ್ನು ಸ್ಥಾಪಿಸಿದರು. ಮಹಾರಾಷ್ಟ್ರದ ನಾಗಪುರದಲ್ಲಿ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ಹೆಡ್ಗೆವಾರ್ ಮೂಲತಃ ಆಂಧ್ರಪ್ರವೇಶದವರು(ಈಗಿನ ತೆಲಂಗಾಣ). 13 ವರ್ಷದವರಾಗಿದ್ದಾಗ ತಂದೆ-ತಾಯಿಯನ್ನು ಕಳೆದುಕೊಂಡ ಹೆಡ್ಗೆವಾರ್, ಚಿಕ್ಕಪ್ಪನ ನೆರವಿನಿಂದ ಶಿಕ್ಷಣ ಮುಂದುವರಿಸಿದರು. 'ವಂದೇ ಮಾತರಂ' ಹಾಡಿದ್ದಕ್ಕಾಗಿ ಬಾಲಕ ಹೆಡ್ಗೆವಾರ್‌ರನ್ನು ಶಾಲೆಯಿಂದ ಹೊರಹಾಕಲಾಗಿತ್ತು. ಬಳಿಕ ಯವತ್ಮಾಲ್‌ನ ರಾಷ್ಟ್ರೀಯ ವಿದ್ಯಾಲಯ, ಪುಣೆಯಲ್ಲಿ ಪ್ರೌಢ ಶಾಲಾ ಶಿಕ್ಷಣ ಮುಂದುವರಿಸಿದರು. ಕೋಲ್ಕತ್ತ ವೈದ್ಯಕೀಯ ಕಾಲೇಜಿನಲ್ಲಿ ವೈದ್ಯಕೀಯ ಶಿಕ್ಷಣ ಪೂರ್ಣಗೊಳಿಸಿ ವೈದ್ಯರು ಎನಿಸಿಕೊಂಡ ಬಳಿಕ ನಾಗಪುರಕ್ಕೆ ಮರಳಿದರು. ಬಂಕಿಮ್ ಚಂದ್ರ ಚಟರ್ಜಿ ಅವರ ಬರಹಗಳಿಂದ ಪ್ರಭಾವಿತರಾಗಿದ್ದ ಹೆಡ್ಗೆವಾರ್ ಅವರನ್ನು ಬಂಗಾಳದ ಅನುಶೀಲನ್ ಸಮಿತಿಗೆ ಸೇರಿಸಲಾಯಿತು. ಇದುವೇ ಆರ್‌ಎಸ್‌ಎಸ್ ಸ್ಥಾಪನೆಗೆ ಪ್ರೇರೇಪಣೆಯಾಯಿತು. 1925ರಲ್ಲಿ ವಿಜಯದಶಮಿಯ ದಿನ ಹಿಂದೂ ಸಮುದಾಯದ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಪುನರುತ್ಥಾನದ ಗುರಿಯೊಂದಿಗೆ ಆರ್‌ಎಸ್‌ಎಸ್ ಸ್ಥಾಪಿಸಲಾಯಿತು. ಮುಂದೆ ಇದರ ಮಹಿಳಾ ಘಟಕ 'ರಾಷ್ಟ್ರ ಸೇವಿಕಾ ಸಮಿತಿ' ಸ್ಥಾಪನೆಗೂ ಹೆಡ್ಗೆವಾರ್ ಬೆಂಬಲ ನೀಡಿದರು. ಆರ್‌ಎಸ್‌ಎಸ್‌ನ ಮೊದಲ ಸ್ವಯಂಸೇವಕರಲ್ಲಿ ಭಯ್ಯಾಜಿ ದಾನಿ, ಬಾಬಾಸಾಹೇಬ್ ಆಪ್ಟೆ, ಎಂ.ಎಸ್. ಗೋಲ್ವಾಲ್ಕರ್, ಬಾಳಾಸಾಹೇಬ್ ದೇವರಸ್ ಮತ್ತು ಮಧುಕರ್‌ರಾವ್ ಭಾಗವತ್ ಸೇರಿದ್ದಾರೆ.

• ಲಕ್ಷ್ಮಣ್ ವಾಸುದೇವ್ ಪರಾಂಜಪೆ (1930-1931)

ಹೆಡ್ಗೆವಾರ್ ಬಳಿಕ ಲಕ್ಷ್ಮಣ್ ವಾಸುದೇವ್ ಪರಾಂಜಪೆ ಸರಸಂಘ ಚಾಲಕ್ ಆಗಿ ಜವಾಬ್ದಾರಿ ವಹಿಸಿಕೊಂಡರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸದಸ್ಯರಾಗಿದ್ದ ಲಕ್ಷ್ಮಣ್ ಅವರು ಹೆಡ್ಗೆವಾರ್ ಅವರು ಜೈಲಿಗೆ ಹೋದಾಗ ಕಾರ್ಯ ನಿರ್ವಾಹಕ ಸರಸಂಘಚಾಲಕ್ ಆಗಿ ಕಾರ್ಯ ನಿರ್ವಹಿಸಿದರು. ನಾಗಪುರದಲ್ಲಿ ಜನಿಸಿದ ಪರಾಂಜಪೆ ಮುಂಬೈನ ಗ್ರಾಂಟ್ ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ಪದವಿ ಪಡೆದರು. ಬಳಿಕ ನಾಗಪುರದಲ್ಲಿ ಸೇವೆ ಸಲ್ಲಿಸಿದರು.

• ಎಂ.ಎಸ್.ಗೋಳ್ವಾಲ್ಕರ್ (1940-1973)

ಮಾಧವ್ ಸದಾಶಿವರಾವ್ ಗೋಳ್ವಾಲ್ಕರ್ 'ಗುರೂಜಿ' ಎಂದೇ ಜನಪ್ರಿಯ. ಅವರು ಆರ್‌ಎಸ್‌ಎಸ್‌ನ 2ನೇ ಸರಸಂಘಚಾಲಕ್ ಆಗಿದ್ದರು. ಅಖಂಡ ಭಾರತ ಸಿದ್ಧಾಂತದ ಪರಿಕಲ್ಪನೆಯಿಂದ ವಿಕಸನಗೊಂಡಿರುವ ಹಿಂದೂ ರಾಷ್ಟ್ರ ಎಂಬ ಸಾಂಸ್ಕೃತಿಕ ರಾಷ್ಟ್ರದ ಪರಿಕಲ್ಪನೆಯನ್ನು ಮುಂದಿಟ್ಟ ಮೊದಲಿಗರು ಗೋಳ್ವಾಲ್ಕರ್. ಭಾರತದ ಆರಂಭಿಕ ಹಿಂದೂ ರಾಷ್ಟ್ರೀಯವಾದಿ ಚಿಂತಕರಲ್ಲಿ ಒಬ್ಬರಾದ ಗೋಳ್ವಾಲ್ಕರ್ 'ಅವರ್ ನೇಷನ್ ಹುಡ್ ಡಿಫೈನ್ಡ್' ಎಂಬ ಪುಸ್ತಕ ಬರೆದಿದ್ದಾರೆ.

• ಮಧುಕರ್ ದತ್ತಾತ್ರೇಯ ದೇವರಸ್ (1973-1994)

ಆರ್‌ಎಸ್‌ಎಸ್ 3ನೇ ಸರಸಂಘಚಾಲಕ್ ಆದ ಮಧುಕರ್ ನಾಗಪುರದಲ್ಲಿ ಜನಿಸಿ, ಆಂಧ್ರಪ್ರದೇಶದಲ್ಲಿ ಬೆಳೆದರು. ಇವರ ಕಿರಿಯ ಸಹೋದರ ಭಾವುರಾವ್ ದೇವರಸ್ ಕೂಡ ಆರ್‌ಎಸ್‌ಎಸ್‌ನ ಪ್ರಚಾರಕ್ ಆಗಿದ್ದರು. ಗೋಲ್ವಾಲ್ಕರ್ ಮರಣದ ಬಳಿಕ ದೇವರಸ್ 1973ರಲ್ಲಿ ಸರಸಂಘ ಚಾಲಕ್ ಆದರು. ಹಿಂದಿನ ಆರ್‌ಎಸ್‌ಎಸ್‌ನ ಸರಸಂಘಚಾಲಕ್ ಅವರಿಗಿಂತ ಹೆಚ್ಚು ತೀವ್ರವಾಗಿ ಸಾಮಾಜಿಕ ಚಟುವಟಿಕೆಯಲ್ಲಿ ಆರ್‌ಎಸ್‌ಎಸ್ ತೊಡಗಿಸಿಕೊಳ್ಳಲು ದೇವರಸ್ ಶ್ರಮಿಸಿದರು. 1994ರವರೆಗೆ ದೇವರಸ್ ಸರಸಂಘಚಾಲಕ್ ಆಗಿದ್ದು, ಅನಾರೋಗ್ಯದ ಕಾರಣದಿಂದ ಅಧಿಕಾರದಿಂದ ಕೆಳಗಿಳಿದರು. ಆದರೆ ಆರ್‌ಎಸ್‌ಎಸ್‌ಗೆ ಅವರ ಬದ್ಧತೆಯ ಕಾರ್ಯಗಳ ಮೂಲಕ ಹೊಸ ದಾರಿ ತೋರಿಸಿಕೊಟ್ಟರು.

• ರಾಜೇಂದ್ರ ಸಿಂಗ್ ತೋಮರ್ (1994-2000)



ಆರ್‌ಎಸ್‌ಎಸ್ 4ನೇ ಸರಸಂಘಚಾಲಕ್ ಆದ ರಾಜೇಂದ್ರ ಸಿಂಗ್ ತೋಮರ್ ಅಲಹಾಬಾದ್ ವಿಶ್ವವಿದ್ಯಾನಿಲಯದಲ್ಲಿ ಭೌತಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾಗಿ ಮತ್ತು ಮುಖ್ಯಸ್ಥರಾಗಿ ಕೆಲಸ ಮಾಡಿದರು. 1960ರ ದಶಕದ ಮಧ್ಯಭಾಗದಲ್ಲಿ ಆರ್‌ಎಸ್‌ಎಸ್‌ಗಾಗಿ ಜೀವನ ಮುಡಿಪಾಗಿಡಲು ಪ್ರಾಧ್ಯಾಪಕ-ಮುಖ್ಯಸ್ಥರ ಕೆಲಸ ವನ್ನೇ ತ್ಯಜಿಸಿದರು. 1942ರ ಕ್ವಿಟ್ ಇಂಡಿಯ ಚಳವಳಿಯಲ್ಲಿ ಸಕ್ರಿಯ ರಾಗಿದ್ದ ತೋಮರ್ ಬಳಿಕ ಆರ್‌ಎಸ್‌ಎಸ್ ಸೇರಿದರು. ರಾಜಕೀಯ ನಾಯಕರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದರು. ಕೇಂದ್ರದಲ್ಲಿ ಬಿಜೆಪಿ ಅತಿದೊಡ್ಡ ರಾಜಕೀಯ ಪಕ್ಷವಾಗಿ ಹೊರಹೊಮ್ಮಲು ಆಗ ಆರ್‌ಎಸ್‌ಎಸ್ ಕೂಡಾ ಕಾರಣವಾಯಿತು. ಬಿಜೆಪಿ ಮತ್ತು ಆರ್‌ಎಸ್‌ಎಸ್ ತಮ್ಮ ಸಿದ್ಧಾಂತಗಳ ಮೂಲಕ ಒಂದಾಗಿದ್ದವು. 2000ರಲ್ಲಿ ಅನಾರೋಗ್ಯದ ಕಾರಣ ತೋಮರ್ ಸರಸಂಘಚಾಲಕ್ ಹುದ್ದೆ ತ್ಯಜಿಸಿದರು.

• ಕೆ.ಎಸ್.ಸುದರ್ಶನ್ (2000-2009)

ಕರ್ನಾಟಕದ ಮಂಡ್ಯ ಜಿಲ್ಲೆಯ ಕೆಆರ್ ಪೇಟೆ ತಾಲೂಕಿನ ಕುಪ್ಪಹಳ್ಳಿಯಲ್ಲಿ ಜನಿಸಿದ ಕುಪ್ಪಹಳ್ಳಿ ಸೀತಾರಾ ಮಯ್ಯ(ಕೆ.ಎಸ್.) ಸುದರ್ಶನ್ 2000ರಿಂದ 2009ರವರೆಗೆ ಸಂಘದ ಐದನೇ ಸರಸಂಘಚಾಲಕ್ ಆಗಿದ್ದರು. ಆರಂಭದಲ್ಲಿ ಜವಾಬ್ದಾರಿ ವಹಿಸಿಕೊಳ್ಳಲು ಹಿಂದೇಟು ಹಾಕಿದ್ದರು. ಎಂ.ಎಸ್. ಗೋಳ್ವಾಲ್ಕರ್ ಅವರ ಪ್ರೇರಣೆಯಿಂದ ಜವಾಬ್ದಾರಿ ವಹಿಸಿ ಕೊಂಡರು. ಆರ್‌ಎಸ್‌ಎಸ್‌ನೊಳಗಿನ ಕಠೋರವಾದಿಗಳಲ್ಲಿ ಸುದರ್ಶನ್ ಕೂಡಾ ಒಬ್ಬರು. ಬಿಜೆಪಿಯನ್ನು ಅದರ ಆರ್ಥಿಕ ನೀತಿಗಳಿಗಾಗಿ ಟೀಕಿಸುತ್ತಿದ್ದರು. 2005ರಲ್ಲಿ ಅಟಲ್ ಬಿಹಾರಿ ವಾಜಪೇಯಿ ಮತ್ತು ಎಲ್.ಕೆ.ಅಡ್ವಾಣಿ ಇಬ್ಬರೂ ಪಕ್ಕಕ್ಕೆ ಸರಿಯಬೇಕು ಮತ್ತು ಕಿರಿಯ ನಾಯಕತ್ವ ಬಿಜೆಪಿ ಜವಾಬ್ದಾರಿ ವಹಿಸಿಕೊಳ್ಳಲಿ ಎಂದು ಸುದರ್ಶನ್ ಜಿ ನೀಡಿದ ಹೇಳಿಕೆ ಸಂಘ ಪರಿವಾರದಲ್ಲಿ ಬಿರುಕು ಮೂಡಿಸಿತು. ಆದರೆ 2009ರಲ್ಲಿ ಅನಾರೋಗ್ಯ ಕಾರಣದಿಂದ ಸರಸಂಘಚಾಲಕ್ ಹೊಣೆಯಿಂದ ಹೊರಬಂದರು.

• ಮೋಹನ್ ಭಾಗವತ್ (2009ರಿಂದ.....)



ವೃತ್ತಿಯಲ್ಲಿ ಪಶುವೈದ್ಯ ರಾಗಿರುವ ಮೋಹನ್ ಮಧುಕರ್ ರಾವ್(ಮೋಹನ್) ಭಾಗವತ್ 2009ರಿಂದ ರಾಷ್ಟ್ರೀಯ ಸ್ವಯಂಸೇವಕ ಸಂಘದ 6ನೇ ಸರಸಂಘಚಾಲಕ್ ಆಗಿ ಸದ್ಯ ಹೊಣೆ ನಿರ್ವಹಿಸುತ್ತಿದ್ದಾರೆ. ಚಂದ್ರಾಪುರದಲ್ಲಿ ಮರಾಠಿ ಕರ್ಹಾಡೆ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ಮೋಹನ್ ಭಾಗವತ್ ಆರ್‌ಎಸ್‌ಎಸ್ ಕಾರ್ಯಕರ್ತರ ಕುಟುಂಬದಿಂದಲೇ ಬಂದವರು. ನಾಗಪುರದ ಸರಕಾರಿ ಪಶುವೈದ್ಯಕೀಯ ಕಾಲೇಜಿನಲ್ಲಿ ಪಶುವೈದ್ಯಕೀಯ ವಿಜ್ಞಾನ ಮತ್ತು ಪಶುಸಂಗೋಪನೆಯಲ್ಲಿ ಪದವಿ ಪಡೆದರು.
1975ರ ವರ್ಷಾಂತ್ಯ ಆರ್‌ಎಸ್‌ಎಸ್ ಸೇರಿದರು. 1977ರಲ್ಲಿ ಮಹಾರಾಷ್ಟ್ರದ ಅಕೋಲಾ ಪ್ರಚಾರಕ್ ಆಗಿದ್ದರು. ಹಲವು ವರ್ಷಗಳ ಬಳಿಕ ಅಖಿಲ ಭಾರತೀಯ ಪ್ರಚಾರಕ್ ಪ್ರಮುಖ್ ಹುದ್ದೆಗೆ ಬಡ್ತಿ ಪಡೆದರು. 2000ರಲ್ಲಿ ಸುದರ್ಶನ್ ಸರಸಂಘಚಾಲಕ್ ಆಗಿ ಆಯ್ಕೆಯಾದಾಗ ಭಾಗವತ್ ಅವರು ಪ್ರಧಾನ ಕಾರ್ಯದರ್ಶಿಯಾದರು. 2009ರ ಮಾರ್ಚ್ 21ರಂದು ಸರಸಂಘಚಾಲಕ್ ಆಗಿ ಆಯ್ಕೆಯಾದ ಭಾಗವತ್, ಹೆಡ್ಗೆವಾರ್ ಮತ್ತು ಎಂ.ಎಸ್. ಗೋಲ್ವಾಲ್ಕರ್ ಅವರ ನಂತರ ಆರ್‌ಎಸ್‌ಎಸ್ ಮುಖ್ಯಸ್ಥ ಹುದ್ದೇಗೇರಿದ ಕಿರಿಯ ವಯಸ್ಕರು ಎನಿಸಿಕೊಂಡಿದ್ದಾರೆ.
2017ರಲ್ಲಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರಿಂದ ರಾಷ್ಟ್ರಪತಿ ಭವನಕ್ಕೆ ಅಧಿಕೃತ ಆಹ್ವಾನ ಪಡೆದ ಮೊಟ್ಟಮೊದಲ ಆರ್‌ಎಸ್‌ಎಸ್ ಮುಖ್ಯಸ್ಥ ಭಾಗವತ್. 2018ರಲ್ಲಿ ದೆಹಲಿಯ ವಿಜ್ಞಾನ ಭವನದಲ್ಲಿ ನಡೆದ 3 ದಿನಗಳ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು. ಮೋಹನ್ ಭಾಗವತ್ ಕಠಿಣ ಸಂದೇಶಗಳ ಮೂಲಕ ಬಿಜೆಪಿಗೆ ಬಿಸಿ ಮುಟ್ಟಿಸುತ್ತಾರೆ. ಪ್ರಧಾನಿ ಮೋದಿ ಅವರಿಗೂ ಸಲಹೆ ನೀಡುತ್ತಾರೆ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH:6332393988 /6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 291

ಸಮಾಚಾರ ಸಣ್ಣದಲ್ಲ

ಉದಯ ಟಿವಿ ಮುಖ್ಯಸ್ಥ ಸೆಲ್ವಂ ನಿಧನ

ಚೆನ್ನೈ: ದಕ್ಷಿಣ ಭಾರತದ ಜನಪ್ರಿಯ ಸನ್ ಟಿವಿ ಸಂಸ್ಥೆಯ ಕನ್ನಡದ ಮನರಂಜನಾ ವಾಹಿನಿಯಾಗಿದ್ದ 'ಉದಯ ಟಿವಿ'ಯ ಮುಖ್ಯಸ್ಥರಾಗಿದ್ದ ಎಸ್.ಸೆಲ್ವಂ(84) ಗುರುವಾರ ಬೆಳಗ್ಗೆ ಬೆಂಗಳೂರಿನಲ್ಲಿ ಹೃದಯಾಘಾತದಿಂದ ನಿಧನರಾದರು.

ಚೆನ್ನೈ ಯಲ್ಲಿ ಶುಕ್ರವಾರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಉದಯ ಟಿವಿ ಚೆನ್ನೈನಲ್ಲಿ 1994ರ ಜೂನ್‌ನಲ್ಲಿ ಪ್ರಸಾರ ಆರಂಭಿಸಿತ್ತು. ಸನ್ ಟಿವಿ ಸಮೂಹದ ಅಧ್ಯಕ್ಷ ಕಲಾನಿಧಿ ಮಾರನ್ ಅವರು ಉದಯ ಟಿವಿ ಪ್ರಾರಂಭಿಸಿದರು. ಕನ್ನಡದಲ್ಲಿ ಪ್ರಸಾರ ಆರಂಭಿಸಿದ ಮೊದಲ ಉಪಗ್ರಹ ವಾಹಿನಿ ಎಂಬ ಹೆಗ್ಗಳಿಕೆ ಉದಯ ಟಿವಿಯದಾಗಿದೆ. ಕಲಾನಿಧಿ ಮಾರನ್, ಕಾವೇರಿ ಕಲಾನಿಧಿ ಮತ್ತು ಎಸ್.ಸೆಲ್ವಂ ಉದಯ ಟಿವಿ ನಿರ್ದೇಶಕರು. ಸೆಲ್ವಂ ಉದಯ ಟಿವಿಯ ಬೆಂಗಳೂರು ಬ್ಯೂರೋ ನಿರ್ದೇಶಕರಾಗಿದ್ದರು. 2006ರ ನವೆಂಬರ್‌ನಲ್ಲಿ ಕಲಾನಿಧಿ ಮಾರನ್, ಉದಯ ಟಿವಿ ಲಿ. ಸಂಸ್ಥೆಯನ್ನು ಜೆಮಿನಿ ಟಿವಿ ಲಿ. ಜತೆ ಸನ್ ಟಿವಿ ನೆಟ್‌ವರ್ಕ್‌ನಲ್ಲಿ ವಿಲೀನಗೊಳಿಸಿದರು.

ಒಮರ್ ಅವಿರೋಧ ಆಯ್ಕೆ | 5 ವರ್ಷ ಬಳಿಕ ಜಮ್ಮು-ಕಾಶ್ಮೀರದಲ್ಲಿ ಚುನಾಯಿತ ಸರಕಾರ

ಒಮರ್ ಎನ್‌ಸಿ ಶಾಸಕಾಂಗ ಪಕ್ಷ ನಾಯಕ

ಶ್ರೀನಗರ: ಭಾರತದ ಶಿಖರಪ್ರಾಯ ರಾಜ್ಯ ಜಮ್ಮು-ಕಾಶ್ಮೀರದಲ್ಲಿ ಐದು ವರ್ಷಗಳ ಬಳಿಕ ಜನರ ಆಯ್ಕೆಯ ಸರಕಾರ ರಚನೆ ಆಗುತ್ತಿದೆ. ಇತ್ತೀಚೆಗಷ್ಟೇ ಕೊನೆಗೊಂಡ ವಿಧಾನಸಭೆ ಚುನಾವಣೆಯಲ್ಲಿ ನ್ಯಾಷನಲ್ ಕಾನ್ಫರೆನ್ಸ್ 42 ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವುದರೊಂದಿಗೆ ವಿಧಾನಸಭೆಯಲ್ಲಿನ ಬಹುದೊಡ್ಡ ಪಕ್ಷವಾಗಿದೆ. ಸರಕಾರ ರಚನೆಗೆ ಇನ್ನೂ 4 ಶಾಸಕರ ಬೆಂಬಲ ಅಗತ್ಯವಿದೆ.

ಈ ಮಧ್ಯೆ, ಪಕ್ಷದ ಪ್ರಧಾನ ಕಚೇರಿ ನವಾ-ಎ-ಸುಬಾದಲ್ಲಿ ಗುರುವಾರ ನ್ಯಾಷನಲ್ ಕಾನ್ಫರೆನ್ಸ್(ಎನ್‌ಸಿ) ನೂತನ ಶಾಸಕರ ಸಭೆ ನಡೆಯಿತು. ಒಮರ್ ಅಬ್ದುಲ್ಲಾ ಅವರನ್ನು ಶಾಸಕಾಂಗ ಪಕ್ಷದ ನಾಯಕರಾಗಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಈ ಮಾಹಿತಿಯನ್ನು ಪಕ್ಷದ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ಸುದ್ದಿಗಾರರಿಗೆ ತಿಳಿಸಿದ್ದಾರೆ. ಚುನಾವಣೆ ಪೂರ್ವ ಮೈತ್ರಿಯಂತೆ ಸರಕಾರ ರಚನೆ ಸಂಬಂಧ ಮಿತ್ರ ಪಕ್ಷ ಕಾಂಗ್ರೆಸ್ ಸೇರಿದಂತೆ ಇತರೆ ಪಾಲುದಾರ ಪಕ್ಷಗಳ ಜತೆ ಶುಕ್ರವಾರ ಸಭೆ ನಡೆಸಲಾಗುವುದು ಎಂದೂ ಫಾರೂಕ್ ಅಬ್ದುಲ್ಲಾ ಹೇಳಿದ್ದಾರೆ.

ಎನ್‌ಸಿಗೆ 4 ಪಕ್ಷೇತರರ ಬೆಂಬಲ

ಈ ಮಧ್ಯೆ, ಚುನಾವಣೆಯಲ್ಲಿ ಪಕ್ಷೇತರರಾಗಿ ಗೆದ್ದಿರುವ 7 ಮಂದಿಯಲ್ಲಿ ನಾಲ್ವರು ಪಕ್ಷೇತರರು ನ್ಯಾಷನಲ್ ಕಾನ್ಫರೆನ್ಸ್ ಪಕ್ಷಕ್ಕೆ ಬೆಂಬಲ ಸೂಚಿಸಿದ್ದಾರೆ. ಇದರಿಂದ ನ್ಯಾಷನಲ್ ಕಾನ್ಫರೆನ್ಸ್ ಕಾಂಗ್ರೆಸ್ ಬೆಂಬಲದ ಹೊರತಾಗಿಯೂ ಏಕಾಂಗಿಯಾಗಿ ಸರಕಾರ ರಚನೆ ಮಾಡಬಹುದಾಗಿದೆ. ಚುನಾವಣೆ ಗೆದ್ದ ನಮ್ಮ ಶಾಸಕರ ಸಂಖ್ಯೆ 42 ಇದೆ. ಈಗ ನಾಲ್ವರು ಸ್ವತಂತ್ರ ಶಾಸಕರು ಬೆಂಬಲ ಸೂಚಿಸಿರುವುದರಿಂದ ನಮ್ಮ ಶಾಸಕರ ಸಂಖ್ಯೆ 46ಕ್ಕೆ ಮುಟ್ಟಿದೆ. ಇದು ಸರಕಾರ ರಚನೆಗೆ ಬೇಕಾದ ಸ್ಪಷ್ಟಬಹುಮತವಾಗಿದೆ. ಕಾಂಗ್ರೆಸ್ ಪಕ್ಷದಿಂದ ಸರಕಾರ ರಚನೆಗೆ ಬೆಂಬಲ ಪತ್ರ ಬಂದ ಬಳಿಕ ರಾಜಭವನಕ್ಕೆ ತೆರಳಿ ಸರಕಾರ ರಚನೆಗೆ ಹಕ್ಕು ಮಂಡಿಸಲಿದ್ದೇವೆ ಎಂದು ಎನ್‌ಸಿ ಶಾಸಕಾಂಗ ಪಕ್ಷದ ನಾಯಕ ಒಮರ್ ಅಬ್ದುಲ್ಲಾ ಹೇಳಿದ್ದಾರೆ.

'ಒಮರ್ ಅಬ್ದುಲ್ಲಾ ಮುಂದಿನ ಮುಖ್ಯಮಂತ್ರಿ ಎಂದು ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ಹೇಳಿದ್ದರೂ ಈ ವಿಚಾರದಲ್ಲಿ ಶಾಸಕರೇ ಅಂತಿಮ ತೀರ್ಮಾನ ಕೈಗೊಳ್ಳಬೇಕು. ಇದು ಮೈತ್ರಿಕೂಟ ತೆಗೆದುಕೊಳ್ಳಬೇಕಾದ ನಿರ್ಧಾರ. ನಾನು ಯಾವಾಗಲೂ ನಿಯಮಗಳ ಪ್ರಕಾರವೇ ಕೆಲಸ ಮಾಡಲು ಬಯಸುತ್ತೇನೆ.

-ಒಮರ್ ಅಬ್ದುಲ್ಲಾ, ಎನ್‌ಸಿ ಶಾಸಕಾಂಗ ನಾಯಕ

ರಾಜ್ಯ ಸ್ಥಾನಮಾನ; ಸಂಪುಟ ಸಭೆ ಪ್ರಥಮ ನಿರ್ಣಯ

ಶ್ರೀನಗರ: ನೂತನ ಸರಕಾರ ರಚನೆಯಾದ ಬಳಿಕ ನಡೆಯುವ ಪ್ರಥಮ ಸಚಿವ ಸಂಪುಟ ಸಭೆಯಲ್ಲೇ ಸದ್ಯ ಕೇಂದ್ರಾಡಳಿತ ಪ್ರದೇಶವಾಗಿರುವ ಜಮ್ಮು-ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನವನ್ನು ಮರಳಿ ತರುವ ಸಂಬಂಧ ನಿರ್ಣಯ ಅಂಗೀಕರಿ ಸಲಾಗುವುದು ಎಂದು ವಿಧಾನಸಭೆಯಲ್ಲಿನ ಅತಿದೊಡ್ಡ ಪಕ್ಷವಾದ ನ್ಯಾಷನಲ್ ಕಾನ್ಫರೆನ್ಸ್(ಎನ್‌ಸಿ) ಶಾಸಕಾಂಗ ಪಕ್ಷದ ನಾಯಕ ಒಮರ್ ಅಬ್ದುಲ್ಲಾ ಹೇಳಿದ್ದಾರೆ. ನಮ್ಮ ಸರಕಾರದ ಸಂಪುಟ ಸಭೆಯ ಮೊದಲ ನಡಾವಳಿ ರಾಜ್ಯದ ಸ್ಥಾನಮಾನ ಮರಳಿ ನೀಡುವಂತೆ ಕೇಂದ್ರವನ್ನು ಒತ್ತಾಯಿಸುವ ನಿರ್ಣಯ ಅಂಗೀಕರಿಸುವುದೇ ಆಗಿರಲಿದೆ. ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಕಾಶ್ಮೀರಕ್ಕೆ ರಾಜ್ಯ ಸ್ಥಾನಮಾನ ಮರುಸ್ಥಾಪಿಸುವುದಾಗಿ ಭರವಸೆ ನೀಡಿದ್ದಾರೆ ಎಂದು ಒಮರ್ ಹೇಳಿದ್ದಾರೆ.

ಸರಕಾರ ರಚನೆ ಚರ್ಚೆ: ಇಂದು ಮಿತ್ರಪಕ್ಷ ಸಭೆ

ರಾಜ್ಯದಲ್ಲಿ ನೂತನ ಚುನಾಯಿತ ಸರಕಾರ ರಚನೆ ಪ್ರಕ್ರಿಯೆಯನ್ನು ಮುಂದಕ್ಕೆ ಕೊಂಡೊಯ್ಯಲು ಚುನಾವಣಾ ಪೂರ್ವ ಮೈತ್ರಿಯ ಪಾಲುದಾರ ಪಕ್ಷಗಳಾದ ನ್ಯಾಷನಲ್ ಕಾನ್ಫರೆನ್ಸ್, ಕಾಂಗ್ರೆಸ್, ಸಿಪಿಐ-ಎಂ, ಪ್ಯಾಂಥರ್ಸ್ ಪಾರ್ಟಿ ಶುಕ್ರವಾರ ಸಭೆ ಸೇರಿ ಚರ್ಚಿಸಲಿವೆ. ಕಾಂಗ್ರೆಸ್ ಪಕ್ಷದಿಂದ 6 ಶಾಸಕರ ಬೆಂಬಲ ಪತ್ರ ಪಡೆಯಲು ನ್ಯಾಷನಲ್ ಕಾನ್ಫರೆನ್ಸ್ ಸಹಿತ ಮಿತ್ರ ಪಕ್ಷಗಳಲ್ಲಿ ಮಾತುಕತೆ ನಡೆದಿದೆ.

ನ್ಯಾಷನಲ್ ಕಾನ್ಫರೆನ್ಸ್ ಶಾಸಕಾಂಗ ಪಕ್ಷದ ನಾಯಕರಾಗಿ ಅವಿರೋಧ ಆಯ್ಕೆಯಾಗಿರುವ ಒಮರ್ ಅಬ್ದುಲ್ಲಾ ಅವರೇ ಸಹಜವಾಗಿ ಮುಖ್ಯಮಂತ್ರಿಯಾಗಲಿದ್ದಾರೆ. ಚುನಾವಣಾ ಪೂರ್ವ ಮೈತ್ರಿಕೂಟದ ಮಿತ್ರ ಪಕ್ಷಗಳು ಶುಕ್ರವಾರ ಸಭೆ ಸೇರಿ ಮೈತ್ರಿಕೂಟದ ನಾಯಕನನ್ನು ಆಯ್ಕೆ ಮಾಡಲಿವೆ. ಮೈತ್ರಿಕೂಟ ಪಕ್ಷಗಳ ಎಲ್ಲಾ ಶಾಸಕರ ಬೆಂಬಲ ಪತ್ರದೊಂದಿಗೇ ಲೆಫ್ಟಿನೆಂಟ್ ಗವರ್ನರ್‌ರನ್ನು ಭೇಟಿ ಮಾಡಿ ನೂತನ ಸರಕಾರ ರಚನೆಗೆ ಹಕ್ಕು ಮಂಡಿಸಲಾಗುವುದು. ಪದಗ್ರಹಣ ಸಮಾರಂಭ ನಿಗದಿಗೆ ಮನವಿ ಮಾಡಲಾಗುವುದು ಎಂದು ಒಮರ್ ಹೇಳಿದರು. ಈ ಮಧ್ಯೆ ಕಾಂಗ್ರೆಸ್ ಪಕ್ಷದ ಜಮ್ಮು-ಕಾಶ್ಮೀರ ಘಟಕ ಮುಖ್ಯಸ್ಥ ತಾರಿಕ್ ಹಮೀದ್ ಕರಾರ್, ರಾಜ್ಯದಲ್ಲಿ ನೂತನ ಸರಕಾರ ರಚನೆ ಕುರಿತು ಪಕ್ಷದ ನಾಯಕರ ಜತೆ ಸಮಾಲೋಚನೆ ನಡೆಸಲೆಂದೇ ದೆಹಲಿಗೆ ತೆರಳಿದ್ದಾರೆ.

ಹರಿಯಾಣ ಗೆಲುವಿಗೆ ಬಿಜೆಪಿ ತ್ರಿಶಕ್ತಿ ಕಾರಣ

ಚಂಡೀಗಢ: ಹರಿಯಾಣ ಚುನಾವಣೆಯಲ್ಲಿ ಬಿಜೆಪಿಯ ಗೆಲುವು ದೇಶದ ಗಮನ ಸೆಳೆದಿದೆ, ಅಚ್ಚರಿಯನ್ನೂ ಸೃಷ್ಟಿಸಿದೆ. 10 ವರ್ಷಗಳ ಆಡಳಿತದ ಬಳಿಕ ಸೃಷ್ಟಿಯಾಗಿದ್ದ ಆಡಳಿತ ವಿರೋಧಿ ಅಲೆ, ಜಾಟ್ ಸಮುದಾಯದ ಕೋಪ, ರೈತರ ಆಕ್ರೋಶ ಎಲ್ಲವನ್ನೂ ಯಶಸ್ವಿಯಾಗಿ ನಿಭಾಯಿಸಿದ ಬಿಜೆಪಿ ಗೆಲುವಿನ ನಗೆ ಬೀರಿದೆ. ಬಿಜೆಪಿಯ ಈ ಐತಿಹಾಸಿಕ ಗೆಲುವಿನ ಹಿಂದಿರುವುದು ಮೂವರು ಸೂತ್ರಧಾರಿಗಳು. ಧರ್ಮೇಂದ್ರ ಪ್ರಧಾನ್, ಸತೀಶ್ ಪೂನಿಯ ಮತ್ತು ಬಿಪ್ಲಬ್ ದೇಬ್. ಮೂವರೂ ನಾಯಕರ ಶ್ರಮ ಹರಿಯಾಣದಲ್ಲಿನ ಹ್ಯಾಟ್ರಿಕ್ ಗೆಲುವಿಗೆ ಕಾರಣವಾಗಿದೆ.

ಬಿಜೆಪಿ ಮುಂದಿನ ರಾಷ್ಟ್ರೀಯ ಅಧ್ಯಕ್ಷ ಆಗಲು ಅರ್ಹವಾದವರಲ್ಲಿ ಪ್ರಬಲವಾಗಿ ಕೇಳಿಬರುತ್ತಿರುವ ಹೆಸರು ಧರ್ಮೇಂದ್ರ ಪ್ರಧಾನ್. ಒಡಿಶಾದಲ್ಲಿ ಕಮಲ ಅರಳಿಸುವಲ್ಲೂ ಅವರು ಪ್ರಮುಖ ಪಾತ್ರ ವಹಿಸಿದ್ದರು. ಇದೀಗ ಹರಿಯಾಣದಲ್ಲಿ ಕೂಡ ಸಂಘಟನಾ ಚಾತುರ್ಯ ಮೆರೆದಿದ್ದಾರೆ. ಪಕ್ಷದೊಳಗೆ ಪ್ರಧಾನ್ ಬಗ್ಗೆ ಮೆಚ್ಚುಗೆ ಮಾತು ಕೇಳಿಬರುತ್ತಿದೆ.

ಬಿಜೆಪಿ ರಾಜ್ಯ ಘಟಕದ ಮಾಜಿ ಅಧ್ಯಕ್ಷ ಪೂನಿಯ, ಜಾಟ್ ಸಮುದಾಯದ ಮನವೊಲಿಸುವಲ್ಲಿ ಮಹತ್ತರ ಪಾತ್ರ ವಹಿಸಿದ್ದಾರೆ.

ತ್ರಿಪುರಾ ಮಾಜಿ ಮುಖ್ಯಮಂತ್ರಿ ಬಿಪ್ಲಬ್ ದೇಬ್, ಹರಿಯಾಣ ಚುನಾವಣೆಗಾಗಿ ಶ್ರಮಿಸಿದ್ದಾರೆ. ರಾಜ್ಯದಲ್ಲಿ ಬಲು ಪ್ರಭಾವಿಯಾದ ಜಾಟ್ ಸಮುದಾಯ ಸೇರಿದಂತೆ ದಲಿತರು, ವಾಲ್ಮೀಕಿ, ಬಿಷ್ಣೋಯ್, ಸಿಖ್ ಸಮುದಾಯಗಳಿಗೆ ಬಿಜೆಪಿಯ ಯೋಜನೆಗಳನ್ನು ತಲುಪಿಸಿ ಮತ ಸೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ. ಹರಿಯಾಣ ಚುನಾವಣಾ ಕಣದಲ್ಲಿ ಈ ಮೂವರ ಪರಿಶ್ರಮವೇ ಬಿಜೆಪಿ ಹ್ಯಾಟ್ರಿಕ್ ಗೆಲುವಿಗೆ ಕಾರಣ ಎಂಬುದು ಉಲ್ಲೇಖಾರ್ಹ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ, ಶಿಡ್ಲಘಟ್ಟ
ಶ್ರೀ ರಾಮು ಬಿನ್ ಲೇಟ್ ಶ್ರೀರಾಮಪ್ಪ ರವರ ಬಿಲ್ಡಿಂಗ್, ನಿಸರ್ಗ ನಿಲಯ, ನ್ಯೂ ಡಿಲೆಕ್ಸ್ ಬೇಕರಿ ಹಿಂಭಾಗ, ಚಿಕ್ಕಬಳ್ಳಾಪುರ ಮತ್ತು ಚಿಂತಾಮಣಿ ಮುಖ್ಯರಸ್ತೆ, ಕನಕ ನಗರ, ಶಿಡ್ಲಘಟ್ಟ ನಗರ, ಚಿಕ್ಕಬಳ್ಳಾಪುರ ಜಿಲ್ಲೆ-562105
ದೂರವಾಣಿ ಸಂಖ್ಯೆ: 08158-256497, ಇಮೇಲ್-cdposid2@gmail.com

ಸಂ:ಶಿಅಯೋ/ಶಿಘ/ಹೊ.ಗು.ನೌ.ಟೆಂ.ಪ್ರ/2024-25 ದಿನಾಂಕ: 09.10.2024

ಅಲ್ಪಾವಧಿ ಮರು ಇ-ಟೆಂಡರ್ ಪ್ರಕಟಣೆ (ಹೊರಗುತ್ತಿಗೆ ನೌಕರರ ಸೇವೆಯನ್ನು ಪಡೆಯುವ ಬಗ್ಗೆ ಟೆಂಡರ್)

2024-25ನೇ ಸಾಲಿನಲ್ಲಿ ಶಿಡ್ಲಘಟ್ಟ ಶಿಶು ಅಭಿವೃದ್ಧಿ ಯೋಜನಾ, ಕಛೇರಿಗೆ ಬಾಹ್ಯ ಮೂಲದಿಂದ ಕೌಟುಂಬಿಕ ದೌರ್ಜನ್ಯ ಕಾಯ್ದೆಯಡಿ 01 ಕಂಪ್ಯೂಟರ್ ಆಪರೇಟರ್, 01 ಮೆಸೆಂಜರ್ ಹಾಗೂ ಐ.ಸಿ.ಡಿ.ಎಸ್ ಯೋಜನೆಯಡಿ 01 ಕಂಪ್ಯೂಟರ್ ಆಪರೇಟರ್, 02 ಡಿ.ಗ್ರೂಪ್ ನೌಕರರನ್ನು ಪಡೆಯಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಮರು ಇ-ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ವೇಳಾಪಟ್ಟಿ ಈ ಕೆಳಕಂಡಂತೆ ಇದೆ. (1) ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **22.10.2024 ರಂದು ಸಾಯಂಕಾಲ: 5.00 ಘಂಟೆವರೆಗೆ.** (2) EMD **ಮೊತ್ತ: ರೂ. 20,000/-,** (3) ಪ್ರೀ ಬಿಡ್ ಮೀಟಿಂಗ್ ದಿನಾಂಕ, ಸಮಯ ಮತ್ತು ಸ್ಥಳ: **ದಿನಾಂಕ: 18.10.2024 ರಂದು ಬೆಳಿಗ್ಗೆ: 11.00** ಘಂಟೆಗೆ ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಚಿಕ್ಕಬಳ್ಳಾಪುರ. (4) ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ, ಸಮಯ: **ದಿನಾಂಕ: 24.10.2024 ರಂದು ಬೆಳಿಗ್ಗೆ: 11.00 ಘಂಟೆ ನಂತರ** (5) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 28.10.2024 ರಂದು ಬೆಳಿಗ್ಗೆ: 11.00 ಘಂಟೆ ನಂತರ.** ಹೆಚ್ಚಿನ ಮಾಹಿತಿಗಾಗಿ ಟೆಂಡರ್ ಪೂರ್ಣ ವಿವರಗಳನ್ನು ಕರ್ನಾಟಕ ಸರ್ಕಾರದ **www.kppp.karnataka.gov.in** ವೆಬ್‌ಸೈಟ್‌ನಲ್ಲಿ ಮಾತ್ರ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ **ದೂರವಾಣಿ ಸಂಖ್ಯೆ: 08158-256497**ಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/- ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಶಿಡ್ಲಘಟ್ಟ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:231/ಕೆಎಸ್‌ಎಂಸಿಎ/2024-25

ರತನ್‌ಗೆ ಭಾರತ ರತ್ನ ಮಹಾ ಸರಕಾರ ಮನವಿ

ದೆಹಲಿ: ದೇಶದ ಖ್ಯಾತ ಕೈಗಾರಿಕೋದ್ಯಮಿ ರತನ್ ಟಾಟಾ ನಿಧನರಾಗಿದ್ದು, ಅವರಿಗೆ ಮರಣೋತ್ತರ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸುವಂತೆ ಮಹಾರಾಷ್ಟ್ರ ಸರಕಾರ ಕೇಂದ್ರ ಸರಕಾರಕ್ಕೆ ಮನವಿ ಮಾಡಿದೆ.

ಮುಖ್ಯಮಂತ್ರಿ ಏಕನಾಥ್ ಶಿಂದೆ ನೇತೃತ್ವದಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಶ್ರದ್ಧಾಂಜಲಿ ಸಲ್ಲಿಸಿದ ಬಳಿಕ ಕೇಂದ್ರ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಈ ಬಗ್ಗೆ ಏಕನಾಥ್ ಶಿಂದೆ 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ಹೊಸ ಕೈಗಾರಿಕೆಗಳನ್ನು ಸ್ಥಾಪಿಸುವುದರ ಜತೆಗೇ ದೇಶವನ್ನು ಮುಂದಕ್ಕೆ ಕೊಂಡೊಯ್ಯಬಹುದು. ಅದಕ್ಕೆ ನಿಜವಾದ ದೇಶಭಕ್ತಿ ಮತ್ತು ಸಮಾಜದ ಬಗ್ಗೆ ಪ್ರಾಮಾಣಿಕ ಕಾಳಜಿ ಅಗತ್ಯ. ರತನ್ ಟಾಟಾ ಅವರಲ್ಲಿ ಈ ಗುಣಗಳಿದ್ದವು. ಉದ್ಯಮ ಕ್ಷೇತ್ರ ಮಾತ್ರವಲ್ಲದೆ, ಸಾಮಾಜಿಕ ಅಭಿವೃದ್ಧಿ ಕಾರ್ಯದಲ್ಲೂ ಅವರ ಕೊಡುಗೆ ಅಪಾರ. ಅವರು ಮಹಾರಾಷ್ಟ್ರದ ಮಗ ಮತ್ತು ಭಾರತದ ಹೆಮ್ಮೆ. ಹಾಗಾಗಿ ಅವರಿಗೆ ಭಾರತ ರತ್ನ ಪ್ರಶಸ್ತಿ ಸಲ್ಲಲೇಬೇಕು ಎಂದು ರಾಜ್ಯ ಸರಕಾರ ಆಗ್ರಹಿಸಿದೆ. ರತನ್ ಟಾಟಾ ಉನ್ನತ ನೈತಿಕ ಮೌಲ್ಯಗಳನ್ನು ಅನುಸರಿಸಿದರು, ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತದ ಛಾಪು ಮೂಡಿಸಿದರು. ಅವರ ಸಾವಿನಿಂದ ದೇಶದ ಪ್ರಮುಖ ಸ್ತಂಭವೇ ಕುಸಿದಂತಾಗಿದೆ ಎಂದು ತಿಳಿಸಿದ್ದಾರೆ.

ಚಿತ್ರನಟಿ ಸಿಮಿ ಗರೆವಾಲ್ ಭಾವುಕ ಬರಹ...

ಆಯಿತು, ಹೋಗಿ ಬಾ ಗೆಳೆಯ

ಮುಂಬೈ: ರತನ್ ಟಾಟಾ ನಿಧನಕ್ಕೆ ಗೆಳತಿ ಬಾಲಿವುಡ್ ಹಿರಿಯ ನಟಿ ಸಿಮಿ ಗರೆವಾಲ್ ಕಣ್ಣೀರಿನ ವಿದಾಯ ಹೇಳಿದ್ದಾರೆ.

'ಪ್ರೀತಿಯ ರತನ್, ನೀವು ನಿರ್ಗಮಿಸಿದ್ದೀರಿ ಎಂದು ಎಲ್ಲರೂ ಹೇಳುತ್ತಿದ್ದಾರೆ. ಆದರೆ, ನೀವು ನಮ್ಮ ಜತೆ ಇಲ್ಲ ಎಂಬ ಸತ್ಯವನ್ನು ಅರಗಿಸಿಕೊಳ್ಳುವುದೇ ಬಹಳ ಕಷ್ಟವಾಗುತ್ತಿದೆ' ಎಂದು ಸಿಮಿ ಗರೇವಾಲ್ 'ಇನ್‌ಸ್ಟಾಗ್ರಾಂ'ನಲ್ಲಿ ಬರೆದಿದ್ದಾರೆ. ಬಳಿಕ, 'ಆಯಿತು, ಹೋಗಿ ಬಾ ನನ್ನ ಗೆಳೆಯ' ಎಂದು ಕಣ್ಣೀರಿನ ವಿದಾಯ ಹೇಳಿದ್ದಾರೆ.

2011ರಲ್ಲಿ ಸಂದರ್ಶನವೊಂದರಲ್ಲಿ ಖ್ಯಾತ ಹಿಂದಿ ಚಿತ್ರನಟಿ ಸಿಮಿ ಗರೆವಾಲ್, ರತನ್ ಟಾಟಾ ಅವರೊಂದಿಗಿನ ತಮ್ಮ ಸಂಬಂಧದ ಬಗ್ಗೆ ಮಾತನಾಡಿದ್ದರು. ರತನ್ ರದ್ದು ಪರಿಪೂರ್ಣ ವ್ಯಕ್ತಿತ್ವ. ನೋಡಿದವರಿಗೆ ಬಲು ಗಂಭೀರವಾಗಿ ಕಾಣುತ್ತಿದ್ದರೂ ಅವರೊಳಗೆ ಹಾಸ್ಯ ಪ್ರಜ್ಞೆ ಕೂಡ ಇತ್ತು. ಅದು ತಕ್ಕಮಟ್ಟಿಗೆ ಚೆನ್ನಾಗಿಯೇ ಇತ್ತು. ರನತ್ ಬಲು ಸಭ್ಯ. ಆದರೆ, ಎಂದೂ ಶ್ರೀಮಂತಿಕೆಯನ್ನು ತೋರ್ಪಡಿಕೊಳ್ಳುತ್ತಿರಲಿಲ್ಲ ಎಂದು ಮನಬಿಚ್ಚಿ ಪ್ರಶಂಸಿಸಿದ್ದರು.

ಸಿಮಿ-ರತನ್ ವರ್ಷಗಳ ಕಾಲ ಒಳ್ಳೆಯ ಸ್ನೇಹಿತರಾಗಿದ್ದರು. ಅಷ್ಟೊಂದು ಆತ್ಮೀಯ

ವಾಗಿದ್ದರೂ ರತನ್ ಮತ್ತು ಸಿಮಿ ಗರೆವಾಲ್ ಪ್ರೀತಿ ಹೆಚ್ಚು ದಿನ ಉಳಿಯಲಿಲ್ಲ. ಸಿಮಿ ಬೇರೊಬ್ಬರನ್ನು ಮದುವೆಯಾದರು.

ಸ್ವತಃ ರತನ್ ಟಾಟಾ ಅವರೇ ಸಂದರ್ಶನವೊಂದರಲ್ಲಿ, ತಾವು ನಾಲ್ಕು ಬಾರಿ ಪ್ರೀತಿಯಲ್ಲಿ ಬಿದ್ದಿದ್ದ ಬಗ್ಗೆ ಮಾತನಾಡಿದ್ದರು. ಆದರೆ, ಅವು ಯಾವುವೂ ಮದುವೆಯ ಹಂತ ತಲುಪಲಿಲ್ಲ ಎಂಬುದನ್ನು ಒಪ್ಪಿಕೊಂಡಿದ್ದರು. 1960ರ ದಶಕದಲ್ಲಿ ಅಮೆರಿಕದಲ್ಲಿ ಕೆಲಸ ಮಾಡುವಾಗ ರತನ್ ಟಾಟಾ ಬೇರೊಬ್ಬ ಹುಡುಗಿಯನ್ನು ಇಷ್ಟಪಟ್ಟಿದ್ದರು. 1962ರ ಭಾರತ-ಚೀನಾ ಯುದ್ಧ ಸಮಯದಲ್ಲಿ ಅದು ಕೊನೆಗೊಂಡಿತ್ತು. ಏಕೆಂದರೆ ಯುದ್ಧದ ಸಮಯದಲ್ಲಿ ಆಕೆಗೆ ಅಮೆರಿಕವನ್ನು ಬಿಟ್ಟು ಭಾರತಕ್ಕೆ ಹೋಗಲು ಪೋಷಕರು ಅನುಮತಿ ನೀಡಿರಲಿಲ್ಲ ಎಂದು ಬಹಿರಂಗಪಡಿಸಿದ್ದರು.

ಮೌಲ್ಯಾಧಾರಿತ ನಾಯಕತ್ವ ಮಾದರಿ

ದೆಹಲಿ: 'ಆತ್ಮೀಯ ಸ್ನೇಹಿತ, ಟಾಟಾ ಸನ್ಸ್ ಅಧ್ಯಕ್ಷ ರತನ್ ಟಾಟಾ ಅವರನ್ನು ಕಳೆದುಕೊಂಡಿರುವುದು ತುಂಬಾ ನೋವಾಗಿದೆ' ಎಂದು ಇನ್ಫೋಸಿಸ್ ಸಹ ಸಂಸ್ಥಾಪಕ ಎನ್.ಆರ್.ನಾರಾಯಣ ಮೂರ್ತಿ ಪ್ರತಿಕ್ರಿಯಿಸಿದ್ದಾರೆ. ನೈತಿಕ ವಿಚಾರಗಳಲ್ಲಿ ನನ್ನಲ್ಲಿನ ಕೆಲವು ಅಸ್ಪಷ್ಟತೆ ಮತ್ತು ಗೊಂದಲ ಗಳಿಗೆ ರತನ್ ಟಾಟಾ ಮಾತು- ಸಲಹೆ ಮಾರ್ಗ

ದರ್ಶನವಾಗಿರುತ್ತಿತ್ತು. ಈ ಸೂಕ್ಷ್ಮ ವಿಚಾರಗಳಲ್ಲಿ ಅವರೇ ನನಗೆ ಮಾದರಿಯಾಗಿದ್ದರು ಎಂದು ನಾರಾಯಣ ಮೂರ್ತಿ ಗುರುವಾರ ಹೇಳಿದ್ದಾರೆ. 2020ರಲ್ಲಿ ಮುಂಬೈನಲ್ಲಿ ನಡೆದ ಸಮಾರಂಭದಲ್ಲಿ ರತನ್ ಟಾಟಾ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿಯನ್ನು ನಾರಾಯಣ ಮೂರ್ತಿ ಅವರೇ ಪ್ರದಾನ ಮಾಡುವ ಸಂದರ್ಭ. ಆ ಕ್ಷಣ ಭಾವೋದ್ವೇಗಕ್ಕೆ ಒಳಗಾಗ ಮೂರ್ತಿ ಅವರು ರತನ್ ಟಾಟಾ ಅವರ ಕಾಲಿಗೆರಗಿ ನಮಸ್ಕರಿಸಿ ದರು.

200 ಪ್ರಾಣಿಗಳಿಗೆ ಮುಂಬೈನಲ್ಲಿ 165 ಕೋಟಿ ರು. ವೆಚ್ಚದಲ್ಲಿ ಅತ್ಯಾಧುನಿಕ ಆಸ್ಪತ್ರೆ ನಿರ್ಮಾಣ

ರತನ್ ಟಾಟಾ ನೆಚ್ಚಿನ ಯೋಜನೆ ಶ್ವಾನ ದವಾಖಾನೆ

ಮುಂಬೈ: ರತನ್ ಟಾಟಾ ಅನಾರೋಗ್ಯಕ್ಕೆ ತುತ್ತಾಗುವುದಕ್ಕೆ ಕೆಲ ದಿನಗಳ ಮೊದಲು ತಮ್ಮ ನೆಚ್ಚಿನ ಯೋಜನೆ ಜಾರಿಗೆ ತರುವ ಕನಸು ಹೊಂದಿದ್ದರು. ಆ ಯೋಜನೆ ಜುಲೈನಲ್ಲಿ ಜಾರಿಗೆ ಬಂದಿದೆ. ಮುಂಬೈನ ಮಹಾಲಕ್ಷ್ಮಿ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಪ್ರಾಣಿಗಳ ಬಗ್ಗೆ ವಿಶೇಷ ಕಾಳಜಿ ಹೊಂದಿದ್ದ ರತನ್ ಟಾಟಾ, 200 ಪ್ರಾಣಿಗಳಿಗೆ ಚಿಕಿತ್ಸೆ ನೀಡಬಹುದಾದ ಐದು ಮಹಡಿಗಳ 'ಪ್ರಾಣಿ ಆಸ್ಪತ್ರೆ' ಕಟ್ಟಿಸಿದ್ದಾರೆ. 165 ಕೋಟಿ ರು. ವೆಚ್ಚದಲ್ಲಿ ಈ ಆಸ್ಪತ್ರೆ ನಿರ್ಮಾಣವಾಗಿದೆ. ಬ್ರಿಟಿಷ್ ಪಶುವೈದ್ಯ ಥಾಮಸ್ ಹೀತ್ಕೋಟ್ ನೇತೃತ್ವದಲ್ಲಿ ಆಸ್ಪತ್ರೆ ನಡೆಯುತ್ತಿದೆ.

ಈ ಯೋಜನೆಯನ್ನು 2017ರಲ್ಲಿ ಘೋಷಿಸಲಾಯಿತು. ನವಿ ಮುಂಬೈನಲ್ಲಿ ನಿರ್ಮಿಸಲು ಉದ್ದೇಶಿಸಲಾಗಿತ್ತು. ಸಾಕು ಪ್ರಾಣಿ ಪೋಷಕರಿಗೆ ಪ್ರಯಾಣ ತೊಡಕಾಗಿರುತ್ತದೆ ಎಂದು ಭಾವಿಸಿದ ಟಾಟಾ, ಆಸ್ಪತ್ರೆಯನ್ನು ಕೇಂದ್ರ ಸ್ಥಳಕ್ಕೆ ಸ್ಥಳಾಂತರಿಸುವ ನಿರ್ಧಾರ ಕೈಗೊಂಡರು. 98,000 ಚದರಡಿ ವ್ಯಾಪ್ತಿಯಲ್ಲಿ ನಿರ್ಮಿಸಲಾದ ಆಸ್ಪತ್ರೆಯಲ್ಲಿ 24-7 ಅವಧಿಗೆ ತುರ್ತು ಚಿಕಿತ್ಸೆ ಒದಗಿಸುವ ಸೌಲಭ್ಯವನ್ನು ಹೊಂದಿದೆ. ತೀವ್ರವಾಗಿ ಅನಾರೋಗ್ಯ ಮತ್ತು ಗಾಯಗೊಂಡ ಪ್ರಾಣಿಗಳಿಗೆ ಜೀವ ಬೆಂಬಲದೊಂದಿಗೆ ಐಸಿಯು

ಮತ್ತು ಎಚ್‌ಡಿಯುಗಳು, ಮುಂದುವರಿದ ರೋಗನಿರ್ಣಯದ ಇಮೇಜಿಂಗ್ ಸೇವೆಗಳು, ಶಸ್ತ್ರಚಿಕಿತ್ಸಾ ಘಟಕಗಳು, ವಿಶೇಷ ಚಿಕಿತ್ಸೆ (ಡೆರ್ಮಟಾಲಜಿ, ದಂತ, ನೇತ್ರಶಾಸ್ತ್ರ, ಇತ್ಯಾದಿ), ಆಂತರಿಕ ರೋಗಶಾಸ್ತ್ರ ಪ್ರಯೋಗಾಲಯ ಮತ್ತು ಒಳರೋಗಿಗಳ ವಾರ್ಡ್‌ಗಳನ್ನು ಹೊಂದಿದೆ.

ನಿರ್ದೇಶಕರ ಮಂಡಳಿಯಲ್ಲಿ ರತನ್ ಟಾಟಾ ಅವರ ಕಚೇರಿಯ ಜನರಲ್ ಮ್ಯಾನೇಜರ್ ಶಂತನು ನಾಯ್ದು ಇದ್ದಾರೆ. ಆತ ಮೋಟೋಪಾವ್ಸ್ ಎಂಬ ಸ್ಟಾರ್ಟಪ್ ಸ್ಥಾಪಿಸಿದ್ದಾರೆ. ಇದು ನಾಯಿಗಳಿಗೆ ಪ್ರತಿಫಲಿತ ಕಾಲರ್‌ಗಳನ್ನು ಅಳವಡಿಸಿ, ರಾತ್ರಿ ಸಂಚಾರದಲ್ಲಿರುವ ವಾಹನಗಳಿಗೆ ನಾಯಿಗಳು ಗೋಚರಿಸುವಂತೆ ಮಾಡಿ ಅಪಘಾತವಾಗುವುದನ್ನು ತಪ್ಪಿಸುತ್ತದೆ. ಮೂಳೆಗಳ ಸಂದು (ಜಾಯಿಂಟ್) ಬದಲಿಸುವುದಕ್ಕಾಗಿ ಮಿನ್ನೇಸೋಟ ವಿಶ್ವವಿದ್ಯಾನಿಲಯಕ್ಕೆ ತಮ್ಮ ಸಾಕು ಪ್ರಾಣಿಯನ್ನು ಕರೆದೊಯ್ಯಬೇಕಾಯಿತು. ಆದರೆ ನಾನು ತುಂಬಾ ತಡವಾಗಿ ಅಲ್ಲಿಗೆ ಹೋಗಿದ್ದೇ ಎಂದು ಟಾಟಾ ಒಮ್ಮೆ ಹೇಳಿಕೊಂಡು ನೊಂದುಕೊಂಡಿದ್ದರು. ಆ ಸಂದರ್ಭದ ಅನುಭವವೇ ಅವರಿಗೆ ಮುಂಬೈನಲ್ಲಿ ವಿಶ್ವದರ್ಜೆಯ ಪಶುವೈದ್ಯಕೀಯ ಆಸ್ಪತ್ರೆ ಸ್ಥಾಪಿಸುವುದಕ್ಕೆ ಪ್ರೇರಣೆ ನೀಡಿತು.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ

ಸಂ.ಕಾನಿಅ/ಲೋಇ/ಕವಿ/ತಾಶಾ-2/.ಟೆಂಡರ್.ಅಧಿಸೂಚನೆ/2024-25/3696 ದಿನಾಂಕ: 10.10.2024

:: ಅಲ್ಪಾವಧಿ ಟೆಂಡರ್ ಅಧಿಸೂಚನೆ ::

1) ಕಾಮಗಾರಿ ವಿವರ: ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಾರ್ಯಾಲಯದಿಂದ ಕೆ.ಕೆ.ಆರ್.ಡಿ.ಬಿ. ಯೋಜನೆಯಡಿಯಲ್ಲಿ ಮಂಜೂರಾದ (ಒಟ್ಟು 10) ಕಾಮಗಾರಿಗಳಿಗೆ ಟೆಂಡರ ಕರೆಯಲಾಗಿದೆ ಇಂಡೆಂಟ್‌ಸಂಖ್ಯೆ: **15498, 15877, 15482, 15710, 15878. 16132, 16131, 16129, 16128, 16130,** 2) ಕಾಮಗಾರಿ ಅಂದಾಜು ಮೊತ್ತ: **ಕನಿಷ್ಠ ರೂ. 10.00 ಲಕ್ಷಗಳು ಗರಿಷ್ಠ ರೂ. 125.00 ಲಕ್ಷಗಳು** 3) ಗುತ್ತಿಗೆದಾರರ ಅರ್ಹತೆ ವಿವರ: ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, ಲೋಕೋಪಯೋಗಿ ಇಲಾಖೆಯಲ್ಲಿ ನಾಲ್ಕನೆ, ಮೂರನೆ ಮತ್ತು ಎರಡನೆ ದರ್ಜೆ, ಒಂದನೆ ದರ್ಜೆ ಹಾಗೂ ಮೇಲ್ಪಟ್ಟು ಗುತ್ತಿಗೆದಾರರಾಗಿರಬೇಕು, 4) ಇ ಎಮ್ ಡಿ ಮೋತ್ತ: ಕನಿಷ್ಠ ರೂ. 21000.00 ಗರಿಷ್ಠ ರೂ. 160000.00, 5) ಪ್ರೀ- ಬಿಡ್ ಮೀಟಿಂಗ: **18.10.2024 (11.30 ಗಂಟೆ),** 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ: **19.10.2024 (17.30 ಗಂಟೆ),** 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: **22.10.2024 (16.00 ಗಂಟೆ),** 8) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **23.10.2024 (16.00 ಗಂಟೆ),** 9) ಆರ್ಥಿಕ ಬಿಡ್ ತೆರೆಯುವ ದಿನಾಂಕ : **24.10.2024 (16.30 ಗಂಟೆ),** 10) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ, ಇಲಾಖೆ, ವಿಭಾಗ ಕಲಬುರಗಿ ಕಚೇರಿ, 11) ಸೂಚನೆ: ಜಿ.ಎಸ್.ಟಿ. ಪ್ರತ್ಯೇಕವಾಗಿ ನೀಡಲಾಗುವುದು, 12) ಅಂತರ್ಜಾಲ ತಾಣದ ವಿಳಾಸ: WWW.kppp.Karnatak.gov.in, 13) ಗಮನಿಸಬೇಕಾದ ಅಂಶಗಳು:
ಟಿಪ್ಪಣಿ: 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮಂದೂಡುವಿಕೆ/ ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೆ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯೂನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರರು,
ಲೋಕೋಪಯೋಗಿ, ಇಲಾಖೆ, ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/517/ಕೆ.ಎಸ್.ಎಂ.ಸಿ.&ಎ/2024-25

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿಭಾಗ, ಯಾದಗಿರಿ

ಸಂ.ಕಾನಿಅ/ಲೋಇ/ಯಾವಿ/ತಾಶಾ-1,2/ಇ-ಟೆಂಡರ್ ಪ್ರಕಟಣೆ/2024-25/1799,ದಿನಾಂಕ: 09.10.2024

ಅಲ್ಪಾವಧಿ ಇ -ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ: ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ-1, 2 ಮತ್ತು 3 ರಂತೆ ಏಕ-ಲಕೋಟೆ ಹಾಗೂ ದ್ವಿ-ಲಕೋಟೆ ಪದ್ಧತಿಯಲ್ಲಿ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2024-25 ನೇ ಸಾಲಿನ ಲೆಕ್ಕಶೀರ್ಷಿಕೆ 3054 ರಾಹೆ ಮತ್ತು ಜಿಮುರ ರಸ್ತೆ ಮತ್ತು ಸೇತುವೆಗಳ ನಿರ್ವಹಣೆ/ದುರಸ್ತಿ (ಯೋಜನೇತರ) ಅಡಿಯಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಸುರಪೂರ ತಾಲೂಕಿನ ಅಡಿಯಲ್ಲಿ (1)12464/2ನೇ ಕರೆ, (2)12468/2ನೇ ಕರೆ & (3)12449/2ನೇ ಕರೆ (ಅದರಲ್ಲಿ 02-ಸಾಮಾನ್ಯ, 1- ಪ.ಜಾತಿ) ಕಾಮಗಾರಿಗಳಿಗೆ ಮರು ಟೆಂಡರ್ ಕರೆಯಲಾಗಿದೆ. ಮತ್ತು 3054 ರಾಹೆ ಸೇತುವೆ ನಿರ್ವಹಣೆ ಅಡಿಯಲ್ಲಿ ಶಹಾಪೂರ 02 ಹಾಗೂ 2059 & 2216 (ಯೋಜನೇತರ) ಅಡಿಯಲ್ಲಿ ಯಾದಗಿರಿ ತಾಲೂಕಿನ 07, ಶಹಾಪೂರ ತಾಲೂಕಿನ 03 ಒಟ್ಟಾರೆ 12 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಅದರಲ್ಲಿ 10-ಸಾಮಾನ್ಯ, 2- ಪ.ಜಾತಿ ಒಟ್ಟಾರೆ 15 ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ 2) ಟೆಂಡರಿಗಿಟ್ಟ ಅಂದಾಜು ಮೊತ್ತ: ಕನಿಷ್ಠ ರೂ.1.70 ಲಕ್ಷಗಳು ಹಾಗೂ ಗರಿಷ್ಠ ರೂ:63.00 ಲಕ್ಷಗಳು 3) ಗುತ್ತಿಗೆದಾರರ ಅರ್ಹತೆ ವಿವರ :4ನೇ ದರ್ಜೆ ಹಾಗೂ ಮೇಲ್ಪಟ್ಟು 4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ: ಅರ್ಜಿ ಬೆಲೆ, ಇ.ಎಮ್.ಡಿ ಮತ್ತು ಕಾಲಾವಧಿ kppp portal ನಂತೆ, 5) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ: 21.10.2024 (17.30 ಗಂಟೆವರೆಗೆ) 6) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 25.10.2024 (16.00 ಗಂಟೆವರೆಗೆ) 7) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್: 28.10.2024 (11.30 ಗಂಟೆ ನಂತರ)(ಕೆಡಬ್ಲ್ಯೂ-3ರ ಕಾಮಗಾರಿಗಳಿಗೆ ಮಾತ್ರ) 8) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್:28.10.2024 (11.30 ಗಂಟೆ ನಂತರ)(ಕೆಡಬ್ಲ್ಯೂ-1 & 2ರ ಕಾಮಗಾರಿಗಳಿಗೆ ಮಾತ್ರ) 9) ಆರ್ಥಿಕ ಬಿಡ್ ತೆರೆಯುವ ದಿನಾಂಕ: 30.10.2024 (11.30 ಗಂಟೆ ನಂತರ)(ಕೆಡಬ್ಲ್ಯೂ-3ರ ಕಾಮಗಾರಿಗಳಿಗೆ ಮಾತ್ರ) 10) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ 11) ಅಂತರ್ಜಾಲ ತಾಣದ ವಿಳಾಸ: https://kppp.karnataka.gov.in

ವಿಶೇಷ ಸೂಚನೆ: ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಗಮನಿಸಬಹುದಾಗಿದೆ

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರ್,
ವಾ.ಸಾ.ಸಂ.ಇ/ಯಾದಗಿರಿ/230/ಕೆ.ಎಸ್.ಎಂ.ಸಿ.&ಎ/2024-25 ಲೋಕೋಪಯೋಗಿ ಇಲಾಖೆ ವಿಭಾಗ, ಯಾದಗಿರಿ.

ಕರ್ನಾಟಕ ಸರ್ಕಾರ
ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು
(ಸ್ವಾಯತ್ತ ಸಂಸ್ಥೆ)

No:SABVMCRI/E-TENDER/PRK/08/2024-25. Date:07.10.2024

ಟೆಂಡರ್ ಅಧಿಸೂಚನೆ

ವಿಷಯ: ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ಅಧೀನದಲ್ಲಿ ಬರುವ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯ ಆವರಣದಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡಲು ಅಲ್ಪಾವಧಿ ಇ-ಟೆಂಡರ್ ಆಹ್ವಾನಿಸುವ ಬಗ್ಗೆ.

ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ಅಧೀನದಲ್ಲಿ ಬರುವ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯ ಆವರಣದಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಮೊಹರಾದ ಇ-ಟೆಂಡರ್‌ಗಳನ್ನು (Tender No. DME/2024-25/SE0314) ಅರ್ಹ ಆಸಕ್ತ ಸಂಸ್ಥೆಗಳಿಂದ ಅಹ್ವಾನಿಲಾಗಿದೆ. ಟೆಂಡರ್ ಫಾರಂ, ಇ.ಎಂ.ಡಿ. ವಿವರ ಮತ್ತು ಷರತ್ತು ಮುಂತಾದ ವಿವರಗಳನ್ನು https://kppp.karnataka.gov.in/ ಈ ವೆಬ್‌ಸೈಟ್‌ನಲ್ಲಿ ವೀಕ್ಷಿಸಿ ಟೆಂಡರ್‌ಗಳನ್ನು ಸಲ್ಲಿಸಬಹುದು ಹಾಗೂ ಹಿಂದಿರುಗಿಸದ ಟೆಂಡರ್ ಪ್ರೋಸೆಸ್ಸಿಂಗ್ ಮೊತ್ತ ರೂ. 1,000/-ಗಳ ಡಿ.ಡಿ.ಯನ್ನು ನಿರ್ದೇಶಕರು ಹಾಗೂ ಡೀನ್, ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವರ ಹೆಸರಿನಲ್ಲಿ ಪಡೆದು ಸಲ್ಲಿಸತಕ್ಕದ್ದು ಮತ್ತು ಅದರ ರಸೀದಿಯನ್ನು (Acknowledgement) ಈ ಟೆಂಡರ್‌ನಲ್ಲಿ ಲಗತ್ತಿಸುವುದು. ಆಸಕ್ತಿಯುಳ್ಳ ಟೆಂಡರ್‌ದಾರರು e-procurement portal ನಲ್ಲಿ ನೊಂದಾಯಿಸತಕ್ಕದ್ದು. ನೊಂದಾವಣಿಗೆ ಅಗತ್ಯವಾದ ವಿವರಗಳನ್ನು ವೆಬ್‌ಸೈಟ್‌ನಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗಾಗಿ ಇ-ಮೇಲ್: sabvmcri@gmail.com & ದೂರವಾಣಿ ಸಂಖ್ಯೆ: +91-8431188388 ನ್ನು ಸಂಪರ್ಕಿಸುವುದು.

1. ಟೆಂಡರ್‌ಗಳನ್ನು ಅಪ್ ಲೋಡ್ ಮಾಡಲು ಪ್ರಾರಂಭದ ದಿನಾಂಕ: 05.10.2024 2. ಟೆಂಡರ್ ಬಗ್ಗೆ ಪ್ರಶ್ನಾವಳಿಗಳಿಗೆ ಅಂತಿಮ ದಿನಾಂಕ: 09.10.2024 ರ ಸಂಜೆ 04.00 ಗಂಟೆ. 3. ಟೆಂಡರ್‌ಗಳನ್ನು ಅಪ್ ಲೋಡ್ ಮಾಡಲು ಅಂತಿಮ ದಿನಾಂಕ: 14.10.2024 ರ ಸಂಜೆ 04.00 ಗಂಟೆ. 4. ಟೆಂಡರ್‌ಗಳನ್ನು ತೆರೆಯುವ ದಿನಾಂಕ (ಮೊದಲನೆ ಲಕೋಟೆ): 16.10.2024 ರ ಬೆಳಗ್ಗೆ 10.30 ಗಂಟೆ.

ಈ ವಿಷಯದಲ್ಲಿ ಯಾವುದೇ ಹೆಚ್ಚಿನ ಮಾಹಿತಿ ಬೇಕಾದ ಪಕ್ಷದಲ್ಲಿ ಕೆಲಸದ ದಿನಗಳಲ್ಲಿ ಈ ಸಂಸ್ಥೆಯ ನಿರ್ದೇಶಕರು ಹಾಗೂ ಡೀನ್/ಸಹಾಯಕ ಆಡಳಿತಾಧಿಕಾರಿಗಳನ್ನು ಸಂಪರ್ಕಿಸ ಬಹುದಾಗಿದೆ.

ಸಹಿ/-
ನಿರ್ದೇಶಕರು ಹಾಗೂ ಡೀನ್
ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು
DIPR/CP/2502/Zen/2024-25

ರಾಜ್ಯದ 20 ಲಕ್ಷ ಮನೆಗಳಿಗೆ ವಿದ್ಯುತ್ ಕಡಿತ

ಫ್ಲೋರಿಡಾಗೆ ಅಪ್ಪಳಿಸಿದ 'ಮಿಲ್ಟನ್' ಚಂಡಮಾರುತ

ಟ್ಯಾಂಪಾ: ಉಪಗ್ರಹ ಆಧಾರಿತ ಹವಾಮಾನ ಮುನ್ಸೂಚನೆಯಂತೆಯೇ 'ಮಿಲ್ಟನ್' ಚಂಡಮಾರುತ ಅಮೆರಿಕದ ಫ್ಲೋರಿಡಾ ರಾಜ್ಯದ ಮೇಲೆ ಅಪ್ಪಳಿಸಿದ್ದು, ಅಪಾರ ಪ್ರಮಾಣದ ಹಾನಿ ಉಂಟು ಮಾಡಿದೆ. 90 ನಿಮಿಷಗಳ ಕಾಲ ಮಿಲ್ಟನ್ ಅಬ್ಬರಿಸಿದೆ. ಸಾವು-ನೋವಿನ ವರದಿ ಇನ್ನಷ್ಟೇ ಬರಬೇಕಿದೆ.

ಫ್ಲೋರಿಡಾ ರಾಜ್ಯದಲ್ಲಿ ನೂರಾರು ಮನೆಗಳು ನೆಲಸಮವಾಗಿವೆ. 20 ಲಕ್ಷ ಮನೆಗಳಿಗೆ ವಿದ್ಯುತ್ ಕಡಿತವಾಗಿದೆ. ಪರಿಣಾಮ ಜನರು ಸಂಕಷ್ಟಕ್ಕೀಡಾಗಿದ್ದಾರೆ. ಚಂಡಮಾರುತ ತೀರಕ್ಕೆ ಬರುವ ಮೊದಲೇ ಸುಂಟರಗಾಳಿಗೆ ಸಿಲುಕಿ 125 ಮನೆಗಳು ನಾಶವಾದವು. ಹೆಚ್ಚಿನವು ಹಿರಿಯ ನಾಗರಿಕರ ಮನೆಗಳಾಗಿವೆ ಎಂದು ತುರ್ತು ನಿರ್ವಹಣೆ ವಿಭಾಗ ತಿಳಿಸಿದೆ. ಅಮೆರಿಕದ ಆಗಸದಲ್ಲಿ ದಟ್ಟೈಸಿದ್ದ 'ಮಿಲ್ಟನ್' ಮಾರುತಗಳು 3ನೇ ಶ್ರೇಣಿಯ ಚಂಡಮಾರುತವಾಗಿ ಬದಲಾಗಿ ಫೋರಿಡಾ ರಾಜ್ಯಕ್ಕೆ ಅಪ್ಪಳಿಸಿವೆ. ಹೆಲೆನ್ ಚಂಡಮಾರುತಕ್ಕಿಂತಲೂ ಪ್ರಬಲವಾದ ಮಿಲ್ಟನ್, ಫ್ಲೋರಿಡಾದ ಕರಾವಳಿ ಭಾಗದಲ್ಲಿ ಭಾರೀ ಹಾನಿಯುಂಟು ಮಾಡಿದೆ. ಸುಂಟರಗಾಳಿ ಗಂಟೆಗೆ 100 ಕಿ.ಮೀ.ಗೂ ಹೆಚ್ಚಿನ ವೇಗದಲ್ಲಿ ಬಂದು ಫ್ಲೋರಿಡಾದ ವಿವಿಧ ನಗರ-ಗ್ರಾಮೀಣ ಪ್ರದೇಶಗಳ ಮೇಲೆ ಪ್ರಕೋಪ ತೋರಿದೆ. ಅದೃಷ್ಟವಶಾತ್ ಟ್ಯಾಂಪಾ ನಗರ ಮಿಲ್ಟನ್‌ನ ನೇರ ಹೊಡೆತದಿಂದ ಪಾರಾಗಿದೆ. ಆದರೆ, ಟ್ಯಾಂಪಾದಿಂದ ದಕ್ಷಿಣಕ್ಕೆ 112 ಕಿ.ಮೀ ದೂರದ ಸರಸೋಟಾ ಬಳಿ ಸಿಯೆಸ್ಟಾ ಕೀಯಲ್ಲಿ ಭೂಕುಸಿತವಾಗಿದೆ. ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ 41 ಸೆಂ.ಮೀ. ಮಳೆಯಾಗಿದೆ. ಹವಾಮಾನ ಇಲಾಖೆ ಹಠಾತ್ ಪ್ರವಾಹದ ಬಗ್ಗೆ ಎಚ್ಚರಿಕೆ ನೀಡಿದೆ.

ಸಮಾಚಾರ ಸಣ್ಣದಲ್ಲ

ಬಿಡಿಎ: 18 ಕೋಟಿ ಆಸ್ತಿ ತೆರಿಗೆ ಬಾಕಿ

ಬೆಂಗಳೂರು: ಬಿಡಿಎಯಲ್ಲಿ ಸುಮಾರು ನೂರಾರು ಕೋಟಿ ಆಸ್ತಿ ತೆರಿಗೆ ಬಾಕಿ ಉಳಿದಿದ್ದು, ಬೆಂಗಳೂರಿನ ದಕ್ಷಿಣ ವಲಯ ಒಂದರಲ್ಲೇ ಸುಮಾರು 18 ಕೋಟಿ ಬಾಕಿ ಇದೆ. ಇದರಲ್ಲಿ ಬಹುತೇಕರು ಖಾಸಗಿ ಉದ್ಯಮದವರಿದ್ದಾರೆ.ಬಿಡಿಎ ಪ್ರಸಕ್ತ ವರ್ಷದ ಆಸ್ತಿ ತೆರಿಗೆ ತನ್ನ ಜಾಲತಾಣದಲ್ಲಿ ಬಹಿರಂಗ ಪಡಿಸಿದ್ದು, ನಾಲ್ಕು ವಲಯವಾರು ವಿಗಂಡಿಸಲಾಗಿದ್ದು, ಬೆಂಗಳೂರಿನ ದಕ್ಷಿಣ ವಲಯದಿಂದ 18.69 ಕೋಟಿ ಬಾಕಿ ಉಳಿದಿದ್ದು, ಬ್ರಿಗೇಡ್ ಎಂಟರ್‌ಪ್ರೈಸಸ್ 32.83 ಲಕ್ಷ, ಮನವರ್ತಕಾವಲ್‌ನ ಐಟಿಸಿ ಡೆವಲಪರ್ಸ್ 21.10 ಲಕ್ಷ, ಅಲ್ಲದೇ ಅಂಜನಾಪುರದ ಸರಕಾರದ ಬಿಎಂಟಿಸಿ ಇಲಾಖೆ 17.37 ಲಕ್ಷ ಬಾಕಿ ಉಳಿಸಿಕೊಂಡಿದೆ. ಇನ್ನು ಪೂರ್ವ ವಲಯದ ಬೇಗೂರಿನ ಶಾಂತಿನಗರ ಹೌಸಿಂಗ್ ಕೋಆಪರೇಟಿವ್ ಸೊಸೈಟಿ 3.48 ಲಕ್ಷ, ಪಶ್ಚಿಮದಿಂದ ಸರ್ ಎಂ.ವಿ.ಲೇಔಟ್‌ನ ಸೆಂಟ್ರಲ್ ಪವರ್ ರಿಸರ್ಚ್‌ರಿಂದ 49.55 ಲಕ್ಷ ಹಾಗೂ ಉತ್ತರ ವಲಯದಿಂದ ಯುನಿಕ್ ಐಡೆಂಟಿಫಿಕೇಶನ್ ಅಥಾರಿಟಿ 29.05 ಲಕ್ಷ, ಗ್ರೀನ್ ಓವರ್‌ಹ್ಯಾಂಡ್ಸ್ ಫಾರ್ಮ್ ಹೌಸಸ್‌ನಿಂದ 12.44 ಲಕ್ಷ ಬಾಕಿ ಉಳಿದಿದೆ.

2000 ಕೋಟಿ ರು. ಕೊಕೇನ್ ವಶ

ದೆಹಲಿ: ಪಶ್ಚಿಮ ದೆಹಲಿಯ ರಮೇಶ್ ನಗರದಲ್ಲಿ ಪೊಲೀಸರು 2000 ಕೋಟಿ ರು.ಗಳಷ್ಟು ಮೌಲ್ಯದ 200 ಕೆಜಿ ಕೊಕೇನ್ ವಶಪಡಿಸಿಕೊಂಡಿದ್ದಾರೆ. ನೈಋತ್ಯ ದೆಹಲಿಯ ಮಹಿಪಾಲ್‌ಪುರದಲ್ಲಿ ಕಳೆದ ವಾರ 5000 ಕೋಟಿ ರು.ಗಿಂತ ಹೆಚ್ಚು ಮೌಲ್ಯದ 562 ಕೆಜಿ ಮಾದಕದ್ರವ್ಯವನ್ನು ವಶಪಡಿಸಿಕೊಳ್ಳಲಾಗಿತ್ತು. ಈಗ ಮತ್ತೊಂದು ಡ್ರಗ್ ಜಾಲ ಪತ್ತೆಯಾಗಿದೆ. ರಮೇಶ್ ನಗರ ಪ್ರದೇಶದಲ್ಲಿ ದಾಳಿ ಮುಂದುವರಿಯುತ್ತಿದೆ ಎಂದು ಅಧಿಕಾರಿಯೊಬ್ಬರು ಗುರುವಾರ ಸಂಜೆ ತಿಳಿಸಿದ್ದಾರೆ. ದೆಹಲಿ ಪೊಲೀಸರ ವಿಶೇಷ ಸೆಲ್ ಜಿಪಿಎಸ್ ಮೂಲಕ ಕೊಕೇನ್ ಪೂರೈಕೆದಾರನನ್ನು ಪತ್ತೆಹಚ್ಚಿ ಬಂಧಿಸಿದೆ. ಪ್ರಮುಖ ಆರೋಪಿಗಳು ಲಂಡನ್‌ಗೆ ಪರಾರಿಯಾಗಲು ಯತ್ನಿಸಿದ್ದ. ಕಳೆದ ಎಂಟು ದಿನಗಳಲ್ಲಿ ರಾಜಧಾನಿಯಲ್ಲಿ 7000 ಕೋಟಿ ರು.ಗಿಂತ ಹೆಚ್ಚು ಮೌಲ್ಯದ 762 ಕೆಜಿ ಕೊಕೇನ್ ವಶಪಡಿಸಿಕೊಂಡಂತಾಗಿದೆ ಎಂದು ಅವರು ವಿವರಿಸಿದ್ದಾರೆ. ಅ.2ರಂದು ಮಹಿಪಾಲ್‌ಪುರದ ಗೋದಾಮಿನಿಂದ ಮಾದಕವಸ್ತುವನ್ನು ವಶಪಡಿಸಿಕೊಳ್ಳಲಾಗಿತ್ತು. ನಿಷಿದ್ಧ ವಸ್ತುಗಳನ್ನು ಸಂಗ್ರಹ ಮತ್ತು ಮಾರಾಟ ಮಾಡುವಲ್ಲಿ ಅವರ ಪಾತ್ರಕ್ಕಾಗಿ ನಾಲ್ವರನ್ನು ಬಂಧಿಸಲಾಗಿದೆ. ಪ್ರಮುಖ ಆರೋಪಿ ಜಿತೇಂದ್ರ, ಪಾಲ್ ಸಿಂಗ್ ಅಲಿಯಾಸ್ ಜಸಿಯನ್ನು ಪಂಜಾಬ್‌ನ ಅಮೃತಸರ ವಿಮಾನ ನಿಲ್ದಾಣದಿಂದ ಯುನೈಟೆಡ್ ಕಿಂಗ್ಡಂನ ಪಲಾಯನ ಮಾಡಲು ಪ್ರಯತ್ನಿಸುತ್ತಿದ್ದಾಗ ವಿಶೇಷ ಸೆಲ್ ಬಂಧಿಸಿದೆ.

ಇಸ್ಲಾಂಗೆ ಮತಾಂತರಕ್ಕೆ ಯತ್ನ: ಆರೋಪಿ ಸೆರೆ

ಛತ್ತೀಸ್‌ಗಢ: ನೌಕಾಪಡೆಯ ಅಧಿಕಾರಿಯಂತೆ ವೇಷ ಧರಿಸಿ ಛತ್ತೀಸ್‌ಗಢದ ಹಿಂದೂ ಮಹಿಳೆಯೊಂದಿಗೆ ಲೈಂಗಿಕ ಸಂಬಂಧ ಬೆಳೆಸಿ ಅವಳನ್ನು ಇಸ್ಲಾಂ ಧರ್ಮಕ್ಕೆ ಮತಾಂತರ ಮಾಡಲು ಹೊರಟ ಕೇರಳ ಮೂಲದ ಬಿಲಾಲ್ ರಫೀಕ್ ಎಂಬಾತನನ್ನು ಗೋವಿಂದಪುರ ಪೊಲೀಸರು ಬಂಧಿಸಿದ್ದಾರೆ. ಆರೋಪಿಯು ಮಹಿಳೆಗೆ ಮದುವೆಯಾಗುವುದಾಗಿ ಭರವಸೆ ನೀಡಿ ಆಕೆಯೊಂದಿಗೆ ಸ್ನೇಹ ಬೆಳೆಸಿ ನಂತರ ಇಸ್ಲಾಂಗೆ ಮತಾಂತರಗೊಳ್ಳುವಂತೆ ಒತ್ತಾಯಿಸಿದ್ದಾನೆ ಎಂಬುದಾಗಿ ತಿಳಿದುಬಂದಿದೆ. ಛತ್ತೀಸ್‌ಗಢ ಮೂಲದ ಸಂತ್ರಸ್ತ ಮಹಿಳೆ ಗೋವಿಂದಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ ನಂತರ ಈ ಪ್ರಕರಣ ಬೆಳಕಿಗೆ ಬಂದಿದೆ.

ಆಸ್ಟ್ರೇಲಿಯಾ ಟೆಸ್ಟ್‌ಗೆ ರೋಹಿತ್ ಅಲಭ್ಯ

ಬೆಂಗಳೂರು: ಆಸ್ಟ್ರೇಲಿಯಾದಲ್ಲಿ ನಡೆಯಲಿರುವ ಮೊದಲ ಎರಡು ಟೆಸ್ಟ್ ಪಂದ್ಯಗಳಿಗೆ ನಾಯಕ ರೋಹಿತ್ ಶರ್ಮಾ ವೈಯಕ್ತಿಕ ಕಾರಣಗಳ ಹಿನ್ನೆಲೆಯಲ್ಲಿ ಅಲಭ್ಯರಾಗಿದ್ದಾರೆ. ತಮ್ಮ ಗೈರುಹಾಜರಿ ಬಗ್ಗೆ ಬಿಸಿಸಿಐಗೆ ತಿಳಿಸಲಾಗಿದೆ.



ಭಾರತ ತಂಡವು ನವೆಂಬರ್ 22 ರಿಂದ ಪರ್ತ್‌ನಲ್ಲಿ ಪ್ರಾರಂಭವಾಗುವ ಐದು ಪಂದ್ಯಗಳ ಟೆಸ್ಟ್ ಸರಣಿಯನ್ನು ಪ್ರಾರಂಭಿಸಲಿದೆ. ಅದೇ ರೀತಿ ಅಡಿಲೇಡ್‌ನಲ್ಲಿ (ಡಿಸೆಂಬರ್ 6-10) ಮೊದಲ ಅಥವಾ ಎರಡನೇ ಪಂದ್ಯದಲ್ಲೂ ರೋಹಿತ್ ಆಡುವುದಿಲ್ಲ. ಪರಿಸ್ಥಿತಿಯ ಬಗ್ಗೆ ಯಾವುದೇ ಸಂಪೂರ್ಣ ಸ್ಪಷ್ಟತೆ ಇಲ್ಲ. ವೈಯಕ್ತಿಕ ಸಮಸ್ಯೆಯಿಂದಾಗಿ ಸರಣಿಯ ಆರಂಭದಲ್ಲಿ ಎರಡು ಟೆಸ್ಟ್ ಪಂದ್ಯಗಳಿಂದ ಹೊರಗುಳಿಯಬೇಕಾಗಬಹುದು ಎಂದು ರೋಹಿತ್ ಬಿಸಿಸಿಐಗೆ ಮಾಹಿತಿ ನೀಡಿದ್ದಾರೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ. ಸರಣಿ ಆರಂಭಕ್ಕೂ ಮುನ್ನ ವೈಯಕ್ತಿಕ ಸಮಸ್ಯೆ ಬಗೆಹರಿದರೆ ಅವರು ಎಲ್ಲಾ ಐದು ಟೆಸ್ಟ್ ಪಂದ್ಯಗಳನ್ನು ಆಡಬಹುದು. ಮುಂದಿನ ದಿನಗಳಲ್ಲಿ ನಾವು ಹೆಚ್ಚಿನದನ್ನು ತಿಳಿದುಕೊಳ್ಳುತ್ತೇವೆ ಎಂದು ಮೂಲಗಳು ಸ್ಪಷ್ಟಪಡಿಸಿವೆ.

{ ಬಿ.ವೈ ವಿಜಯೇಂದ್ರ } ಬಿಜೆಪಿ ರಾಜ್ಯಾಧ್ಯಕ್ಷ

ಅನೇಕ ನಾಯಕರಿಗೆ ನನ್ನನ್ನು ಒಪ್ಪಿಕೊಳ್ಳಲು ಎರಡು ವರ್ಷ ಸಾಕಾಗಿಲ್ಲ. ಕೆಲವರು ಇನ್ನೂ ಒಂದು ವರ್ಷ ತೆಗೆದುಕೊಳ್ಳಬಹುದು. ಆದರೆ ಕೇಂದ್ರ ನಾಯಕರು ನನಗೆ ಕೊಟ್ಟ ಜವಾಬ್ದಾರಿಯನ್ನು ಅತ್ಯಂತ ಯಶಸ್ವಿಯಾಗಿ ನಿಭಾಯಿಸುವ ಶಕ್ತಿ ನನಗಿದೆ. ಯಾವುದೇ ಕಾರಣಕ್ಕೂ ನಾನು ಜವಾಬ್ದಾರಿಯಿಂದ ಹಿಂದೆ ಸರಿಯಲ್ಲ.

ಹೊಸ ನೋಂದಣಿ ವ್ಯವಸ್ಥೆ ತೆರಿಗೆದಾರರಿಗೆ ತಲೆನೋವು | ತೆರಿಗೆ ಪಾವತಿಸದಿದ್ದರೆ ನೋಂದಣಿ ರದ್ದತಿ ಭಯ

ರಾಜ್ಯದಲ್ಲಿ ಹೊಸ ಜಿಎಸ್‌ಟಿ ಜಟಾಪಟಿ ಶುರು

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ಜಿಎಸ್‌ಟಿ (ಸರಕು ಮತ್ತು ಸೇವಾ ತೆರಿಗೆ) ಪಾವತಿಯಲ್ಲಿ ದೇಶದಲ್ಲೇ ಎರಡನೇ ಅತಿದೊಡ್ಡ ರಾಜ್ಯ ಎನಿಸಿರುವ ಕರ್ನಾಟಕದಲ್ಲಿ ಜಿಎಸ್ ಟಿ ಜಂಜಾಟ ಶುರುವಾಗಿದೆ !

ಸುಧಾರಣೆ ಹೆಸರಿನಲ್ಲಿ ಕೇಂದ್ರ ಸರಕಾರ ಆರಂಭಿಸಿರುವ ಹೊಸ ನಿಯಮದಿಂದ ಜಿಎಸ್ ಟಿ ಪಾವತಿ ಮತ್ತು ನೋಂದಣಿಯಲ್ಲಿ ಹೊಸ ಗೋಳು ಆರಂಭವಾಗಿದೆ. ಅದರಲ್ಲೂ ಜಿಎಸ್ ಟಿ ಹೊಸ ನೋಂದಣಿ ಮಾಡುವವರಿಗೆ ಅಗ್ನಿಪರೀಕ್ಷೆಗಳೇ ಎದುರಾಗಿವೆ.

ಇಷ್ಟು ದಿನ ಜಿಎಸ್‌ಟಿ ಪಾವತಿಸುವುದು ತಡವಾದರೆ ದಂಡ ಪಾವತಿಸದಿದ್ದರೆ ಸರಕಾರ ದಂಡ ವಿಧಿಸಲಾಗುತ್ತಿತ್ತು. ಆದರೆ ಈಗ ಜಿಎಸ್‌ಟಿ ಪಾವತಿಸಿದ್ದರೆ ನೋಂದಣಿಯನ್ನೇ ರದ್ದುಗೊಳಿಸುತ್ತಿದೆ. ಇನ್ನು ಹೊಸ ಜಿಎಸ್‌ಟಿ ನೋಂದಣಿ ಮಾಡುವವರು ನೂರಾರು ಪರೀಕ್ಷೆ, ಪರಿಶೀಲನೆ , ಪ್ರಶ್ನೆಗಳಿಗೆ ಒಳಗಾಗಿ ನೋವು ಅನುಭವಿಸುವಂತಾಗಿದೆ.

ಅಂದರೆ, ಈ ಹೊಸ ತೆರಿಗೆದಾರರು ಜಿಎಸ್ ಟಿ ನೋಂದಣಿ ಮಾಡಬೇಕಾದರೆ ದಾಖಲೆಗಳ ಸಲ್ಲಿಸುವುದು, ಕಚೇರಿಗಳಿಗೆ ಅಲೆಯುವುದು ಮಾತ್ರವಲ್ಲ, ಕಣ್ಣು, ಮುಖ, ಬೆರಳಚ್ಚು ಸೇರಿದಂತೆ ಅನೇಕ ಪರೀಕ್ಷೆಗಳಿಗೆ ಒಳಗಾಗಬೇಕಾಗುತ್ತದೆ. ಅದೊಂದು ರೀತಿಯ ಇಎನ್ ಟಿ ತಜ್ಞ ವೈದ್ಯರ ಪರೀಕ್ಷೆಗೆ ಒಳಗಾಗುವಂತೆ ಆಗುತ್ತಿದೆ.

ಹೀಗಾಗಿ ಜಿಎಸ್‌ಟಿ ಹೊಸ ನೋಂದಣಿ ಅತ್ಯಂತ ಕಠಿಣವಾಗಿ ನಿತ್ಯ ಸಾವಿರಾರು ತೆರಿಗೆದಾರರು, ವರ್ತಕರು, ಸಣ್ಣ ಪುಟ್ಟ ವ್ಯಾಪಾರಿಗಳು ಕಚೇರಿಗಳಿಗೆ ಅಲೆಯುತ್ತಾ ಪರದಾಡುತ್ತಿದ್ದಾರೆ. ಈ ಬಗ್ಗೆ ಸಮಸ್ಯೆಗಳನ್ನು ತೋಡಿಕೊಳ್ಳಲು ತೆರಿಗೆದಾರರಿ ಅವಕಾಶವೇ ಬೆರಳೆಣಿಕೆಯಷ್ಟು ಸೇವಾ ಕೇಂದ್ರಗಳನ್ನ ಹೊರತುಪಡಿಸಿ ಬೇರೆ ವ್ಯವಸ್ಥೆಯೇ ಇಲ್ಲ. ಹೀಗಾಗಿ ಜಿಎಸ್ ಟಿ ನೋಂದಣಿಯಾದವರು ಪಾವತಿಗಾಗಿ ಪರದಾಡುತ್ತಿದ್ದರೆ, ಹೊಸ ತೆರಿಗೆದಾರರು ನೋಂದಣಿ ಹೆಸರಿನಲ್ಲಿ ನರಳುತ್ತಿದ್ದಾರೆ ಎಂದು ವರ್ತಕರ ಸಂಘದವರು ಹೇಳಿದ್ದಾರೆ.

ತೆರಿಗೆದಾರರು ತೊಂದರೆ ನೂರಾರು: ವರ್ಷಕ್ಕೆ ಸುಮಾರು 80 ಸಾವಿರ ಕೋಟಿ ರು.ಗಳ ಜಿಎಸ್‌ಟಿ ಸಂಗ್ರಹಿಸುತ್ತಿರುವ ಕರ್ನಾಟಕ ದೇಶದಲ್ಲೇ ಎರಡನೇ ಸ್ಥಾನದಲ್ಲಿದೆ. ಅದರಲ್ಲೂ ಕಳೆದ ಆರು ತಿಂಗಳ ಅವಧಿಯಲ್ಲಿ ಸುಮಾರು 37 ಸಾವಿರ ಕೋಟಿ ರು.ಗಳಿಗೂ ಹೆಚ್ಚಿನ ಜಿಎಸ್‌ಟಿ ಸಂಗ್ರಹವಾಗಿದೆ. ಇದಕ್ಕೆ ಕಾಣಿಕೆ ಸಲ್ಲಿಸುತ್ತಿರುವ 9ಲಕ್ಷಕ್ಕೂ ಅಧಿಕ ದೊಡ್ಡ ಪ್ರಮಾಣದ ತೆರಿಗೆದಾರರಿದ್ದು, 1,08ಲಕ್ಷಕ್ಕೂ ಹೆಚ್ಚು ಸಣ್ಣ ತೆರಿಗೆದಾರರು (ಶೇ.2ರಷ್ಟು ತೆರಿಗೆ ಪಾವತಿಸುವ ರಾಜೀ ತೆರಿಗೆದಾರರು) ಇದ್ದಾರೆ. ಆದರೆ ಈ ತೆರಿಗೆದಾರರಿಗೆ ದೊರಕುವ ಸೇವಾ, ಸೌಲಭ್ಯಗಳು ಮಾತ್ರ ತೀರಾ ಕನಿಷ್ಠ. ತೀರಾ ತೊಂದರೆಯಾದವರ ಸಮಸ್ಯೆ ಕೇಳಲು ಕೇಂದ್ರ ಸರಕಾರ ಬರೀ 6 ಸೇವಾ ಕೇಂದ್ರಗಳನ್ನು ಸ್ಥಾಪಿಸಿ ಕೈತೊಳೆದುಕೊಂಡಿದೆ. ಆದರಿಂದ ಇವುಗಳಿಂದ ಉಪಯೋಗವಾಗುತ್ತಿಲ್ಲ ಎಂದು ತೆರಿಗೆದಾರರು ಹೇಳುತ್ತಿದ್ದಾರೆ.

ಏನಿದು ಜಿಎಸ್‌ಟಿ ಜಂಜಾಟ?

ಈ ಹಿಂದೆ ಹೊಸ ಜಿಎಸ್‌ಟಿಗಾಗಿ ದಾಖಲೆಗಳ ಸಹಿತ ಅರ್ಜಿ ಸಲ್ಲಿಸಿದರೆ, ಅಧಿಕಾರಿಗಳು ದಾಖಲೆ ಪರಿಶೀಲಿಸಿ ಒಂದೇವಾರದಲ್ಲಿ ನೋಂದಣಿ ಸಂಖ್ಯೆ ನೀಡುತ್ತಿದ್ದರು. ಆದರೆ ಈಗಿನ ಹೊಸ (ಅ) ವ್ಯವಸ್ಥೆಯಲ್ಲಿ ಹೊಸ ಜಿಎಸ್ ಟಿಗಾಗಿ ಅರ್ಜಿ ಸಲ್ಲಿಸಿದರೆ, ವಾರವಾದರೂ ಮಾಹಿತಿ ಸಿಗುವುದಿಲ್ಲ. ನಂತರ ವೆಬ್ ಸೈಟ್ ನಲ್ಲಿ ದೂರು ದಾಖಲಿಸಿದರೆ, ಕಚೇರಿಗೆ ಬರುವಂತೆ ಹೇಳಲಾಗುತ್ತಿದೆ. ಆದರೆ ಅದರ ಬಗ್ಗೆ ಸ್ಪಷ್ಟ ಮಾಹಿತಿ ಇರುವುದಿಲ್ಲ. ಆನಂತರ ಕಚೇರಿಗೆ ಹೋದರೆ, ಅಧಿಕಾರಿಗಳು ಬಯೋಮೆಟ್ರಿಕ್, ಕಣ್ಣು ಸ್ಕಾನಿಂಗ್, ಮುಖದ ಚಹರೆ ಫೋಟೋ ಪಡೆಯುತ್ತಾರೆ. ನಂತರ ಎಲ್ಲಾ ಮೂಲ ದಾಖಲೆಗಳನ್ನು ಪಡೆದು ನಂತರ ತಿಳಿಸುತ್ತೇವೆ ಎನ್ನುತ್ತಾರೆ. ಆದರೆ 15 ದಿನಗಳೇ ಕಳೆದರೂ ಮಾಹಿತಿ ಸಿಗುವುದಿಲ್ಲ. ಬದಲಾಗಿ ಜಿಎಸ್ ಟಿ ವೆಬ್ ಸೈಟ್ ನಲ್ಲಿ ನಿಮ್ಮ ಅರ್ಜಿ ಪ್ರೊಸೆಸ್ ಆಗುತ್ತಿದೆ ಎಂಬ ಮಾಹಿತಿ ತೋರಿಸುತ್ತದೆ. ನಂತರ ಅಧಿಕಾರಿಗಳು ವ್ಯಾಪಾರ ಸ್ಥಳ (ಅಂಗಡಿ) ಕ್ಕೆ ಭೇಟಿ ನೀಡುವುದಾಗಿ ಹೇಳುತ್ತಾರೆ. ಆದರೆ ಯಾರೂ ಬರುವುದಿಲ್ಲ. ಬದಲಾಗಿ ಅರ್ಜಿದಾರರನ್ನು ಕರೆಸಿ ಕೊಂಡು ಮತ್ತಷ್ಟು ಮಾಹಿತಿ ಕೇಳುತ್ತಾರೆ. ಹೀಗಾಗಿ ಜಿಎಸ್ ಟಿ ನೋಂದಣಿಯನ್ನು ಅಧಿಕಾರಿಗಳು ಸುಲಭ ವಾಗಿ ಮಾಡುವುದಿಲ್ಲ. ಅರ್ಜಿದಾರರು ಬಿಡುವು ದಿಲ್ಲ. ಇದರಿಂದ ಜಿಎಸ್ ಟಿ ಜಟಾಪಟಿ ಶುರುವಾಗಿದೆ ಎನ್ನುತ್ತಾರೆ ಸರಕಾರದ ಜಿಎಸ್ ಟಿ ಸಲಹಾ ಸಮಿತಿ ಸದಸ್ಯರು.

ಕೇಂದ್ರ ಸರಕಾರ ಹೊಸ ನಿಯಮ ಜಾರಿಗೊಳಿಸಿರುವುದರಿಂದ ಜಿಎಸ್ ಟಿ ಪಡೆಯುವವರು ಬಯೋಮೆಟ್ರಿಕ್ ಸೇರಿದಂತೆ ವಿವಿಧ ಪರೀಕ್ಷೆಗಳನ್ನು ಎದುರಿಸಬೇಕು. ಇದರಿಂದ ಸಮಸ್ಯೆಗಳಿದ್ದರೆ ಗಮನಕ್ಕೆ ತಂದರೆ ಪರಿಶೀಲಿಸುತ್ತೇವೆ.
-ಕಮಲಾಕರ್ ಸಾರ್ಕರ್, ಸಹಾಯಕ ನಿಯಂತ್ರಕರು (ಬಯೋಮೆಟ್ರಿಕ್ ನೋಂದಣಿ)

ಮೈಸೂರಿನ ಯುವ ದಸರಾ ಕಾರ್ಯಕ್ರಮದಲ್ಲಿ ಖ್ಯಾತ ಸಂಗೀತ ನಿರ್ದೇಶಕ ಇಳೆಯರಾಜ ಮಾತನಾಡಿದರು.

ಯುಎಪಿಎ ಕಾಯ್ದೆಯಡಿ ಕೇಂದ್ರ ಸರಕಾರ ಘೋಷಣೆ

ಎಚ್‌ಯುಟಿ ಉಗ್ರ ಸಂಘಟನೆ

ದೆಹಲಿ: ಕಾನೂನುಬಾಹಿರ ಚಟುವಟಿಕೆಗಳ (ತಡೆ) ಕಾಯ್ದೆ(ಯುಎಪಿಎ) ಅನ್ವಯ ಐಸಿಸ್ ಪ್ರೇರಿತ ಸಂಘಟನೆಯಾದ ಹಿಜ್ಬ್-ಉತ್-ತಹ್ರೀರ್(ಎಚ್‌ಯುಟಿ) ಭಯೋತ್ಪಾದಕ ಸಂಘಟನೆ ಎಂದು ಕೇಂದ್ರ ಗೃಹ ಸಚಿವಾಲಯ ಗುರುವಾರ ಘೋಷಿಸಿ ಅಧಿಸೂಚನೆ ಹೊರಡಿಸಿದೆ. 'ಎಚ್‌ಯುಟಿ' ಜಿಹಾದ್ ಸಾರಿದೆ. ದೇಶದ ನಾಗರಿಕರನ್ನೇ ಬಳಸಿಕೊಂಡು ಭಯೋತ್ಪಾದಕ ಚಟುವಟಿಕೆ ನಡೆಸುತ್ತಿದೆ. ಅದರ ಮೂಲಕವೇ ಚುನಾಯಿತ ಸರಕಾರವನ್ನು ಉರುಳಿಸುವ ಸಂಚು ನಡೆಸುತ್ತಿದೆ. ಭಾರತ ಸೇರಿದಂತೆ ಜಾಗತಿಕವಾಗಿ ಇಸ್ಲಾಮಿಕ್ ರಾಜ್ಯ ಮತ್ತು ಕ್ಯಾಲಿಫೇಟ್ ಅನ್ನು ಸ್ಥಾಪಿಸುವ ಗುರಿ ಹೊಂದಿದೆ. ಇದು ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಆಂತರಿಕ ಭದ್ರತೆಗೆ ಗಂಭೀರ ಬೆದರಿಕೆಯಾಗಿದೆ ಎಂದು ಗೃಹ ಸಚಿವಾಲಯ ಹೇಳಿದೆ. ಹಿಜ್ಬ್-ಉತ್-ತಹ್ರೀರ್ ಮೂಲಭೂತವಾದದಲ್ಲಿ ತೊಡಗಿಸಿಕೊಂಡಿದೆ. ಯುವಕರನ್ನು ಭಯೋತ್ಪಾದಕ ಸಂಘಟನೆಗಳಿಗೆ ಸೇರುವಂತೆ ಮೋಸದಿಂದ ಪ್ರೇರೇಪಿಸುತ್ತಿದೆ.

ಐಸಿಸ್ ಉಗ್ರ ಸಂಘಟನೆಗೆ ಮತ್ತು ಅದರ ಭಯೋತ್ಪಾದಕ ಚಟುವಟಿಕೆಗಳಿಗೆ ಹಣ ಸಂಗ್ರಹಿಸಿಕೊಡುತ್ತಿದೆ ಎಂದು ಅಧಿಸೂಚನೆಯಲ್ಲಿ ಆರೋಪಿಸಲಾಗಿದೆ.

ಭಯೋತ್ಪಾದನೆ ಆರೋಪ: ಪಾಕ್ ಪ್ರಜೆ ಸೇರಿ ಮೂವರ ಖುಲಾಸೆ

ಬೆಂಗಳೂರು: ಪರಪ್ಪನ ಅಗ್ರಹಾರದ ಕಾರಾಗೃಹದಲ್ಲಿದ್ದುಕೊಂಡು ನಿಷೇಧಿತ ಲಷ್ಕರ್ ಎ-ತೋಯ್ಬಾ ಸಂಘಟನೆ ಸಂಪರ್ಕಿಸಿ ಭಯೋತ್ಪಾದನೆ ಚಟುವಟಿಕೆಗಳಿಗೆ ಸಂಚು ರೂಪಿಸಿದ ಆರೋಪದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಪಾಕಿಸ್ತಾನದ ಪ್ರಜೆ ಸೇರಿದಂತೆ ಮೂವರನ್ನು ಪ್ರಕರಣದಿಂದ ಖುಲಾಸೆಗೊಳಿಸಿ ಹೈಕೋರ್ಟ್ ಆದೇಶಿಸಿದೆ.

ಬೆಂಗಳೂರಿನ ನಿವಾಸಿಗಳಾದ ಸಯ್ಯದ್ ಅಬ್ದುಲ್ ರೆಹಮಾನ್, ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿಯ ಅಪ್ಸರ್ ಪಾಷಾ ಮತ್ತು ಪಾಕಿಸ್ತಾನದ ಕರಾಚಿಯ ನಿವಾಸಿ ಮೊಹಮ್ಮದ್ ಫಹದ್ ಅಲಿಯಾಸ್ ಮೊಹಮ್ಮದ್ ಕೋಯಾ ಅವರು ವಿಚಾರಣಾ ನ್ಯಾಯಾಲಯ ವಿಧಿಸಿದ್ದ ಜೀವಾವಧಿ ಶಿಕ್ಷೆ ಪ್ರಶ್ನಿಸಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್ ಕುಮಾರ್ ಮತ್ತು ನ್ಯಾಯಮೂರ್ತಿ ಜೆ.ಎಂ.ಖಾಝಿ ಅವರಿದ್ದ ನ್ಯಾಯಪೀಠ, ಆರೋಪಿಗಳು ಭಯೋತ್ಪಾದನೆ ಚಟುವಟಿಕೆ ನಡೆಸುವ ಸಂಘಟನೆಯೊಂದಿಗೆ ಕೈ ಜೋಡಿಸಿರುವುದನ್ನು ಸಾಬೀತು ಪಡಿಸುವುದಕ್ಕೆ ತನಿಖಾಧಿಕಾರಿಗಳು ಸಲ್ಲಿಸಿರುವ ಸಾಕ್ಷ್ಯಾಧಾರ ಸಾಕಾಗುವುದಿಲ್ಲ ಎಂದು ತಿಳಿಸಿದೆ. ಜತೆಗೆ, ಪಾಕಿಸ್ತಾನದ ಪ್ರಜೆಯನ್ನು ಜೈಲಿನಿಂದ ಬಿಡುಗಡೆಯಾದ ಬಳಿಕ ಗಡಿಪಾರು ಮಾಡುವಂತೆ ತಿಳಿಸಿದೆ. ಜತೆಗೆ ತನಿಖೆ ವೇಳೆ ಸಂಗ್ರಹಿಸಲಾಗಿದ್ದ ದಾಖಲೆಗಳನ್ನು ಪರಿಶೀಲನಾ ಸಮಿತಿ ಮುಂದೆ ಸಲ್ಲಿಸಬೇಕಾಗಿರಲಿಲ್ಲ ಅಥವಾ ಆ ವರದಿ ಉಲ್ಲೇಖಿಸಿದ್ದರೂ ಅದಕ್ಕೆ ಪೂರ್ವಾನುಮತಿ ನೀಡಬೇಕಾದ ಸಕ್ಷಮ ಪ್ರಾಧಿಕಾರದ ಮುಂದೆ ಇಡಬೇಕಾಗಿರಲಿಲ್ಲ. ಈ ಎಲ್ಲ ಅಂಶ ಹಾಗೂ ದಾಖಲೆಗಳನ್ನು ಪರಿಶೀಲಿಸಿದ ನಂತರ ಆರೋಪಿಗಳ ವಿರುದ್ಧ ಕಾನೂನು ಬಾಹಿರ ಚಟುವಟಿಕೆಗಳ ತಡೆ ಕಾಯಿದೆ(ಯುಎಪಿಎ)- 1967ರ ಸೆಕ್ಷನ್ 13, 17, 18 ಮತ್ತು 18 'ಬಿ' ಅಡಿ ಶಿಕ್ಷೆ ಊರ್ಜಿತವಾಗುವುದಿಲ್ಲ. ಪಾಕಿಸ್ತಾನದ ಭಯೋತ್ಪಾದನಾ ಸಂಘಟನೆಗಳಿಗೆ ಯುವಕರನ್ನು ನೇಮಿಸಿಕೊಳ್ಳಲಾಗುತ್ತಿದೆ ಎಂಬ ಆರೋಪ ಸಾಬೀತುಪಡಿಸಲು ತನಿಖೆಯಲ್ಲಿ ಯಾವುದೇ ಅಂಶಗಳು ಕಂಡುಬಂದಿಲ್ಲ ಎಂದು ನ್ಯಾಯಾಲಯ ಹೇಳಿದೆ.

ನೌಕರರೊಂದಿಗೆ ಸಚಿವ ಪ್ರಿಯಾಂಕ್ ಖರ್ಗೆ ಅವರ ಚರ್ಚೆ ಫಲಶ್ರುತಿ

ಗ್ರಾ.ಪಂ. ನೌಕರರ ಮುಷ್ಕರ ಸುಖಾಂತ್ಯ

ವಿಕಾಸಸೌಧದಲ್ಲಿ ನೌಕರರ ಮಹಾ ಒಕ್ಕೂಟ ಹಾಗೂ ಗ್ರಾಮ ಪಂಚಾಯತ್ ಸದಸ್ಯರುಗಳ ಸುಮಾರು 300ಕ್ಕೂ ಹೆಚ್ಚು ಪ್ರತಿನಿಧಿಗಳ ಜತೆ ಸಭೆ ನಡೆಸಿದ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಾದ ಉಮಾ ಮಹೇಶ್ವರನ್, ಅಂಜುಂ ಪರವೇಜ್ ಹಾಗೂ ಆಯುಕ್ತೆ ಡಾ.ಅರುಂಧತಿ ಚಂದ್ರಶೇಖರ್ ಹಾಜರಿದ್ದರು.

ಬೆಂಗಳೂರು: ರಾಜ್ಯಾದ್ಯಂತ ವಿವಿಧ ಬೇಡಿಕೆ ಈಡೇರಿಸುವಂತೆ ಪ್ರತಿಭಟಿಸುತ್ತಿದ್ದ ಗ್ರಾಮ ಪಂಚಾಯಿತಿ ನೌಕರರನ್ನು ಮನವೊಲಿಸು ವಲ್ಲಿ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಯಶಸ್ವಿಯಾಗಿದ್ದು, ಸಚಿವರ ಭರವಸೆಗೆ ತೃಪ್ತರಾದ ನೌಕರರ ಸಂಘದ ಪ್ರತಿನಿಧಿಗಳು ಎಂದಿನಂತೆ ಕಚೇರಿ ಕಾರ್ಯಗಳಲ್ಲಿ ನಿರತರಾಗುವುದಾಗಿ ಘೋಷಿಸಿದ್ದಾರೆ.

ವಿಕಾಸಸೌಧದಲ್ಲಿ ನೌಕರರ ಮಹಾ ಒಕ್ಕೂಟ ಹಾಗೂ ಗ್ರಾಮ ಪಂಚಾಯತ್ ಸದಸ್ಯರುಗಳ ಸುಮಾರು 300ಕ್ಕೂ ಹೆಚ್ಚು ಪ್ರತಿನಿಧಿಗಳ ಜತೆ ಸಭೆ ನಡೆಸಿದ ಸಚಿವರು, ಸುಮಾರು 75ಕ್ಕೂ ಹೆಚ್ಚು ಬೇಡಿಕೆಗಳನ್ನು ಆಲಿಸಿ ಕಾನೂನಿನ ಚೌಕಟ್ಟಿನಲ್ಲಿ ಸಾಧ್ಯವಾಗಬಹುದಾದ ಎಲ್ಲ ಬೇಡಿಕೆಗಳನ್ನು ಕಾಲಮಿತಿಯಲ್ಲಿ ಆದ್ಯತೆಯ ಮೇಲೆ ಈಡೇರಿಸುವುದಾಗಿ ಭರವಸೆ ನೀಡಿದ್ದಾರೆ. ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಬಡ್ತಿ ಹಾಗೂ ಇನ್ನಿತರ ವಿಷಯ ಗಳಿಗೆ ಸಂಬಂಧಿಸಿದಂತೆ ಅಧಿಕಾರಿಗಳು ಹಾಗೂ ನೌಕರರ ಸಂಘದ ಪ್ರತಿನಿಧಿಗಳನ್ನು ಒಳಗೊಂಡ ಸಮಿತಿಯನ್ನು ಮೂರು ತಿಂಗಳ ಕಾಲಮಿತಿಯೊಳಗೆ ಅಂತಿಮ ನಿರ್ಧಾರ ತೆಗೆದುಕೊಳ್ಳುವುದಾಗಿ ತಿಳಿಸಿದ್ದಾರೆ.

ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳಿ

ಪಂಚಾಯತಿಗಳಲ್ಲಿ ಕಾರ್ಯನಿರ್ವಹಿಸುವ ನೌಕರರು ತಮ್ಮ ಹಿತಾಸಕ್ತಿಗಳಿಗಾಗಿ ಹೋರಾಟ ಮಾಡುವುದು ಎಷ್ಟು ಮುಖ್ಯವೋ, ಸಾರ್ವಜನಿಕ ಸೇವೆಯ ಮೂಲಕ ಗ್ರಾಮೀಣ ಜನರ ಹಿತಾಸಕ್ತಿಗಳನ್ನು ಕಾಪಾಡಲು ಅಷ್ಟೇ ಬದ್ಧತೆಯನ್ನು ಹೊಂದಿರಬೇಕಾಗುತ್ತದೆ. ನೌಕರರ ಹಿತ ಕಾಪಾಡಲು ಸಿದ್ಧರಾಗಿದ್ದು, ಮುಷ್ಕರ ಹೂಡುವದಕ್ಕಿಂತಲೂ ಹೆಚ್ಚಾಗಿ ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳಲು ಯಾವುದೇ ಸಮಯದಲ್ಲಾಗಲಿ ನೇರವಾಗಿ ಬಂದು ಭೇಟಿ ಮಾಡುವಂತೆ ನೌಕರ ವೃಂದಕ್ಕೆ ತಿಳಿಸಿದ್ದಾರೆ.

ಕೆಐಎಡಿಬಿ ಹಗರಣ ಆರೋಪ: ಸಮಗ್ರ ತನಿಖೆಯಾಗಲಿ

ಬೆಂಗಳೂರು: ದೇವನಹಳ್ಳಿ ಕೆಐಎಡಿಬಿ ಕರ್ಮಕಾಂಡ ಬಗ್ಗೆ ಸಮಗ್ರ ತನಿಖೆಯಾಗಬೇಕೆಂದು ಬಿಜೆಪಿ ಆಗ್ರಹಿಸಿದೆ. ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಚಿತ್ರದುರ್ಗದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ಬಳಿ ಕೆಐಎಡಿಬಿ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಹಗರಣ ನಡೆದಿದ್ದು, ಈ ಬಗ್ಗೆ ಸಿಟಿಜನ್ ರೈಟ್ಸ್ ಫೌಂಡೇಷನ್ ಅಧ್ಯಕ್ಷ ಕೆ.ಎ.ಪಾಲ್ ಎಂಬವರು ಲೋಕಾಯುಕ್ತರಿಗೆ ದೂರು ನೀಡಿದ್ದಾರೆ. ಈ ಬಗ್ಗೆ ಸಮಗ್ರ ತನಿಖೆ ನಡೆಯಬೇಕು ಎಂದರು.

1984 ರಲ್ಲಿ ಇದೇ ಭೂಮಿ ಉಳುಮೆ ಮಾಡಲು ಸರಕಾರ ಅವಕಾಶ ಕೊಟ್ಟಿಲ್ಲ. ಆದರೆ ಕೆಐಎಡಿಬಿ ಭೂಸ್ವಾಧೀನ ಪ್ರಕ್ರಿಯೆ ವೇಳೆ ಜಮೀನಿಗೆ ಮಾಲೀಕರನ್ನು ಹುಟ್ಟುಹಾಕಲಾಗಿದೆ. ಬೇನಾಮಿ ರೀತಿ ಜಮೀನು ಪರಿಹಾರದ ರೂಪದಲ್ಲಿ ಹಣ ನೀಡಲಾಗಿದೆ ಎಂದು ದೂರುದಾರರು ಆರೋಪಿಸಿದ್ದಾರೆ. ಈ ಬಗ್ಗೆ ತನಿಖೆ ನಡೆಸಬೇಕು ಎಂದು ಸಿ.ಟಿ. ರವಿ ಆಗ್ರಹಿಸಿದರು.

ಸಿದ್ದರಾಮಯ್ಯ ಸರಕಾರ ಈ ಭೂಮಿಯನ್ನು ಕೊಟ್ಟಿದ್ದೇ ಆಗಿದ್ದರೇ, ಭಾರಿ ಅಕ್ರಮವಾಗುತ್ತದೆ. ಅಲ್ಲದೆ ಕೆಐಎಡಿಬಿಯ ಅತಿದೊಡ್ಡ ಹಗರಣ ಎಂಬಂತಾಗುತ್ತದೆ. ಹಾಗಾಗಿ ಸಮಗ್ರ ತನಿಖೆ ನಡೆಯಬೇಕು. ಈ ಕೆಐಎಡಿಬಿ ಹಗರಣ ಹಾಗೂ ಭೂ ಅಕ್ರಮ ಗಮನಿಸಿದರೆ ಹುಚ್ಚರ ಮದುವೆಯಲ್ಲಿ ಉಂಡವನೇ ಜಾಣ ಎನ್ನುವಂತಾಗಿದೆ ಎಂದು ಸರಕಾರವನ್ನು ಅವರು ತರಾಟೆಗೆ ತೆಗೆದುಕೊಂಡರು.

ಕುಮಾರಸ್ವಾಮಿ ಕೆಂಗಣ್ಣಿಗೆ ಗುರಿಯಾದ ಜಿ.ಟಿ.ದೇವೇಗೌಡ

ಜಿಟಿಡಿ ಸಮಾಧಾನಕ್ಕೆ ಎಚ್‌ಡಿಡಿ ಮಧ್ಯೆ ಪ್ರವೇಶಿಸಲು ಒತ್ತಡ

ಬೆಂಗಳೂರು: ಸಿಎಂ ಸಿದ್ದರಾಮಯ್ಯ ಪರವಾಲಿರುವ ಜಿ.ಟಿ.ದೇವೆಗೌಡ ಹಾಗೂ ಎಚ್.ಡಿ. ಕುಮಾರಸ್ವಾಮಿ ನಡುವೆ ಭಾರಿ ಕಂದಕ ಸೃಷ್ಟಿಯಾಗಿದ್ದು, ವರಿಷ್ಠ ದೇವೇಗೌಡರು ಮಧ್ಯಪ್ರವೇಶಿಸುವಂತೆ ಪ್ರಮುಖ ನಾಯಕರು ದುಂಬಾಲು ಬಿದಿದ್ದಾರೆ. ಜೆಡಿಎಸ್‌ನ ಜಿ.ಟಿ.ದೇವೆಗೌಡ ಸಿಎಂ ಸಿದ್ದರಾಮಯ್ಯ ಪರ ಬ್ಯಾಟಿಂಗ್ ಮಾಡಿ ಕೇಂದ್ರ ಸಚಿವ ಕುಮಾರಸ್ವಾಮಿ ಕೆಂಗಣ್ಣಿಗೆ ಗುರಿಯಾಗಿ ನಿಂದನೆಗೆ ಒಳಗಾಗಿದ್ದರು.

ಜಿ.ಟಿ.ದೇವೇಗೌಡ ಹೇಳಿಕೆಯಿಂದ ಉಭಯ ಪಕ್ಷಗಳಿಗೆ ಭಾರಿ ಮುಜುಗರ ಉಂಟು ಮಾಡಿದ್ದಲ್ಲದೇ, ಸಿಎಂ ಪರ ವಕಾಲತು ವಹಿಸಿದ್ದಕ್ಕೆ ಎಚ್.ಡಿ.ಕುಮಾರಸ್ವಾಮಿ ಕಟು ಶಬ್ದಗಳಲ್ಲಿ ಟೀಕಿಸಿದ್ದರು. ಇದರಿಂದ ನೊಂದಿರುವ ಜಿ.ಟಿ. ದೇವೇಗೌಡರನ್ನು ತಕ್ಷಣವೇ ಕರೆಸಿ ಸಮಾಧಾನ ಪಡಿಸುವಂತೆ ಜೆಡಿಎಸ್ ಪ್ರಮುಖರಿಂದ ವರಿಷ್ಠ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡಗೆ ಒತ್ತಡ ಹೇರಲಾಗಿದೆ. ಸಿಎಂ ಸಿದ್ದರಾಮಯ್ಯ ಪರ ಜಿ.ಟಿ.ದೇವೇಗೌಡರ ಹೇಳಿಕೆಗೆ ಕುಮಾರಸ್ವಾಮಿ ತೀಕ್ಷ್ಣವಾಗಿ ಪ್ರತಿಕ್ರಿಯಿಸಿ, ಹಾಗಲಕಾಯಿಗೆ ಬೇವಿನ ಕಾಯಿ ಸಾಕ್ಷಿ. ನಮಗೇನೋ ಮಾಡಿಬಿಡುತ್ತಾರೆ ಎಂಬ ಭಯದಿಂದ ಹೇಳಿಕೆ ನೀಡಿರಬಹುದು ಎಂದು ಕಿಡಿಕಾರಿದ್ದರು. ಈ ಮಾತುಗಳಿಂದ ಜಿ.ಟಿ.ದೇವೇಗೌಡರು ನೊಂದಿದ್ದು, ಕರೆಸಿ ಸಮಾಧಾನಪಡಿಸದೇ ಹೋದರೆ ಕಾಂಗ್ರೆಸ್ ನಾಯಕರು ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಇದನ್ನೇ ಬಂಡವಾಳ ಮಾಡಿಕೊಳ್ಳುತ್ತಾರೆ. ಅಲ್ಲದೇ ಜಿಟಿಡಿ ಹೇಳಿಕೆ ಗುರಾಣಿಯನ್ನಾಗಿಸಿ ಬಳಸಿಕೊಳ್ಳುವ ಅಪಾಯವಿದ್ದು, ಭ್ರಷ್ಟಾಚಾರದ ಆರೋಪದಲ್ಲಿ ಸಿಲುಕಿರುವ ಹಲವರು ಈ ಹೇಳಿಕೆ ಬಳಸಿಕೊಳ್ಳುವ ಸಾಧ್ಯತೆಯಿದೆ ಎಂದು ಜೆಡಿಎಸ್ ನಾಯಕರು ಆತಂಕ ತೋಡಿಕೊಂಡಿದ್ದಾರೆ ಎನ್ನಲಾಗಿದೆ. ಜಿ.ಟಿ.ದೇವೇಗೌಡರಿಂದ ಇನ್ನಷ್ಟು ವ್ಯತಿರಿಕ್ತ ಹೇಳಿಕೆ ಹೊರಬರುವ ಮುನ್ನವೇ ಮಾತುಕತೆ ನಡೆಸಿ ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರಿಗೆ ಮನವಿ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರ ಸಚಿವ ಭೂಪೇಂದ್ರ ಯಾದವ್ ಜತೆ ನಡೆದ ಸಭೆಯಲ್ಲಿ ಚರ್ಚೆ

ಕಳಸಾ-ಬಂಡೂರಿಗೆ ಕೇಂದ್ರ ಅನುಮತಿ ಸಾಧ್ಯತೆ: ಖಂಡ್ರೆ

ಬೆಂಗಳೂರು: ಕರ್ನಾಟಕದ ಬಹುದಿನಗಳ ಬೇಡಿಕೆಯಾದ ಕಳಸಾ ಬಂಡೂರಿ ನಾಲಾ ಯೋಜನೆ ಕುರಿತು ದೆಹಲಿಯಲ್ಲಿ ಕೇಂದ್ರ ಅರಣ್ಯ ಸಚಿವ ಭೂಪೇಂದ್ರ ಯಾದವ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಲಾಗಿದ್ದು, ಈ ಸಂಬಂಧ ಕೇಂದ್ರೀಯ ವನ್ಯ ಜೀವಿ ಮಂಡಳಿ ಯೋಜನೆಗೆ ಅನುಮೋದನೆ ನೀಡುವ ವಿಶ್ವಾಸವನ್ನು ಅರಣ್ಯ ಸಚಿವ ಈಶ್ವರ್ ಖಂಡ್ರೆ ವ್ಯಕ್ತಪಡಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಹದಾಯಿ ನದಿಯ ಎರಡು ಉಪನದಿಗಳಾದ ಕಳಸಾ ಮತ್ತು ಬಂಡೂರಿ ನೀರನ್ನು ಮಲಪ್ರಭಾ ನದಿಗೆ ತಿರುಗಿಸುವ ಈ ಯೋಜನೆಗೆ ಗೋವಾ ಸರಕಾರ ತಕರಾರು ಮಾಡುತ್ತಿದೆ. ಆದರೆ, 2018ರ ಆಗಸ್ಟ್ 14ರಂದು ಮಹಾದಾಯಿ ನದಿ ನೀರು ವಿವಾದ ನ್ಯಾಯಾಧಿಕರಣ ನೀಡಿರುವ ವರದಿಯಲ್ಲಿ ಕಳಸಾ-ಬಂಡೂರಿ ಯೋಜನೆಯಡಿ 3.9 ಟಿಎಂಸಿ ನೀರನ್ನು ತಿರುಗಿಸಲು ಅವಕಾಶ ನೀಡಿದೆ. ಆದರೆ ಇದಕ್ಕೆ ಪರಿಸರ ತೀರುವಳಿ ಅನುಮೋದನೆ ಅಗತ್ಯವಿದೆ ಎಂಬ ಅಂಶ ಉನ್ನತ ಅಧಿಕಾರಿಗಳು ಮಂಡಳಿ ಸಭೆಗೆ ಮನವರಿಕೆ ಮಾಡಿಸಿದ್ದಾರೆ ಎಂದರು.

ಕೇಂದ್ರೀಯ ಜಲ ಆಯೋಗ 2022ರ ಡಿಸೆಂಬರ್ 29ರಂದು ತನ್ನ ಪತ್ರದಲ್ಲಿ ಕಳಸಾ ಬಂಡೂರಿ ಯೋಜನೆಯ ಪರಿಷ್ಕೃತ ವಿಸ್ತೃತ ಯೋಜನಾ ವರದಿಗೆ ಅನುಮತಿ ನೀಡಿದೆ ಎಂಬ ವಿಷಯದೊಂದಿಗೆ ಕುಡಿಯುವ ನೀರಿನ ಯೋಜನೆಗಳ ಸಂಬಂಧ ಸುಪ್ರೀಂಕೋರ್ಟ್ ತೀರ್ಪುಗಳನ್ನೂ ಉಲ್ಲೇಖಿಸಿದೆ.

ದೆಹಲಿ ಸಭೆ ಯಲ್ಲಿ ಫಲಪ್ರದವಾದ ಮತ್ತು ಸಕಾರಾತ್ಮಕವಾದ ಚರ್ಚೆ ಆಗಿದ್ದು, ಈ ಹಿನ್ನೆಲೆಯಲ್ಲಿ ಯೋಜನೆಗೆ ಮುಂದಿನ ಸಭೆಯಲ್ಲಿ ಅನುಮೋದನೆ ದೊರೆ ಯುವ ನಿರೀಕ್ಷೆಸಲಾಗಿದೆ. ಈ ಸಂಬಂಧ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ವತಿಯಿಂದ ಮಂಡಳಿಗೆ ವಿವರವಾದ ಪತ್ರ ಬರೆಯಲಾಗುವುದು ಎಂದು ತಿಳಿಸಿದರು.

ಅಭಿವೃದ್ಧಿ ಕಾಮಗಾರಿಗಳಿಂದಾಗಿ ನಂದಿ ಬೆಟ್ಟಕ್ಕೆ ಆಪತ್ತು | ಪರಿಸರವಾದಿಗಳು, ಭೂ ವಿಜ್ಞಾನಿಗಳಿಂದ ಸರಕಾರಕ್ಕೆ ಎಚ್ಚರಿಕೆ

ನಂದಿಬೆಟ್ಟ ರೋಪ್ ವೇ ಯೋಜನೆ ರದ್ದುಪಡಿಸಲು ಆಗ್ರಹ

ಬೆಂಗಳೂರು: ಐತಿಹಾಸಿಕ ಮಹತ್ವವುಳ್ಳ ಹಾಗೂ ಪಂಚನದಿಗಳ ಉಗಮ ಸ್ಥಾನ ನಂದಿಬೆಟ್ಟದಲ್ಲಿ ಪ್ರವಾಸಿಗರನ್ನು ಆಕರ್ಷಿಸಲು ಕೈಗೆತ್ತಿಕೊಂಡಿರುವ ರೋಪ್ ವೇ ಸೇರಿದಂತೆ ಅಭಿವೃದ್ಧಿ ಕಾಮಗಾರಿಗಳಿಂದಾಗಿ ನಂದಿ ಬೆಟ್ಟಕ್ಕೆ ತೀವ್ರ ಆಪತ್ತು ಎದುರಾಗಿದೆ.

ಕೇರಳದ ವಯನಾಡು ಮಾದರಿಯಲ್ಲಿ ಭೂಕುಸಿತವಾಗುವ ಆತಂಕವಿದ್ದು, ತಕ್ಷಣವೇ ಎಚ್ಚೆತ್ತುಕೊಳ್ಳದಿದ್ದರೆ ಮುಂಬರುವ ದಿನಗಳಲ್ಲಿ ತೀವ್ರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಪರಿಸರವಾದಿಗಳು ಮತ್ತು ಭೂ ವಿಜ್ಞಾನಿಗಳು ಸರಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ. ನಂದಿ ಬೆಟ್ಟವನ್ನು ಈಗಿರುವ ರೀತಿಯಲ್ಲಿ ಸಂರಕ್ಷಿಸಲು ಮೊದಲು ಆದ್ಯತೆ ನೀಡಬೇಕು. ಪರಿಸರಕ್ಕೆ ಮಾರಕವಾಗಿರುವ ಅಭಿವೃದ್ಧಿ ಕಾಮಗಾರಿಗಳನ್ನು ತಕ್ಷಣವೇ ನಿಲ್ಲಿಸಿ, ಪಂಚ ನದಿಗಳ ಉಗಮ ಸ್ಥಾನದ ಜಲ ಮೂಲ ಪುನಶ್ಚೇತನಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ. ಹಿರಿಯ ಪರಿಸರ ತಜ್ಞ ಡಾ.ಎ.ಎನ್. ಯಲ್ಲಪ್ಪ ರೆಡ್ಡಿ, ಗೀವ್ ಲೈಫ್ ಫೌಂಡೇಷನ್‌ನ ಡಾ. ಭರತ್, ಸಾಮಾಜಿಕ ಹೋರಾಟಗಾರ್ತಿ ಸಂಜನಾ ಜಾನ್, ಭೂ ವಿಜ್ಞಾನಿ ಪ್ರೊ.ರೇಣುಕಾ ಪ್ರಸಾದ್, ಚಲನಚಿತ್ರ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ಹಾಗೂ ಯುಎಚ್‌ಆರ್ ಎಸ್‌ಎಫ್ ಸಂಸ್ಥಾಪಕ ಅಧ್ಯಕ್ಷ ಸಿ.ಡಿ.ಕಿರಣ್ ಪ್ರಾತ್ಯಕ್ಷಿಕೆ ಮೂಲಕ ನಂದಿಬೆಟ್ಟ ಎದುರಿಸುತ್ತಿರುವ ಅಪಾಯಗಳ ಕುರಿತು ಸುದ್ದಿಗೋಷ್ಠಿಯಲ್ಲಿ ಬೆಳಕು ಚೆಲ್ಲಿದರು. ಪರಿಸರ ತಜ್ಞ ಡಾ. ಯಲ್ಲಪ್ಪ ರೆಡ್ಡಿ ಮಾತನಾಡಿ, ಅಪಾಯದ ಅಂಚಿಗೆ ಸಿಲುಕಿರುವ ನಂದಿ ಬೆಟ್ಟ ಕುರಿತು ವ್ಯಾಪಕ ಅಧ್ಯಯನ ಕೈಗೊಳ್ಳಲಾಗಿದೆ. ಬೆಟ್ಟದಲ್ಲಿ ಪ್ರವಾಸಿಗರ ಸಂಖ್ಯೆ ವಿಪರೀತ ಏರಿಕೆ ಯಾಗುತ್ತಿದ್ದು, ರೆಸಾರ್ಟ್‌ಗಳು ಹೆಚ್ಚಾಗುತ್ತಿರುವ ಜತೆಗೆ ಅಲ್ಲಿನ ಪ್ರಕೃತಿಯ ಸೊಬಗಿನ ಮೇಲೆ ಒತ್ತಡ ತೀವ್ರಗೊಂಡಿದೆ. ತಕ್ಷಣವೇ ರೋಪ್ ವೇ ಸೇರಿದಂತೆ ಅಭಿವೃದ್ಧಿ ಚಟುವಟಿಕೆ ನಿಲ್ಲಿಸಬೇಕು ಎಂದರು.

ನಂದಿ ಬೆಟ್ಟ ರೋಪ್ ವೇ ಯೋಜನೆ ಜಾರಿಗೊಳಿಸಿದಂತೆ ಆಗ್ರಹಿಸಿ ಬಿತ್ತಿಫಲಕ ಬಿಡುಗಡೆ ಮಾಡಲಾಯಿತು. ಪರಿಸರ ತಜ್ಞ ಡಾ. ಎ. ಎನ್. ಯಲ್ಲಪ್ಪ ರೆಡ್ಡಿ, ಗೀವ್ ಲೈಫ್ ಫೌಂಡೇಷನ್ ನ ಡಾ. ಭರತ್, ಸಾಮಾಜಿಕ ಹೋರಾಟಗಾರ್ತಿ ಸಂಜನಾ ಜಾನ್ ಇದ್ದರು.

ಸಂರಕ್ಷಣಾ ನಿಯಮ ಜಾರಿಗೊಳಿಸಿ

ನಂದಿ ಬೆಟ್ಟಕ್ಕೆ ಭೇಟಿ ನೀಡುವವರ ಸಂಖ್ಯೆ ಗರಿಷ್ಠ ಮಟ್ಟಕ್ಕೆ ತಲುಪಿದ್ದು, ಜನ ದಟ್ಟಣೆ, ಮೂಲಸೌಕರ್ಯ ಮತ್ತು ಸಂಪನ್ಮೂಲಗಳ ಮೇಲಿನ ಒತ್ತಡ, ಸಂಭಾವ್ಯ ಪರಿಸರ ಅವನತಿಯಿಂದಾಗಿ ಭಾರೀ ಅವಘಡಗಳಿಗೆ ಕಾರಣವಾಗಬಹುದು. ಸರಕಾರಕ್ಕೆ ಪ್ರವಾಸೋದ್ಯಮವೊಂದೇ ಆದ್ಯತೆಯಾಗಬಾರದು. ಉನ್ನತ ಮಟ್ಟದ ಯಂತ್ರೋಪಕರಣಗಳ ಬಳಕೆಗೆ ತಕ್ಷಣವೇ ತಡೆಹಾಕಬೇಕು. ದಿನೇ ದಿನೇ ಶಬ್ದ ಮತ್ತು ವಾಯು ಮಾಲಿನ್ಯ ಕೂಡ ಹೆಚ್ಚಾಗುತ್ತಿದೆ. ಇದೀಗ ವನ್ಯಜೀವಿಗಳ ಸಂರಕ್ಷಣೆ ಮಾಡಬೇಕಾಗಿದ್ದು, ಭೌಗೋಳಿಕ, ಜೀವವೈವಿಧ್ಯ ಮತ್ತು ಆರೋಗ್ಯದ ಅಭಯಾರಣ್ಯ ಅಂಶಗಳನ್ನು ಸಂರಕ್ಷಿಸಲು ಕಟ್ಟುನಿಟ್ಟಾದ ಸಂರಕ್ಷಣಾ ನಿಯಮ ಜಾರಿಗೊಳಿಸಬೇಕು ಎಂದು ಪರಿಸರ ತಜ್ಞ ಡಾ. ಯಲ್ಲಪ್ಪ ರೆಡ್ಡಿ ಹೇಳಿದರು.

ಉತ್ತರಾಧಿಕಾರಿಗಳೇ ಇಲ್ಲದ ಹೆಜ್ಬೊಲ್ಲಾ ದುರ್ಬಲ: ಇಸ್ರೇಲ್

ಟೆಲ್‌ಅವಿವ್: ಲೆಬನಾನ್ ಮೂಲದ ಉಗ್ರ ಸಂಘಟನೆ ಹೆಜ್ಬೊಲ್ಲಾ ಈಗ ಬಹುತೇಕ ದುರ್ಬಲವಾಗಿದೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ. ಹೆಜ್ಬೊಲ್ಲಾ ಪ್ರಮುಖ ನಾಯಕನಾಗಿದ್ದ ನಸ್ರಲ್ಲಾ ಮಡಿದ ನಂತರ ಆತನ ಉತ್ತರಾಧಿಕಾರಿ ಆಗಲಿದ್ದ ಕೆಲವು ಪ್ರಮುಖ ಉಗ್ರರನ್ನು ಇಸ್ರೇಲ್ ಸೇನಾ ಪಡೆ ಈಗಾಗಲೇ ಕೊಂದು ಹಾಕಿದೆ. ಹೆಜ್ಬೊಲ್ಲಾ ಸಾಮರ್ಥ್ಯವನ್ನೇ ಇಲ್ಲದಂತೆ ಮಾಡಿದ್ದೇವೆ. ನಸ್ರಲ್ಲಾ ಉತ್ತರಾಧಿಕಾರಿ ಆಗಲಿದ್ದ ಹಲವು ಉಗ್ರರನ್ನು ಹೊಡೆದುರುಳಿಸಿದ್ದೇವೆ. ಉಗ್ರ ಸಂಘಟನೆ ಸದ್ಯ ಬಹಳ ದುರ್ಬಲವಾಗಿದೆ ಎಂದಿದ್ದಾರೆ. ಹೆಜ್ಬೊಲ್ಲಾ ಹಿಡಿತದಿಂದ ತಮ್ಮನ್ನು ಮುಕ್ತಗೊಳಿಸಬೇಕು ಎಂದು ಲೆಬನಾನ್ ಜನರು ಕೇಳಿಕೊಂಡಿದ್ದರು. ಅವರ ಕೋರಿಕೆಯನ್ನು ಇಸ್ರೇಲ್ ಸೇನೆ ನೆರವೇರಿಸಿದೆ ಎಂದರು.

ಲೆಬನಾನ್ ಜನತೆ ಈಗ ನಿಮ್ಮ ದೇಶವನ್ನು ನೀವೇ ಬದಲಾಯಿಸಬಹುದು. ದೇಶವನ್ನು ಶಾಂತಿ-ಸಮೃದ್ಧಿಯ ಹಾದಿಗೆ ಮರಳಿ ತರಬಹುದು ಎಂದು ನೆತನ್ಯಾಹು ಲೆಬನಾನ್ ಜನರಿಗೆ ಕಿವಿಮಾತು ಹೇಳಿದ್ದಾರೆ. ಹೆಜ್ಬೊಲ್ಲಾ ಉಗ್ರ ಸಂಘಟನೆ ವಿರುದ್ಧ ನೀವು ಈಗ ಕ್ರಮ ಕೈಗೊಳ್ಳದಿದ್ದರೆ ಮುಂದೆ ನಿಮಗೇ ಕಷ್ಟವಾಗಲಿದೆ ಎಂದೂ ಎಚ್ಚರಿಸಿದ್ದಾರೆ.

ದಸರಾ ಗೊಂಬೆ ವೈಭವ

ವೈದ್ಯನಾಥನ್, ಪುತ್ರಿ ಶ್ವೇತ, ಅಭಿನೇತ್ರಿ, ಗೋಕುಲಂ, ಮೈಸೂರು. 140 ವರ್ಷಗಳ ಗೊಂಬೆ ಪ್ರದರ್ಶನ.

ಸುಮಾ ಜಿ. ಕೃಷ್ಣ, ಜೆಪಿ.ನಗರ, ಬೆಂಗಳೂರು, 40 ವರ್ಷಗಳಿಂದ ಬೊಂಬೆ ಅಲಂಕಾರ.

ಶ್ಯಾಮಲಾ ಶ್ರೀಪಾದ, ಚಾಮರಾಜಪೇಟೆ, ಬೆಂಗಳೂರು. 50ನೇ ವರ್ಷದ ಗೊಂಬೆ ಹಬ್ಬ.

ಶೈಲಜಾಪ್ರಕಾಶ್, ನಾಗರಭಾವಿ, ಬೆಂಗಳೂರು. 40 ವರ್ಷಗಳಿಂದ ಬೊಂಬೆ ಜೋಡಣೆ.

ಡಾ. ಶ್ರೇಯಾಂಕಾ, ಬನ್ನೇರುಘಟ್ಟ, ಬೆಂಗಳೂರು. 10 ವರ್ಷಗಳಿಂದ ಗೊಂಬೆ ಕೂರಿಸುತ್ತಿದ್ದಾರೆ.

ಸುಜಾತಾ ಮುರಳೀಧರ, ಶಂಕರಮಠ ಹತ್ತಿರ, ಶಿವಮೊಗ್ಗ. 20ನೇ ವರ್ಷದ ಗೊಂಬೆ ಸಂಭ್ರಮ.

ಶರಾವತಿ ಎ., ಆರ್.ಆರ್. ನಗರ, ಬೆಂಗಳೂರು. 10 ವರ್ಷಗಳಿಂದ ಗೊಂಬೆ ಕೂರಿಸುತ್ತಿದ್ದಾರೆ.

ವಿಜಯಲಕ್ಷ್ಮೀ, ಶೋಭಾ, ಸಾರಕ್ಕಿ ರಸ್ತೆ, ಜೆಪಿ ನಗರ, ಬೆಂಗಳೂರು.

ರಮೇಶ್, ತ್ಯಾಗರಾಜ ಬೆಂಗಳೂರು 50 ವರ್ಷಗಳಿಂದ ಬೊಂಬೆ ಇಡುವ ಸಂಪ್ರದಾಯ.



ಸವಿತಾ, ರಾಮಾಂಜನೇಯ ನಗರ, ಚಿಕ್ಕಲ್ಲಸಂದ್ರ, ಬೆಂಗಳೂರು.

ಉಷಾ ದೇವರಾಜ್, ಗಂಗೋತ್ರಿ ಲೇಔಟ್, ಮೈಸೂರು. 20 ವರ್ಷಗಳಿಂದ ಗೊಂಬೆ ಇಡುತ್ತಿದ್ದಾರೆ.

ಲತಾ ವೆಂಕಟೇಶ್, ವಿವೇಕಾನಂದ ನಗರ, ಮೈಸೂರು 25 ವರ್ಷಗಳಿಂದ ಗೊಂಬೆ ಕೂರಿಸುತ್ತಿದ್ದಾರೆ.

ಮಾಧವಿ, ಮೇಧಾ, ಯಲಹಂಕ ಉಪನಗರ, ಬೆಂಗಳೂರು. 10ನೇ ವರ್ಷದ ಗೊಂಬೆ ಹಬ್ಬ.

ವರ್ಷಾ ಎಸ್., ಕನಕದಾಸ ನಗರ, ಮೈಸೂರು. 20ನೇ ವರ್ಷದ ಗೊಂಬೆ ಸಂಭ್ರಮ.

ವಿಜಯಲಕ್ಷ್ಮಿ ರಿಗ್ರೆಟ್ ಅಯ್ಯರ್, ತ್ಯಾಗರಾಜ ನಗರ ಬೆಂಗಳೂರು. 37 ವರ್ಷಗಳ ಗೊಂಬೆ ಹಬ್ಬ.

ಶ್ರೀಲಕ್ಷ್ಮೀ, ಪದ್ಮನಾಭನಗರ, ಬೆಂಗಳೂರು.

ರಶ್ಮೀ ನರಸಿಂಹಮೂರ್ತಿ, ಆರ್.ಆರ್. ನಗರ. ಬೆಂಗಳೂರು 3ನೇ ವರ್ಷದ ಗೊಂಬೆ ಹಬ್ಬ.

ಜಯಶ್ರೀ ದೇವರಾಜ್, ವಾಸವಿ ದೇವಸ್ಥಾನ. ಹೊಸದುರ್ಗ. 2ನೇ ವರ್ಷದ ಗೊಂಬೆ ಸಂಭ್ರಮ.

ಸವಿತಾ ಜಿ. ಮಯ್ಯ, ವಿದ್ಯಾಗಿರಿ ಲೇಔಟ್, ನಾಗರಬಾವಿ, ಬೆಂಗಳೂರು. 10ನೇ ವರ್ಷ.

ಗೋಧಾ ಪ್ರಕಾಶ್, ಆರ್.ಆರ್.ನಗರ, ಬೆಂಗಳೂರು. 25ನೇ ವರ್ಷ ಗೊಂಬೆ ಸಂಭ್ರಮ.

ಶ್ರೀನಿವಾಸ ಆರ್., ಬಸವನಗುಡಿ, ಬೆಂಗಳೂರು. 30 ವರ್ಷಗಳಿಂದ ಗೊಂಬೆ ಸಂಭ್ರಮ.

ತಲಕಾವೇರಿ ನಗರ, ಬಸವನಗರ, ಬೆಂಗಳೂರು 40 ವರುಷಗಳಿಂದ ಗೊಂಬೆ ಉತ್ಸವ.

ರಮಾಮಣಿ ಗುರುದತ್, ರಾಮಕೃಷ್ಣನಗರ, ಮೈಸೂರು. 20 ವರ್ಷದಿಂದ ಗೊಂಬೆ ಪ್ರದರ್ಶನ.

ವೀಣಾ ಜಿ.ಎನ್ . ಶ್ರೀರಾಮಪುರ ಎರಡನೇ ಹಂತ, ಮೈಸೂರು

ಮೈಸೂರಿನ ಕುವೆಂಪುನಗರದ ಸುಮಾ ಕೃಷ್ಣ ಹಾಗೂ ಕೃಷ್ಣ ರಂಗರಾವ್ ಮನೆಯಲ್ಲಿ ಕೂರಿಸಿರುವ ಗೊಂಬೆ.

ಶಾಂತಲಾ ಮಧುಸೂದನ್, ಕತ್ತರಿಗುಪ್ಪೆ, ಬೆಂಗಳೂರು. 25ನೇ ವರ್ಷದ ಗೊಂಬೆ ಸಂಭ್ರಮ.

ನವರಾತ್ರಿ ಸಂದರ್ಭದಲ್ಲಿ ಮನೆಗಳಲ್ಲಿ ಬೊಂಬೆ ಇಡುವ ಮೈಸೂರು ಭಾಗದ ವಿಶಿಷ್ಟ ಸಂಪ್ರದಾಯ ಇದೀಗ ನಾಡಿನೆಲ್ಲೆಡೆ ಹರಡಿದೆ. ನಿಮ್ಮ ಮನೆಗಳಲ್ಲಿ ಇಟ್ಟಿರುವ ಗೊಂಬೆಗಳ ಫೋಟೋ ಕಳುಹಿಸಿ ಎಂಬ ವಿಶ್ವವಾಣಿ ಕರೆಗೆ ನಾಡಿನ ನಾನಾ ಭಾಗಗಳಿಂದ ಓದುಗರು ಸ್ಪಂದಿಸಿದ್ದಾರೆ. ವಿದೇಶಗಳಿಂದಲೂ ಬೊಂಬೆ ಫೋಟೋ ಕಳುಹಿಸಿದ್ದಾರೆ. ಆಯ್ದ ಫೋಟೋಗಳನ್ನು ಇಲ್ಲಿ ಪ್ರಕಟಿಸಿದ್ದೇವೆ. ಎಲ್ಲರಿಗೂ ಆಯುಧಪೂಜೆ, ವಿಜಯದಶಮಿಯ ಶುಭಾಶಯಗಳು.

ಶ್ರೀದೇವಿ ಎಚ್.ಎಸ್. ಸಾತಗಳ್ಳಿ ಬಡಾವಣೆ, ಮೈಸೂರು. 25 ವರ್ಷಗಳ ಗೊಂಬೆ ಹಬ್ಬ.

ಜ್ಯೋತಿ ಬಿ., ಸರಸ್ವತಿಪುರ, ಮೈಸೂರು. 30 ವರ್ಷಗಳಿಂದ ಗೊಂಬೆ ಕೂರಿಸುತ್ತಿದ್ದಾರೆ.

ಎಚ್.ಪಿ.ಮಂಜುನಾಥ್, ಕುಮಾರಸ್ವಾಮಿ ಬಡಾವಣೆ. ಬೆಂಗಳೂರು. 10 ವರ್ಷಗಳಿಂದ ನವರಾತ್ರಿ ಸಂಭ್ರಮ.

ತಂಗಮಣಿ ಶ್ರೀನಿವಾಸನ್ ಉತ್ತರಹಳ್ಳಿ, ಬೆಂಗಳೂರು. 25 ವರ್ಷಗಳಿಂದ ಗೊಂಬೆ ಕೂರಿಸುತ್ತಿದ್ದಾರೆ.

ಸೌಮ್ಯಲಕ್ಷ್ಮೀ ಸತ್ಯನಾರಾಯಣ ಮೈಸೂರು.

ಸುಷ್ಮಾ ಎಚ್.ಕೆ. ಸಿಂಗಾಪುರ. ಹಿರಿಯರ ಸಂಪ್ರದಾಯ ಮುಂದುವರಿಸಿದ್ದಾರೆ.

ಡ್ರೀಮ್ ಕಿಡ್ಸ್, ದ ಆಕ್ಟಿವಿಟಿ ಪ್ರಿಸ್ಕೂಲ್, ಶ್ರೀರಾಂಪುರ, ಮೈಸೂರು 10 ವರ್ಷಗಳಿಂದ ಗೊಂಬೆ ಪ್ರದರ್ಶನ.

ಕಮಲಾ ರಘುನಾಥ್, ನ್ಯೂಜೆರ್ಸಿ, ಅಮೆರಿಕ.

ಸುಕೇತ್, ಓಹಿಯೋ, ಅಮೆರಿಕ.

ಶೀಲಾ ಶ್ರೀನಾಥ್, ಜಾಲಹಳ್ಳಿ, ಬೆಂಗಳೂರು. 2ನೇ ವರ್ಷದ ಗೊಂಬೆ ಉತ್ಸವ.

ವಾದಿರಾಜ ಕೌಜಲಗಿ, ಹೊಸ ಯಲ್ಲಾಪುರಓಣಿ, ಧಾರವಾಡ. 1995ರಿಂದಲೂ ಗೊಂಬೆ ಹಬ್ಬ.

ಶಿರಸಿಯ ಶ್ರೀ ಮಾರಿಕಾಂಬಾ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕಿಯರು.

ಸುಕನ್ಯಾ.ವಿ., ಗುಂಡ್ಲುಪೇಟೆ, ಚಾಮರಾಜನಗರ. 50 ವರ್ಷಗಳಿಂದ ಗೊಂಬೆ ಕೂರಿಸುತ್ತಿದ್ದಾರೆ.

ಸುಮಾ ರಘು ಶ್ರೀರಾಂಪುರ , ಮೂರನೇ ಕ್ರಾಸ್ ಮೈಸೂರು. 24 ವರ್ಷಗಳಿಂದ ಗೊಂಬೆ ಉತ್ಸವ.

ಸ್ವರೂಪ್ ನಂದಕುಮಾರ್, ಜಯಲಕ್ಷ್ಮೀಪುರ, ಮೈಸೂರು. 30 ವರ್ಷಗಳ ಗೊಂಬೆ ಪ್ರದರ್ಶನ.

ಮೀರಾ ರಮೇಶ್, ಬಿಎಸ್‌ಕೆ, ಬೆಂಗಳೂರು. 5 ವರ್ಷಗಳಿಂದ ನವರಾತ್ರಿ ಬೊಂಬೆ ಇಡುತ್ತಿದ್ದಾರೆ.

ಉಷಾ ವಿದ್ಯಾಶಂಕರ್, ತಲಘಟ್ಟಪುರ. ಬೆಂಗಳೂರು. 10ನೇ ವರ್ಷದ ಗೊಂಬೆ ಉತ್ಸವ.

ಪ್ರಿಯದರ್ಶಿನಿ ಗೋಕುಲ್, ಮಹಾಲಕ್ಷ್ಮಿ ಲೇಔಟ್, ಬೆಂಗಳೂರು.

ಜಾಹ್ನವಿ ಅಭಿನಂದನ್ ಮೈಸೂರು.

ಶಾಂತಿ ವರದರಾಜನ್, ಗುಟ್ಟಹಳ್ಳಿ ಬೆಂಗಳೂರು.

ಸೌಮ್ಯಾ ಶ್ರೀರಾಮ್, ಶೋಭಾ ಫಾರೆಸ್ಟ್ ವ್ಯೂ, ಬೆಂಗಳೂರು.

ಸೌಮ್ಯಾ ಅಶ್ವಿನ್, ಇಸ್ರೋ ಲೇಔಟ್, ಬೆಂಗಳೂರು.

ಸುಕನ್ಯಾ ನಂಜುಂಡಯ್ಯ, ಬಸವನಗುಡಿ, ಶಿವಮೊಗ್ಗ. 35 ವರ್ಷ ಬೊಂಬೆ ಪ್ರದರ್ಶನ.

ವಿಶ್ವವಾಣಿ

ಆರಾಮ

@vishwavaninews

ಬೆಂಗಳೂರು
ಶುಕ್ರವಾರ
11 | 10 | 2024

ಅನುದಿನವೂ
ವಿರಾಮಕ್ಕೆ
ಒಂದು ನೆಪ

ಚಿತ್ತವಿಹಾರ

ನಲಿವಿನ ಬೆಳೆ

ಸಂತೋಷ ಎನ್ನುವುದರ ಪರಿಭಾಷೆ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನ. ಹಸಿದವನ ಎದುರು ಮೃಷ್ಟಾನ್ನ ಭೋಜನ ಇಟ್ಟರೆ ಅದು ಅವನಿಗೆ ಪರಮ ಸಂತೋಷ. ಅದೇ ಮೃಷ್ಟಾನ್ನವನ್ನು ಹೊಟ್ಟೆ ತುಂಬಿದವನ ಮುಂದೆ ಇಟ್ಟರೆ ಅವನು ಅದರಿಂದ ದೂರ ಹೋಗಲು ಪ್ರಯತ್ನಿಸುತ್ತಾನೆ. ಪ್ರತಿ ಒಬ್ಬ ವ್ಯಕ್ತಿಯ ಮಾನಸಿಕ ಸ್ಥಿತಿ ಅವರವರ ಸಂತೋಷವನ್ನು ನಿರ್ಧರಿಸುತ್ತದೆ. ಕೆಲವರು ತಮ್ಮನ್ನು ಹೊರ ಜಗತ್ತಿಗೆ ಅತ್ಯಂತ ಸುಖಿಗಳಾಗಿ ತೋರಿಸಿಕೊಳ್ಳಲು ಬಯಸುತ್ತಾರೆ. ಅದಕ್ಕಾಗಿ ತಮ್ಮೊಳಗಿನ ನೋವನ್ನು ಮರೆಮಾಚುತ್ತಾರೆ. ಇದು ಒಂದು ರೀತಿಯಲ್ಲಿ 'ನಲಿವಿನ ಭಾವ ಬಿತ್ತಿ, ನಲಿವಿನ ಬೆಳೆ ತೆಗೆದಂತೆ'.

ಇದಕ್ಕೆ ಅತ್ಯುತ್ತಮವಾದ ಉದಾಹರಣೆ ಎಂದರೆ ಚಾರ್ಲಿ ಚಾಪ್ಲಿನ್‌ನ ಜೀವನ. ಆತ 'ನನಗೆ ಮಳೆಯಲ್ಲಿ ನಡೆಯುತ್ತಾ, ನೃತ್ಯ ಮಾಡುವುದು, ನಟಿಸುವುದು ಇಷ್ಟ. ಏಕೆಂದರೆ ಅಲ್ಲಿ ನನ್ನ ಕಣ್ಣೀರು ಮಳೆಯೊಂದಿಗೆ ಬೆರೆತು ಜನರ ಗಮನಕ್ಕೆ ಬಾರದೇ ಉಳಿಯುವುದು' ಎನ್ನುತ್ತಿದ್ದ. ಅಂದರೆ ತನ್ನ ನೃತ್ಯ, ನಟನೆಗಳು ಜನರನ್ನು ಸಂತೋಷದ ಚಿಲುಮೆಯಲ್ಲಿ ನಲಿದಾಡುವಂತೆ ಮಾಡುವುದಷ್ಟೇ ಆತನಿಗೆ ಬೇಕಿತ್ತು. ಕಷ್ಟಗಳೆನಿದ್ದರೂ ಅವುಗಳನ್ನು ವ್ಯಯಕ್ತಿಕವಾಗಿ ಅನುಭವಿಸಿದರಾಯಿತು ಎಂಬ ಧೋರಣೆ ಆತನದ್ದು. ಕಷ್ಟ ಕಾರ್ಪಣ್ಯಗಳಿಲ್ಲದ ಬದುಕೆಲ್ಲಿದೆ? ತಮ್ಮ ಕಷ್ಟವನ್ನೇ ಎಲ್ಲರಿಗೂ ಹೇಳುತ್ತಾ ಜನರಿಂದ ಕನಿಕರ ಅಪೇಕ್ಷಿಸುವವರು ಸಂತಸವನ್ನು ಹಂಚಲಾರರು. ನಮ್ಮೊಳಗೂ ಸಂತೋಷ ತುಂಬಿದ್ದಾಗ ಅದನ್ನು ಹೊರಗೆ ಹಂಚುವುದು ಬಹು ಸುಲಭ.

ಆದರೆ ನಾವು ದುಃಖದಲ್ಲಿದ್ದಾಗಲೂ ನಾವಿರುವ ಪರಿಸರದಲ್ಲಿ ಸಂತೋಷವನ್ನು ಪಸರಿಸಬೇಕಾದರೆ ಅದಕ್ಕೊಂದು ಸಾಧನೆ ಬೇಕು. ಇಂತಹ ನಿರಂತರ ಸಾಧನೆಯು ನಿಧಾನವಾಗಿ ಹವ್ಯಾಸವಾಗಿ, ಅದೇ ನಮ್ಮ ವ್ಯಕ್ತಿತ್ವವೂ ಆಗಿಬಿಡುತ್ತದೆ. ನಾವು ಸಮಾಜಕ್ಕೆ ಸಂತೋಷವಾಗಿದ್ದೇವೆ ಎಂದು ವ್ಯಕ್ತಪಡಿಸುತ್ತಾ, ನಾವೂ ಅದನ್ನೇ ನಂಬುತ್ತಾ ಬಂದರೆ, ಮುಂದೆ ಎಲ್ಲ ಸಂದರ್ಭಗಳಲ್ಲೂ ಆನಂದವಾಗಿರುವುದು ಅಭ್ಯಾಸವಾಗಿ ಬಿಡುತ್ತದೆ.

• ಮಾಯಾ ಬಾಲಚಂದ್ರ

ಸಕಾರಾತ್ಮಕ ಚಿಂತನೆ

ಒಂದು ಮೇಜಿನ ಮೇಲಿರಿಸಿದ ಗ್ಲಾಸ್‌ವೊಂದರಲ್ಲಿ ಅರ್ಧ ನೀರನ್ನು ತುಂಬಿಸಲಾಗಿತ್ತು. ಅದರ ಇನ್ನರ್ಧ ಖಾಲಿಯಿತ್ತು. ಇದರ ಎದುರಿಗೆ ಇಬ್ಬರನ್ನು ತಂದು ನಿಲ್ಲಿಸಿದಾಗ ಅದರಲ್ಲೊಬ್ಬ ಹೇಳಿದ: ಗ್ಲಾಸಿನ ನೀರು ಸ್ವಲ್ಪವೇ ಇದೆ, ಯಾವುದಕ್ಕೂ ಉಪಯೋಗಕ್ಕೆ ಬಾರದೆಂದು ನಕಾರಾತ್ಮಕವಾಗಿ ವಿಚಾರಿಸಿ ಹೇಳಿದ. ಇನ್ನೊಬ್ಬ ಇದರಲ್ಲಿ ಅಷ್ಟೋ, ಇಷ್ಟೋ ನೀರಿದೆ. ಜೀವ ಉಳಿಸುತ್ತೆ ಸಾಕು ಎಂದು ಸಕಾರಾತ್ಮಕವಾಗಿ ನಿರುಮ್ಮಳದಿಂದ ನುಡಿದ. ಅರ್ಥ ಇಷ್ಟೇ; ನಾವು ಹಾಗೂ ನಮ್ಮ

ವಿಚಾರಗಳು ಯಾವ ದಿಕ್ಕಿನತ್ತ ಸಾಗುತ್ತವೆಯೋ ನಮ್ಮಿಂದ ಅದೇ ಉತ್ತರ ಬರುತ್ತದೆ. ಅಂದರೆ ನಾವು ಸದಾಕಾಲ ಸಕಾರಾತ್ಮಕವಾಗಿ ವಿಚಾರಿಸಬೇಕೇ ಹೊರತು ನಕಾರಾತ್ಮಕವಾಗಿ ಅಲ್ಲ. ನಾವು ಸಕಾರಾತ್ಮಕವಾಗಿ ಯೋಚಿಸಿದರೆ ಫಲಿತಾಂಶವು ಸಹಿತ ಸಕಾರಾತ್ಮಕತೆಯಿಂದ ಕೂಡಿರುತ್ತದೆ. ಅದೇ ನಾವು ನಕಾರಾತ್ಮಕವಾಗಿ ಯೋಚಿಸುತ್ತಾ ಕುಳಿತರೆ ನಾವು ನಕಾರಾತ್ಮಕವಾಗಿಯೇ ಇರುತ್ತೇವೆ. ನಮ್ಮ ಮನಸ್ಸು, ಹೃದಯ, ಭಾವನೆ, ವಿಚಾರಗಳು ಹಾಗೂ ನಡೆ ನುಡಿಗಳ ತುಂಬೆಲ್ಲ ನಕಾರಾತ್ಮಕತೆಯೇ ತುಂಬಿ ತುಳುಕುತ್ತದೆ. ಮೊದಲು ನಮ್ಮಲ್ಲಿರುವ ಅಪಾರವಾದ ನಕಾರಾತ್ಮಕ ಅಂಶಗಳ ಬಗ್ಗೆ ಎದೆಗುಂದದೆ ಅವುಗಳನ್ನೇ ಸಕಾರಾತ್ಮಕವಾಗಿ ಬಳಸಿಕೊಂಡರೆ ಬದುಕಿನಲ್ಲಿ ಯಶಸ್ವಿ ವ್ಯಕ್ತಿಗಳಾಗಿ ಹೊರಹೊಮ್ಮಲು ಸಾಧ್ಯ.

ಸಕಾರಾತ್ಮಕ ಚಿಂತನೆಗಳು ನಮ್ಮಲ್ಲಿ ನೆಮ್ಮದಿ, ಸಂತೋಷ, ಆತ್ಮವಿಶ್ವಾಸ ಹಾಗೂ ಧೈರ್ಯವನ್ನು ನೀಡುತ್ತವೆ. ನಾವು ಸಕಾರಾತ್ಮಕತೆಯನ್ನು ಮೈಗೂಡಿಸಿಕೊಂಡರೆ 'ಬದುಕು ಅಂದ ಚೆಂದದ ನಂದನ ವನವಾಗುವುದು'. ಅದೇ ನಕಾರಾತ್ಮಕತೆಯನ್ನು ಅಳವಡಿಸಿಕೊಂಡರೆ ಅಂದ ಚೆಂದದ ಬದುಕು ಬೆಂಗಾಡಾಗುವುದು. ನಮ್ಮಲ್ಲಿ ನಕಾರಾತ್ಮಕತೆಯು ಕಾಳ್ಗಿಚ್ಚಿನಂತೆ ವ್ಯಾಪಕವಾಗಿ ಹಬ್ಬುವುದು ಸರ್ವೆಸಾಮಾನ್ಯ. ಆದರೆ ನಾವು ಸಕಾರಾತ್ಮಕತೆಗೆ ಒತ್ತು ನೀಡಿದಾಗಲೇ ನಮ್ಮ ಬದುಕು ಬಂಗಾರ. ನಮ್ಮ ದೇಹದಲ್ಲಿನ ನಿರುಪಯುಕ್ತ ತ್ಯಾಜ್ಯವನ್ನು ಸ್ವತಃ ನಾವೇ ಹೊರ ಹಾಕುವಂತೆ, ನಮ್ಮೊಳಗಿನ ನಕಾರಾತ್ಮಕತೆಯನ್ನು ಹೊರಹಾಕಿ ನಮ್ಮೊಳಗೆ ಸಕಾರಾತ್ಮಕತೆಯನ್ನು ತುಂಬಿಕೊಳ್ಳುವುದು ತುಂಬಾನೇ ಮುಖ್ಯ. 'ಬೆಳಗಾಗುತ್ತಲೇ ಒಂದು ಸಣ್ಣ ಸಕಾರಾತ್ಮಕ ಚಿಂತನೆ ಮಾಡಿದರೆ ಸಾಕು, ನಮ್ಮ ಇಡೀ ದಿನವೇ ಗುಣಾತ್ಮಕತೆಯಿಂದ ಕೂಡಿರುತ್ತದೆ' ಎನ್ನುವ ಮಾತು ಅರ್ಥಪೂರ್ಣ.

• ರಂಗನಾಥ್ ಗುಡಿಮನಿ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್,
ರಾಘವೇಂದ್ರ ಸ್ವಾಮಿ ಮಠದ ಹತ್ತಿರ,
ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ
ನಗರ, ಬೆಂಗಳೂರು-560098
ಇ-ಮೇಲ್: vishwavanimagazine@gmail.com

ಗೊಂಬೆಗಳೆಂದರೆ ಎಲ್ಲರಿಗೂ ಇಷ್ಟ; ಮೈಸೂರಿನ ಪರಂಪರೆಯಲ್ಲಿ, ಗೊಂಬೆಗಳನ್ನು ಜೋಡಿಸಿ, ಅವುಗಳಿಗೆ ಪೂಜೆ ಮಾಡುವುದೂ ಒಂದು ಸಂಭ್ರಮ. ದಸರಾ ಸಮಯದಲ್ಲಿ ಆಚರಣೆಗೊಳ್ಳುವ ಗೊಂಬೆಗಳ ಹಬ್ಬವು ನಮ್ಮ ನಾಡಿನ ಪರಂಪರೆಯ ಹೆಮ್ಮೆಯ ಅಂಶ ಎನಿಸಿದೆ.

ಗೊಂಬೆಗಳ ಮೆರವಣಿಗೆ!

• ಅಜಯ್

ಆ ಮನೆಯಲ್ಲಿದೆ ದಸರಾ ಅಂಬಾರಿ, ಪೊಲೀಸ್ ಬ್ಯಾಂಡ್ ತಂಡ, ಸುಮಾರು 140 ವರ್ಷಗಳಷ್ಟು ಹಳೆಯದಾದ 'ನೀಲಿ ಬಣ್ಣದ ಕೃಷ್ಣ' ಸೇರಿದಂತೆ ವಿವಿಧ ತರಾವರಿಯ ಪುಟ್ಟ ಹಾಗೂ ದೊಡ್ಡದಾದ ಆಕರ್ಷಕ ಬೊಂಬೆಗಳು. ಹೌದು ವಿಶ್ವವಿಖ್ಯಾತ ಮೈಸೂರು ದಸರಾದ ಪ್ರಮುಖ ಆಕರ್ಷಣೆಯಾದ ಜಂಬೂ ಸವಾರಿ ಒಳಗೊಂಡಂತೆ ರಾಜ ಮಹಾರಾಜರುಗಳು, ವಿಷ್ಣು, ಕೃಷ್ಣಲೀಲೆ, ಲಕ್ಷ್ಮಿ ವೆಂಕಟೇಶ್ವರ, ಶಿವಲಿಂಗ, ಸಾಯಿಬಾಬಾ, ರಾಘವೇಂದ್ರ ಸ್ವಾಮಿ, ಮದುವೆ ಮನೆಯ ಚಿತ್ರಣ, ಹಲವು ಮಾದರಿಯ ಬಗೆ ಬಗೆಯ ಖಾದ್ಯಗಳು, ಹಣ್ಣು-ಹಂಪಲುಗಳು ಮತ್ತು ಸಾವಿರಾರು ಬೊಂಬೆಗಳು, ಬೊಂಬೆ ಪ್ರಿಯರ ಮನ ಸೆಳೆಯುತ್ತಿದೆ.

ಮೈಸೂರು ನಗರವು ದಸರಾಕ್ಕೆ ಹೆಸರುವಾಸಿ; ಮೈಸೂರು ಅರಸರು ಈ ಹಬ್ಬವನ್ನು ವಿಜ್ರಂಭಣೆಯಿಂದ ಆಚರಿಸಿ, ಮೈಸೂರು ದಸರಾವನ್ನು ವಿಶ್ವಮಟ್ಟಕ್ಕೆ ಕೊಂಡೊಯ್ದಿದ್ದಾರೆ. ಇದೇ ನಗರದ ಗೋಕುಲಂ ಪಾರ್ಕ್ ರೋಡ್‌ನ ಮನೆ ನಂ.3046ರ ವೈಷ್ಣವಿ ನಿಲಯದಲ್ಲಿ ಈ ಬೊಂಬೆಗಳ ಜೋಡಣೆ ಮಾಡಲಾಗಿದ್ದು, ನೋಡಲು ಬಹು ಆಕರ್ಷಕವಾಗಿವೆ. 'ಈ ಬೊಂಬೆಗಳನ್ನು ಅಚ್ಚುಕಟ್ಟಾಗಿ ಜೋಡಿಸಲು ಸುಮಾರು 10 ದಿನಗಳು ಬೇಕಾಯಿತು. ಆದರೆ ಮತ್ತೆ ಅದನ್ನು ಹಾಗೆಯೇ ಸಂಪೂರ್ಣವಾಗಿ ತೆರವುಗೊಳಿಸಿ ಜೋಪಾನವಾಗಿ ಪ್ಯಾಕ್ ಮಾಡಿ ಇಡಲೂ ಕೂಡಾ ಅಷ್ಟೇ ದಿನಗಳು ಬೇಕಾಗುತ್ತದೆ' ಎನ್ನುತ್ತಾರೆ ಮನೆ ಮಾಲೀಕರಾದ ವೈದ್ಯನಾಥನ್.

ವೃತ್ತಿಯಲ್ಲಿ ಸಿ ಎ ಆಗಿರುವ ವೈದ್ಯನಾಥನ್ ಅವರ ಈ ಬೊಂಬೆ ಮನೆ ನಿರ್ಮಾಣಕ್ಕೆ ಮನೆಯವರೆಲ್ಲರೂ ಸಹಕರಿಸಿದ್ದಾರೆ.

ಇನ್ನೊಂದು ವಿಶೇಷವೆಂದರೆ, ಈ ಮನೆಯಲ್ಲಿ ಆಕರ್ಷಕವಾಗಿ ಜೋಡಿಸಿರುವ ಗೊಂಬೆಗಳನ್ನು ವೀಕ್ಷಿಸಲು ಸಾರ್ವಜನಿಕರೂ ಬರಬಹುದು! ನಿಗದಿತ ಸಮಯದಲ್ಲಿ ಮೈಸೂರಿನ ಸಾರ್ವಜನಿಕರು ಮತ್ತು ಜನಸಾಮಾನ್ಯರು ಇಲ್ಲಿನ ಸಾವಿರಾರು ಗೊಂಬೆಗಳನ್ನು ನೋಡಲು ಬರಬಹುದು ಮತ್ತು ಆ ರೀತಿ ಪ್ರತಿ ವರ್ಷ ಹಲವರು ಬಂದು, ಗೊಂಬೆಗಳನ್ನು ನೋಡಿ, ನಮ್ಮ ಪರಂಪರೆಯ ಪರಿಚಯವನ್ನು ಮಾಡಿಕೊಳ್ಳುತ್ತಿದ್ದಾರೆ. ಮನೆಯೊಂದರಲ್ಲಿ ಜೋಡಿಸಿರುವ ಗೊಂಬೆಗಳನ್ನು ವೀಕ್ಷಿಸಲು ಎಲ್ಲರಿಗೂ ಅವಕಾಶ ಮಾಡಿಕೊಟ್ಟಿರುವುದು ನಿಜಕ್ಕೂ ವಿಶೇಷ ಎನಿಸಿದೆ.

'ಈ ಹಿಂದಿನಿಂದಲೂ ಅಂದರೇ ನಮ್ಮ ತಾತ, ಮುತ್ತಾರ ಕಾಲದಿಂದಲೂ ಪ್ರತಿ ವರ್ಷ ದಸರೆಯ ಸಂದರ್ಭದಲ್ಲಿ ಈ ಬೊಂಬೆ

ಮನೆ ನಿರ್ಮಾಣ ಮಾಡಿ, ದಿನಂಪ್ರತಿ ಪೂಜೆ ಸಲ್ಲಿಸುತ್ತೇವೆ. ನವರಾತ್ರಿ ಪ್ರಾರಂಭವಾದ ದಿನದಿಂದ ವಿಜಯದಶಮಿ ದಿನದವರೆಗೂ ಬೊಂಬೆ ಕೂರಿಸಲಿದ್ದು, 10 ದಿನದ ಬಳಿಕ ಮತ್ತೆ ಒಂದೊಂದು ಬೊಂಬೆಗಳನ್ನು ಜೋಪಾನವಾಗಿ ಸಂರಕ್ಷಿಸಿ ಇಡಲಾಗುತ್ತದೆ' ಎನ್ನುತ್ತಾರೆ ವೈದ್ಯನಾಥನ್ ಅವರು.

140 ವರ್ಷ ಹಳೆಯ ಶ್ರೀಕೃಷ್ಣ

ಸುಮಾರು 10 ರಿಂದ 15 ಸಾಲುಗಳಲ್ಲಿ ವಿವಿಧ ಮಾದರಿಯ ಬೊಂಬೆಗಳನ್ನು ಜೋಡಿಸಲಾಗಿದ್ದು, ಮೊದಲನೇ ಸಾಲಿನಲ್ಲಿ ಈ ಮನೆಯವರ ಪೂರ್ವಜರ ಕಾಲದಲ್ಲಿನ ಬೊಂಬೆಗಳಿವೆ. ಅದರಲ್ಲಿ ಪ್ರಮುಖವಾದದ್ದು ಸುಮಾರು 140 ವರ್ಷಗಳಷ್ಟು ಹಳೆಯದಾದ ಶ್ರೀ ಕೃಷ್ಣನ ವಿಗ್ರಹ. ಇವರ ಮನೆಯಲ್ಲಿ ಪ್ರತಿ ವರ್ಷ ಬೇರೆ ಬೇರೆ ರೀತಿಯ ಬೊಂಬೆಗಳನ್ನು ಖರೀದಿಸಿ, ಕೂರಿಸಲಾಗುತ್ತದೆ.

ಸುಮಾರು 10 ದಿನಗಳ ಕಾಲ ಬೊಂಬೆಗಳನ್ನು ಕೂರಿಸಿ ಪೂಜೆ ಮಾಡಲಾಗುತ್ತದೆ. ಮೈಸೂರಿನ ಅರಮನೆಯ ವಿಭಿನ್ನ ಆಚರಣೆಗಳನ್ನು ಬಿಂಬಿಸುವ ಗೊಂಬೆಗಳ ಜತೆಯಲ್ಲೇ ವಿವಿಧ ರೀತಿಯ, ವಿವಿಧ ಅಲಂಕಾರದ ಸಾವಿರಾರು ಬೊಂಬೆಗಳು ಇಲ್ಲಿ ಪ್ರಮುಖ ಆಕರ್ಷಣೆಯಾಗಿದೆ. ನಮ್ಮ ಪೂರ್ವಜರ ಕಾಲದಿಂದಲೂ ಬಂದಿರುವ ಈ ಪದ್ಧತಿಯನ್ನು ನಾವು ಈಗಲೂ ಮುಂದುವರೆಸಿಕೊಂಡು ಬಂದಿದ್ದೇವೆ. ಜತೆಗೆ ಈ ಬೊಂಬೆಗಳನ್ನು ಸಾರ್ವಜನಿಕರೂ ಕೂಡ ವೀಕ್ಷಿಸಲು ಅವಕಾಶ ಮಾಡಿಕೊಡಲಾಗಿದೆ; ಆ ಮೂಲಕ ಮೈಸೂರಿನ ಪರಂಪರೆಯನ್ನು ಜನಸಾಮಾನ್ಯರಿಗೆ ಪೂಚಯಿಸುವ ಪ್ರಯತ್ನವನ್ನು ಮಾಡಲಾಗಿದೆ.

-ವೈದ್ಯನಾಥನ್ ಗೊಂಬೆ ಕೂರಿಸಿದ ಮನೆಯವರು

ಬೊಂಬೆ ಕೂರಿಸುವ ಪದ್ಧತಿ ಪಾರಂಪರಿಕವಾಗಿದ್ದು, ಗತಕಾಲದ ವೈಭವಗಳನ್ನು ಮತ್ತೆ ನೆನಪಿಸುತ್ತದೆ. ಇಂದಿನ ಯುವ ಪೀಳಿಗೆ ಈ ಬಗ್ಗೆ ಹೆಚ್ಚಿನ ಆಸಕ್ತಿ, ಒಲವು ತೋರಬೇಕೆಂದ ಅವರು, ಪ್ರತಿ ಮನೆ-ಮನೆಗಳಲ್ಲೂ ಬೊಂಬೆಗಳನ್ನು ಕೂರಿಸಿ ನಮ್ಮ ಪರಂಪರೆಯನ್ನು ಇತರರಿಗೂ ತಿಳಿಸಿಕೊಡಬೇಕಿದೆ ಎಂದರು.

ಇವರ ಹಿರಿಯರು ಸಂಗ್ರಹಿಸಿದ ಗೊಂಬೆಗಳನ್ನು ಸಹ ಜೋಪಾನವಾಗಿ ಕಾಪಿಟ್ಟು, ಈಗ ಪ್ರದರ್ಶಿಸಲಾಗುತ್ತಿದೆ. ಇದೇ ರೀತಿ, ಮೈಸೂರು ಸೀಮೆಯ ಸಾವಿರಾರು ಮನೆಗಳಲ್ಲಿ ಗೊಂಬೆಗಳ ಹಬ್ಬವನ್ನು ಶ್ರದ್ಧೆಯಿಂದ ಆಚರಿಸುವುದು ಪದ್ಧತಿ; ನವರಾತ್ರಿಯ ಸಮಯದಲ್ಲಿ ಮನೆ ಮನೆಗಳಲ್ಲಿ ಗೊಂಬೆ ಕೂರಿಸಿ, ಅಕ್ಕ ಪಕ್ಕದವರನ್ನು ಕರೆದು, ಗೊಂಬೆಗಳಿಗೆ ಪೂಜೆ ಮಾಡಿ, ಸಂಭ್ರಮವನ್ನು ಹಂಚಿಕೊಳ್ಳುವುದು ಒಂದು ಉತ್ತಮ ಪರಂಪರೆ ಎನಿಸಿದೆ. ಈ ಪರಂಪರೆಯನ್ನು ಇಂದಿನ ತಲೆಮಾರು ಮುಂದುವರಿಸಿಕೊಂಡು ಹೋಗುತ್ತಿರುವುದು ನಿಜಕ್ಕೂ

ತುಳಸಿಯ ಮಹತ್ವ

• ಡಾ. ಸುಧಾಕರ ಜಿ. ಲಕ್ಕವಳ್ಳಿ

ತುಳಸಿ ರೋಗಾಣುಗಳನ್ನು ಹೊಡೆದೋಡಿಸುವ ಶಿಲೀಂಧ್ರ ನಾಶಕವಾಗಿದ್ದು ಪ್ರತಿಜೀವಕವಾಗಿ ಕಾರ್ಯ ನಿರ್ವಹಿಸುವುದರೊಂದಿಗೆ ವಾತಾವರಣವನ್ನು ಆರೋಗ್ಯಪೂರ್ಣವಾಗಿರಿಸುತ್ತದೆ. ಇದರಲ್ಲಿನ ವಿಟಮಿನ್ ಎ, ಸಿ ಜೀವಸತ್ವಗಳು ಶೀಘ್ರ ವಯಸ್ಸಾಗುವಿಕೆ ತಡೆದು ರೋಗ ನಿರೋಧಕ ಶಕ್ತಿಯನ್ನು ವೃದ್ಧಿಸುತ್ತದೆ.

- ನಿತ್ಯ ಬೆಳಿಗ್ಗೆ 5 ತುಳಸಿ ದಳಗಳನ್ನು ನೀರಿನೊಂದಿಗೆ ಖಾಲಿ ಹೊಟ್ಟೆಗೆ ಸೇವಿಸಿದರೆ ಬುದ್ಧಿ ಮತ್ತು ಸ್ಮರಣಶಕ್ತಿ ಹೆಚ್ಚುತ್ತದೆ.
- ತುಳಸಿ ರಸದ ಜೊತೆಗೆ ಅರಿಶಿನ ಮತ್ತು ಉಪ್ಪನ್ನು ಸೇರಿಸಿ ನಿಯಮಿತ ಬಾಯಿ ಮುಕ್ಕಳಿಕೆ ಗಂಟಲು, ಬಾಯಿ ಮತ್ತು ಹಲ್ಲಿನ ಸಮಸ್ಯೆಗಳಿಗೆ ಹಾಗೂ ಬಾಯಿಯ ದುರ್ವಾಸನೆಗೆ ಪರಿಹಾರವಾಗಿದೆ.
- 2-4 ತುಳಸಿ ಎಲೆಗಳ ಜೊತೆಗೆ 2-3 ಕಾಳುಮೆಣಸು ಸೇರಿಸಿ ಜಜ್ಜಿ ಮಾಡಿದ ಗುಳಿಗೆ ಹಲ್ಲಿನ ನಡುವೆ ಇಟ್ಟರೆ ನೋವು ಕಡಿಮೆಯಾಗುವುದು.
- ತುಳಸಿ ದಳಗಳನ್ನು ಕುದಿಸಿ ಕುಡಿಯುವುದರಿಂದ ಜ್ವರ ಮತ್ತು ಶೀತ ಕಡಿಮೆಯಾಗುವುದು.
- 10 ಮಿಲಿ ತುಳಸಿ ರಸಕ್ಕೆ 2 ರಿಂದ 3 ಗ್ರಾಂ ಕರಿಮೆಣಸಿನ ಪುಡಿ ಸೇರಿಸಿ ಬಿಸಿನೀರಿನಲ್ಲಿ ಸೇವಿಸಿದರೆ ಕೆಮ್ಮು ಕಡಿಮೆಯಾಗುವುದು.
- ತುಳಸಿ ಚಹಾವು ಟೈಪ್-2 ಮಧುಮೇಹಿಗಳಿಗೆ ಅನುಕೂಲ ಎನಿಸುವ ಗಿಡಮೂಲಿಕೆ ಚಹಾಗಳಲ್ಲೊಂದು.
- ನೆತ್ತಿಯ ತುರಿಕೆ ಕಡಿಮೆಗೊಳಿಸಿ ಕೂದಲು ಉದುರುವಿಕೆಯನ್ನು ನಿಯಂತ್ರಿಸಲು ಇದರ ಪೇಸ್ಟ್ ಬಳಸಬಹುದು.
- ತುಳಸಿ ಬೀಜಗಳನ್ನು ಅಕ್ಕಿ ತೊಳೆದ ನೀರಿನಲ್ಲಿ ಅರೆದು ನಿಯಮಿತವಾಗಿ ಸೇವಿಸುವುದರಿಂದ ಕಟ್ಟಿಕೊಂಡಿರುವ ಮೂತ್ರವಿಸರ್ಜನೆ ಸರಾಗವಾಗುತ್ತದೆ.

- 3 ರಿಂದ 4 ತುಳಸಿ ಎಲೆಗಳನ್ನು ಪ್ರತಿ ದಿನ ಅಗೆದು ತಿಂದು ನೀರು ಕುಡಿಯುವುದರಿಂದ ಮೂತ್ರ ಪಿಂಡದ ಕಲ್ಲು ನಿಧಾನವಾಗಿ ಕರಗಲು ಸಹಕಾರಿ.
- ಇದು ಪಿತ್ತಜನಕಾಂಗದ ಆರೋಗ್ಯವನ್ನು ಹೆಚ್ಚಿಸಿ ಜೀರ್ಣಾಂಗ ವ್ಯವಸ್ಥೆಯನ್ನು ಸುಧಾರಿಸುತ್ತದೆ.
- ಬಾಯಿ, ಹೊಟ್ಟೆ ಹುಣ್ಣು (ಅಲ್ಸರ್)ಗೆ ತುಳಸಿ ಎಲೆಗಳ ಸೇವನೆ ಪರಿಣಾಮಕಾರಿ.
- ಅಂದಾಜು 10 ರಿಂದ 20 ಮಿಲಿ ತುಳಸಿ ರಸವನ್ನು ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಸೇವಿಸಿ ಮತ್ತು ಮೈಗೆ ಹಚ್ಚಿ ಉಜ್ಜಿಕೊಳ್ಳುವುದರಿಂದ ತುರಿಕೆ, ಉರಿ ಮತ್ತು ದದ್ದುಗಳು ಕಡಿಮೆಯಾಗುತ್ತವೆ. (ಬಳಕೆಯ ಪ್ರಮಾಣದ ಬಗ್ಗೆ ವೈದ್ಯರಲ್ಲಿ ಸಲಹೆ ಪಡೆಯುವುದು ಸೂಕ್ತ.)

ವಯಸ್ಸಾದ ಅಜ್ಜಿಯೊಬ್ಬರು ವರಾಂಡದಲ್ಲಿ ಹೂವು ಕೀಳುವುದನ್ನು ನೋಡಿ ಮನೆ ಮಾಲೀಕನಿಗೆ ಕೋಪ ಬಂತು. ಅವರ ವಯಸ್ಸಿಗೆ ಮರ್ಯಾದೆ ಕೊಟ್ಟು ಹೇಳಿದರು 'ಅಜ್ಜಿ ಈ ವಯಸ್ಸಾದ ಕಾಲಕ್ಕೆ ಹೂವು ತೊಗೊಂಡು ಏನ ಮಾಡತ್ತೀಯಾ?' ಅದಕ್ಕೆ ಅವಳು 'ಹೌದಪ್ಪಾ, ನನಗೇನೋ ವಯಸ್ಸಾಗಿದೆ ಆದ್ರೆ, ಆ ದೇವರಿಗೆ ಆಗಿಲ್ಲವಲ್ಲ!' ಎಂದು ಹೇಳುತ್ತಾ ಹೂವುವನ್ನು ಬುಟ್ಟಿಯಲ್ಲಿ ಹಾಕಿಕೊಂಡು ನಡೆದಳು.

• ಮಾಲತೇಶ ಪಾಟೀಲ

ಸೇಡಿನ ಬೆಂಕಿಯಲ್ಲಿ ನಾಶವಾದ ಸಂತತಿಗಳು

ಒಂದು ಸಲ, ಮಹಾರಾಜ ಕಾರ್ತವೀರ್ಯಾರ್ಜುನ, ತನ್ನ ದೊಡ್ಡ ಸೈನ್ಯದೊಡನೆ ಜಮದಗ್ನಿಗಳ ಆಶ್ರಮಕ್ಕೆ ಬಂದ. ಆಶ್ರಮದ ವಾತಾವರಣವನ್ನು ನೋಡಿ ಅವನಿಗೆ ಬಹಳ ಸಂತೋಷವಾಯಿತು. ಜಮದಗ್ನಿ ಅವನನ್ನೂ ಅವನ ಪರಿವಾರವನ್ನೂ ಆದರದಿಂದ ಸ್ವಾಗತಿಸಿದ. 'ಎಲ್ಲರೂ ದಣಿದಿರುವಂತೆ ಕಾಣುತ್ತದೆ, ಸ್ವಲ್ಪ ಸಮಯ ವಿಶ್ರಮಿಸಿಕೊಳ್ಳಿ, ಅಷ್ಟರಲ್ಲಿ ಊಟ ತಯಾರಾಗುತ್ತದೆ' ಎಂದು ಹೇಳಿದ.

'ಮುನಿಗಳೇ ನಾವು ಏನೂ ಮುನ್ಸೂಚನೆ ಕೊಡದೆ, ಬಂದಿದ್ದೇವೆ, ಇಷ್ಟೊಂದು ಜನಕ್ಕೆ ನೀವು ಹೇಗೆ ಊಟ ಹಾಕುವಿರಿ?' ಎಂದು ಕೇಳಿದ ರಾಜ.

'ಅದರ ಬಗ್ಗೆ ನೀವು ಚಿಂತಿಸುವ ಅಗತ್ಯವಿಲ್ಲ, ನೀವೆಲ್ಲಾ ವಿಶ್ರಮಿಸಿಕೊಳ್ಳಿ, ಸ್ವಲ್ಪ ಸಮಯದಲ್ಲಿ ಊಟ ತಯಾರಾಗುತ್ತದೆ' ಎಂದು ಹೇಳಿದ ಮುನಿ.

ಜಮದಗ್ನಿಗೆ ಇಂದ್ರನು ಕಾಮಧೇನು ಎನ್ನುವ ಹಸುವನ್ನು ಕಾಣಿಕೆಯಾಗಿ ಕೊಟ್ಟಿದ್ದ. ಆ ಹಸುವಿನ ಬಳಿ, 'ಓ ತಾಯಿ, ಕಾಮಧೇನು, ನನ್ನ ಅತಿಥಿಗಳಿಗೆಲ್ಲಾ ಹಸಿದಿದ್ದಾರೆ,

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಅವರಿಗೆ ಔತಣವನ್ನು ಒದಗಿಸಬೇಕೆಂದು ಪ್ರಾರ್ಥಿಸುತ್ತೇನೆ' ಎಂದು ಜಮದಗ್ನಿ ಬೇಡಿಕೊಂಡ. ತಕ್ಷಣವೇ ಕಾಮಧೇನು ಉತ್ತಮ ಭೋಜನವನ್ನು ಕರುಣಿಸಿತು. ರಾಜ ಹಾಗೂ ಅವನ ಪರಿವಾರದವರು ತೃಪ್ತಿಯಿಂದ ಊಟ ಮಾಡಿದರು.

ಕಾರ್ತವೀರ್ಯನಿಗೆ, ಕಾಮಧೇನು ಹಸುವನ್ನು ತಾನು ಪಡೆಯಬೇಕೆಂದು ಅನಿಸಿತು. 'ಮಹಾಮುನಿಗಳೆ, ಈ ಕಾಮಧೇನು ನನ್ನ ಅರಮನೆಯಲ್ಲಿದ್ದರೆ ಪ್ರತಿಯೊಬ್ಬರಿಗೂ ಪ್ರಯೋಜನವಾಗುತ್ತದೆ, ದಯವಿಟ್ಟು ನನಗೆ ಈ ಹಸುವನ್ನು ಕೊಟ್ಟು ಬಿಡಿ' ಎಂದು ಕೇಳಿದ.

'ಮಹಾರಾಜ, ಇಂದ್ರನು ನನ್ನ ಆಶ್ರಮಕ್ಕೆ ಇದನ್ನು ಉಡುಗೊರೆಯಾಗಿ ಕೊಟ್ಟಿದ್ದಾನೆ, ಇದನ್ನು ನಾನು ಬೇರೆಯವರಿಗೆ ಕೊಡುವುದು ಸಾಧ್ಯವಿಲ್ಲ' ಎಂದು ಹೇಳಿದರು ಮುನಿಗಳು. ರಾಜನ ಮನಸ್ಸು ಕಾಮಧೇನುವಿನ ಮೇಲೇ ಇತ್ತು. ರಾತ್ರಿ ಸಮಯದಲ್ಲಿ ಎಲ್ಲರೂ ಮಲಗಿದ್ದಾಗ ಕಾಮಧೇನುವನ್ನು ಕದ್ದುಕೊಂಡು ಹೊರಟು ಹೋದ.

ಆ ಸಮಯದಲ್ಲಿ, ಪರಶುರಾಮ ಆಶ್ರಮದಲ್ಲಿ ಇರಲಿಲ್ಲ, ಕಠಿಣ ತಪಸ್ಸಿನಲ್ಲಿ ತೊಡಗಿದ್ದನು. ಅವನ ತಪಸ್ಸಿಗೆ ಮೆಚ್ಚಿ ಶಿವನು ಅವನಿಗೆ ಪ್ರತ್ಯಕ್ಷನಾಗಿ, ಅದ್ಭುತವಾದ ಒಂದು ಕೊಡಲಿಯನ್ನು ಕೊಟ್ಟನು. ನಂತರ ತನ್ನ ಆಶ್ರಮಕ್ಕೆ ಹಿಂತಿರುಗಿದಾಗ, ಕಾರ್ತವೀರ್ಯ, ಕಾಮಧೇನುವನ್ನು ಕದ್ದುಕೊಂಡು ಹೋದ ವಿಷಯ ಅವನಿಗೆ ತಿಳಿಯಿತು.

ಪರಶುರಾಮ ಕೋಪಿಷ್ಟನಾಗಿ, ಅವನ ಸೊಕ್ಕನ್ನು ಮುರಿಯಬೇಕೆಂದು, ತಕ್ಷಣ ಅವನಿದ್ದಲ್ಲಿಗೆ ಹೋದನು. 'ಏ, ಕಾರ್ತವೀರ್ಯ, ಕೃತಘ್ನ, ನೀಚ, ನನ್ನ ತಂದೆ ನಿನಗೂ ನಿನ್ನ ಪರಿವಾರಕ್ಕೂ ಪ್ರೀತಿಯಿಂದ ಆದರದಿಂದ ಊಟ ಹಾಕಿದ್ದಕ್ಕೆ, ಅವರಿಗೇ ದ್ರೋಹ ಬಗೆದು, ಕಾಮಧೇನುವನ್ನು ಕದ್ದು ತಂದೆಯಾ? ನನ್ನ ಪರಶು, ನಿನ್ನ ತಲೆಯನ್ನು ತೆಗೆಯಲಿ' ಎಂದು ಕೊಡಲಿಯಿಂದ ಅವನ ತಲೆಯನ್ನು ಕತ್ತರಿಸಿದನು.

ತಮ್ಮ ತಂದೆಯ ಮರಣದಿಂದ ಕೆರಳಿದ ಕಾರ್ತವೀರ್ಯನ ಮಕ್ಕಳು, ಸೇಡು ತೀರಿಸಿಕೊಳ್ಳಲು ಕಾಯುತ್ತಿದ್ದರು. ಪರಶುರಾಮ ಇಲ್ಲದ ಸಮಯವನ್ನು ನೋಡಿ, ತಮ್ಮ ಸೈನ್ಯ ಸಮೇತ ಜಮದಗ್ನಿ ಆಶ್ರಮದ ಮೇಲೆ ದಾಳಿ ಇಟ್ಟರು. ಜಮದಗ್ನಿಯನ್ನು ಕೊಂದು ಹಿಂತಿರುಗಿದರು.

ಹಿಂತಿರುಗಿ ಬಂದ ನಂತರ ತನ್ನ ತಂದೆಯ ಹತ್ಯೆಯ ವಿಷಯ ತಿಳಿದ ಪರಶುರಾಮ, ಕೋಪದಿಂದ ಕಾರ್ತವೀರ್ಯನ ಸಂತತಿಯನ್ನು ಮಾತ್ರವಲ್ಲದೆ, ಇಪ್ಪತ್ತೊಂದು ಬಾರಿ ಜಗತ್ತನೆಲ್ಲಾ ಸುತ್ತಿ ಇಡೀ ಕ್ಷತ್ರಿಯರನ್ನೆಲ್ಲಾ ಸಂಹಾರ ಮಾಡಿದನು. ದುರಹಂಕಾರದಿಂದ ಮೆರೆಯುತ್ತಿದ್ದ ಕ್ಷತ್ರಿಯ ರಾಜರೆಲ್ಲ ಇವನಿಂದ ಸಂಹಾರವಾದರು. ಅವರೆಲ್ಲರ ರಕ್ತದಿಂದ ಪಿತೃತರ್ಪಣ ಕೊಟ್ಟನು.

ಆಗಷ್ಟೇ, ವಿವಾಹ ಮಾಡಿಕೊಂಡು ಹಿಂದಿರುಗುತ್ತಿದ್ದ, ಶ್ರೀರಾಮನನ್ನು ನೋಡಿ, ಅವನಿಗೆ ಶರಣಾಗಿ, ವೈಷ್ಣವ ಧನಸನ್ನು ಅವನಿಗೆ ಧಾರೆಯೆರದು, ಮಹೇಂದ್ರ ಪರ್ವತಕ್ಕೆ ಹೊರಡಲು ತೀರ್ಮಾನಿಸಿ, 'ಹೇ ರಾಮ, ನನ್ನೆಲ್ಲಾ ತಪಶಕ್ತಿ ನಿನ್ನ ದೇಹವನ್ನು ಸೇರಲಿ, ಅದರಿಂದ ನೀನು ಜಗತ್ತಿಗೆ ಕಲ್ಯಾಣವನ್ನುಂಟುಮಾಡು' ಎಂದು ಹೇಳಿ ತಪಸ್ಸಿಗೆ ಹೊರಟು ಹೋದನು.

ನಮಗೆ ಉಪಕಾರ ಮಾಡಿದವರಿಗೆ ಅಪಕಾರ ಮಾಡಿದರೆ, ಇಂದಲ್ಲ ನಾಳೆ ಅದರ ಪ್ರತಿಫಲ ನಾವು ಅನುಭವಿಸಲೇಬೇಕು. ಅಷ್ಟೇ ಅಲ್ಲ ಮತ್ತೊಬ್ಬರು ನಮಗೆ ಮಾಡಿದ ತೊಂದರೆಗೆ ಕೋಪವನ್ನು ಹಿಡಿತಕ್ಕೆ ತೆಗೆದುಕೊಳ್ಳದೆ ಪ್ರತಿಕ್ರಿಯಿಸಿದರೆ, ಅದಕ್ಕೂ ತಕ್ಕ ಬೆಲೆಯನ್ನು ತರಬೇಕಾಗುತ್ತದೆ ಎಂದು ಮೇಲಿನ ಕಥೆಯಿಂದ ತಿಳಿಯಬಹುದು.

2 ದೇಶಗಳ ನಡುವಿನ ಜಲಪಾತ

• ಕಮಲಾಕರ ಕೆ ಆರ್ ತಲವಾಟ

ನಯಾಗರ ಜಲಪಾತವು ಅಮೆರಿಕ ಮತ್ತು ಕೆನಡಾ ದೇಶಗಳ ಮಧ್ಯದಲ್ಲಿದೆ. ಮಹಾ ಸರೋವರಗಳಾದ ಲೇಕ್ ಸುಪೀರಿಯರ್, ಲೇಕ್ ಮಿಚಿಗನ್, ಲೇಕ್ ಹ್ಯೂರನಾ ಮತ್ತು ಲೇಕ್ ಈರಿ ಸರೋವರಗಳ ನೀರು ಹರಿದು ನಯಾಗರ ನದಿಯನ್ನು ಸೇರಿ ಮುಂದೆ ಇದೇ ನದಿ ನಯಾಗರ ಜಲಪಾತವನ್ನು ಸೃಷ್ಟಿಸಿದೆ. ನಯಾಗರ ಮೂರು ಜಲಪಾತಗಳನ್ನು ಹೊಂದಿದೆ.

ಅಮೆರಿಕನ್ ಜಲಪಾತ

ಬ್ರೈಡಲ್ ವೀಲ್ ಜಲಪಾತ (ಅತಿ ಚಿಕ್ಕದು), ಕೆನಡಿಯನ್ ಅಥವಾ ಹಾರ್ಸ್ ಶೂ ಜಲಪಾತ (ಗಾತ್ರದಲ್ಲಿ ದೊಡ್ಡದು)

ಮೊದಲು ಎರಡು ಜಲಪಾತಗಳು ಅಮೇರಿಕಾದ ನ್ಯೂಯಾರ್ಕ್ ರಾಜ್ಯಕ್ಕೆ ಸೇರಿದರೆ, ಮೂರನೆಯದು ಕೆನಡಾದ ಒಂಟಾರಿಯೋ ರಾಜ್ಯಕ್ಕೆ ಸೇರಿದೆ. ಮುಂದೆ ಈ ಜಲಪಾತದ ನೀರು ಒಂಟಾರಿಯೋ ಸರೋವರಕ್ಕೆ ಹರಿದು ಅಲ್ಲಿಂದ ಅಂಟ್ಲಾಂಟಿಕ್ ಸಾಗರವನ್ನು ಸೇರುತ್ತದೆ.

ನಯಾಗರ ಜಲಪಾತವನ್ನು ಕೆನಡಾ ಮತ್ತು ಅಮೆರಿಕ ಎರಡೂ ಕಡೆಗಳಿಂದ ನೋಡಿ ಆನಂದಿಸಬಹುದು. ನಾವು ಹೋಗಿದ್ದು ಟೋರೆಂಟೊದ ವಿಟ್ ಬಿ ಎಂಬ ಪ್ರದೇಶದಿಂದ ಕೆನಡಾ ಕಡೆಯಿಂದ ವೀಕ್ಷಿಸುವ ಜಾಗಕ್ಕೆ. ನಯಾಗರಕ್ಕೆ ಹೋಗುವ ದಾರಿಯಲ್ಲಿ 'ನಯಾಗರ ಆನ್ ದ ಲೇಕ್' ಎಂಬ ಪಟ್ಟಣಕ್ಕೆ ಭೇಟಿ ಇತ್ತಿದ್ದು ಕೂಡ ಮರೆಯಲಾಗದ ಅನುಭವ. ಅಲ್ಲಿಯ ಕ್ವೀನ್ಸ್ ಸ್ಟ್ರೀಟ್‌ನಲ್ಲಿ ಓಡಾಡುವುದು ಮನಸ್ಸಿಗೆ ಆಹ್ಲಾದವನ್ನುಂಟು ಮಾಡುತ್ತದೆ. ಚೊಕ್ಕಟವಾದ ರಸ್ತೆ ಎರಡೂ ಬದಿಯಲ್ಲಿ ಬಣ್ಣಬಣ್ಣದ ಹೂಗಳಿಂದ ಕಂಗೊಳಿಸುವ ಮರಗಳು, 19ನೇ ಶತಮಾನದ ಕಟ್ಟಡಗಳು, ಕ್ಲಾಕ್ ಟಾವರ್, ಕುದುರೆ ಗಾಡಿ ಸವಾರಿ ಎಲ್ಲವೂ ಇಲ್ಲಿದೆ. ಇಲ್ಲಿಂದ ನಯಾಗರ ಜಲಪಾತಕ್ಕೆ 25 ಕಿಮೀ. ದೂರ.

ನಯಾಗರ ಜಲಪಾತವನ್ನು ನೋಡಲು ಬೇಸಿಗೆ ಕಾಲವಾದ ಮೇಯಿಂದ ಅಕ್ಟೋಬರ್ ಸೂಕ್ತ. ಪರಿಸರ ಪ್ರಿಯರಿಗೆ, ಸಾಹಸ ಪ್ರವೃತ್ತಿಯವರಿಗೆ, ಕ್ಯಾಸಿನೋದಲ್ಲಿ ಆಟವಾಡುತ್ತಾ ಹೊತ್ತು ಕಳೆಯುವವರಿಗೆ ಹೇಳಿಮಾಡಿಸಿದ ಜಾಗ ನಯಾಗರ. ಕೆನಡಾ ಕಡೆಯಿಂದ ಮೂರೂ ಜಲಪಾತಗಳ ಪನೋರಮಾ ನೋಟ (ವಿಶಾಲ ದೃಶ್ಯ) ಕಾಣುವುದರಿಂದ ಕೆನಡಾ ಕಡೆಯಿಂದ ನೋಡುವುದು ಹೆಚ್ಚು ಖುಷಿಕೊಡುತ್ತದೆ. ಹಾಗೆ ನೋಡಿದರೆ ನಯಾಗರ ಅತೀ ಎತ್ತರದ

ಜಲಪಾತವಲ್ಲ. ಕೆನಡಿಯನ್ ಜಲಪಾತದ ಎತ್ತರ ಸುಮಾರು 187 ಅಡಿಗಳು ಮಾತ್ರ. (ಜೋಗ ಜಲಪಾತದ ಎತ್ತರ ಸುಮಾರು 830 ಅಡಿ). ಆದರೆ ಅದರ ಸೊಬಗಿರುವುದು ಜಲಪಾತದ ಅಗಲ ಮತ್ತು ನಿರಂತರವಾಗಿ ಬೀಳುವ ನೀರಿನ ರಾಶಿಯಿಂದಾಗಿ.

ನಯಾಗರ ಪಾರ್ಕ್ ವೇ ಎಂಬ ರಸ್ತೆಯಲ್ಲಿ ನಡೆದಾಡುತ್ತಾ ಆಸ್ವಾದಿಸುವಾಗ ನಯಾಗರ ಜಲಪಾತ ಶ್ವೇತವರ್ಣದ ಸೀರೆ ತೊಟ್ಟಂತೆ ಕಂಗೊಳಿಸುತ್ತಾಳೆ. ದೂರದಿಂದ ನೋಡುವಾಗ ಹಾಲಿನ ಹೊಳೆ ಸುರಿದಂತೆ ಭಾಸವಾಗುತ್ತದೆ. ಹಲವು ಕೋನಗಳಲ್ಲಿ ಫೋಟೋ ಸೆಲ್ಫಿ ತೆಗೆಯುತ್ತಾ ಜಲಪಾತಗಳನ್ನು ನೋಡುತ್ತಾ ನಿಂತರೆ ಹೊತ್ತು ಹೋಗುವುದೇ ತಿಳಿಯುವುದಿಲ್ಲ. ಸೂರ್ಯ ಮುಳುಗಿದರೂ ತೊಂದರೆಯಿಲ್ಲ. ಯಾಕೆಂದರೆ ಕತ್ತಲಾದ ಸ್ವಲ್ಪ ಹೊತ್ತಿನಲ್ಲೆ ಬಣ್ಣಬಣ್ಣದ ಲೈಟುಗಳನ್ನು ಜಲಪಾತ ಮೇಲೆ ಬಿಡುತ್ತಾರೆ. ಇದನ್ನು ನೋಡಲೆಂದೇ ಸಾವಿರಾರು ಜನ ಕಾದಿರುತ್ತಾರೆ. ರಾತ್ರಿ 10 ಗಂಟೆಗೆ ಸಿಡಿಸುವ ಪಟಾಕಿಗಳ ದೃಶ್ಯ ಇನ್ನೂ ಚೆಂದ. ಇಲ್ಲಿಂದ ಜಲಪಾತವನ್ನು ನೋಡಲು ಯಾವುದೇ ಶುಲ್ಕವಿಲ್ಲ.

ಜರ್ನಿ ಬಿಹೈಂಡ್ ದ ಫಾಲ್ಸ್

ಇದು ಕೆನಡಿಯನ್ ಜಲಪಾತ ಸುರಿಯುವ ನೀರನ್ನು ಅದರ ಹಿಂದಿನಿಂದ ಮತ್ತು ಕೆಳಗಿನಿಂದ ನೋಡುವ ಸ್ಥಳ. ಪ್ಲಾಸ್ಟಿಕ್ ರೇನ್ ಕೋಟ್ ಧರಿಸಿ ಎಲಿವೇಟರಿನಲ್ಲಿ 125 ಅಡಿ ಕೆಳಗೆ ಇಳಿದು ನೀರಿನಿಂದ ಒದ್ದೆಯಾಗುತ್ತಾ ಸುರಂಗದ ಮೂಲಕ ಈ ಜಾಗವನ್ನು ತಲುಪಬಹುದು. ಹಾಗೆ ನಿಂತು ನೋಡಲು ಇಲ್ಲಿ ಎರಡು ಸ್ಥಳಗಳಿವೆ. ಅಲ್ಲಿ ನಿಂತು ಪಕ್ಕಕ್ಕೆ ಕತ್ತೆತ್ತಿ ನೋಡಿದರೆ ಪ್ರವಾಹೋಪಾದಿಯಲ್ಲಿ ಧೋ ಎಂಬ ಶಬ್ದದೊಡನೆ ಭೋರ್ಗರೆಯುತ್ತಾ ನೀರು ನಮ್ಮ ಪಕ್ಕದಲ್ಲೇ ಬೀಳುತ್ತದೆ. ನೀರಿನ ತುಂತುರು ಹನಿಗಳು, ಮಂಜು ನಮ್ಮನ್ನು ಒದ್ದೆಯಾಗಿಸಿದರೂ ಒಂಥರಾ ಮಜಾ ಕೊಡುತ್ತದೆ. ಕಲ್ಲು ಬಂಡೆಗಳನ್ನು ಕೊರೆದು ಆ ಸ್ಥಳವನ್ನು ಹೇಗೆ ಮಾಡಿರಬಹುದು ಎಂದು ಆಶ್ಚರ್ಯವಾಗುವುದರ ಜೊತೆಗೆ ಅದನ್ನು ಪ್ರವಾಸೋದ್ಯಮವಾಗಿ ಬೆಳೆಸಿದ ಪರಿ ವಿಶಿಷ್ಟ.

ನಯಾಗರದ ದೋಣಿ ವಿಹಾರ

ಹಾರ್ನ್ ಬ್ಲೋಯರ್ (ಕಂಪನಿ ಹೆಸರು) ನಯಾಗರ ಕ್ರೂಸ್ ಎಂಬ ದೋಣಿಯಲ್ಲಿ ಮೂರೂ ಜಲಪಾತಗಳ ಸೌಂದರ್ಯವನ್ನು

ಹತ್ತಿರದಿಂದ ಆಸ್ವಾದಿಸಬಹುದು. ಅಮೇರಿಕಾ ಕಡೆಯಿಂದ ಇದೇ ತರಹದ ದೋಣಿ ಪಯಣಕ್ಕೆ ಮೇಡ್ ಆಫ್ ದಿ ಮಿಸ್ಟ್ ಎಂದು ಕರೆಯುತ್ತಾರೆ. ದೋಣಿ ಎರಡು ಅಂತಸ್ತುಗಳನ್ನು ಹೊಂದಿದ್ದು ಬಹಳಷ್ಟು ಜನರು ಮೇಲಿನ ಅಂತಸ್ತಿನಲ್ಲಿ ನಿಂತು ಜಲಪಾತದ ಸೊಬಗನ್ನು ಸವಿಯಲು ಇಷ್ಟಪಡುತ್ತಾರೆ. ಎಲ್ಲರಿಗೂ ಪ್ಲಾಸ್ಟಿಕ್ ರೇನ್ ಕೋಟ್ ಧರಿಸಲು ಕೊಡುತ್ತಾರೆ. ಬರುವಾಗ ಅದನ್ನು ಕಸದ ಬುಟ್ಟಿಗೆ ಎಸೆಯಬೇಕು. ರೇನ್ ಕೋಟ್ ಧರಿಸದಿದ್ದರೆ ಜಲಪಾತದ ಹತ್ತಿರಕ್ಕೆ ದೋಣಿ ತೆಗೆದುಕೊಂಡು ಹೋಗುವಾಗ ಜಲಪಾತದಿಂದ ಸಿಡಿದು ನೀರು ಮತ್ತು ಮಂಜಿನ ಹನಿಗಳಿಂದ ನಾವು ತೊಯ್ದು ತೊಪ್ಪೆಯಾಗುತ್ತೇವೆ. ನಾವು ದೋಣಿಯಲ್ಲಿ ಪಯಣಿಸುವಾಗ (ಸಂಜೆ 6 ಗಂಟೆ) ನಿರಂತರವಾಗಿ ಸಿಡಿಯುತ್ತಿದ್ದ ಜಲಪಾತದ ನೀರಿನ ಹನಿಗಳಿಗೆ ವಿರುದ್ಧ ದಿಕ್ಕಿನಿಂದ ಮುಳುಗುತ್ತಿದ್ದ ಸೂರ್ಯನ ಕಿರಣಗಳು ದೊಡ್ಡದಾದ ಕಾಮನಬಿಲ್ಲನ್ನು ಸೃಷ್ಟಿಸಿತ್ತು.

ಹತ್ತಿರದಲ್ಲೇ ಇರುವ 175 ಅಡಿ ಎತ್ತರದ 'ಸ್ಕೈವೀಲ್' (ಜಾಯಿಂಟ್ ವೀಲ್), 775 ಅಡಿ ಎತ್ತರದ 'ಸ್ಕೈಲಾನ್ ಟಾವರ' ಗಳ ಮುಖಾಂತರ ಕೂಡ ಆಕಾಶದೆತ್ತರದಿಂದ ಜಲಪಾತದ ಸೌಂದರ್ಯವನ್ನು ಆಸ್ವಾದಿಸಬಹುದು. ಗಟ್ಟಿ ಗುಂಡಿಗೆಯವರಿಗೆ ಝಿಪ್ ಲೈನ್ ಸೌಲಭ್ಯವಿದೆ. ಇವುಗಳಿಗೆ, ದೋಣಿ ಪ್ರಯಾಣಕ್ಕೆ ಮತ್ತು ಜರ್ನಿ ಬಿಹೈಂಡ್ ದ ಫಾಲ್ಸ್‌ಗೆ ಪ್ರವೇಶ ಶುಲ್ಕವಿದೆ.

ಎರಡೂ ದೇಶಗಳಲ್ಲಿ ನಯಾಗರ ನದಿಯಿಂದ ಜಲವಿದ್ಯುತ್ ಉತ್ಪಾದಿಸುತ್ತಾರೆ. ರಾತ್ರಿ ಸಮಯದಲ್ಲಿ ಮತ್ತು ಚಳಿಗಾಲದಲ್ಲಿ (ವೀಕ್ಷಕರು ಕಡಿಮೆ ಇರುವ ಸಮಯದಲ್ಲಿ) ಜಲಪಾತಕ್ಕೆ ಹರಿಯುವ ಪ್ರಮಾಣವನ್ನು ಕಡಿತಗೊಳಿಸಿ ಜಲವಿದ್ಯುತ್ ಉತ್ಪಾದನೆಗೆ ಆದ್ಯತೆ ಕೊಡುತ್ತಾರೆ. ಜಲಪಾತ ವರ್ಷಕ್ಕೆ ಸುಮಾರು 30 ಸೆ.ಮೀ. ನಷ್ಟು ಕೊರೆಯುವಿಕೆಯಿಂದಾಗಿ ಹಿಂದೆ ಹಿಂದೆ ಸರಿಯುತ್ತಿದೆಯಂತೆ. ಈ ಜಲಪಾತ 2 ಬಾರಿ ತನ್ನ ಹರಿವನ್ನೇ ನಿಲ್ಲಿಸಿತ್ತು : 1848ರ ಮಾರ್ಚ್ 29 ಮತ್ತು 30ರಂದು ಚಳಿ ಮತ್ತು ಮತ್ತು ಶೀತಲ ಗಾಳಿಯ ಪರಿಣಾಮವಾಗಿ ಈರಿ ಸರೋವರದಿಂದ ಮಂಜುಗಡ್ಡೆಗಳು ತೇಲಿಬಂದು ಕೆನಡಿಯನ್ ಜಲಪಾತ ಸ್ಥಬ್ದವಾಗಿತ್ತಂತೆ. 1969ರಲ್ಲಿ ಜೂನ್ ಇಂದ ನವೆಂಬರ್‌ವರೆಗೆ ಅಮೆರಿಕನ್ ಜಲಪಾತದ ಕಲ್ಲು ಬಂಡೆಗಳ ಅಧ್ಯಯನಕ್ಕಾಗಿ ನೀರನ್ನು ಕೆನಡಾದ ಹಾರ್ಸ್ ಶೂ ಜಲಪಾತದ ಕಡೆಗೆ ತಿರುಗಿಸಿದ್ದರು.

ವಿಶ್ವವಾಣಿ ಸಿನಿಮಾಸ್

ಜಾಸ್ತಿ ಮಾಸ್ ಜಾಸ್ತಿ ಕ್ಲಾಸ್

ಪ್ರಶಾಂತ್.ಟಿ.ಆರ್

ಧ್ರುವ ಸರ್ಜಾ ಮಾರ್ಟಿನ್‌ನ್ ಅವತಾರ ತಾಳಿದ್ದು, ಆ್ಯಕ್ಷನ್‌ನಲ್ಲಿ ಅಬ್ಬರಿಸುತ್ತಿದ್ದಾರೆ. ದಶಕದ ಬಳಿಕ ಅದ್ದೂರಿ ಜೋಡಿ ಮತ್ತೆ ಒಂದಾಗಿದ್ದು, ಮತ್ತೊಂದು ಅದ್ದೂರಿ ಸಿನಿಮಾವನ್ನು ನೀಡಿದೆ. ವಿಶ್ವಾದ್ಯಂತ ಮಾರ್ಟಿನ್ ಹವಾ ಶುರುವಾಗಿದ್ದು, ಭಾರತದಲ್ಲಿಯೇ ಸುಮಾರು ಮೂರು ಸಾವಿರಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಮಾರ್ಟಿನ್ ದರ್ಶನವಾಗಿದೆ. ಮಾರ್ಟಿನ್ ಚಿತ್ರದ ಕುರಿತಂತೆ ನಟ ಧ್ರುವ ಸರ್ಜಾ ವಿ.ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

ವಿ.ಸಿ: ಯಾರು ಈ ಮಾರ್ಟಿನ್ ?

ಧ್ರುವ ಸರ್ಜಾ: ಮಾರ್ಟಿನ್ ಯಾರು ಎಂಬುದೇ ಚಿತ್ರದ ಸಸ್ಪೆನ್ಸ್, ಅದನ್ನು ಸಿನಿಮಾ ನೋಡಿಯೇ ತಿಳಿಯಬೇಕು. ಮಾರ್ಟಿನ್ ಆ್ಯಕ್ಷನ್ ಸಸ್ಪೆನ್ಸ್, ಥ್ರಿಲ್ಲರ್ ಜಾನರ್‌ನಲ್ಲಿ ಮೂಡಿಬಂದಿದೆ. ರಿವರ್ಸ್ ಸ್ಕ್ರೀನ್ ಪ್ಲೇನಲ್ಲಿ ಕಥೆ ಸಾಗುತ್ತದೆ. ಒಬ್ಬ ಭಾರತೀಯ ಪಾಕಿಸ್ತಾನಕ್ಕೆ ಹೋದಾಗ ಅಲ್ಲಿ ಸೆರೆಯಾಗುತ್ತಾನೆ, ಅದು ಯಾಕೆ ಎಂಬುದೇ ಸಸ್ಪೆನ್ಸ್. ಪಾಕಿಸ್ತಾನದಲ್ಲಿಯೇ ಸ್ಟೋರಿ ನಡೆಯುತ್ತದೆ. ಇಲ್ಲಿ ಯೂನಿವರ್ಸಲ್ ಥೀಮ್ ಇದ್ದು, ಚಿಕ್ಕ ಕಥೆಯನ್ನು ಎಲ್ಲರಿಗೂ ಹಿಡಿಸುವಂತೆ ವೈಭವಯುತವಾಗಿ ಕಟ್ಟಿಕೊಡಲಾಗಿದೆ.

ವಿ.ಸಿ : ನಿಮ್ಮನ್ನು ಈ ಹಿಂದಿನ ಸಿನಿಮಾಗಳಿಗಿಂತ ವಿಭಿನ್ನವಾಗಿ ಕಾಣಬಹುದೆ?

ಧ್ರುವ: ಈ ಹಿಂದಿನ ಸಿನಿಮಾಗಳಿಗಿಂತ ನನ್ನ ಪಾತ್ರ ವಿಭಿನ್ನವಾಗಿದೆ. ಲುಕ್ ಕೂಡ ಹೊಸತಾಗಿದೆ. ಪ್ರತಿ ಡೈಲಾಗ್‌ಗಳು ಗಂಭೀರವಾಗಿದ್ದು, ಮನಸಿಗೆ ಹಿಡಸುತ್ತವೆ. ನಾಲ್ಕು ಆ್ಯಕ್ಷನ್ ದೃಶ್ಯಗಳು, ಒಂದು ಚೇಸಿಂಗ್ ಸೀನ್ ಇದೆ. ಕ್ಲೈಮ್ಯಾಕ್ಸ್ ಅದ್ದೂರಿಯಾಗಿ ಮೂಡಿಬಂದಿದೆ. ಸಿಜಿ ವರ್ಕ್ಸ್‌ಗೆ ಹೆಚ್ಚಿನ ಒತ್ತು ನೀಡಲಾಗಿದ್ದು, ಇಡೀ ಸಿನಿಮಾ ವೈಭವಯುತವಾಗಿ ಮೂಡಿಬಂದಿದೆ. ಚಿತ್ರತಂಡದ ಪ್ರತಿಯೊಬ್ಬರ ಶ್ರಮ ತೆರೆಯಲ್ಲಿ ಕಾಣಿಸುತ್ತದೆ.

ವಿ.ಸಿ : ನಿಮ್ಮ ಮಾವ ಅರ್ಜುನ್ ಸರ್ಜಾ ಅವರು ಕಥೆ ಹೆಣೆದಿರುವುದು ವಿಶೇಷ, ಸ್ಟೋರಿಯ ಬಗ್ಗೆ ಹೇಳುವುದಾದರೆ ?

ಧ್ರುವ : ನನಗೆ ನಮ್ಮ ಮಾವನೇ ಗಾಡ್ ಫಾದರ್. ಅವರು ಹೆಣೆದ ಕಥೆಯೇ ಮಾರ್ಟಿನ್, ಹಾಗಾಗಿಯೇ ಈ ಚಿತ್ರದಲ್ಲಿ ನಟಿಸಿರುವುದು ಸಂತಸ ತಂದಿದೆ. ನಿರ್ಮಾಪಕ ಉದಯ್ ಮೆಹ್ತ ನನಗಾಗಿ ಒಂದು ಸಿನಿಮಾ ಮಾಡಬೇಕು ಎಂದು ಈ ಹಿಂದೆಯೇ ನಿರ್ಧರಿಸಿದ್ದರು. ಅದಕ್ಕಾಗಿ ಸಾಕಷ್ಟು ಕಥೆ ಕೇಳಿದ್ದರು, ಯಾವುದೂ ಅಷ್ಟಾಗಿ ಹಿಡಿಸಿರಲಿಲ್ಲ. ಆಗ ಮಾಮ ಬರೆದ ಸ್ಟೋರಿ ಕೇಳಿ ತುಂಬಾ ಖುಷಿಪಟ್ಟು, ಚಿತ್ರ ನಿರ್ಮಾಣಕ್ಕೆ ಸಿದ್ಧವಾದರು. ಇಲ್ಲಿಯೂ ದೇಶಭಕ್ತಿ ಸಾರಲಾಗಿದೆ, ಹೋರಾಟಗಾರನ ಕಥೆಯೂ ಇದೆ.

ವಿ.ಸಿ : ಮಾರ್ಟಿನ್ ಆರಂಭಕ್ಕೂ ಮೊದಲೇ ಪ್ಯಾನ್ ಇಂಡಿಯಾ ಸಿನಿಮಾ ಎಂಬುದು ನಿರ್ಧಾರವಾಗಿತ್ತೆ?

ಧ್ರುವ: ಸಿನಿಮಾದ ಕಥೆ ಮತ್ತು ಅದ್ದೂರಿತನ ನೋಡಿ ರವಿಬಸ್ರೂರು ಅವರು ಚಿತ್ರದಲ್ಲಿ ಇಂಟರ್ ನ್ಯಾಷನಲ್ ಸ್ಟಾಂಡರ್ಡ್ ಇದೆ ಎಂದು ಹೇಳಿ ಅದನ್ನು ಗ್ಲೋಬಲ್ ಆಗಿ ರಿಲೀಸ್ ಮಾಡುವ ಆಸೆ ಬಿತ್ತಿದರು. ಅಂದಿನಿಂದ ಮಾರ್ಟಿನ್ ಪ್ಯಾನ್ ವರ್ಲ್ಡ್ ಸಿನಿಮಾವಾಯಿತು. ಸಿನಿಮಾದ ಟೀಸರ್, ಟ್ರೇಲರ್ ನೋಡಿ ಎಲ್ಲಾ ಭಾಷೆಯ ಪ್ರೇಕ್ಷಕರೂ ಕೊಂಡಾಡಿದ್ದಾರೆ. ಇದು ನಮ್ಮ ಚಿತ್ರತಂಡಕ್ಕೆ ಶಕ್ತಿತುಂಬಿದೆ.

ಮಾರ್ಟಿನ್‌ನಲ್ಲಿ ಯೂನಿವರ್ಸಲ್ ಥೀಮ್ ಇದೆ

---

22 ಗ್ರ್ಯಾನ್‌ಸ್ಲಾಮ್‌ಗಳ ಒಡೆಯ ನಡಾಲ್ ನಿವೃತ್ತಿ

ಕ್ಲೇ ಕೋರ್ಟ್ ಕಿಂಗ್ ಲಯಬದ್ಧ ಟೆನಿಸ್ ಆಟ ಇನ್ನು ನೆನಪು ಮಾತ್ರ

ಪ್ಯಾರಿಸ್: ವಿಶ್ವದ ಅಪ್ರತಿಮ ಟೆನಿಸ್ ಆಟಗಾರರಲ್ಲಿ ಒಬ್ಬರಾದ, 22 ಬಾರಿಯ ಗ್ರ್ಯಾನ್‌ಸ್ಲಾಮ್ ಚಾಂಪಿಯನ್ ರಫೆಲ್ ನಡಾಲ್ ತಮ್ಮ ಟೆನಿಸ್ ವೃತ್ತಿ ಬದುಕಿಗೆ ತೆರೆ ಎಳೆಯಲು ನಿರ್ಧರಿಸಿದ್ದಾರೆ. 38 ವರ್ಷದ ನಡಾಲ್ ಗುರುವಾರ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡುವ ಮೂಲಕ ತಮ್ಮ ನಿವೃತ್ತಿ ಘೋಷಿಸಿದ್ದಾರೆ. ಗಾಯದ ಸಮಸ್ಯೆಯಿಂದಾಗಿ ದೀರ್ಘ ಸಮಯದಿಂದ ಟೆನಿಸ್ ಅಂಗಣದಿಂದ ಹೊರಗುಳಿದಿದ್ದ ನಡಾಲ್ ಹಲವು ಬಾರಿ ಕಮ್‌ಬ್ಯಾಕ್ ಮಾಡುವ ಪ್ರಯತ್ನ ಮಾಡಿದರೂ ಸಾಧ್ಯವಾಗಲಿಲ್ಲ. ನವೆಂಬರ್ 8 ರಿಂದ ಆರಂಭವಾಗುವ ಡೆವಿಸ್ ಕಪ್ ಅವರ ಪಾಲಿಗೆ ಕೊನೆಯ ಟೂರ್ನಿಯಾಗಿದೆ.

ನಾನು ವೃತ್ತಿಪರ ಟೆನಿಸ್‌ನಿಂದ ನಿವೃತ್ತಿಯಾಗುತ್ತಿದ್ದೇನೆ. ನಾನೇ ನನಗೊಂದು ಅವಕಾಶ ನೀಡಲು ಹಲವು ಬಾರಿ ಪ್ರಯತ್ನಿಸಿದೆ. ಆದರೆ, ಇದಕ್ಕೆ ನನ್ನ ದೇಹ ಸ್ಪಂದಿಸಲಿಲ್ಲ. ಕಳೆದ 2 ವರ್ಷಗಳ ಕಾಲ ನಾನು ಗಾಯದಿಂದ ಹಲವು ಶಸ್ತ್ರಚಿಕಿತ್ಸೆಗೆ ಒಳಗಾದೆ. ಇನ್ನು ನನ್ನ ದೇಹಕ್ಕೆ ಗಾಯವನ್ನು ಸಹಿಸುವುದು ಕಷ್ಟ ಎನ್ನುವುದು ಅರಿವಿಗೆ ಬಂದು ನನ್ನ ನೆಚ್ಚಿನ ಟೆನಿಸ್ ಬ್ಯಾಟ್ ಅನ್ನು ಬದಿಗಿಡುವ ಸಮಯ ಬಂದಿದೆ. ಇದು ನನ್ನ ಪಾಲಿಗೆ ನಿಸ್ಸಂಶಯವಾಗಿ ಕಠಿಣ ನಿರ್ಧಾರವಾಗಿದೆ. ಆದರೆ ಈ ಜೀವನದಲ್ಲಿ ಪ್ರತಿಯೊಂದಕ್ಕೂ ಪ್ರಾರಂಭ ಮತ್ತು ಅಂತ್ಯವಿದೆ ಎಂದು ಬರೆದುಕೊಂಡು ನಡಾಲ್ ನಿವೃತ್ತಿ ಪ್ರಕಟಿಸಿದ್ದಾರೆ.

ಕ್ಲೇ ಕೋರ್ಟ್ ಕಿಂಗ್: ಹಸಿರು ಅಂಗಣಕ್ಕೆ ಹೋಲಿಸಿದರೆ ಆವೆಮಣ್ಣಿನ ಗಟ್ಟಿ ಅಂಗಣದಲ್ಲಿ ಆಡುವುದು ತುಸು ಕಷ್ಟ. ಚೆಂಡು ಸುಲಭವಾಗಿ ಪುಟಿದೇಳದೇ ನಿಧಾನಗತಿಯಲ್ಲಿ ಚಿಮ್ಮುವುದರಿಂದ ಆಟಗಾರ ಆ ಲಯಕ್ಕೆ ತನ್ನನ್ನು ಹೊಂದಿಸಿಕೊಳ್ಳಬೇಕಾಗುತ್ತದೆ. ಈ ಮರ್ಮವನ್ನು ಚೆನ್ನಾಗಿ ಅರಿತುಕೊಂಡಿರುವುದೇ ನಡಾಲ್ ಯಶಸ್ಸಿಗೆ ಕಾರಣ. ಅವರು ಒಟ್ಟು 14 ಫ್ರೆಂಚ್ ಓಪನ್ ಕಿರೀಟ ಗೆದ್ದಿದ್ದಾರೆ. ಇದೇ ಕಾರಣಕ್ಕೆ ಅವರನ್ನು ಕ್ಲೇ ಕೋರ್ಟ್ ಕಿಂಗ್ ಎಂದು ಕರೆಯುವುದು. ಫ್ರೆಂಚ್ ಓಪನ್‌ನಲ್ಲಿ 2005ರಲ್ಲಿ ರಫೆಲ್ ನಡಾಲ್ ಕಣಕ್ಕೆ ಇಳಿಯುವುದರೊಂದಿಗೆ ಈ ಟೂರ್ನಿಯಲ್ಲಿ ಸ್ಪೇನ್ ಯುಗ ಅರಂಭವಾಯಿತು.

ಕಳೆದ ತಿಂಗಳು, ನಡಾಲ್ ಲೇವರ್ ಕಪ್ 2024 ರಿಂದ ಹಿಂದೆ ಸರಿದಿದ್ದರು, ಇದು ವೃತ್ತಿಪರರಾಗಿ ಕೋರ್ಟ್‌ನಲ್ಲಿ ಅವರ ಅಂತಿಮ ಟೂರ್ನಿಯಾಗಿತ್ತು. ಪ್ಯಾರಿಸ್ 2024 ರ ಒಲಂಪಿಕ್ಸ್ ನಂತರ, ನಡಾಲ್ ಅವರು 2024 ಕ್ಕೆ ಲೇವರ್ ಕಪ್ ಅವರ ಮುಂದಿನ ಪಂದ್ಯವೆಂದು ದೃಢಪಡಿಸಿದ್ದರು. ಆದರೆ ಆಡಿರಲಿಲ್ಲ. ನಡಾಲ್ ಈ ಋತುವಿನಲ್ಲಿ 12–7 ಪಂದ್ಯಗಳ ದಾಖಲೆಯನ್ನು ಹೊಂದಿದ್ದಾರೆ.

22 ಗ್ರ್ಯಾಂಡ್ ಸ್ಲಾಮ್ ಪ್ರಶಸ್ತಿ

ನಡಾಲ್ ಅವರು ತಮ್ಮ ಇದುವರೆಗಿನ ಟೆನಿಸ್ ವೃತ್ತಿ ಜೀವನದಲ್ಲಿ ಒಟ್ಟು 22 ಗ್ರ್ಯಾನ್ ಸ್ಲಾಮ್ ಪ್ರಶಸ್ತಿ ಗೆದ್ದಿದ್ದಾರೆ. ಇದರಲ್ಲಿ 14 ಫ್ರೆಂಚ್ ಓಪನ್, 2 ಆಸ್ಟ್ರೇಲಿಯನ್ ಓಪನ್, 3 ಯುಎಸ್ ಓಪನ್, 2 ವಿಂಬಲ್ಡನ್ ಒಳಗೊಂಡಿದೆ. ಅತ್ಯಧಿಕ ಗ್ರ್ಯಾನ್ ಸ್ಲಾಮ್ ಪ್ರಶಸ್ತಿ ಗೆದ್ದ ಸಾಧಕರಲ್ಲಿ ನಡಾಲ್‌ಗೆ ಎರಡನೇ ಸ್ಥಾನ. ಅಗ್ರಸ್ಥಾನ ನೊವಾಕ್ ಜೋಕೊವಿಕ್‌ಗೆ ಸಲ್ಲುತ್ತದೆ. ಜೋಕೊ 24 ಗ್ರ್ಯಾನ್ ಸ್ಲಾಮ್ ಗೆದ್ದಿದ್ದಾರೆ. 36 ಮಾಸ್ಟರ್ಸ್ ಪ್ರಶಸ್ತಿಗಳು ಮತ್ತು ಒಲಿಂಪಿಕ್ ಚಿನ್ನದ ಪದಕ ಸೇರಿದಂತೆ ಒಟ್ಟು 92 ಎಟಿಪಿ ಸಿಂಗಲ್ಸ್ ಪ್ರಶಸ್ತಿಗಳನ್ನು ಗೆದ್ದಿದ್ದಾರೆ. ಸಿಂಗಲ್ಸ್‌ನಲ್ಲಿ ವೃತ್ತಿಜೀವನದ ಗೋಲ್ಡನ್ ಸ್ಲಾಮ್ ಅನ್ನು ಪೂರ್ಣಗೊಳಿಸಿದ ಮೂವರು ಪುರುಷ ಆಟಗಾರರಲ್ಲಿ ಒಬ್ಬರು ಎಂಬ ಅನನ್ಯ ದಾಖಲೆಯನ್ನು ಹೊಂದಿದ್ದಾರೆ.

ಪಾಕ್ ನೆಲದಲ್ಲಿ ಆಂಗ್ಲರ ದಾಖಲೆ ಆಟ

ಮುಲ್ತಾನ್: ಪಾಕಿಸ್ತಾನದ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಇಂಗ್ಲೆಂಡ್ ತಂಡ ಹೊಸ ಇತಿಹಾಸ ಬರೆದಿದೆ. ಹೆದ್ದಾರಿ ಎಂದೇ ಟೀಕೆಗೆ ಒಳಗಾಗುತ್ತಿರುವ ಮುಲ್ತಾನ್ ಮೈದಾನದಲ್ಲಿ ಇಂಗ್ಲೆಂಡ್ ಬರೋಬ್ಬರಿ 823ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿದೆ. ಈ ಮೂಲಕ ಎರಡನೇ ಮಹಾಯುದ್ಧದ ನಂತರ ಟೆಸ್ಟ್ ಕ್ರಿಕೆಟ್‌ನಲ್ಲಿ ಗರಿಷ್ಠ ಮೊತ್ತ ದಾಖಲಿಸಿದೆ. ಇಂಗ್ಲೆಂಡ್ 87 ವರ್ಷಗಳ ನಂತರ ಮೊದಲ ಬಾರಿಗೆ 700ಕ್ಕೂ ಹೆಚ್ಚಿನ ಮೊತ್ತವನ್ನ ದಾಖಲಿಸಿದೆ.

87 ವರ್ಷಗಳಲ್ಲೇ ಗರಿಷ್ಠ ಸ್ಕೋರ್

ಪಾಕಿಸ್ತಾನದ 556ರನ್‌ಗಳಿಗೆ ಉತ್ತರವಾಗಿ ಮೊದಲ ಇನ್ನಿಂಗ್ಸ್ ಆರಂಭಿಸಿದ ಇಂಗ್ಲೆಂಡ್ ತಂಡಕ್ಕೆ ಜೋ ರೂಟ್ ಅವರ ದ್ವಿಶತಕ ಹಾಗೂ ಹ್ಯಾರಿ ಬ್ರೂಕ್ ತ್ರಿಶತಕ ಸಿಡಿಸಿ 87 ವರ್ಷಗಳಲ್ಲೆ ಗರಿಷ್ಠ ಮೊತ್ತ ದಾಖಲಿಸಲು ನೆರವಾದರು. ಇಂಗ್ಲಿಷ್ ಬ್ಯಾಟರ್‌ಗಳು ಆಕ್ರಮಣಕಾರಿ ಬ್ಯಾಟಿಂಗ್ ಮೂಲಕ ಪಂದ್ಯದ ಸಮಯದಲ್ಲಿ ಹಲವಾರು ದಾಖಲೆಗಳನ್ನು ಮುರಿದರು.

ತಂಡದ ಮೊತ್ತ 823/7 ಇದ್ದಾಗ ಇನ್ನಿಂಗ್ಸ್ ಡಿಕ್ಲೇರ್ ಮಾಡುವ ಮೂಲಕ ಇಂಗ್ಲೆಂಡ್ ಟೆಸ್ಟ್ ಕ್ರಿಕೆಟ್ ಇತಿಹಾಸದ 4ನೇ ಗರಿಷ್ಠ ಮೊತ್ತ ಕಲೆ ಹಾಕಿತು. 1997ರಲ್ಲಿ ಕೊಲಂಬೊದಲ್ಲಿ ನಡೆದ ಪಂದ್ಯದಲ್ಲಿ ಭಾರತದ ವಿರುದ್ಧ ಶ್ರೀಲಂಕಾ ಆರು ವಿಕೆಟ್‌ಗೆ 952 ರನ್ ಗಳಿಸಿ ಅಗ್ರಸ್ಥಾನದಲ್ಲಿದೆ. ಆ ನಂತರ ಗರಿಷ್ಠ ರನ್ ಪಟ್ಟಿಯಲ್ಲಿ ಮುಂದಿನ ಮೂರು ಸ್ಕೋರ್‌ಗಳು ಇಂಗ್ಲೆಂಡ್ ತಂಡದಿಂದಲೇ ಬಂದಿವೆ.

ಇಂಗ್ಲೆಂಡ್ ತಂಡ ಪಾಕಿಸ್ತಾನದ ವಿರುದ್ಧದ ಪಂದ್ಯದಲ್ಲಿ ನಾಲ್ಕನೇ ಸ್ಥಾನವನ್ನು ಪಡೆದುಕೊಂಡಿದೆ. ಮೊದಲ ಮಹಾಯುದ್ಧಕ್ಕೂ ಮುನ್ನ 1938 ರಲ್ಲಿ ಇಂಗ್ಲೆಂಡ್ ತಂಡ ಟೆಸ್ಟ್ ಕ್ರಿಕೆಟ್‌ನಲ್ಲಿ ಒಟ್ಟು 2 ಬಾರಿ 700 ಕ್ಕೂ ಹೆಚ್ಚು ರನ್ ಗಳಿಸಿತ್ತು. ಆಸ್ಟ್ರೇಲಿಯಾ ವಿರುದ್ಧ ದಿ ಓವಲ್‌ನಲ್ಲಿ 7 ವಿಕೆಟ್ ನಷ್ಟಕ್ಕೆ 903 ರನ್ ಗಳಿಸಿ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತ್ತು. 1930ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧ 849 ರನ್ ಗಳಿಸಿತ್ತು. ಇದೀಗ 3ನೇ ಬಾರಿ 800ಕ್ಕಿಂತ ಹೆಚ್ಚು ರನ್ ಗಳಿಸಿದೆ.

ಪಾಕಿಸ್ತಾನ ನೆಲದಲ್ಲಿ ಅತಿ ಹೆಚ್ಚು ಮೊತ್ತ: ಪಾಕಿಸ್ತಾನದ ನೆಲದಲ್ಲಿ ಯಾವುದೇ ರಾಷ್ಟ್ರ 800ಕ್ಕಿಂತ ಹೆಚ್ಚಿನ ಮೊತ್ತ ದಾಖಲಿಸಿರುವುದು ಇದೇ ಮೊದಲು. 2009ರಲ್ಲಿ ಕರಾಚಿಯಲ್ಲಿ ಪಾಕ್ ತಂಡ ಶ್ರೀಲಂಕಾ ವಿರುದ್ಧ 765/6 ಡಿಕ್ಲೇರ್ ಘೋಷಿಸಿದ್ದು, ಇಲ್ಲಿಯವರೆಗೆ ವಿಶ್ವದಾಖಲೆಯಾಗಿತ್ತು.

ಬೆಂಗಳೂರು:4.ಆಟ
ನರ್ತಕಿ
ಮಾಗಡಿ ರಸ್ತೆ:4.ಆಟ ಪ್ರಸನ್ನ
VEERESH CINEMAS
ಲಾಲ್‌ಬಾಗ್ ರಸ್ತೆ:4.ಆಟ ಊರ್ವಶಿ
ಎಂ.ಜಿ.ರಸ್ತೆ : 4.ಆಟ ಸ್ವಾಗತ್‌ಶಂಕರ್‌ನಾಗ್
ಸೇವಾನಗರ:4.ಆಟ ಮುಕುಂದ
ಕಾಮಾಕ್ಷಿಪಾಳ್ಯ :4.ಆಟ VICTORY CINEMA
ಜೆ.ಪಿ.ನಗರ :4.ಆಟ ಸಿದ್ದೇಶ್ವರ
ಆವಲಹಳ್ಳಿ : 4.ಆಟ ವೆಂಕಟೇಶ್ವರ
ರಾಜಾಜಿನಗರ:4.ಆಟ ನವರಂಗ್
ಸಂಜಯನಗರ:4.ಆಟ ವೈಭವ್
ತಾವರೆಕೆರೆ: 4.ಆಟ ಬಾಲಾಜಿ
ಬನಶಂಕರಿ: 4.ಆಟ ಕಾಮಾಕ್ಯ
ಪೀಣ್ಯ : 4.ಆಟ ಭಾರತಿ
ಕಮಲಾನಗರ:4.ಆಟ ವೀರಭದ್ರೇಶ್ವರ
ಸುಂಕದಕಟ್ಟೆ:4.ಆಟ ಮೋಹನ್
ಆಗರ : 4.ಆಟ ತಿರುಮಲ
ಕಾಡುಗೋಡಿ:4.ಆಟ ಶ್ರೀನಿವಾಸ
ಮಾರತಹಳ್ಳಿ:4.ಆಟ ವಿನಾಯಕ
ಕದಿರೇನಹಳ್ಳಿ:4.ಆಟ ಮಹದೇಶ್ವರ
ಚಿಕ್ಕಲಸಂದ್ರ:4.ಆಟ ಬಾಲಾಜಿ
ಟಿ.ಸಿ.ಪಾಳ್ಯ: 4.ಆಟ ವಿ.ಸಿನಿಮಾಸ್
ಗರುಡಾಚಾರ್‌ಪಾಳ್ಯ:4.ಆಟ ವಿಜಯಲಕ್ಷ್ಮೀ
ಕೆ.ಆರ್.ಪುರಂ:4.ಆಟ ವೆಂಕಟೇಶ್ವರ
ಆರ್.ಟಿ.ನಗರ:4.ಆಟ ರಾಧಾಕೃಷ್ಣ
ಹೊಂಗಸಂದ್ರ:4.ಆಟ ಬೃಂದಾ
ಕೋಣನಕುಂಟೆ:4.ಆಟ ಮಾನಸ
ರಾಮಮೂರ್ತಿನಗರ:4.ಆಟ ಲಕ್ಷ್ಮೀ
ಕೋನಪ್ಪನಅಗ್ರಹಾರ:4.ಆಟ ವೆಂಕಟೇಶ್ವರ
ವಿದ್ಯಾಪೀಠ :4.ಆಟ ಚಂದ್ರೋದಯ
ಉತ್ತರಹಳ್ಳಿ : 4.ಆಟ ವೈಷ್ಣವಿವೈಭವಿ
ಸರ್ಜಾಪುರ :4.ಆಟ ರವಿ
ಜೆ.ಪಿ.ನಗರ :4.ಆಟ ರೇಣುಕಾಪ್ರಸನ್ನ
ಮಲ್ಲೇಶ್ವರಂ :4.ಆಟ Navitha
ಕೆಂಗೇರಿ : 4.ಆಟ ರಾಬಿನ್ ವೆಂಕಟೇಶ್ವರ
ಗೌಡನಪಾಳ್ಯ:4.ಆಟ ಶ್ರೀನಿವಾಸ
ಗೊಟ್ಟಿಗೆರೆ : 4.ಆಟ ಲಕ್ಷ್ಮೀ
ದೊಮ್ಮಸಂದ್ರ:4.ಆಟ ಬಾಲಾಜಿ
ರಾಜಗೋಪಾಲನಗರ:4.ಆಟ ಮಾರುತಿ
ಲಗ್ಗೆರೆ : 4.ಆಟ ಆಕಾಶ್
ಕೊಡಿಗೆಹಳ್ಳಿ:4.ಆಟ ರಾಜ್‌ಮುರಳಿ
ಹೆಸರಘಟ್ಟ : 4.ಆಟ ಎಸ್.ಎಲ್.ಎನ್
ಹರಿನಗರ : 4.ಆಟ ವಿನಾಯಕ
ಮತ್ತಿಕೆರೆ : 4.ಆಟ ಮುರಳಿಗೋಕುಲ
ಗೊಲ್ಲರಹಟ್ಟಿ:4.ಆಟ ವೆಂಕಟೇಶ್ವರ
ಯಲಹಂಕ :4.ಆಟ ಪ್ರಕಾಶ್
ಸಿಂಗಾಪುರ:4.ಆಟ ವೈನಿಧಿ
ಯಶವಂತಪುರ:4.ಆಟ ಗೋವರ್ಧನ್
ಚಿಕ್ಕಬಾಣಾವರ:4.ಆಟ ಅಶೋಕ
ಜಿಗಣಿ : 4.ಆಟ ನಂದೀಶ್ವರ
ಟಿ.ಸಿ.ಪಾಳ್ಯ: 4.ಆಟ V CINEMAS
PVR INOX MALL OF ASIA | NEXUS | ORION | VAISHNAVI | REGALIA | MARKET CITY | SPIRIT | UPTOWN | BHARATIYA | REX | GT | VR MALL | GLOBAL | FALCONCITY | SWAGATH | CENTRAL | LIDO | MANTRI | RMZ | GARUDA | YELAHANKA | NEIGHBOURHOOD | SBR | BROOKFIELD
cinépolis ETA | MEENAKSHI | ORION EAST | LULU | SHANTINIKETAN | SJR
GOPALAN CINEMAS ARCH | INNOVATION | GRAND | SIGNATURE | LEGACY
ROCKLINE mall & cinemas
MIRAJ SUNKADAKATTE
KINO CINEMAS SEEGEHALLI
ತುಮಕೂರು: 4.ಆಟ ಗಾಯತ್ರಿ ಪ್ರಶಾಂತ್ PVR INOX
ರಾಮನಗರ :4.ಆಟ ಶಾನ್
ಚನ್ನಪಟ್ಟಣ : 4.ಆಟ ಶಿವನಾದ ಲಕ್ಷ್ಮೀ
ಮಾಗಡಿ : 4.ಆಟ ಬಾಲಾಜಿ
ಕುಣಿಗಲ್ : 4.ಆಟ ಪದ್ಮ
ಹಾರೋಹಳ್ಳಿ :4.ಆಟ ವಿನಾಯಕ
ಕೋಲಾರ : 4.ಆಟ ನಾರಾಯಣಿ
ಚಿಕ್ಕಬಳ್ಳಾಪುರ:4.ಆಟ ಬಾಲಾಜಿ
ಮಾಲೂರು :4.ಆಟ ಬಾಲಾಜಿ
ದೊಡ್ಡಬಳ್ಳಾಪುರ:4.ಆಟ ವೈಭವ್ ರಾಜ್‌ಕಮಲ್
ಸಿರಾ : 4.ಆಟ ಸಪ್ತಗಿರಿ ಭಾಗ್ಯಲಕ್ಷ್ಮೀ
ಮಧುಗಿರಿ : 4.ಆಟ ಶಂಕರ್
ತಿಪಟೂರು: 4.ಆಟ ಲಕ್ಷ್ಮೀ ತ್ರಿಮೂರ್ತಿ
ಕನಕಪುರ :4.ಆಟ ಅರ್ಕಾವತಿ
ಮುಳುಬಾಗಿಲು:4.ಆಟ ವರದರಾಜ
ಚಿಂತಾಮಣಿ:4.ಆಟ ಆದರ್ಶ
ಪಾವಗಡ : 4.ಆಟ ಶ್ರೀನಿವಾಸಪ್ರಸನ್ನ
ಬಂಗಾರಪೇಟೆ:4.ಆಟ ಬಾಲಚಂದರ್
ಗೌರಿಬಿದನೂರು:4.ಆಟ ಅಭಿಲಾಷ
ವಿಜಿಪುರ : 4.ಆಟ ಗೌರಿಶಂಕರ
ಆನೇಕಲ್ : 4.ಆಟ ಲಕ್ಷ್ಮೀನರಸಿಂಹ
ಹೆಬ್ಬಗೋಡಿ :4.ಆಟ ವೆಂಕಟೇಶ್ವರ
ಬೇತಮಂಗಲ:4.ಆಟ ವಿನಾಯಕ
ಶಿಡ್ಲಘಟ್ಟ : 4.ಆಟ ವೆಂಕಟೇಶ್ವರ
ಕೊರಟಗೆರೆ:4.ಆಟ ಶಿವಗಂಗಾ
ಹೊಸೂರು :4.ಆಟ ಗ್ರ್ಯಾಂಡ್‌ಸಿನಿಮಾಸ್ ಲಕ್ಷ್ಮೀಸಿನಿಮಾಸ್
ಮೈಸೂರು : 4.ಆಟ ಸಂಗಮ್ ಗಾಯತ್ರಿ DRC CINEMAS PVR INOX GARUDA|FORUM|SATYAM VISION CINEMAS
ಕುಂಬಾರಕೊಪ್ಪಲು:4.ಆಟ ಮಹದೇಶ್ವರ
ಮಂಡ್ಯ : 4.ಆಟ ಮಹಾವೀರ್ ಸಂಜಯ
ಹಾಸನ : 4.ಆಟ ಎಸ್.ಬಿ.ಜಿ. ಸಹ್ಯಾದ್ರಿ
ಚಾಮರಾಜನಗರ:4.ಆಟ ಬಸವೇಶ್ವರ ಭ್ರಮರಾಂಬ
ಕೊಳ್ಳೇಗಾಲ: 4.ಆಟ ಶ್ರೀನಿವಾಸ
ಹೊಳೆನರಸೀಪುರ:4.ಆಟ ಚನ್ನಾಂಬಿಕ
ಚನ್ನರಾಯಪಟ್ಟಣ:4.ಆಟ ಗಾಯತ್ರಿ
ಗುಂಡ್ಲುಪೇಟೆ:4.ಆಟ ವೆಂಕಟೇಶ್ವರ
ಕೆ.ಆರ್.ನಗರ:4.ಆಟ ವೆಂಕಟೇಶ್ವರ
ಅರಸೀಕೆರೆ: 4.ಆಟ ರತ್ನ
ನಂಜನಗೂಡು:4.ಆಟ ಭಾರ್ಗವಿ
ಕೆ.ಎಂ.ದೊಡ್ಡಿ:4.ಆಟ ಸುಮಾ
ಬಿಳಿಕೆರೆ:4.ಆಟ ಲಕ್ಷ್ಮೀ
ಹುಲ್ಲಹಳ್ಳಿ : 4.ಆಟ ವಿನಾಯಕ
ಸಾಲಿಗ್ರಾಮ: 4.ಆಟ ಪದ್ಮಾ
ಮದ್ದೂರು : 4.ಆಟ ಸಂಜಯ
ಹುಣಸೂರು: 4.ಆಟ ಲೀಲಾ
ಸಿದ್ದಾಪುರ : 4.ಆಟ ವುಡ್‌ಲ್ಯಾಂಡ್ಸ್
ಕುಶಾಲನಗರ:4.ಆಟ ಕೂರ್ಗ್‌ಸಿನಿಮಾಸ್
ಶನಿವಾರಸಂತೆ:4.ಆಟ ಯಶಸ್ವಿನಿ
ಯಳಂದೂರು:4.ಆಟ ಮಹದೇಶ್ವರ
ನಾಗಮಂಗಲ:4.ಆಟ ವೆಂಕಟೇಶ್ವರ
ಬೆಳ್ಳೂರುಕ್ರಾಸ್:4.ಆಟ ಮಾರುತಿ
ಬೇಲೂರು : 4.ಆಟ ರೇಣುಕಾ
ಸಕಲೇಶಪುರ:4.ಆಟ ತೇಜಸ್ವಿನಿ
ಟಿ.ನರಸೀಪುರ:4.ಆಟ ಮುರುಗನ್ ವಿಜಯ್‌ಭಗವಾನ್
ಶ್ರೀರಂಗಪಟ್ಟಣ:4.ಆಟ ಶ್ರೀದೇವಿ
ಕೆ.ಆರ್.ಪೇಟೆ:4.ಆಟ ಕೆಜಿಬಿ
ಪಿರಿಯಾಪಟ್ಟಣ:4.ಆಟ ಶಾರದ
ಸಾತನೂರು:4.ಆಟ ವೆಂಕಟೇಶ್ವರ
ಬನ್ನೂರು : 4.ಆಟ ಸೋಮೇಶ್ವರ
ಪಾಂಡವಪುರ:4.ಆಟ ಲಾಲ್‌ಬಹದ್ದೂರ್
ಬೆಳಕವಾಡಿ :4.ಆಟ ಬೀರೇಶ್ವರ
ದಾವಣಗೆರೆ : 4.ಆಟ ಅಶೋಕ ತ್ರಿನೇತ್ರಾ
ಚಿತ್ರದುರ್ಗ : 4.ಆಟ ವೆಂಕಟೇಶ್ವರ CHHOTU MAHARAJ
ಬಳ್ಳಾರಿ : 4.ಆಟ ನಟರಾಜ
ಹೊಸಪೇಟೆ : 4.ಆಟ ಮೀರ್‌ಆಲಂ
ಹಗರಿಬೊಮ್ಮನಹಳ್ಳಿ:4.ಆಟ ವಿಷ್ಣು ಕೃಷ್ಣ
ಚಳ್ಳಕೆರೆ : 4.ಆಟ ಬಾಲಾಜಿ
ಸಂಡೂರು : 4.ಆಟ ಶ್ರೀನಿವಾಸ
ಕಂಪ್ಲಿ : 4.ಆಟ ಚಂದ್ರಕಲಾ
ಜಗಳೂರು :4.ಆಟ ನಟರಾಜ
ಹೊಸದುರ್ಗ:4.ಆಟ ಜ್ಯೋತಿ
ಚಿಕ್ಕಜೋಗಿಹಳ್ಳಿ:4.ಆಟ ಶ್ರೀಕೃಷ್ಣ
ಕುರುಗೋಡು:4.ಆಟ ಎಸ್‌ಎಲ್‌ವಿ
ಹರಿಹರ : 4.ಆಟ ಜಯಶ್ರೀ
ಹಿರಿಯೂರು:4.ಆಟ ಪುಷ್ಪಾಂಜಲಿ
ತೋರಣಗಲ್ಲು:4.ಆಟ ವಿಜಯಲಕ್ಷ್ಮೀ
ಹೂವಿನಹಡಗಲಿ:4.ಆಟ ಶಂಕರ್
ಚಿಕ್ಕಜಾಜೂರು:4.ಆಟ ಮಾರುತಿ
ಮೊಳಕಾಲ್ಮೂರು:4.ಆಟ ಭಾಗ್ಯಲಕ್ಷ್ಮೀ
ಹರಿಯಬ್ಬೆ : 4.ಆಟ ವಿವೇಕ್
ಪರಶುರಾಂಪುರ:4.ಆಟ ಸಾಗರ್
ಹುಬ್ಬಳ್ಳಿ : 4.ಆಟ ಅಪ್ಸರಾ ಸುಧಾ LAXMI CITY PRIDE MULTIPLEX cinépolis
ಧಾರವಾಡ :4.ಆಟ ಸಂಗಮ್ PVR INOX
ಬೆಳಗಾವಿ : 4.ಆಟ ಚಿತ್ರಾ ಸ್ವರೂಪ್‌ನರ್ತಕಿ PVR INOX KAPEEL CINEMA Bharath Cinemas
ಬಿಜಾಪುರ : 4.ಆಟ ಲಕ್ಷ್ಮೀ ಅಪ್ಸರಾ
ಗದಗ : 4.ಆಟ ಮಹಾಲಕ್ಷ್ಮೀ ಕೃಷ್ಣ
ರಾಣೇಬೆನ್ನೂರು:4.ಆಟ ಶಂಕರ್ ಶಿವಶಕ್ತಿ ಸ್ಮಾರ್ಟ್‌ಮೂವೀಸ್
ಬಾಗಲಕೋಟೆ :4.ಆಟ ಶಕ್ತಿ ವಾಸವಿ ಸ್ಮಾರ್ಟ್‌ಮೂವೀಸ್
ಸಿಂಧಗಿ : 4.ಆಟ ಆನಂದ್
ಲಕ್ಷ್ಮೇಶ್ವರ : 4.ಆಟ ರವಿ
ಇಳಕಲ್ : 4.ಆಟ ಶ್ರೀನಿವಾಸ
ತಾಳಿಕೋಟೆ:4.ಆಟ ಅಮೀರ್
ಬಾದಾಮಿ : 4.ಆಟ ಮಹಾಕೂಟೇಶ್ವರ
ಅಥಣಿ : 4.ಆಟ ದುರ್ಗಾಲಕ್ಷ್ಮೀ ಮುರುಗೇಂದ್ರ
ಜಮಖಂಡಿ : 4.ಆಟ ಶ್ರೀನಿವಾಸ
ನಿಪ್ಪಾಣಿ : 4.ಆಟ ಮ್ಯಾಗ್ನಮ್
ಬೈಲಹೊಂಗಲ:4.ಆಟ ಸಂಗಮ್
ಗಜೇಂದ್ರಗಡ:4.ಆಟ ಅಲಂಕಾರ್
ಹಳಿಯಾಳ : 4.ಆಟ ಬಸವರಾಜ್
ಸಂಕೇಶ್ವರ :4.ಆಟ ಸಾಯಿನಾಥ್
ರಾಯಭಾಗ :4.ಆಟ ದತ್ತ
ಮುಧೋಳ :4.ಆಟ ಸುಭಾಶಿನಿ ಸೂರ್ಯವಂಶಿ
ಹಾವೇರಿ : 4.ಆಟ ಮಾಗವಿ ಸರಸ್ವತಿ
ರಾಮದುರ್ಗ:4.ಆಟ ಶ್ರೀನಿವಾಸ
ನವಲಗುಂದ:4.ಆಟ ಸಿದ್ಧಲಿಂಗೇಶ್ವರ
ರೋಣ : 4.ಆಟ ರೇಣುಕಾ
ಅಮೀನಗಡ:4.ಆಟ ಲಕ್ಷ್ಮೀ
ಹೊಸರಿತ್ತಿ : 4.ಆಟ ಕೃಷ್ಣ
ಚಿಕ್ಕೇರೂರು:4.ಆಟ ಪವನ್
ಅಣ್ಣಿಗೇರಿ : 4.ಆಟ ಜನತಾ
ಗೋಕಾಕ್: 4.ಆಟ ಲಕ್ಷ್ಮೀ ಆನಂದ್
ಬನಹಟ್ಟಿ : 4.ಆಟ ವೈಭವ್
ರಬಕವಿ : 4.ಆಟ ಶ್ರೀನಿವಾಸ
ಮಹಾಲಿಂಗಪುರ:4.ಆಟ ಮಾರುತಿ ಅಪ್ಸರಾ
ಹಾರೂಗೇರಿ:4.ಆಟ ಚಂದ್ರಮ
ಬಸವನಬಾಗೇವಾಡಿ:4.ಆಟ ಸತ್ಯನಾರಾಯಣ
ಇಂಡಿ : 4.ಆಟ ಮಹಾವೀರ್
ಯಾದವಾಡ :4.ಆಟ ಬಸವೇಶ್ವರ
ಶಿಗ್ಗಾಂವ್ : 4.ಆಟ ರಾಜಶ್ರೀ
ಗುಳೇದಗುಡ್ಡ:4.ಆಟ ಅಂಕಿತ
ಹೊನ್ನಾವರ:4.ಆಟ ಪದ್ಮಾಂಜಲಿ
ನಿಡಗುಂದಿ : 4.ಆಟ ಯಲಗೂರೇಶ್ವರ
ಹಿರೇಕೇರೂರು:4.ಆಟ ಮಂಜುನಾಥ
ಸವಣೂರು :4.ಆಟ ಸಿದ್ದಲಿಂಗೇಶ್ವರ
ಬೀಳಗಿ : 4.ಆಟ ಶ್ರೀನಿವಾಸ
ನಾಲತವಾಡ:4.ಆಟ ರಘುವೀರ್
ಕಾರವಾರ : 4.ಆಟ ಗೀತಾಂಜಲಿ
ರಟ್ಟಿಹಳ್ಳಿ : 4.ಆಟ ಮಾಲತೇಶ್
ಶಿರಾಲಿ : 4.ಆಟ ವೆಂಕಟೇಶ್ವರ
ಬ್ಯಾಡಗಿ : 4.ಆಟ ಶೋಭಾ
ಮುದ್ದೇಬಿಹಾಳ:4.ಆಟ ಗಿರಿಜಾಶಂಕರ್
ಮುಂಡರಗಿ : 4.ಆಟ CHHOTU MAHARAJ
ಅಂಕಲಿ :4.ಆಟ ಮಯೂರ
ಸಿರ್ಸಿ :4.ಆಟ ನಟರಾಜ
ಕಲಬುರ್ಗಿ : 4.ಆಟ ಶೆಟ್ಟಿಮಲ್ಟಿಪ್ಲೆಕ್ಸ್ PVR INOX MIRAJ
ಗಂಗಾವತಿ: 4.ಆಟ MOHIUDDIN TALKIES ಕನಕದುರ್ಗ
ಕೊಪ್ಪಳ: 4.ಆಟ ಶಾರದ
ರಾಯಚೂರು:4.ಆಟ ಪೂರ್ಣಿಮಾ MIRAJ
ಬೀದರ್ : 4.ಆಟ ಸ್ವಪ್ನಮಾಲ್
ಸಿಂಧನೂರು:4.ಆಟ ಶರಣಬಸವೇಶ್ವರ
ಶಹಪುರ : 4.ಆಟ ಜಯಶ್ರೀ ಭವಾನಿ
ಮಾನ್ವಿ : 4.ಆಟ ಮಲ್ಲಿಕಾರ್ಜುನ
ದೇವದುರ್ಗ :4.ಆಟ ಆನಂದ್
ಕರಟಗಿ : 4.ಆಟ ಪದ್ಮಾವತಿ
ಲಿಂಗಸಗೂರು:4.ಆಟ ಎಂಪೈರ್
ಮಸ್ಕಿ : 4.ಆಟ ಶರಣಬಸವೇಶ್ವರ
ಕನಕಗಿರಿ : 4.ಆಟ ನಂದಿ
ಯಲಬುರ್ಗಾ:4.ಆಟ ಪ್ರವೀಣ್
ಭಾಲ್ಕಿ : 4.ಆಟ ಸಂಗಮೇಶ್
ಮಂಗಳೂರು:4.ಆಟ ಮಂಜುನಾಥ
ಜಾಲಹಳ್ಳಿ : 4.ಆಟ ರಾಮೇಶ್ವರ
ಶ್ರೀರಾಮನಗರ:4.ಆಟ ಲಕ್ಷ್ಮೀಟಿಕ್ಕರ್‌ಪ್ಯಾಲೇಸ್
ಸಿರವಾರ : 4.ಆಟ ಶಿವಮಾತಾ
ಕುಷ್ಟಗಿ : 4.ಆಟ ಬಸವರಾಜ
ಶಿವಮೊಗ್ಗ : 4.ಆಟ ಮಲ್ಲಿಕಾರ್ಜುನ ಮಂಜುನಾಥ Bharath Cinemas
ಚಿಕ್ಕಮಗಳೂರು:4.ಆಟ ನಾಗಲಕ್ಷ್ಮೀ
ಭದ್ರಾವತಿ : 4.ಆಟ ಸತ್ಯ ನೇತ್ರಾವತಿ
ಕಡೂರು : 4.ಆಟ ಅನ್ನಪೂರ್ಣ ವಿಜಯಲಕ್ಷ್ಮೀ
ತೀರ್ಥಹಳ್ಳಿ :4.ಆಟ ವೆಂಕಟೇಶ್ವರ
ಆನವಟ್ಟಿ : 4.ಆಟ ರೇಣುಕಾ
ಶಿಕಾರಿಪುರ:4.ಆಟ ಮಾಲತೇಶ
ಸಾಗರ : 4.ಆಟ ಶ್ರೀ
ಚನ್ನಗಿರಿ : 4.ಆಟ ಲಕ್ಷ್ಮೀ
ತರೀಕೆರೆ : 4.ಆಟ ವಿನಾಯಕ
ಶಿರಾಳಕೊಪ್ಪ:4.ಆಟ ಮಾರುತಿ
ಕೊಪ್ಪ : 4.ಆಟ ಜೆಎಂಜೆ
ಆನವೇರಿ : 4.ಆಟ ಶ್ರೀದೇವಿ
ನ್ಯಾಮತಿ : 4.ಆಟ ಶ್ರೀಶೈಲ
ಬಾಳೆಹೊನ್ನೂರು:4.ಆಟ ಸುದರ್ಶಿನಿ
ಕುಂದಾಪುರ : Bharath Cinemas
ಪಡುಬಿದ್ರೆ : Bharath Cinemas
ಮಂಗಳೂರು:4.ಆಟ SP CINEMAS PVR INOX cinépolis Bharath Cinemas BHARATH MALL Cine GALAXY SURATHKAL
ಉಡುಪಿ : 4.ಆಟ ಅಲಂಕಾರ್
ಬೆಳ್ತಂಗಡಿ : 4.ಆಟ ಭಾರತ್
ಕಾರ್ಕಳ : 4.ಆಟ ಪ್ಲಾನೆಟ್
ಸುರತ್ಕಲ್: 4.ಆಟ ನಟರಾಜ
ಬೈಂದೂರು: 4.ಆಟ ಶಂಕರ್
ಮಣಿಪಾಲ : PVR INOX cinépolis
ಹಾಗೂ ರಾಜ್ಯಾದ್ಯಂತ